ಸಂವಾದ

ಮಾರ್ಚ್ ೨೦೧೦ ರೂ. ೧೦

ನೆನಪು:
ಜ್ಯೋತಿ ಬಸು

ಬ್ರಾಹ್ಮಣವಾದಿಗಳ
ದೃಷ್ಟಿಯಲ್ಲಿ ಬುದ್ಧ

ಗೋಹತ್ಯೆ ನಿಷೇಧ;
ನರಹತ್ಯೆಗೆ ಲೈಸೆನ್ಸ್!

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೫

ಮಾರ್ಚ್ ೨೦೧೦

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 080-23480278, 9945264687
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಸಂಪಾದಕರೊಂದಿಗೆ ಸಂವಾದ:
○ ಬಸವ ಕುಂಬಾರ ಗುಂಡಯ್ಯ ಶರಣರು ೦೬
❑ ಸ್ಲಂ ಜನರು ಯಾವಾಗಲೂ ಊರ ಹೊರಗಡೆಯೇ ಇರಬೇಕಾ?
○ ಡಾ. ವಾಸು ಎಚ್.ವಿ. ೦೮
❑ ಸಾವಿರ ವರ್ಷಗಳ ಋಣ
○ ಪ್ರಸಾದ್ ರಕ್ಷಿದಿ ೧೦
❑ ಗೋಹತ್ಯೆಗೆ ನಿಷೇಧ-ನರಹತ್ಯೆಗೆ ಲೈಸೆನ್ಸ್
○ ಶಿವಸುಂದರ್ ೧೨



❑ ಛತ್ತೀಸ್‌ಗಢದ ಆದಿವಾಸಿಗಳತ್ತ...
○ ಮ.ಶ್ರೀ.ಮುರಳಿ ಕೃಷ್ಣ ೧೮
❑ ಜ್ಯೋತಿ ಬಸು : ರಾಜಕಾರಣದ ಆಶಾಕಿರಣ
○ ನಾ ದಿವಾಕರ ೨೪
❑ ಬ್ರಾಹ್ಮಣವಾದಿಗಳ ದೃಷ್ಟಿಯಲ್ಲಿ ಬುದ್ಧ
○ ಮೂಲ: ಅನ್ನಪರೆಡ್ಡಿ ವೆಂಕಟೇಶ್ವರ ರೆಡ್ಡಿ
ಕನ್ನಡಕ್ಕೆ: ಹರಿಹರಪ್ರಿಯ ೩೦
❑ ಪುಸ್ತಕ ಅವಲೋಕನ:
ಶಿಲ್ಪ ವಿರೂಪಗಳ ಸಂದರ್ಭದಲ್ಲಿ...
ಕ್ರಾಂತಿಕಾರಿ ಅಂಬೇಡ್ಕರರ ಅನ್ವೇಷಣೆಯಲ್ಲಿ
○ ಶಿವಸುಂದರ್ ೩೪

❑ ಕಾಲಮಾನ... ೪
ಐಡೆಂಟಿಟಿ, ಕುಲಾಂತರಿಯ ರಾಜಕಾರಣ ಹಾಗೂ ಭಾರತ
○ ಡಾ. ಮುಜಾಫ್ಫರ್ ಅಸ್ಸಾದಿ ೩೮
❑ ಧರೆ ಹತ್ತಿ ಉರಿದರೆ... ೧೯
ಪ್ರಜಾಪ್ರಭುತ್ವ v/s ರಾಜಪ್ರಭುತ್ವ: ಕರ್ನಾಟಕ ಎತ್ತ ಸಾಗುತ್ತಿದೆ?
○ ಡಾ. ಟಿ. ಆರ್ ಚಂದ್ರಶೇಖರ್ ೪೨
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ ೫೦
○ ಸಿ. ಎಚ್. ರಾಜಶೇಖರ್

ಕವನಗಳು : ❑ ಗೂಡೊಳಗಣ ಹಾಡು ೦೫ ❑ ಉತ್ತರದ ಹದ್ದುಗಳೇ ೧೭
❑ ಡಿಸೆಂಬರ್ ಆರು ೨೩ ❑ ಪ್ರಣತಿ ೩೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಮಿಥ್ಯಗಳ ಗೋರಿಯಲ್ಲಿ ಭಾರತೀಯ ಮಹಿಳೆ

ಪತ್ರಗಳು

ಮಾನ್ಯ ಸಂಪಾದಕರಿಗೆ,

ಇತಿಹಾಸಗಳು ಮುಚ್ಚಿದ ಗೋರಿಗಳು. ನಾಡಿನ ಚಿಂತನೆ, ಸಂಸ್ಕೃತಿಯ ಹಾದಿಯನ್ನು ರೂಪಿಸಲು ಬೇಕಾದ ಅನೇಕ ಐತಿಹ್ಯಗಳನ್ನು ಒದಗಿಸುವ ಒಡಲುಗಳು. ಭಾರತೀಯ ಇತಿಹಾಸದ ಜನಪ್ರಿಯ ಕಲ್ಪನೆಗಳಲ್ಲಿ ಭಾರತೀಯ ಮಹಿಳೆ ಅತಿರೇಕದ ದ್ವಂದ್ವಗಳಲ್ಲಿ ರೂಪಿಸಲ್ಪಟ್ಟಿದ್ದಾಳೆ. ಅವಳು ಒಂದೋ ಹತಭಾಗಿನಿ ಅಥವಾ ನಾಯಕಿ, ಮಾಟಗಾತಿ ಅಥವಾ ದೇವತೆ, ಕುಟುಂಬಿನಿ ಅಥವಾ ರಾಷ್ಟ್ರನಾಯಕಿ. ಇಂದು ಭಾರತೀಯ ಸ್ತ್ರೀವಾದ ತೀವ್ರವಾದ ಎದುರಿಸುತ್ತಿರುವ ತೊಡರು ಈ ಪ್ರಬಲ ಪ್ರತಿಮೆಗಳದ್ದು.

ಈ ಎರಡೂ ಅತಿರೇಕಗಳನ್ನು ತಲುಪಲಾಗದ/ ತಲುಪಲೇಬೇಕು ಎಂದೇನೂ ಒತ್ತಡವಿಲ್ಲದ ಮಿಲಿಯನ್ ಭಾರತೀಯ ಮಹಿಳೆಯರನ್ನು ಆಳುತ್ತಿರುವ ಈ ರೂಪಕಗಳನ್ನು ಛಿದ್ರಗೊಳಿಸಿದರೆ ಹೊರಬರುವ ಹೆಣ್ಣಿನ ರೂಹು ಎಂತಹದ್ದು? ಅವಳ ಸ್ತ್ರೀತ್ವ, ಲೈಂಗಿಕತೆ, ಸಾಂಸ್ಕೃತಿಕ ಒಡನಾಟವನ್ನು ನಿರ್ಮಿಸುತ್ತಿರುವ ಶಕ್ತಿ ಯಾವುದು?

ಪುರಾಣದ ರಾಮ, ಇತಿಹಾಸದ ಕೃಷ್ಣದೇವರಾಯ ಸಮಾಜದ ಪುರುಷತ್ವ, ಭವ್ಯತೆ, ವೈಭವಗಳನ್ನು ಎತ್ತಿ ಹಿಡಿಯಲು ಶಕ್ತರೆಂಬಂತೆ ತಿಳಿಸುತ್ತಲೇ, ಸೂಚ್ಯವಾಗಿ ಮಹಿಳೆಯರು ಅವರನ್ನು ಅನುಸರಿಸಬೇಕಾದ ತೀವ್ರ ಒತ್ತಡವನ್ನು ಅನಿವಾರ್ಯವೆಂಬಂತೆ ಹೇರುತ್ತಿರುವುದು ಸ್ತ್ರೀ ವಾದಕ್ಕೆ ಒಡ್ಡಿರುವ ಸವಾಲಂತಿದೆ.

ಸಾವಿರಾರು ಭಾರಿ ಸತಿಯಾಗಿ, ವಿಧವೆಯಾಗಿ, ಬಾಲವಧುವಾಗಿ, ಭಾರತ ಮಾತೆಯಾಗಿ ಲೈಂಗಿಕದತೆಯ ಸಾವನ್ನು ಕಂಡು ಇತಿಹಾಸದ ಗೋರಿಯಲ್ಲಿ ಸ್ಥಿರವಾಗಿ ಸ್ಥಾಪಿಸಲ್ಪಟ್ಟ ಮೇಲೂ ಪುರುಷಾಧಿಕಾರ ಮತ್ತೆ ಮತ್ತೆ (ಕೃಷ್ಣದೇವರಾಯನಂತಹ) Patriarchal ಪ್ರತಿಮ/ಪ್ರತೀಕಗಳನ್ನು ಉದ್ದೀಪಿಸಿ ಮಹಿಳೆಯರನ್ನು ಅವುಗಳ ಬಿಂಬಗಳಾಗುವಂತೆ ಪ್ರೇರೇಪಿಸುತ್ತಿರುವುದು ಅಸಮಂಜಸ.

ಮಹಿಳೆಯರ ಮೇಲೆ ಆಗುತ್ತಿರುವ ವಾಸ್ತವ ಶೋಷಣೆಗಳನ್ನು ಸಂಕೇತಗಳ ಮೂಲಕ ನಿಭಾಯಿಸುವ ದುರ್ಬಲತೆಯನ್ನು ಪ್ರಭುತ್ವ ಪ್ರದರ್ಶಿಸುತ್ತಿದೆ. ಹೆಣ್ಣಿನ ದೇಹವು ಈ ಲಾಂಛಗಳನ್ನು ಹೊರುವುದ ಕಷ್ಟೇ ಸೀಮಿತವಾದಾಗ, ಆ ದೇಹದ ಮೇಲೆ ದಿನಾ-ದಿನಾ ನಡೆಯುವ ಶೋಷಣೆಗಳು ಜನರ ಕಲ್ಪನೆಯಲ್ಲಿ ನಗಣ್ಯವೆನಿಸುತ್ತವೆ.

ಇತಿಹಾಸ ಪುರುಷರಂತಹ ಪ್ರತೀಕಗಳು ನಿರ್ಮಿಸುವ ಭ್ರಮೆ ತುಂಬಿದ Ideology ಗಳು ಕೇವಲ ಸಂಕೇತಗಳಷ್ಟೇ, ವಾಸ್ತವಗಳಲ್ಲ ಎಂಬುದರ ಅರಿವು ಹೆಚ್ಚಾದಂತೆಲ್ಲಾ ಅವಕಾಶವಾದಿ ರಾಜಕಾರಣಕ್ಕೆ ನುಂಗಲಾರದ ತುತ್ತು ಆಗುವುದೇನೋ ಹೌದು, ಆದರೆ ಹಾಗಂತ ಇಂತಹ ಮೌಢ್ಯ ಮಿಥ್ಯಗಳ ವಿಜೃಂಭಣೆಯಿಂದ ಭಾರತೀಯ ಸಂಸ್ಕೃತಿ ಉಳಿಯುತ್ತದೆ ಎಂಬ ಯಜಮಾನಿಕೆಯ ನಿಲುವನ್ನು ನಿಜ ಎಂದು ಭ್ರಮಿಸಲು ಇಂದಿನ ಮಹಿಳೆಯರೇನು ಇತಿಹಾಸದ ಗೋರಿಯೊಳಗೆ ಮಲಗಿರುವ ಶವಗಳೇನಲ್ಲ?

ಡಾ॥ ಸರಸ್ವತಿ ಕೆ. ಬಿ.,
ತುಮಕೂರು

ದೇಮ ಲೇಖನ: ಅನಾರೋಗ್ಯ ಸಮಾಜಕ್ಕೆ ಪ್ರಸ್ತುತ

ಮಾನ್ಯ ಸಂಪಾದಕರೇ,

ಸಂವಾದದಲ್ಲಿ ಬಂದ "ಆ ದಶಕ-ಬಿಡುಗಡೆಯ ಮಾತು" ಲೇಖನ ಓದಿದೆವು. ಲೇಖನ ತುಂಬಾ ಹಿಡಿಸಿತು. ನಾವು ಇತ್ತೀಚೆಗೆ ಓದಿದ ಅಪರೂಪದ ಮತ್ತು ಮೌಲ್ಯಯುತ ಲೇಖನಗಳಲ್ಲಿ ಇದೊಂದು ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಹೆಸರಾಂತ ಬರಹಗಾರರಾದ ದೇವನೂರು ಮಹಾದೇವರವರ ಈ ಲೇಖನದಲ್ಲಿ ರಾಷ್ಟ್ರದ ಸಮಗ್ರ ಚಿತ್ರಣ ಒಳಗೊಂಡಿದೆ. ಆತಂಕ, ವಿರೋಧ, ಪ್ರಭುತ್ವದ ಬಗೆಗಿನ ಅವರ ಪ್ರತಿರೋಧ ಲೇಖನದಲ್ಲಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಅವರೇ ಹೇಳುವಂತೆ "ನಮ್ಮ ವ್ಯವಸ್ಥೆ, ಪ್ರಭುತ್ವ ದಿಗಿಲು ಹುಟ್ಟಿಸುವುದನ್ನು ಬಿಟ್ಟು ಬೇರೇನೂ ಕಾಣಿಸುತ್ತಿಲ್ಲ. ಕಳ್ಳತನಕ್ಕೂ ಒಂದು ನೀತಿ, ನಿಯಮ, ನಾಚಿಕೆ ಇರುತ್ತದಂತೆ, ದರೋಡೆ; ರೌಡಿಸಂಗೂ ಒಂದು ನೀತಿ, ನಿಯಮ, ನಾಚಿಕೆ ಇರುತ್ತದಂತೆ. ಇಂದು ಈ ಕಳ್ಳತನ, ದರೋಡೆಗಳು ತಮ್ಮ ನಾಚಿಕೆ ಬಿಟ್ಟು ಕುಣಿದು ಕುಪ್ಪಳಿಸುತ್ತಿದೆ."

ಈ ಹೇಳಿಕೆಯು ಪ್ರಭುತ್ವದ ಕಾರ್ಯ ವೈಖರಿಯನ್ನು ಕುರಿತದ್ದಾಗಿದೆ. ಆರೋಗ್ಯಕರ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿರುವ ಪ್ರಭುತ್ವದ ಕುರಿತಾದ ಹೇಳಿಕೆಗಳು ತುಂಬಾ ಔಚಿತ್ಯ ಪೂರ್ಣವಾಗಿವೆ.

ಲೇಖನದಲ್ಲಿನ ಒಂದು ದೇಶದ ಅಭಿವೃದ್ಧಿಯ ಕುರಿತಾದ ಹೇಳಿಕೆಯು ಇಷ್ಟವೆನಿಸುತ್ತದೆ. ಭೂತಾನ್ ದೇಶದ ದೊರೆ ಸಿಂಘಯಾಲ್ ವಾಂಗ್ಚುಕ್ ಅಭಿವೃದ್ಧಿಯ ಕುರಿತಾದ ವಿಶ್ವಕ್ಕೆ ಎಸಗಿರುವ ಸವಾಲು ಓದುಗರೆಲ್ಲರಲ್ಲಿಯೂ ಕುತೂಹಲ ಮೂಡಿಸುತ್ತದೆ. ನಿಜವಾಗಿಯೂ ಅವನ ಹೇಳಿಕೆ ಇಂದಿನ ಅನಾರೋಗ್ಯ ಸಮಾಜಕ್ಕೆ ಪ್ರಸ್ತುತವೆನಿಸುತ್ತದೆ. ಈ ಅಭಿವೃದ್ಧಿ ಕುರಿತಾದ ಹೇಳಿಕೆ ವಿಶ್ವಕ್ಕೆ ಮಾದರಿಯಾಗಿದೆ. ಅದರಲ್ಲೂ ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಕ್ಕೆ ಅವಶ್ಯಕವಾಗಿ ಮತ್ತು ಅಷ್ಟೇ ತುರ್ತಾಗಿ ಒಳಗೊಳ್ಳಬೇಕಾಗಿದೆ. ಸಂಪ್ರದಾಯ ಬದ್ಧ ರಾಷ್ಟ್ರವು ಈ ಅಭಿವೃದ್ಧಿಯ ಕಲ್ಪನೆಗೆ ಒಳಪಡುವುದು ತುಂಬಾ ಕಷ್ಟಕರವಾದದ್ದು.

ವಿದ್ವಾಂಸರಾದ ಡಿ.ಆರ್.ನಾಗರಾಜರವರ ಆಶ್ಚರ್ಯಭರಿತವಾದ, ಒಗಟಾದ "ಊರ ಒಳಗೆ ಅಂಬೇಡ್ಕರ್ ಊರ ಹೊರಗೆ ಗಾಂಧಿ" ಎಂಬುದು ಇಂದಿನ ಸಂಪ್ರದಾಯಸ್ಥ ಸಮುದಾಯಗಳಿಗೆ ಕಲ್ಪಿಸಿಕೊಳ್ಳಲಾಗದಂತಹ, ಹಾಗೂ ಬಿಡಿಸಲಾರದಂತಹ ಕಗ್ಗಂಟಾಗಿದೆ. ಒಪ್ಪಿತ ಮೌಲ್ಯಗಳೇ ಇಂದಿನವರೆಗೂ ತಮ್ಮ ಪಾರಮ್ಯವನ್ನು ಪ್ರತಿಯೊಂದು ಕ್ಷೇತ್ರದಲ್ಲಿ ಬಿಗಿ ಹಿಡಿತವನ್ನು ಸಡಿಲಿಸದಿರುವುದು ಹೇಳಿಕೆಯಿಂದ ತಿಳಿಯುತ್ತದೆ.

ಸಮಾನತೆ, ಸಂತೋಷ, ಅಭಿವೃದ್ಧಿಯ ಕಲ್ಪನೆಯ ಬಗೆಗಿನ ನಿಲುವು, ಪ್ರಭುತ್ವದ ಬಗೆಗಿನ ನಿರಾಸಕ್ತಿ ಇವೆಲ್ಲವುಗಳನ್ನು ದೇವನೂರು ಮಹಾದೇವರವರು ಎಳೆಎಳೆಯಾಗಿ ಇಲ್ಲಿ ಬಿಚ್ಚಿಡುವ ಪ್ರಯತ್ನ ಮಾಡಿದ್ದಾರೆ. ಇವರ ನಿರೂಪಣಾ ಶೈಲಿಯು ನಾನಾ ಕಾರಣಗಳಿಗಾಗಿ ಮೆಚ್ಚುಗೆಯಾಗುತ್ತದೆ. ವೈಯುಕ್ತಿಕ ನೆಲೆಯಲ್ಲಿ ಆರಂಭವಾಗುವ ಲೇಖನ ಮುಂದೆ ರಾಜಕೀಯ, ಸಾಂದರ್ಭಿಕ, ಸಾಹಿತ್ಯದಲ್ಲಿ ಬಿತ್ತರವಾಗುವ ವಸ್ತು, ವಸಾಹತುಶಾಹಿ ಪ್ರಭಾವದಿಂದ ಉಂಟಾದ ಪರಿಣಾಮಗಳ ಕುರಿತು ನಯವಾಗಿ ನಿರೂಪಿಸುತ್ತಾರೆ. ಮತ್ತು ಅವುಗಳ ಪರಿಣಾಮಗಳನ್ನು ಹೇಳುತ್ತಾ ಕಠೋರವಾಗಿ ಖಂಡಿಸುತ್ತಾರೆ.

ಒಟ್ಟಾರೆಯಾಗಿ ಲೇಖನವು ಇಂದಿನ ಸಮಾಜಕ್ಕೆ ಪ್ರಸ್ತುತವೆನಿಸಿದೆ. ರಾಜಕೀಯ ದಿವಾಳಿಕೋರತನ, ನೈತಿಕ ಅದಃ ಪತನ, ಬಂಡವಾಳ ಶಾಹಿಗಳ ಬಂಡುಕೋರತನ ಇವುಗಳ ಹತೋಟಿ ಮಾಡದಿದ್ದಲ್ಲಿ ಆರೋಗ್ಯಕರ ಸಮಾಜ ನಿರ್ಮಾಣವಾಗುವುದು ಹಾಗೂ ಅದರ ಉಳಿವು ತುಂಬಾಸ ಕಷ್ಟ.

ತುಕಾರಾಮ್ ನಾಯ್ಕ್,
ಬಳ್ಳಾರಿ



ಚಂದಾ ವಿವರ
ಬಿಡಿ ಪ್ರತಿ ರೂ.೨೦/-
೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-
ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-
ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ನನ್ನ ಜೀವನಾಭವಗಳು
ಲೇ : ಚೆನ್ನಬಸವಪ್ಪ ಬೆಟ್ಟದೂರು
ಬೆಲೆ : ರೂ.೮೦/-

ಇದು ಚೆನ್ನಬಸಪ್ಪ ಬೆಟ್ಟದೂರು ಅವರ ಆತ್ಮಕಥನ. ಇಲ್ಲಿ ಇವರೊಬ್ಬರದೇ ಚರಿತ್ರೆ ಬಂದಿಲ್ಲ. ಇಡೀ ಹೈದರಾಬಾದ್ ಕರ್ನಾಟಕದ ಸಾಮಾಜಿಕ, ರಾಜಕೀಯ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಹಾಗೂ ಸಾಂಸ್ಕೃತಿಕ ಚರಿತ್ರೆ ಅಕ್ಷರ ರೂಪಪಡೆದು ಕೊಂಡ ಅಪರೂಪದ ಕೃತಿ ಇದು. ಇವರ ಜೊತೆಗಿನ ಒಡನಾಟದ ಬಹುಮುಖ್ಯ ವಿವರಗಳು ಈ ಕೃತಿಯಲ್ಲಿ ಸೇರಿವೆ. ಲೇಖಕರು ಹೈದರಾಬಾದ್ ವಿಮೋಚನೆಯ ಪ್ರತ್ಯಕ್ಷದರ್ಶಿಯಾಗಿ ಹಾಗೂ ಕರ್ನಾಟಕ ಏಕೀಕರಣದ ಹೋರಾಟಗಾರರಾಗಿ ತಮ್ಮ ಒಳನೋಟಗಳನ್ನು ಹಂಚಿಕೊಂಡಿದ್ದಾರೆ.

ಪ್ರಕಾಶಕರು: ಬಸವತತ್ವ ಪ್ರಸಾರ ಸಂಸ್ಥೆ, ಧಾರವಾಡ

ಸಹಯಾನ
ಲೇ: ಡಾ. ಆರ್.ವಿ ಭಂಡಾರಿ
ರೂ: ೫೦/-

ಅರ್.ವಿ. ಅವರ ಕೃತಿಗಳೊಂದಿಗೆ ಅನುಸಂಧಾನಿಸುವ ಹಾಗೂ ಅವರ ಕ್ರಿಯಾಶೀಲತೆಯ ವಿವಿಧ ಮುಖಗಳನ್ನು ಪರಿಚಯಿಸುವ ಬರಹಗಳನ್ನು ಈ ಕೃತಿ ಒಳಗೊಂಡಿದೆ. ಇವರ ಕತೆ, ಕಾದಂಬರಿ, ನಾಟಕಗಳಲ್ಲಿ ಪಾತ್ರಗಳು ಮತ್ತು ಪರಿಸರ ಕೂಡಿಯೇ ಬೆಳಕಿನ ಕಡೆಗೆ ಪಯಣ ಬೆಳೆಸುತ್ತವೆ. ಸಮಾನತೆಯ ತತ್ವವನ್ನು ಬೋಧಿಸುತ್ತವೆ. ಆರ್.ವಿಯವರು ತಮ್ಮ ವೈಯಕ್ತಿಕ ಜೀವನವನ್ನು ಆರಂಭಿಸಿದ ಕಾಲದ ಉತ್ತರ ಕನ್ನಡದ ಸಾಮಾಜಿಕ ಪರಿಸರದ ಮೇಲೆ ಬೆಳಕು ಚೆಲ್ಲುವ ಹಲವು ಕತೆಗಳು ಅವರ ಸಂಕಲನದಲ್ಲಿವೆ.

ಪ್ರಕಾಶಕರು: ಚಿಂತನ ಪುಸ್ತಕ, ಜಯನಗರ, ಬೆಂಗಳೂರು



ಚಿತ್ರ-ಕತೆ
ಜಗತ್ತಿನ ಸಿನಿಮಾಗಳ ಅವಲೋಕನ
ಲೇ : ಎ ಎನ್ ಪ್ರಸನ್ನ
ಬೆಲೆ : ರೂ. ೧೪೦/-

ಈ ಕೃತಿಯು ಕನ್ನಡದಲ್ಲಿ ಸಿನಿಮಾ ಕುರಿತ ಬರವಣಿಗೆಯಲ್ಲಿ ಒಂದು ವಿಭಿನ್ನ ಸ್ಥಾನವನ್ನು ಪಡೆದಿದೆ. ಕೆ.ವಿ.ಸುಬ್ಬಣ್ಣ ನವರ 'ಸಮೀಪ ಚಿತ್ರಗಳು ಮತ್ತು ದೂರ ಚಿತ್ರಗಳು' ಪುಸ್ತಕವನ್ನು ಹೊರತುಪಡಿಸಿದರೆ ಈ ರೀತಿಯಲ್ಲಿ ಜಾಗತಿಕ ಚಿತ್ರಗಳನ್ನು ಪರಿಚಯಿಸಿದ ಪುಸ್ತಕ ಇಲ್ಲ. ಲೇಖಕರು ಚಿತ್ರದ ಕಥಾನಕವನ್ನು ಸ್ವಾರಸ್ಯಕರವಾಗಿ ವಿವರಿಸುತ್ತಲೇ, ಕತೆಯತ್ತ ಗಮನಸೆಳೆಯುತ್ತಾರೆ. ಅದರೊಂದಿಗೆ ಈ ಚಿತ್ರ ಸಾಂಸ್ಕೃತಿಕವಾಗಿ ಹೇಗೆ ಮುಖ್ಯವಾಗುತ್ತೆ, ಸಿನೇಮಾ ಭಾಷೆಯ ಬೆಳವಣಿಗೆಯಲ್ಲಿ ಯಾವ ಪಾತ್ರ ವಹಿಸಿದೆ ಎಂತಲೂ ಹೇಳುತ್ತಾರೆ. ಇದನ್ನು ಸಿನಿಮಾಸಕ್ತರು ಮತ್ತು ಇತರ ಕಲಾಪ್ರೇಮಿಗಳೂ ಓದಬಹುದಾಗಿದೆ.

ಪ್ರಕಾಶಕರು : ಚಿಂತನ ಪುಸ್ತಕ ಜಯನಗರ, ಬೆಂಗಳೂರು





ಹೊಸ ಪುಸ್ತಕ

ದಲಿತರು
ವಿಮೋಚನೆಯ ಹಾದಿ
ಒಂದು ಅವಲೋಕನ
ಲೇ: ನಾ.ದಿವಾಕರ
ಬೆಲೆ : ರೂ. ೫೦/-

ಜಾತಿ ಆಧಾರಿತ ಅಸಮಾನತೆ, ಅವಮಾನ, ದೌರ್ಜನ್ಯ, ಕೊಲೆ, ಅತ್ಯಾಚಾರಗಳು ಪ್ರಪಂಚದ ಬೇರಾವ ದೇಶದಲ್ಲೂ ಕಾಣದ ರೀತಿಯಲ್ಲಿ ಭಾರತದಲ್ಲಿವೆ. ಭವ್ಯ ಪರಂಪರೆಯ ಮಾತನಾಡುವ ಸಭ್ಯ ಭಾರತೀಯರು ಈ ಕತ್ತಲ ಅಧ್ಯಾಯವನ್ನು ಓದಬೇಕು. ಜಾತಿಗಳ ಏಣಿ ಮೆಟ್ಟಿಲು ಜಾತಿಯಿಂದ ಜಾತಿಗೆ ಹೇಗೆ ಭಿನ್ನವಾಗಿರಬಲ್ಲುದು, ಒಂದನ್ನೊಂದು ಹೇಗೆ ತುಳಿಯುತ್ತಲೇ ಶೋಷಕ ಚರಿತ್ರೆ ಬರೆಯಬಲ್ಲದೆಂಬುದನ್ನು ಈ ಕೃತಿ ತೆರೆದಿಡುತ್ತದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಬೆಂಗಳೂರು



ಭಾರತದಲ್ಲಿ ಶಿಕ್ಷಣ
ಸವಾಲು ಸಾಧ್ಯತೆ
ಲೇ : ಅನು : ಆರ್.ಡಿ ಹೆಗಡೆ
ಬೆಲ : ರೂ. 60/-

ಇತ್ತೀಚೆಗೆ ಭಾರತದ ಶಿಕ್ಷಣ ರಂಗದಲ್ಲಿ ಮಹತ್ವದ ಬೆಳವಣಿಗೆಗಳಾಗುತ್ತಿವೆ. 2005ರಲ್ಲಿ "ರಾಷ್ಟ್ರೀಯ ಪಾಠಕ್ರಮ ಚೌಕಟ್ಟು" ಅಂಗೀಕಾರಗೊಂಡಿದೆ. ಇವು ಸಕಾರಾತ್ಮಕ ಬದಲಾವಣೆಗಳಲ್ಲ, ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಧ್ಯೇಯೋದ್ದೇಶಗಳಿಗೆ ಮಾರಕವಾಗುವ ಬದಲಾವಣೆಗಳು. ದೇಶದ ಪ್ರಜಾಪ್ರಭುತ್ವವಾದಿಗಳಲ್ಲಿ ಆತಂಕ ಮೂಡಿಸಿರುವ ಬದಲಾವಣೆಗಳನ್ನು ಕುರಿತು ದೇಶದ ಹಿರಿಯ ಪ್ರಾಧ್ಯಾಪಕರು, ಶಿಕ್ಷಣವೇತ್ತರು, ಚಿಂತಕರು ನಡೆಸಿರುವ ಚಿಂತನೆಗಳ ಸಂಗ್ರಹ ಇದು.

ಪ್ರಕಾಶಕರು : ಚಿಂತನ ಪುಸ್ತಕ ಜಯನಗರ, ಬೆಂಗಳೂರು



ಕ್ರಾಂತಿಯ ಕನಸು
ಲೇ : ಶ್ರೀ ಶಿವಮೂರ್ತಿ ಮುರುಘಾ ಶರಣರು, ಬೆಲೆ: ರೂ.75/-

ಬಸವಣ್ಣನ ಆದರ್ಶಗಳನ್ನು ಅಕ್ಷರಷಃ ಜಾರಿಗೆ ತರಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಶ್ರೀಶಿವಮೂರ್ತಿ ಶರಣರ ಅಪರೂಪದ ಕೃತಿ ಇದು. ಅವರೇ ಹೇಳಿರುವಂತೆ ಅವರದು ಸಂಘರ್ಷದ ಹಾದಿ. ಪರಿವರ್ತನೆಯ ಪರವಾಗಿ ಶರಣರು ಮಾಡಿದ ಪ್ರಯೋಗಗಳನ್ನು ಇಲ್ಲಿ ಪ್ರಾಮಾಣಿಕವಾಗಿ ದಾಖಲಿಸಿದ್ದಾರೆ. ಬಸವನ ಆದರ್ಶಗಳೆಲ್ಲ ಜಾತಿವಾದಿ ಮಠಾಧೀಶರ ಅಂತಃಪುರಗಳಲಿ ಲೀನವಾಗುತ್ತಿರುವ ಈ ಹೊತ್ತಿನಲ್ಲಿ ಶಿವಮೂರ್ತಿ ಶರಣರ ಈ ಪರಿವರ್ತನೆಯ ಪ್ರಯೋಗಗಳು ನಿಜಕ್ಕೂ ಆಶಾಕಿರಣಗಳಾಗಿವೆ.

ಪ್ರಕಾಶಕರು : ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ

ಕಾವ್ಯ

ಗೂಡೊಳಗಣ ಹಾಡು

ಬೇಟೆಗಾರನ ಕೋವಿಯ ಸದ್ದಿಗೆ
ಹೆದರಿದ ಸೋರೆ ಹಕ್ಕಿಗಳು
ಕಾಳು ಹೆಕ್ಕುವುದ ಬಿಟ್ಟು
ಗೂಡು ಸೇರಿವೆ.
ಬಯಲಲ್ಲಿ ಕಾಣದ ಹಕ್ಕಿಗಳ ಕಂಡು
ಅವನೀಗ ಪತ್ತೆ ಹಚ್ಚುತ್ತಿದ್ದಾನೆ
ಗೂಡುಗಳನ್ನೇ.

ಹಸಿದು ಚೀತ್ಕರಿಸುವ
ಮರಿಗಳ ರೋದನೆ
ಒಳಗೊಳಗಿನ ಕುದಿತ ಕಂಡು
ಕೋವಿಯ ಸದ್ದಿಗೆ ಹೆದರಿ
ಮರಿಗಳ ಹಸಿವೆಯಲ್ಲಿಯೇ ಕೆಡವಿದೆ;
ತಾವೂ ಹಸಿವಿನ ಕಿಚ್ಚಿನಲ್ಲಿ ಬೇಯುತ್ತಿವೆ.

ರಕ್ಷಣೆಗಾಗಿ ಕಟ್ಟಿದ ಗೂಡುಗಳು
ಆಸೆಯಾಗದೆ ಈಗ
ಬೇಡನದೇ ಬಂಧೀಖಾನೆಯ ಕೋಲಿಗಳಾಗಿವೆ.

ನಿರಾಯಾಸವಾಗಿ ಉಸಿರಿದರೆ ಅದು
ಅವನ ಎಚ್ಚರದ ಕಿವಿಗಳಿಗೆ ತಟ್ಟಬಹುದೆಂದು
ಉಸಿರಲಾಗದೆ
ಉಸಿರು ಬಿಗಿ ಹಿಡಿದು ಕೂರಲಾಗದೆ
ಚರಮಗೀತೆಯ ಚಿಲಿಪಿ ಹೊರಬೀಳುತ್ತಿದೆ.
ಎಲ್ಲ ಗೂಡುಗಳಿಂದಲೂ, ಈಗ
ಗೂಡು ದುರ್ನಾತದಲ್ಲಿ ಬಿದ್ದಿದೆ.
ಮೂಗು ಬಿಗಿ ಹಿಡಿದು ಕೂರುವುದು ವ್ಯರ್ಥ.

ಬೇಟೆಗಾರ ಈಗ ಮತ್ತಷ್ಟು ಎಚ್ಚರವಾಗಿದ್ದಾನೆ.
ಮಂದಹಾಸದ ಅಲೆಗಳು
ಅವನ ಮುಖದ ಮೇಲೆ ಅಲುಗಾಡುತ್ತಿವೆ.
ಹೆದರಿದ ಹಕ್ಕಿಗಳೂ ಗೂಡುಬಿಟ್ಟು ಹೊರಬರಲಾರದೆ
ಕುಳಿತಲ್ಲಿಯೇ ಸ್ವಾತಂತ್ರ್ಯದ ಹಾಡು ಹಾಡುತ್ತಿವೆ!



○ ರಂಗನಾಥ ಕಂಟನಕುಂಟೆ

ಸಂಪಾದಕರೊಡನೆ ಸಂವಾದ

ಜಾತಿಗೊಬ್ಬ ಜಗದ್ಗುರು ಮಾಡುವುದು ತಪ್ಪಲ್ಲ!

ಬಸವ ಕುಂಬಾರ ಗುಂಡಯ್ಯ ಶರಣರು



ಸಂಪಾದಕರಿಗೆ,

'ಜಾತಿ ವರ್ಚಸ್ವೀಕರಣದೊಂದಿಗೆ ಬಸವ ತತ್ವದ ಹೋರಾಟ' ಲೇಖನವನ್ನು ಮುದ್ರಿಸಿ ನಮಗೆ ಓದಲು ಅನುಕೂಲ ಮಾಡಿದ್ದಕ್ಕಾಗಿ ಶರಣು ಶರಣಾರ್ಥಿಗಳು,

ಆದರೆ ಮುದ್ರಿಸಿದ ಎಲ್ಲ ಹೇಳಿಕೆಗಳು ಸರಿಯಾಗಿವೆ ಎಂದು ಹೇಳುವುದು ಸರಿಯಲ್ಲ. ಅದರಲ್ಲಿ ಒಪ್ಪುವ ಮತ್ತು ಒಪ್ಪದ ಸಂಗತಿಗಳಿವೆ.

ಒಪ್ಪಿಗೆ ಇರುವ ಹೇಳಿಕೆಗಳು

1. ಲಿಂಗಾಯತರು ಬಸವಣ್ಣನನ್ನು ಜಾತಿಯ ಗೂಟಕ್ಕೆ ಕಟ್ಟಿಹಾಕಿರುವದು. ಅಣ್ಣನವರು ಜಾತಿಯನ್ನು ಕಟ್ಟಲಿಲ್ಲ. ಬದುಕುವ ರೀತಿಯನ್ನು ತೋರಿಸಿದರು ಎಂಬುದನ್ನು ಮರೆತಿರುವುದು ನಿಜ,

2. ಕೆಲವು ಮಠಾಧೀಶರು ರಾಜಕಾರಣಿಗಳ ಜೇಬಿನಲ್ಲಿದ್ದಾರೆ.

3. ಬಸವಣ್ಣನನ್ನೆ ಸ್ಥಾವರ ಮಾಡಿ ಜಾತ್ರೆಗಳ ವಿಜೃಂಭಣೆ.

4. ಜಾತಿ ಜಂಗಮರ ವೈಭವೀಕರಣ,

5. ಕೆಳಜಾತಿಯ ಶರಣರ ಹೆಸರಿನಲ್ಲಿ ಜಾತಿಯ ಜಗದ್ಗುರುಗಳು, ಜಾತಿ ಉಳಿವಿಕೆಗೆ ಕಾರಣ,

ಒಪ್ಪದ ವಿಷಯಗಳು,

1. ಆರ್ಥಿಕ: ಶರಣರ ಚಳುವಳಿಯನ್ನು ಕೇವಲ ಆರ್ಥಿಕ ದೃಷ್ಟಿಯಿಂದ ನೋಡಿದ್ದು ಸರಿಯಲ್ಲ, ಶರಣರೆಲ್ಲರು ದುಡಿದು ಪ್ರಸಾದ ಸ್ವೀಕರಿಸುತ್ತಿದ್ದರೆ ವಿನ ಯಾವುದೆ ಸಂಪತ್ತು ಸಂಗ್ರಹಿಸಲಿಲ್ಲ. ಇಂದಿಗೆ ನಾಳಿಂಗೆ ಎಂಬ ಭಾವನೆ ಯಾರಲ್ಲಿಯೂ ಇರಲಿಲ್ಲ. ದುಡಿದುಣ್ಣುವ ರೀತಿ ತೋರಿಸಿದರು, ಸಂಗ್ರಹ ಬುದ್ಧಿ ಇರಲಿಲ್ಲ. ಸಂಗ್ರಹ ಬುದ್ಧಿಯಿದ್ದರೆ ಬೇರೆ ಬೇರೆ ಭಾಗಗಳಿಂದ ತಮ್ಮ ರಾಜಾಧಿಕಾರ ಬಿಟ್ಟು ಬರುತ್ತಿರಲಿಲ್ಲ. ಉದಾಹರಣೆ: ಮೋಳಿಗೆ ಮಾರಯ್ಯ ಅದರಂತೆ ಇತರೆ ಶರಣಕಾರ ಸಿದ್ಧರಾಮ, ಅಲ್ಲಮ ಅಕ್ಕಮಹಾದೇವಿ, ಮುಂತಾದವರು ಬಿಜ್ಜಳನ ರಾಜ್ಯ ಕೊಳ್ಳೆ ಹೊಡೆಯಲು ಬರಲಿಲ್ಲ,

2. ಅಕ್ಕನ ಬಲಗಗಳ ಲೇವಡಿ: ಎಷ್ಟೊ ಅಕ್ಕನ ಬಳಗಗಳು ಇವತ್ತು ಸ್ತ್ರೀಯರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಯಶಸ್ವಿಯಾಗಿ ಕಾರ್ಯ ಮಾಡುತ್ತವೆ, ಅಕ್ಕನ ಬಳಗ ಇರುವುದರಿಂದಲೆ ಹಳ್ಳಿಯ ಸ್ತ್ರೀಯರಿಗೆ ಸಮಾಜದಲ್ಲಿ ರಾಜಕೀಯ ಸ್ಥಾನಮಾನ ಪಡೆಯುತ್ತಿದ್ದಾರೆ, ಟೀಕಿಸುವದು ತಪ್ಪಲ್ಲ ಅವುಗಳ ಉತ್ತಮಿಕೆಯನ್ನೂ ಹೇಳುವದು ಮುಖ್ಯವಲ್ಲವೆ? ಒಂದು ತಪ್ಪಿಗಾಗಿ ಎಲ್ಲವನ್ನು ತಪ್ಪೆಂದು ತಿಳಿಯುವುದು ಸರಿಯಲ್ಲ.

3. ಜಾತಿ ಜಗದ್ಗುರುಗಳು: ಜಾತಿಗೊಬ್ಬ ಜಗದ್ಗುರುಗಳು ಮಾಡಿರುವುದು ತಪ್ಪಲ್ಲ ಅದರೆ ಮೂಲ ಉದ್ದೇಶ ಸರಿಯಾಗಿ ಅರ್ಥಮಾಡಿಕೊಳ್ಳಬೇಕು ರಾಜಕೀಯದಲ್ಲಿ ಅಧಿಕಾರದ ವಿಕೇಂದ್ರೀಕರಣ ಹೇಗೆ ಮಾಡಿದರೋ ಅದೇ ರೀತಿ "ಕಾವಿಯಲ್ಲಿಯೂ ವಿಕೇಂದ್ರೀಕರಣ ತಂದರು" ಕೇವಲ ಕೆಲವೇ ವ್ಯಕ್ತಿಗಳಿಗೆ ಸೀಮಿತವಾಗಿರುವ ಕಾವಿಯನ್ನು ವಿಕೇಂದ್ರೀಕರಣಗೊಳಿಸಲಾಗಿದೆ. ವಿಶಾಲವಾದ ಸಮಾಜದಲ್ಲಿ ಎಷ್ಟು ಜನ ತತ್ವ -ಪ್ರಸಾರಕರಿದ್ದರೂ ತಪ್ಪಲ್ಲ, ಬಸವತತ್ವ ಪ್ರಸಾರಕರ ಅವಶ್ಯಕತೆಯಿದೆ. ಬಸವಣ್ಣನವರು ಎಲ್ಲ ಸಮುದಾಯದವರಿಗೂ ಮಾನ್ಯತೆ ನೀಡಿದ್ದರು. ಅವರ ನಂತರ ಕುಂಠಿತಗೊಂಡಿದೆ ಎಂಬುದನ್ನು ತಿಳಿದು ಕುಂಠಿತಗೊಳ್ಳಬಾರದು ಎಂಬ ಉದ್ದೇಶದಿಂದ ಮಾಡಲಾಗಿದೆ, ಬಸವಣ್ಣನವರ ತತ್ವ ಸರಿಯಾಗಿ ತಿಳಿದವರಿಗೆ ಇದು ವಿರುದ್ಧವಲ್ಲ.

ಸಂಸ್ಕೃತಿ ಹೆಸರಲ್ಲಿ ಪ್ರಾರಂಭವಾದ ಚಳುವಳಿಯು ರಾಜಕೀಯ ಸ್ವರೂಪ ಪಡೆಯುವಲ್ಲಿ ವಿಫಲವಾಯಿತೆಂದು ಹೇಳುವುದು ಸರಿಯಲ್ಲ, ಸಮಾವೇಶಗೊಳ್ಳುತ್ತಿದ್ದ ಶರಣರ ಯಾರಲ್ಲಿಯೂ ಎಳ್ಳು ಕಾಳಷ್ಟೂ ವ್ಯಾಮೋಹವಿರಲಿಲ್ಲ. ಕಲ್ಯಾಣಕ್ಕೆ ಬಂದಿದ್ದ ಶರಣರೆಲ್ಲರೂ ತಮ್ಮದೆಲ್ಲವವನ್ನೂ ತೊರೆದು ಆಶಾರಹಿತರಾಗಿ ಬಂದಿದ್ದರು. ಮರುಳಶಂಕರದೇವರು ಅಪಘಾನಿಸ್ಥಾನದಿಂದ, ಮಹಾದೇವ ಭೂಪಾಲರು ಕಶ್ಮೀರದಿಂದ ಬಂದರು ರಾಜ್ಯದ ಭೋಗ ವಿಲಾಸಗಳನ್ನು ತ್ಯಜಿಸಿ ಬಂದರು. ಶರಣರು ತ್ಯಾಗಿಗಳು, ಭೋಗಿಗಳಲ್ಲ ಇಂಥ ತ್ಯಾಗಿಗಳಲ್ಲಿ ಆಮಿಷದ ಸುಳಿವು ಸುಳಿವುದಾದರೂ ಹೇಗೆ?

ಮುರುಘಾಶರಣರು ಮಾಡಿದ್ದರಿಂದಲೆ ರಾಜ್ಯದ ಮೂಲೆ ಮೂಲೆಗಳಲ್ಲಿ, ಹೊರ ರಾಜ್ಯ, ಹೊರದೇಶಗಳಲ್ಲಿ ಬಸವಕೇಂದ್ರಗಳು ಕಾಣಬರುತ್ತವೆ. ಮತ್ತು ಕಾರ್ಯ ಮಾಡುತ್ತಿವೆ. ಸಮಾಜದ ಗುರುಗಳನ್ನು ಮಾಡಿರುವುದು ಮಠ ಕಟ್ಟಲಿ ಎಂಬ ಉದ್ದೇಶದಿಂದಲ್ಲ, ಬಸವತತ್ವದ ಪ್ರಸಾರವಾಗಲೆಂದು ಮಾಡಿದರು. ತಮ್ಮ ಸಮಾಜಕ್ಕೆ ಸೀಮಿತವಾಗಿರಲೆಂದಲ್ಲ. ಸಮಾಜವನ್ನು ಕಟ್ಟಿಕೊಂಡು ರಾಜಕೀಯ ಮಾಡಲೆಂದಲ್ಲ.

ಕಾವೇರಿಯ ಮೂಲ ಹುಟ್ಟುವಲ್ಲಿ ಸರಿಯಾಗಿಯೇ ಇದೆ. ಆದರೆ ಮುಂದೆ ಎಷ್ಟು ಗಲೀಜಾಗಿದೆ ಎಂಬುದು ಎಲ್ಲರಿಗೂ ತಿಳಿದಿದೆ, ಆದರೆ ಕಾವೇರಿ ನದಿ ಹುಟ್ಟಿದ್ದು ತಪ್ಪೆ? ಹರಿಯುತ್ತಿರುವುದು ತಪ್ಪೆ? ಗಲೀಜಾಗಲು ಕಾರಣ ರಾರು ವಿಚಾರಿಸದೆ ಕಾವೇರಿಯನ್ನೆ ತೆಗಳುವದು ಸರಿಯೇ? ಸಮಾಜದಲ್ಲಿ ಗುರುಗಳನ್ನು ಮಾಡಿರುವುದು ತಪ್ಪಲ್ಲ ಮುಂದೆ ಹೆಜ್ಜೆ ಇಡುವಲ್ಲಿ ಎಡವುತ್ತಿದ್ದಾರೆಂದರೆ ಒಪ್ಪಬಹುದು, ನಡೆಯುತ್ತಿದ್ದವರು ಎಡವುವುದು ಸಹಜ ಸರಿಪಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ, ನದಿಗಳು ಹುಟ್ಟಿದ್ದೇ ತಪ್ಪು, ಹರಿಯುವುದೇ ತಪ್ಪೆಂದು ಹೇಳುವುದು ಎಷ್ಟು ಅಸಮಂಜಸವೋ ಅದೇ ರೀತಿ ಸಮಾಜದ ಗುರುಗಳನ್ನು ಮಾಡಿರುವುದನ್ನು ಮತ್ತು ಮಾಡಿರುವವರನ್ನು ಟೀಕಿಸುವದು ಅಷ್ಟೇ ಅಸಮಂಜಸ, ನದಿಗಳು ಹರಿಯದಿದ್ದರೆ ಸಾವಿರಾರು ಹೆಕ್ಟರ್ ಬರಡಾಗಿರುವ ಭೂಮಿಯಲ್ಲಿ ಹಸಿರು ಕಾಣಲು ಸಾಧ್ಯವಿತ್ತೆ? ಅದೇ ರೀತಿ ಸಮಾಜದ ಗುರುಗಳಾದವರು ಅನೇಕ ಸಮಾಜಮುಖಿ ಕಾರ್ಯಗಳು ಮಾಡುವುದು ನಿಮಗೆ ಸರಿ ಕಾಣುವುದಿಲ್ಲವೆ? ದೀಪದ ಬುಡದಲ್ಲಿ ಕತ್ತಲಿದೆ ಎಂದರೆ ದೀಪವನ್ನೇ ಆರಿಸುವುದು ಸರಿಯಲ್ಲ.

4. ಬಸವಕೇಂದ್ರಗಳ ಟೀಕೆ: ಬಸವಕೇಂದ್ರಗಳಲ್ಲಿ ಸೀಮಿತವಾದ ಸಮುದಾಯದವರಿಲ್ಲ ಹಲವಾರು ಬಸವ ಕೇಂದ್ರಗಳಲ್ಲಿ ಎಲ್ಲ ಸಮುದಾಯದವರು ಇದ್ದಾರೆ. ಬಸವ ಕೇಂದ್ರಗಳು ಅನೇಕ ವೈಚಾರಿಕ ಕೆಲಸಗಳನ್ನು ಮಾಡುತ್ತಿವೆ. ಇದರ ಬಗ್ಗೆ ಲೇಖನಗಳನ್ನು ಒಮ್ಮೆಯಾದರೂ ನಿಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿದ್ದಿರಾ? ತಪ್ಪುಗಳನ್ನು ಎತ್ತಿ ತೋರಿಸಿದಷ್ಟೇ ವಿಶಾಲ ಭಾವನೆಯಿಂದ ಅವುಗಳ ಉತ್ತಮ ಕಾರ್ಯಗಳನ್ನು ಎತ್ತಿತೋರಿಸಬೇಕು ಅದನ್ನು ಜವಬ್ದಾರಿಯುತವಾಗಿಯೇ ಮಾಡಬೇಕು.

5. ಚಳುವಳಿ: ಬಸವಾದಿ ಶರಣರ ಚಳುವಳಿಯನ್ನು ಹರಳಯ್ಯ-ಚೆನ್ನಯಗಳ ನೇತೃತ್ವದ ಚಳುವಳಿ ಎನ್ನುವುದು

ಸರಿಯಲ್ಲ, 'ಆತ್ಮಕಲ್ಯಾಣ ಮತ್ತು ಲೋಕಕಲ್ಯಾಣ' ಅದು ಯಾರ ಮುಖಂಡರತ್ವದಲ್ಲಿಯೂ ನಡೆಯಲಿಲ್ಲ, ಎಲ್ಲರಿಗೂ ಮುಕ್ತ ಪ್ರವೇಶವಿತ್ತು ಅವರೆಲ್ಲರೂ ಮನೋರಂಜನೆಗಾಗಿ ಸೇರಲಿಲ್ಲ, ಪ್ರದರ್ಶನಕ್ಕಾಗಿ ಸೇರಲಿಲ್ಲ ತಮ್ಮ ತಮ್ಮಲ್ಲಿನ ವಿಚಾರಗಳ ಚರ್ಚೆ ನಡೆಯುತ್ತಿತ್ತು, ಅಲ್ಲಿ ಯಾರ ಮೇಲಲ್ಲ ಕೀಳಲ್ಲ, ಸಮಾನ ಮನಸ್ಕರು ಒಂದೆಡೆ ಸೇರುತ್ತಿದ್ದರು. ಮುಕ್ತವಾಗಿ ಚರ್ಚಿಸುತ್ತಿದ್ದರು.

6. ರಾಜಕೀಯ: ಸಂಸ್ಕೃತಿ ಹೆಸರಲ್ಲಿ ಪ್ರಾರಂಭವಾದ ಚಳುವಳಿಯು ರಾಜಕೀಯ ಸ್ವರೂಪ ಪಡೆಯುವಲ್ಲಿ ವಿಫಲವಾಯಿತೆಂದು ಹೇಳುವುದು ಸರಿಯಲ್ಲ, ಸಮಾವೇಶಗೊಳ್ಳುತ್ತಿದ್ದ ಶರಣರ ಯಾರಲ್ಲಿಯೂ ಎಳ್ಳು ಕಾಳಷ್ಟೂ ವ್ಯಾಮೋಹವಿರಲಿಲ್ಲ. ಕಲ್ಯಾಣಕ್ಕೆ ಬಂದಿದ್ದ ಶರಣರೆಲ್ಲರೂ ತಮ್ಮದೆಲ್ಲವವನ್ನೂ ತೊರೆದು ಆಶಾರಹಿತರಾಗಿ ಬಂದಿದ್ದರು. ಮರುಳಶಂಕರದೇವರು ಅಫಘಾನಿಸ್ಥಾನದಿಂದ, ಮಹಾದೇವ ಭೂಪಾಲರು ಕಶ್ಮೀರದಿಂದ (ಸತಿ ಮತ್ತು ತಂಗಿ ಸಹಿತ)ಬಂದರು. ರಾಜ್ಯದ ಭೋಗ ವಿಲಾಸಗಳನ್ನು ತ್ಯಜಿಸಿ ಬಂದರು. ಶರಣರು ತ್ಯಾಗಿಗಳು, ಭೋಗಿಗಳಲ್ಲ ಇಂಥ ತ್ಯಾಗಿಗಳಲ್ಲಿ ಆಮಿಷದ ಸುಳಿವು ಸುಳಿವುದಾದರೂ ಹೇಗೆ? ತ್ಯಾಗಿಗಳು ಎಂಬುವುದಕ್ಕೆ ಅನೇಕ ವಚನಗಳೇ ಸಾಕ್ಷಿ, ರಾಜಕೀಯ ಚಳುವಳಿ ಮಾಡಿ ಬಸವಣ್ಣನನ್ನು ರಾಜನನ್ನಾಗಿ ಮಾಡುವ ವಿಚಾರವಿತ್ತೆ? ಅಥವಾ ಅಣ್ಣನವರಿಗೆ ರಾಜನಾಗಬೇಕೆಂಬ ಉದ್ದೇಶವಿತ್ತೆ? ವಿಚಾರಿಸಬೇಕು ಹರಳಯ್ಯ– ಚೆನ್ನಯ್ಯನವರಿಗೆ ರಾಜನ ಸಿಂಹಾಸನದಮೇಲೆ ಆಮಿಷವಿತ್ತೆ? ಅದು ಸಮಾಜ್ಜ ಪರಿವರ್ತನೆಯ ಚಳುವಳಿಯಾಗಿತ್ತೇ ಹೊರತು ಆಮಿಷದಿಂದ ಕೂಡಿದ ಚಳುಚಳಿಯಲ್ಲ.

7. ನಗರಕ್ಕೆ ಸೀಮಿತ: ಬಸವಣ್ಣನವರ ದಲಿತ ಕಾಳಜಿ ಕಲ್ಯಾಣದ ನಗರಕ್ಕೆ ಸೀಮಿತವಾಗಿತ್ತೆಂಬುದು ಸರಿಯಲ್ಲ. ಅಲ್ಲಿ ನೆರೆದಿದ್ದ, ಸೇರಿದ್ದ ಶರಣರೆಲ್ಲರೂ ನಾಡಿನ ಮೂಲೆ–ಮೂಲೆಯಿಂದ ಅದೂ ಹಳ್ಳಿಗಳಿಂದಲೇ ಬಂದರೆಂಬುದಕ್ಕೆ, ಆಧಾರಗಳಿವೆ. ಅಲ್ಲಿ ತಯಾರಾದ ಶರಣ–ಶರಣೆಯರು ಕಲ್ಯಾಣದಲ್ಲಿ ಕುಳಿತುಕೊಳ್ಳಲಿಲ್ಲ ಹಳ್ಳಿಹಳ್ಳಿಗೆ ಹೋದರು, ಮನೆ–ಮನೆಗೆ ಹೋದರು, ಪ್ರತಿಯೊಬ್ಬರೂ ದುಃಖಿತರ ಕಣ್ಣೀರು ಬರೆಸಿದರು ನೂಂದವರಿಗೆ ಸ್ಪಂದಿಸಿದರು, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣ–ಶರಣೆಯರು ತತ್ವ ಪ್ರಚಾರ ಮಾಡಿದರು.

8. ಮಠದ ಕಟ್ಟಡ ಮತ್ತು ಅಧಿಕಾರ: ಲೇಖಕರು ಮಠ– ಕಟ್ಟಡಗಳನ್ನು ವಿರೋಧಿಸುತ್ತಲೇ ಆ ವ್ಯವಸ್ಥೆಯನ್ನು ನಮಗೆ ಬಿಟ್ಟು ಕೊಡಿ ಎಂಬುವುದು ವಿಪರ್ಯಾಸವಲ್ಲವೇ? ಬೇರೆಯವರಿಗೆ ಟೀಕಿಸುವವರು ನಮಗೆ ಬಿಟ್ಟು ಕೊಡಿ ಎಂಬುದು ಎಷ್ಟು ಸಮಂಜಸ?

ಹನ್ನೆರಡನೆಯ ಶತಮಾನದ ಶರಣರು ಬೇರೆಯವರಿಗೆ ಸ್ಥಾವರ ಕಟ್ಟಬೇಡವೆಂದು ಉಪದೇಶಿಸಿ ತಾವು ಕಟ್ಟಿಕೊಳ್ಳಲಿಲ್ಲ, ಬೇರೆಯವರ ವ್ಯವಸ್ಥೆಯನ್ನು ನಮಗೆ ಬಿಟ್ಟುಕೊಡಿರೆನ್ನಲಿಲ್ಲ, ಶರಣರು "ನುಡಿ ಶೂರರಲ್ಲ ನಡೆ ಶೂರರು ನುಡಿದಂತೆ ನಡೆದರು ಬರೀ ನುಡಿಯಲಿಲ್ಲ."

"ನಡೆನುಡಿ ಸಿದ್ಧಾಂತವಾದಲ್ಲಿ ಕುಲಹೊಲೆ ಸೂತಕವಿಲ್ಲ" ಎಂಬ ವಚನದಂತೆ ನಡೆದರು.

9. ಬಸವಣ್ಣನವರ ಹುಟ್ಟು: ನಮ್ಮ ತಂದೆಗೆ ನಾನು ಮಗನೆಂದು ಹೇಳಿಕೊಳ್ಳುವುದು ಸುಲಭ, ಆದರೆ 'ನಾನು ಸಮಾಜದ ಮಗನೆಂದು,' 'ಶೋಷಿತ ವರ್ಗದಲ್ಲಿ ಹುಟ್ಟಿದನೆಂದು' ಹೇಳಿಕೊಳ್ಳುವುದು ಧೀರತನ, ಬಸವಣ್ಣನವರು

ಬಸವಣ್ಣನವರ ದಲಿತ ಕಾಳಜಿ ಕಲ್ಯಾಣದ ನಗರಕ್ಕೆ ಸೀಮಿತವಾಗಿತ್ತೆಂಬುದು ಸರಿಯಲ್ಲ. ಅಲ್ಲಿ ನೆರೆದಿದ್ದ, ಸೇರಿದ್ದ ಶರಣರೆಲ್ಲರೂ ನಾಡಿನ ಮೂಲೆ–ಮೂಲೆಯಿಂದ ಅದೂ ಹಳ್ಳಿಗಳಿಂದಲೇ ಬಂದದರೆಂಬುದಕ್ಕೆ, ಆಧಾರಗಳಿವೆ. ಅಲ್ಲಿ ತಯಾರಾದ ಶರಣ–ಶರಣೆಯರು ಕಲ್ಯಾಣದಲ್ಲಿ ಕುಳಿತುಕೊಳ್ಳಲಿಲ್ಲ ಹಳ್ಳಿ ಹಳ್ಳಿಗೆ ಹೋದರು, ಮನೆ–ಮನೆಗೆ ಹೋದರು, ಪ್ರತಿಯೊಬ್ಬರೂ ದುಃಖಿತರ ಕಣ್ಣೀರು ಬರೆಸಿದರು ನೊಂದವರಿಗೆ ಸ್ಪಂದಿಸಿದರು, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣ–ಶರಣೆಯರು ತತ್ವ ಪ್ರಚಾರ ಮಾಡಿದರು.

ಬ್ರಾಹ್ಮಣರ ಮನೆತನದಲ್ಲಿ ಹುಟ್ಟಿದವರೆಂಬುವುದಕ್ಕೆ ಅನೇಕ ವಚನಗಳಲ್ಲಿ ಉಲ್ಲೇಖವಿದೆ. "ಉತ್ತಮ ಕುಲದಲ್ಲಿ ಹುಟ್ಟಿದನೆಂಬ

ಕಷ್ಟತನದ ಹೊರೆಯ ಹೊರಿಸದಿರಯ್ಯಾ"

"ನಾನು ಹಾರುವನೆಂದರೆ ನಗುವ ನಮ್ಮ ಕೂಡಲ ಸಂಗಮದೇವಾ"

ಸಾಂದ್ರವಾಗಿ ಹರಗಣಭಕ್ತಿಯ ಮಾಳ್ಪನೆಂತೊ ಮಾದಲಾಂಬಿಕಾನಂದನು?

ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯನೋಳಪನೆಂತೂಮಾದರಸನ ಮೋಹದ ಮಗನು?

ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತ ಅನುಗೆಯ್ವನೆಂತೂ ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನ,

ಮೇಲಿನ ವಚನದ ಸಾಲುಗಳಲ್ಲಿ ಬಸವಣ್ಣನವರು ಉತ್ತಮ ಕುಲದಲ್ಲಿ ಹುಟ್ಟಿದವರೆಂಬುದಕ್ಕೆ ಸಾಕ್ಷಿ ಇದೆ.

ಕೇವಲ ಶಬ್ದಾರ್ಥ ನೋಡಬಾರದು, ಭಾವಾರ್ಥವನ್ನು ನೋಡಬೇಕು, ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಿತ ವರ್ಗದ ಪರಿಸ್ಥಿತಿ ಅರ್ಥಮಾಡಿಕೊಳ್ಳಬೇಕು, ಪರಿಸ್ಥಿತಿಯ ವಿರುದ್ಧ ಹೋರಾಡಲು ನಾನು ಕನಿಷ್ಠ ಕುಲದಲ್ಲಿ ಹುಟ್ಟಿದವನೆಂದು ಬಸವಣ್ಣನವರು ಹೇಳಿಕೊಳ್ಳುತ್ತಾರೆ.

10. ಉಪಸಂಹಾರ: ಬಸವತತ್ವವೆಂದರೆ ಒಬ್ಬನಿಂದ ರಚಿತವಾದ ತತ್ವವಲ್ಲ ಎಲ್ಲರೂ ಮುಕ್ತರಾಗಿ ಭಾಗವಹಿಸಿ ಹೀಗೆ ಗಿರಣಿಯಲ್ಲಿ ಬೀಸಿದ ಹಿಟ್ಟನ್ನು ಮತ್ತೆ ಸೋಸಿ ರೊಟ್ಟಿ ಮಾಡಲು ಬಳಸುತ್ತಾರೋ ಅದೇ ರೀತಿ ಎಲ್ಲ ಶರಣ ಶರಣಿಯರು ಸೋಸಿ ಬೆಳೆಸಿದ ತತ್ವ, ಹೊಸತನಕ್ಕೆ ಸ್ವಾಗತ ಮಾಡಿದ ತತ್ವ, (ಆದರೆ ಜಗತ್ತಿನ ಉಳಿದ ಹಲವಾರು ತತ್ವಗಳು ಕೇವಲ ಏಕವ್ಯಕ್ತಿಯಿಂದಲೇ ರಚಿತ ವಾದವುಗಳು. ಆ ವ್ಯಕ್ತಿಗಳು ಹೇಳಿದ್ದೇ ಕೇಳಬೇಕು, ಒಂದಕ್ಷರವು ಬದಲಾವಣೆ ಮಾಡುವಂತಿಲ್ಲ. ಅವುಗಳಿರುವ ದೋಷವನ್ನು ಎತ್ತಿತೋರಿಸುವಂತಿಲ್ಲ. ಸುಮಾರು ಕಾಲಗಳು ಗತಿಸಿದರೂ, ತಪ್ಪೆಂದು ತಿಳಿದರೂ ಅದು ತಪ್ಪೆಂದು ಹೇಳಲು ಯಾರಿಗೂ ಧೈರ್ಯವಿಲ್ಲ! □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಸ್ಲಂ ಜನರು ಯಾವಾಗಲೂ ಊರ ಹೊರಗಡೆಯೇ ಇರಬೇಕಾ?

ಡಾ. ವಾಸು ಎಚ್.ವಿ.
ಕರ್ನಾಟಕ ಜನಪರ ವೇದಿಕೆ

ಬಲಿ ಕೊಡುವುದು ಕುರಿ ಕೋಳಿಗಳನ್ನೇ ಹೊರತು ಹುಲಿ ಸಿಂಹಗಳನ್ನಲ್ಲ – ಡಾ. ಬಿ.ಆರ್.ಅಂಬೇಡ್ಕರ್

ಮಂಡ್ಯದ ತಮಿಳು ಕಾಲೋನಿಯನ್ನು ಸ್ಥಳಾಂತರಿಸಬೇಕೆಂದು ಕೆಲವರು ಒತ್ತಾಯಿಸುತ್ತಿದ್ದಾರೆ. ಹಲವು ದಶಕಗಳಿಂದ ಇಲ್ಲಿ ವಾಸಿಸುತ್ತಿದ್ದ ಜನರ ಗುಡಿಸಲುಗಳು ಒಂದೂವರೆ ವರ್ಷದ ಹಿಂದೆ ಬೆಂಕಿಗೆ ಆಹುತಿಯಾದವು. ಅದಕ್ಕೂ ಹಿಂದೆ ಇಲ್ಲಿನ ಎಲ್ಲರಿಗೂ ಪುನರ್ವಸತಿ ಕಲ್ಪಿಸುವ ಯೋಜನೆಗಳು ಯಶಸ್ವಿಯಾಗದೇ ಉಳಿದುಕೊಂಡಿದ್ದವು. ಈಗ ಬೆಂಕಿ ಅನಾಹುತದ ನಂತರ ಸರ್ಕಾರವು ದೊಡ್ಡ ಮನಸ್ಸು ಮಾಡಿದೆ. ಹಾಲಿ ಇಲ್ಲಿ ವಾಸಿಸುತ್ತಿರುವ ಎಲ್ಲರಿಗೂ ಮನೆ ಕಟ್ಟಿಕೊಡುವ ಯೋಜನೆ ಮಂಜೂರಾಗಿ ಕಾಮಗಾರಿ ಆರಂಭವಾಗಿದೆ. ಇಂತಹ ಸಂದರ್ಭದಲ್ಲಿ ಇವರಿಗೆ ಇಲ್ಲಿ ಮನೆ ಕಟ್ಟಿಕೊಡಬಾರದು ಎಂಬುದು ಕೆಲವರ ಒತ್ತಾಯ.

ಇದಕ್ಕೆ ಮುಂದಿಡುತ್ತಿರುವ ಕಾರಣಗಳು ಹೀಗಿವೆ. ಜಿಲ್ಲಾಸ್ಪತ್ರೆಯು ಇಂದು ಮೆಡಿಕಲ್ ಕಾಲೇಜಾಗಿದೆ; ಅದಕ್ಕೆ ಇನ್ನೂ ಹೆಚ್ಚಿನ ಜಾಗ ಬೇಕು. ಆದ್ದರಿಂದ ಈ ಜಾಗದಲ್ಲಿ ಸ್ಲಂ ನಿವಾಸಿಗಳಿಗೆ ಮನೆ ಕಟ್ಟಿಕೊಡದೇ, ಹೊರಗಡೆ ಎಲ್ಲಾದರೂ ಕಟ್ಟಿಕೊಡಬೇಕು. ಇದರ ಬಗ್ಗೆ ಜಿಲ್ಲಾಸ್ಪತ್ರೆಯವರಾಗಲೀ, ಮೆಡಿಕಲ್ ಕಾಲೇಜಿನವರಾಗಲೀ ಕೇಳಿದ ಬಗ್ಗೆ ಏನೂ ಸುದ್ದಿಯಿಲ್ಲ. ಆಸ್ಪತ್ರೆಯ ಎದುರುಗಡೆ ಇರುವ ಜಿಲ್ಲಾ ವೈದ್ಯಾಧಿಕಾರಿಗಳ – ಡಿಎಚ್ಒ– ಕಚೇರಿಯ ಜಾಗವನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಿಕೊಡಬೇಕೆಂದು ಮೆಡಿಕಲ್ ಕಾಲೇಜಿನವರು ಕೇಳಿದ್ದಾರೆ ಎಂದು ಸುದ್ದಿಯಿದೆ.

ಇದಲ್ಲದೇ ಅಲ್ಲಲ್ಲಿ ಕೆಲವು ವ್ಯಕ್ತಿಗಳು ಮುಂದಿಡುವ ಇನ್ನೂ ಎರಡು ಕಾರಣಗಳಿವೆ. ನಗರದ ಹೃದಯ ಭಾಗದಲ್ಲಿ ಇವರಿಗೆ ಏಕೆ ಜಾಗ ಕೊಡಬೇಕು? ಸಾರ್ವಜನಿಕರಿಗೆ ಉಪಯೋಗವಾಗುವ ಆಸ್ಪತ್ರೆಗೆ ಹೆಚ್ಚಿನ ಜಾಗ ಕೊಡುವುದು ಒಳ್ಳೆಯದು ಎಂಬುದು ಅದರಲ್ಲಿ ಒಂದು ಕಾರಣ. ಎರಡನೆಯದು, ಸ್ಲಂಜನರು ಸ್ವಚ್ಛತೆಯನ್ನು ಕಾಪಾಡುವುದಿಲ್ಲವಾದ್ದರಿಂದ ಅವರನ್ನು ಇಲ್ಲಿಂದ ಸ್ಥಳಾಂತರಿಸಬೇಕು ಎಂಬುದು.

ಮೇಲೆ ಹೇಳಲಾಗುವ ಕಾರಣಗಳು ಸಾಮಾನ್ಯವಾಗಿ ಎಲ್ಲಾ ಸ್ಲಂ ಜನರ ವಿಷಯದಲ್ಲೂ ಮುಂದಿಡಲಾಗುವ ಕಾರಣಗಳಾಗಿವೆ. ಸಾಮಾನ್ಯವಾಗಿ ಅಭಿವೃದ್ಧಿಯ ಹೆಸರಿನಲ್ಲಿ ಜನರನ್ನು ಎತ್ತಂಗಡಿ ಮಾಡುವಾಗಲೆಲ್ಲಾ ಹೆಚ್ಚು ಕಡಿಮೆ ಇದೇ ರೀತಿಯ ವಾದಗಳನ್ನು ಮುಂದಿಡಲಾಗುತ್ತದೆ. ತಮಿಳು ಕಾಲೋನಿಗೆ ಈ ಹಿಂದೆ ಮನೆ ಕಟ್ಟಿಕೊಡುವ ಪ್ರಯತ್ನಗಳು ನಡೆದರೂ, ಅವರುಗಳು ಅಲ್ಲಿಗೆ ಹೋಗಲಿಲ್ಲವೆಂದು ನಿರ್ದಿಷ್ಟವಾಗಿ ಈ ಸ್ಲಂಜನರ ಬಗ್ಗೆ ಮಾಡಲಾಗುವ ಮತ್ತೊಂದು ಆರೋಪ.

ಈ ಎಲ್ಲಾ ವಾದಗಳನ್ನು ಸೂಕ್ಷ್ಮವಾಗಿ ಹಾಗೂ ಗಂಭೀರವಾಗಿ ಪರಿಶೀಲಿಸುವ ಅಗತ್ಯವಿದೆ. ಏಕೆಂದರೆ ನೂರಾರು ಕುಟುಂಬಗಳ ಭವಿಷ್ಯದ ದೃಷ್ಟಿಯಿಂದ ಇದು ಪ್ರಮುಖ ಸಂಗತಿಯಾಗಿದೆ. ಇದು ಯಾವುದೋ ನಗರದ ಯಾವುದೋ ಒಂದು ಸ್ಲಂನ ಎತ್ತಂಗಡಿಯ ಪ್ರಶ್ನೆಯಷ್ಟೇ ಅಲ್ಲ. ಬಹುತೇಕ ಬಡವರಿಗೆ ಇದೇ ರೀತಿಯ ವಾದಗಳು ಅನ್ವಯಿಸುವುದರಿಂದಲೂ ಇದನ್ನು ಚರ್ಚಿಸಬೇಕಿದೆ.

ನಗರದ ಹೃದಯ ಎಂದು ಹೇಳಲಾಗುವ ಭಾಗಗಳಲ್ಲಿ 'ಸಾರ್ವಜನಿಕರ' ಉಪಯೋಗಕ್ಕೆಂದು ಕೆಲವು ದೊಡ್ಡ ಕಟ್ಟಡಗಳನ್ನು ಕಟ್ಟಬೇಕಾಗಿ ಬಂದಾಗ ಜಾಗದ ಸಮಸ್ಯೆ ಎದುರಾಗುತ್ತದೆ. ಏಕೆಂದರೆ ನಮ್ಮ ಪಟ್ಟಣ/ನಗರಗಳ ಪ್ರಮುಖ ಗುಣಲಕ್ಷಣವೇ ಬೆಳವಣಿಗೆ. ಅದರಲ್ಲೂ ಹಲವಾರು ಸಂದರ್ಭಗಳಲ್ಲಿ ಅಡ್ಡಾದಿಡ್ಡಿ ಬೆಳವಣಿಗೆ. ಅಡ್ಡಾದಿಡ್ಡಿ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆ ಇರುವಾಗ ದೇಶದಲ್ಲಿ ಅಸಮತೋಲನ ತೀವ್ರವಾಗಿ ಇರುತ್ತದೆ. ಹಳ್ಳಿಗಳಿಗಿಂತ ನಗರಗಳು ವೇಗವಾಗಿ ಬೆಳೆಯುತ್ತವೆ; ಬೆಳೆಯುವಾಗ ಅವ್ಯವಸ್ಥಿತವಾಗಿಯೇ ಬೆಳೆಯುತ್ತವೆ.

ನಗರದ ಹೃದಯ ಎಂದು ಹೇಳಲಾಗುವ ಭಾಗಗಳಲ್ಲಿ 'ಸಾರ್ವಜನಿಕರ' ಉಪಯೋಗಕ್ಕೆಂದು ಕೆಲವು ದೊಡ್ಡ ಕಟ್ಟಡಗಳನ್ನು ಕಟ್ಟಬೇಕಾಗಿ ಬಂದಾಗ ಜಾಗದ ಸಮಸ್ಯೆ ಎದುರಾಗುತ್ತದೆ. ಏಕೆಂದರೆ ನಮ್ಮ ನಗರಗಳ ಪ್ರಮುಖ ಗುಣಲಕ್ಷಣವೇ ಬೆಳವಣಿಗೆ. ಅದರಲ್ಲೂ ಹಲವಾರು ಸಂದರ್ಭಗಳಲ್ಲಿ ಅಡ್ಡಾ ದಿಡ್ಡಿ ಬೆಳವಣಿಗೆ. ಅಡ್ಡಾ ದಿಡ್ಡಿ ರಾಜಕೀಯ - ಸಾಮಾಜಿಕ ವ್ಯವಸ್ಥೆ ಇರುವಾಗ ದೇಶದಲ್ಲಿ ಅಸಮತೋಲನ ತೀವ್ರವಾಗಿ ಇರುತ್ತದೆ. ಹಳ್ಳಿಗಳಿಗಿಂತ ನಗರಗಳು ವೇಗವಾಗಿ ಬೆಳೆಯುತ್ತವೆ; ಬೆಳೆಯುವಾಗ ಅವ್ಯವಸ್ಥಿತವಾಗಿಯೇ ಬೆಳೆಯುತ್ತವೆ. ಅದಕ್ಕೆ ಮುಂಚೆಯೂ ಆ ಊರಿನ ಶ್ರಮಿಕರ ಮನೆಗಳು, ಊರಿನ ಕೊನೆಯಲ್ಲೇ-ಅಂಚಿನಲ್ಲೇ ಇರುತ್ತವೆ. ಊರು ಬೆಳೆಯುತ್ತಾ ಹೋಗುತ್ತದೆ. ಆ ರೀತಿಯಾಗಿ ಅದು ಬೆಳೆಯಲು ಇದೇ ಶ್ರಮಿಕರು ಬೆವರು ಸುರಿಸಿರುತ್ತಾರೆ.

ಅದಕ್ಕೆ ಮುಂಚೆಯೂ ಆ ಊರಿನ ಶ್ರಮಿಕರ ಮನೆಗಳು, ಊರಿನ ಕೊನೆಯಲ್ಲೇ-ಅಂಚಿನಲ್ಲೇ ಇರುತ್ತವೆ. ಊರು ಬೆಳೆಯುತ್ತಾ ಹೋಗುತ್ತದೆ. ಆ ರೀತಿಯಾಗಿ ಅದು ಬೆಳೆಯಲು ಇದೇ ಶ್ರಮಿಕರು ಬೆವರು ಸುರಿಸಿರುತ್ತಾರೆ. ಕಟ್ಟಡ ಕಟ್ಟುತ್ತಾರೆ, ಬಣ್ಣ ಹೊಡೆಯುತ್ತಾರೆ, ಕಸ ಗುಡಿಸುತ್ತಾರೆ. ಕೆಲವೊಮ್ಮೆ ಕಟ್ಟಡಗಳು ಕಟ್ಟುವಾಗ, ಬಿದ್ದು ಸತ್ತೂ ಹೋಗುತ್ತಾರೆ. ಹೀಗೆ ಈ ಶ್ರಮಿಕರ ಬೆವರಿನ ಫಲವಾಗಿಯೇ ಮೇಲೇಳುವ ಕಟ್ಟಡಗಳು ಶ್ರಮಿಕರ ಗುಡಿಸಲುಗಳನ್ನು ಸುತ್ತುವರಿಯುತ್ತವೆ. ಇದೀಗ ಊರ ಕೊನೆಯು, ಊರ ಹೃದಯ ವಾಗಿಬಿಡುತ್ತದೆ.

ಆಗ ಏಳುತ್ತದೆ ಪ್ರಶ್ನೆ. ಛೇ!? ಇಂತಹ ಮುಖ್ಯ ಜಾಗದಲ್ಲಿ (prime location) ಈ ಗುಡಿಸಲುಗಳೇ? ಎಂದು. ಈಗ ಯಾವುದಾದರೂ ಕಾರಣ ಹೇಳಿ, ಅವರನ್ನು ಮತ್ತೆ ಅಂಚಿಗೆ ತಳ್ಳುವ ಪ್ರಯತ್ನ ನಡೆಯುತ್ತದೆ. ಅವರು ಸಂಘಟಿತರಾಗಿರದಿದ್ದರೆ ಅದರಲ್ಲಿ ಯಶಸ್ವಿಯೂ ಆಗಿಬಿಡುತ್ತಾರೆ. ಊರ ಕೊನೆಗೆ ಗುಡಿಸಲುಗಳು ಏಳುತ್ತವೆ. ಮತ್ತೆ ಊರು ಬೆಳೆಯುತ್ತದೆ. ಅದಕ್ಕೆ ಇದೇ ಜನರೇ ಬೆವರು ಸುರಿಸಿರುತ್ತಾರೆ. ಗುಡಿಸಲುಗಳು ಮಧ್ಯಕ್ಕೆ ಬರುತ್ತವೆ. ಮತ್ತದೇ ಪ್ರಶ್ನೆ! ಇವರ್ಯಾಕೆ ಊರ ಮಧ್ಯದಲ್ಲಿ? ಇದೊಂದು ಥರಾ ಅಸ್ಪೃಶ್ಯತೆಯಲ್ಲವೇ?

ಜಿಲ್ಲಾಸ್ಪತ್ರೆಗೆ ಜಾಗ ಬೇಕು. ಖಂಡಿತಾ ಬೇಕು. ಬೇಡಾ ಎನ್ನುವವರು ಯಾರು? ಜಿಲ್ಲಾಸ್ಪತ್ರೆ ಬೆಳೆದರೆ, ಮೆಡಿಕಲ್ ಕಾಲೇಜಾದರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾದರೆ, ಅಲ್ಲಿನ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗದೆ ಇಲ್ಲೇ ನೆಟ್ಟಗೆ ಕೆಲಸ ಮಾಡಿದರೆ, ಲಂಚ ತೆಗೆದುಕೊಳ್ಳದೆ ಆಪರೇಷನ್ ನಡೆದರೆ, ಹೊರಗಡೆಗೆ ಬರೆದು ಕೊಡದೇ ಇದೇ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿದರೆ ..... ಇನ್ನೂ ಹತ್ತು ರೆಗಳು ಆದರೆ ಎಲ್ಲರಿಗೂ ಉಪಯೋಗವೇ. ಖಂಡಿತಾ ನಮಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೇ ಬೇಕು. ಆದರೆ ಅದನ್ನು ಕಟ್ಟುವ ಜನ ಮಾತ್ರ ಊರ ಹೊರಗೆ ಇರಬೇಕು ಅಲ್ಲವೇ?

ಅಕ್ಕಪಕ್ಕದಲ್ಲಿ ಬೇರೆ ಕಟ್ಟಡಗಳೂ ಇರುತ್ತವೆ. ಅವರೂ ಒತ್ತುವರಿ ಮಾಡಿಕೊಂಡು ಕಟ್ಟಿರುತ್ತಾರೆ. ಯಾರ್ಯಾರ ತಲೆ ಮೇಲೋ ಕೈಮಡಗಿ ಬಿಲ್ಡಿಂಗ್‌ಗಳು ಮೇಲೆದ್ದಿರುತ್ತವೆ. ಆದರೆ ಆ ಜಾಗ ಯಾರ ಕಣ್ಣೂ ಕುಕ್ಕುವುದಿಲ್ಲ. ಅವರನ್ನು ಎಬ್ಬಿಸಬೇಕೆಂದು ಯಾರೂ ಕೂಗೆಬ್ಬಿಸುವುದಿಲ್ಲ. ಸರಿ... ಈಗ ತಮಿಳು ಕಾಲೋನಿಯ ಎತ್ತಂಗಡಿ ಮಾಡಿಬಿಟ್ಟು ಅಲ್ಲಿ ನರ್ಸ್‌ಗಳಿಗೆ ವಸತಿ ಗೃಹ ಕಟ್ಟಲಿ. ಮೆಡಿಕಲ್ ಕಾಲೇಜಿಗೆ ಆಟದ ಮೈದಾನವೂ ಆಗಲಿ. ನಂತರ ಮಂಡ್ಯ ಇನ್ನೂ ಬೆಳೆಯುತ್ತದೆ. ಇನ್ನೂ ದೊಡ್ಡ ಆಸ್ಪತ್ರೆಯೇ ಬೇಕಾಗುತ್ತದೆ. ಆಗ ಯಾರನ್ನು ಎಬ್ಬಿಸುತ್ತಾರೆ. ಮೀರಾ ಶಿವಲಿಂಗಯ್ಯರ ಕಾಲೇಜು ಕೆಡವುತ್ತಾರಾ? ಇಲ್ಲವಾದರೆ ಬಡ ಗುಡಿಸಲುಗಳ ಮೇಲೆ ಮಾತ್ರ ಯಾಕೆ ಪ್ರಹಾರ?

ಈ ಗುಡಿಸಲುಗಳು ಅಕ್ರಮವಾಗಿ ಕಟ್ಟಲ್ಪಟ್ಟವು. ದೊಡ್ಡ ಬಿಲ್ಡಿಂಗ್‌ಗಳು ಸಕ್ರಮ ಎಂಬ ವಾದ ಬರುತ್ತದೆ. ಯಾರ್ಯಾರದ್ದು ಅಕ್ರಮ, ಯಾರ್ಯಾರದ್ದು ಸಕ್ರಮ ಎನ್ನುವುದರಲ್ಲೇ ಒಂದು ವರ್ಗಪೂರ್ವಗ್ರಹ ಕೆಲಸ ಮಾಡುತ್ತವೆ. ಅದೇನೇ ಇರಲಿ, ಕಾನೂನನ್ನೇ ಮಾತಾಡುವುದಾದರೆ ಒಮ್ಮೆ ಸ್ಲಂ ಎಂದು ಡಿಕ್ಲೇರ್ ಆದರೆ ಆ ಜಾಗದ ಮೇಲೆ ಅಲ್ಲಿನ ನಿವಾಸಿಗಳಿಗೆ ಹಕ್ಕು ಸ್ಥಾಪಿತವಾಗುತ್ತದೆ ಎಂದು ಇದೇ ದೇಶದ ಕಾನೂನೇ ಹೇಳುತ್ತದೆ. ಆ

ತಮಿಳು ಕಾಲೋನಿಯ ಜನರಿಗೆ ಈ ಹಿಂದೆ ಮನೆ ನಿರ್ಮಾಣ ಮಾಡಿ ಬೇರೆಡೆಗೆ ಕಳಿಸಲು ಯತ್ನಿಸಿದಾಗ ಅವರು ಹೋಗಲಿಲ್ಲ ಎಂಬ ಮತ್ತೊಂದು ಆರೋಪವೂ ಇದೆ. ಆಗಲೂ ಅವರನ್ನು ಎತ್ತಂಗಡಿ ಮಾಡಹೊರಟಿದ್ದು, ಊರ ಹೊರಗಡೆಗೇ. ಯಥಾಪ್ರಕಾರ ನಮ್ಮ 'ನಾಗರಿಕ' ವ್ಯವಸ್ಥೆಯ ನೀತಿಗೆ ತಕ್ಕಂತೆಯೇ. ಇವರಿಗೆಂದೇ ಕಟ್ಟಲಾದ ಹಾಲಹಳ್ಳಿ ಮನೆಗಳಲ್ಲಿ ಬಹುತೇಕ ಎಲ್ಲಾ ಮೊದಲ ಮಹಡಿಗಳು ಇನ್ನು ಕೆಲವೇ ದಿನಗಳಲ್ಲಿ ಬಿದ್ದು ದುರಂತವೊಂದನ್ನು ಕಾಣಲಿದ್ದೇವೆ. ಮಳೆ ಬಂದಾಗ, ಇಡೀ ನೀರು ಮನೆಯೊಳಗೇ ಬೀಳುತ್ತದೆ. ಮಳೆ ನಿಂತರೂ ಹನಿ ನಿಲ್ಲುವುದಿಲ್ಲ. ಈಗಾಗಲೇ ಮನೆ ಕುಸಿತದಿಂದ ಇಬ್ಬರು ಸತ್ತಿದ್ದಾರೆ.

ಕಾನೂನನ್ನೇ ಪಾಲಿಸೋಣ ಅಲ್ಲವೇ?

ಆಸ್ಪತ್ರೆಗೆ ಜಾಗ ಸಿಕ್ಕರೆ ಸಾರ್ವಜನಿಕರಿಗೆ ಒಳ್ಳೆಯದಾಗುವುದಿಲ್ಲವೇ ಎಂಬ ಪ್ರಶ್ನೆಗೆ ಬರೋಣ. ಇದರ ಬಗ್ಗೆ ಎರಡು ಉಪಕಥೆಗಳನ್ನು ಹೇಳಬೇಕೆನಿಸುತ್ತದೆ. ಬೆಂಗಳೂರಿನಲ್ಲಿ ವಿವಿಧ ಜನವರ್ಗಗಳು ಮುಷ್ಕರ ಮಾಡಿ ಪ್ರತಿಭಟನಾ ಮೆರವಣಿಗೆ ಮಾಡಿದರೆ ಪತ್ರಿಕೆಗಳಲ್ಲಿ ಹೀಗೆ ಬರುತ್ತದೆ. 'ಕಾರ್ಮಿಕರ ಮೆರವಣಿಗೆ: ಟ್ರಾಫಿಕ್ ಜಾಮ್', ಸಾರ್ವಜನಿಕರಿಗೆ ತೊಂದರೆ', 'ರೈತರ ಪ್ರತಿಭಟನೆ: ಸಾರ್ವಜನಿಕರಿಗೆ ತೊಂದರೆ', 'ಆಟೋ ಚಾಲಕರ ಪ್ರತಿಭಟನೆ: ಸಾರ್ವಜನಿಕರಿಗೆ ತೊಂದರೆ', 'ಬ್ಯಾಂಕ್ ಉದ್ಯೋಗಿಗಳ ಮುಷ್ಕರ: ಸಾರ್ವಜನಿಕರಿಗೆ ತೊಂದರೆ' ಹೀಗೆ.. ಕಾರ್ಮಿಕರೂ ಅಲ್ಲದ, ರೈತರೂ ಅಲ್ಲದ, ಆಟೋ ಚಾಲಕರೂ ಅಲ್ಲದ, ಬ್ಯಾಂಕ್ ಉದ್ಯೋಗಿಗಳೂ ಅಲ್ಲದ ಸಾರ್ವಜನಿಕರು ಇನ್ನಾರು? ಮಂಡ್ಯ ತಾಲೂಕಿನ ನ್ಯಾಯಬೆಲೆ ಅಂಗಡಿಗಳಿಗೆ ಅಕ್ಕಿ ಸರಬರಾಜು ಮಾಡುವ ಗೋಡೌನ್‌ಗಳ ಮೂಟೆ ಕಾರ್ಮಿಕರಿಗೆ ಸೂಕ್ತ ಕೂಲಿದರ ಪರಿಷ್ಕರಣೆ ನಡೆದು 8 ವರ್ಷಗಳಾಗಿವೆ. ಅದಕ್ಕೆ ನಮ್ಮ ಕಾರ್ಮಿಕ ಸಂಘ ಒತ್ತಾಯಿಸಿದಾಗಲೆಲ್ಲಾ, ಇದು ಬಡವರಿಗೆ ಹೋಗುವ ಅಕ್ಕಿ. ನೀವು ಹೆಚ್ಚು ಕೇಳಬಾರದು ಎಂದ ಸಿದ್ಧ ಉತ್ತರ ಯಾವಾಗಲೂ ಸಿದ್ಧವಾಗಿಯೇ ಇರುತ್ತದೆ. ಈ ಕಾರ್ಮಿಕರು ಬಡವರಲ್ಲವಾ? ಬಡವರಿಗೆ ಹೋಗುವ ಅಕ್ಕಿ ಎಂದು ಕಾರ್ಮಿಕರ ಗುತ್ತಿಗೆದಾರ ತನ್ನ ಲಾಭವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರಾ ಎಂಬ ಪ್ರಶ್ನೆ ಅಲ್ಲಿ ಏಳಲು ಅವಕಾಶ ನೀಡುವುದೇ ಇಲ್ಲ.

ಇದು ನಮ್ಮ ವ್ಯವಸ್ಥೆ ಕೇಳಿಕೊಳ್ಳಬೇಕಾದ ಪ್ರಶ್ನೆ. ಇಂದು ದೇಶಾದ್ಯಂತ ರೈತರನ್ನು ಅವರ ಮೂಲ ಜಾಗಗಳಿಂದ, ಬದುಕಿನ ಮೂಲಗಳಿಂದ ಒಕ್ಕಲೆಬ್ಬಿಸುತ್ತಿರುವ ವಿದ್ಯಮಾನ ವ್ಯಾಪಕವಾಗಿ ನಡೆದಿದೆ. ಇಲ್ಲೆಲ್ಲಾ ಇರುವುದು ಇದೇ ರೀತಿಯ ಪ್ರಶ್ನೆ. ಯಾರ ಹಿತಾಸಕ್ತಿಗಾಗಿ ಯಾರ ಬಲಿ ಎಂಬುದು? ಖಂಡಿತಾ ಜಿಲ್ಲಾಸ್ಪತ್ರೆ ಚೆನ್ನಾಗಿ ನಡೆಯಬೇಕು. ಅದಕ್ಕಾಗಿ ಜಾಗವೂ ದೊರೆಯಬೇಕು. ಈ ದೇಶದ ನೂರಾರು ಮೆಡಿಕಲ್ ಕಾಲೇಜುಗಳಲ್ಲಿರುವಂತೆ ಮೊದಲ ಮೂರು ವರ್ಷಗಳ(ಪ್ರಿ ಕ್ಲಿನಿಕಲ್ ಮತ್ತು ಪ್ಯಾರಾ ಕ್ಲಿನಿಕಲ್) ತರಗತಿಗಳನ್ನು ಊರ ಹೊರವಲಯದ ಉತ್ತಮ ಪರಿಸರದಲ್ಲಿ ಮತ್ತೊಂದು ಕಟ್ಟಡದಲ್ಲಿ ನಡೆಸುವಂತೆಯೂ ಮಾಡಬಹುದು. ಅದಕ್ಕಾಗಿ ಎಲ್ಲರೂ ಹೋರಾಡಬೇಕು. ಅದಕ್ಕಿಂತ ಮುಂಚೆ ಹಾಲಿ ಇರುವ ಜಿಲ್ಲಾಸ್ಪತ್ರೆಯಲ್ಲಿ ಇರುವ ಉಪಕರಣಗಳನ್ನು ಬಳಸದೆ ತುಕ್ಕು ಹಿಡಿಯುತ್ತಿರುವುದು, ವೈದ್ಯರುಗಳು ಮಾತ್ರ ತುಕ್ಕು ಹಿಡಿಯದೇ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿರುವುದನ್ನೂ ಸರಿಪಡಿಸಬೇಕು.

ಸ್ವಚ್ಛತೆಯ ಪ್ರಶ್ನೆಗೆ ಬರುವುದಾದರೆ, ಸ್ವಚ್ಛತೆಯನ್ನುವುದು ಕೇವಲ ಮನಸ್ಥಿತಿಯ ವಿಚಾರವಲ್ಲ. ಮನಸ್ಥಿತಿಯೂ ಮತ್ತು ಸ್ವಚ್ಛತೆಯೂ ಎರಡೂ ಆಯಾ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಜೊತೆ ನೇರ ಸಂಬಂಧವನ್ನು ಹೊಂದಿರುತ್ತದೆ. ಇದೇ ತಮಿಳು ಕಾಲೋನಿಯ ವಿಚಾರಕ್ಕೆ ಬರುವುದಾದರೆ, ಸಾಕಷ್ಟು ವರ್ಷಗಳ ಹಿಂದೆಯೇ ಮನೆ ನಿರ್ಮಾಣ ನಡೆದ ಮುಂದಿನ ಕೆಲವು ಬೀದಿಗಳು ಅತ್ಯಂತ ಸ್ವಚ್ಛವಾಗಿರುವುದನ್ನು ಯಾರು ಬೇಕಾದರೂ ಪರಿಶೀಲಿಸಬಹುದು. ಇಂದು ಮನೆಗಳ ಕಾಮಗಾರಿ ನಡೆದು ಎಲ್ಲರೂ ಅವರವರ ಮನೆಗಳಿಗೆ ಹೋದರೆ ಖಂಡಿತಾ ಸಾಕಷ್ಟು ಸ್ವಚ್ಛವಾಗಿಯೇ ಇರುತ್ತದೆ.

ತಮಿಳು ಕಾಲೋನಿಯ ಜನರಿಗೆ ಈ ಹಿಂದೆ ಮನೆ ನಿರ್ಮಾಣ ಮಾಡಿ ಬೇರೆಡೆಗೆ ಕಳಿಸಲು ಯತ್ನಿಸಿದಾಗ ಅವರು ಹೋಗಲಿಲ್ಲ ಎಂಬ ಮತ್ತೊಂದು ಆರೋಪವೂ ಇದೆ. ಆಗಲೂ ಅವರನ್ನು ಎತ್ತಂಗಡಿ ಮಾಡಹೊರಟಿದ್ದು, ಊರ ಹೊರಗಡೆಗೇ. ಯಥಾಪ್ರಕಾರ ನಮ್ಮ 'ನಾಗರಿಕ' ವ್ಯವಸ್ಥೆಯ ನೀತಿಗೆ ತಕ್ಕಂತೆಯೇ. ಹಾಗೆ ಇವರಿಗೆಂದೇ ಕಟ್ಟಲಾದ ಹಾಲಹಳ್ಳಿ ಮನೆಗಳಲ್ಲಿ ಬಹುತೇಕ ಎಲ್ಲಾ ಮೊದಲ ಮಹಡಿಗಳು ಇನ್ನು ಕೆಲವೇ ದಿನಗಳಲ್ಲಿ ಬಿದ್ದು ದುರಂತವೊಂದನ್ನು ಕಾಣಲಿದ್ದೇವೆ. ಮಳೆ ಬಂದಾಗ, ಇಡೀ ನೀರು ಮನೆಯೊಳಗೇ ಬೀಳುತ್ತದೆ. ಮಳೆ ನಿಂತರೂ ಹನಿ ನಿಲ್ಲುವುದಿಲ್ಲ. ಈಗಾಗಲೇ ಮನೆ ಕುಸಿತದಿಂದ ಇಬ್ಬರು ಸತ್ತಿದ್ದಾರೆ. ಇಂತಹ ಮನೆಗಳಿಗೆ ಹೋಗೆವೆಂದು ಅಂದು ತಮಿಳು ಕಾಲೋನಿಯ ಜನರು ಹೇಳಿದ್ದು ಸರಿಯೇ ಅಲ್ಲವೇ ಎಂಬುದನ್ನು ಯೋಚಿಸಬೇಕಿದೆ. ಇದಲ್ಲದೆಯೂ ಇಲ್ಲಿನ ಜನರಲ್ಲಿ ತಪ್ಪುಗಳಿರಬಹುದು. ಅವರನ್ನು ಮುನ್ನಡೆಸಿದ ನಾಯಕರು, ಕಾಲೆಳೆದ ಇದೇ ಏರಿಯಾದ ಜನರಲ್ಲೂ ತಪ್ಪಿರಬಹುದು. ಅಂತಹ ತಪ್ಪುಗಳಿಂದ ಇಲ್ಲಿನ ಬಡ, ಶ್ರಮಿಕ ಸಮುದಾಯ ತೊಂದರೆ ಅನುಭವಿಸುವಂತಾಗಬಾರದು.

ಇಲ್ಲಿನ ಜನರನ್ನು ಓಟ್‌ಬ್ಯಾಂಕ್‌ಗಳಾಗಿ ಬಳಸಿಕೊಂಡ, ಇವರ ಸಾಮಾಜಿಕ ಆರ್ಥಿಕ ಸ್ಥಿತಿ ಹೀಗೇ ಇರುವಂತೆ ನೋಡಿಕೊಂಡವರ ಮೇಲೆ ನಮ್ಮ ಸಿಟ್ಟು ಇರಬೇಕೇ ಹೊರತು ಬಲಿಪಶುಗಳಾದ ಅಸಹಾಯಕರ ವಿರುದ್ಧವಲ್ಲ. ಈ ನಿಟ್ಟಿನಲ್ಲಿ ಮಂಡ್ಯದ ಎಲ್ಲಾ ಪ್ರಜ್ಞಾವಂತ ಸಮುದಾಯ ಯೋಚಿಸುವ ಅನಿವಾರ್ಯತೆಯಿದೆ. ಇಲ್ಲಿನ ಕೂಲಿ ಕಾರ್ಮಿಕರ ಪರ ನಿಲ್ಲುವುದು ನಮ್ಮೆಲ್ಲರ ಕರ್ತವ್ಯ. ಆದಷ್ಟು ಬೇಗ ಅವರ ಮನೆಗಳು ನಿರ್ಮಾಣವಾಗಿ ಒಂದಿಷ್ಟಾದರೂ ನೆಮ್ಮದಿ ಕಾಣುವಂತೆ ಆಗಲಿ ಎಂದು ಬಯಸೋಣ ಅಲ್ಲವೇ? □

ಪ್ರಸಾದ್ ರಕ್ಷಿದಿ

ಪ್ರಿಯ ಸಂಪಾದಕರೆ,

ನಮ್ಮ ಊರುಗಳಲ್ಲಿ ಸಾಮಾಜಿಕ ಕಾರ್ಯಕರ್ತರಾಗಿ ದಲಿತರ ಜೊತೆ ತೊಡಗಿಕೊಳ್ಳುವ ಅನೇಕರು ದಲಿತರಿಗೆ ಯಾವುದು 'ಅಗತ್ಯ' ಹಾಗೂ ಅದಕ್ಕೆ ಅವರಿಗೆ 'ಅರ್ಹತೆ' ಇದೆಯೆ ಎಂದು ಮಾತನಾಡುವುದನ್ನು ನಾನು ಕೇಳಿದ್ದೇನೆ. ದಲಿತರ ಸಂದರ್ಭದಲ್ಲಿ 'ಅರ್ಹತೆ' ಎಂಬ ಪದ ಕೆಲವು ಸಲ ನೈತಿಕನಿಲುವಿನ ಸೂಚನೆಯಾಗಿ ಬರುತ್ತದೆ. ಉದ್ಯೋಗದಲ್ಲಿರುವ ದಲಿತರ ಸಂದರ್ಭದಲ್ಲಿ 'ಅರ್ಹತೆ' ಪದ 'ಯೋಗ್ಯತೆ' ಹಾಗೂ 'ಗುಣಮಟ್ಟ'(Quality)ಗಳ ನಿರ್ದೇಶನದ ಪದವಾಗಿ ಬಳಕೆಯಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಮುಂದಿನ ಮಾತುಗಳು.

ಕಳೆದ ವರುಷ ಹಾಸನ ಜಿಲ್ಲೆಯ ಸಕಲೇಶಪುರದ ಸಮೀಪದ ರಕ್ಷಿದಿ ಎಂಬ ಹಳ್ಳಿಯಲ್ಲಿ ವಾಸಿಸುವ ಪ್ರಸಾದ್ ರಕ್ಷಿದಿ ತಮ್ಮ ಊರಾದ ಬೆಳ್ಳೇಕೆರೆಯಲ್ಲಿ ಸುತ್ತಲ್ಲಿನ ಹಳ್ಳಿಗಳ ಜನರೊಡನೆ ನಾಟಕವಾಡುತ್ತಾ ನಾಟಕ ತಂಡ ಕಟ್ಟುತ್ತಾ ಆ ಮೂಲಕ ಕಂಡ ಅನುಭವವನ್ನು 'ಬೆಳ್ಳೇಕೆರೆ ಹಳ್ಳಿ ಥೇಟರ್' ಎಂಬ ಅನುಭವ ಕಥನದಲ್ಲಿ ದಾಖಲಿಸಿದ್ದಾರೆ. (ಅಭಿನವ ಪ್ರಕಾಶನ) ಬಹಳ ಉತ್ತಮ ಮಟ್ಟದ ನಿರೂಪಣೆ ಹಾಗೂ ನೀಜ ಜೀವನದ ಹಳ್ಳಿ ಥಿಯೇಟರ್ ಕಟ್ಟುವ ಅನುಭವ ಕಥನದಲ್ಲಿ ತನ್ನ ಕಾಲಮಾನದ ಜನಜೀವನ, ರಾಜಕೀಯ, ಆರ್ಥಿಕತೆ, ಮನುಷ್ಯನ ಒಳಹೊರಗೆಲ್ಲಾ ಅನಾವರಣಗೊಳ್ಳುವ ಅಪರೂಪದ ನೈಜ ಕಥನ.

ಇದರಲ್ಲಿ ಒಂದು ಘಟನೆ ಸುತ್ತಲಿನ ಹಳ್ಳಿಯ ಕೆಲವು ದಲಿತ ಕುಟುಂಬಗಳಿಗೆ ಜನತಾ ಮನೆ ನಿರ್ಮಾಣ ಇತ್ಯಾದಿಗಳಲ್ಲಿ ತೊಡಗಿಕೊಂಡ ಕಥೆ. ಅದನ್ನು ಪ್ರಸದ್ ರಕ್ಷದಿ ಪ್ರಾಮಣಿಕವಾಗಿ ದಾಖಲಿಸಿದ್ದಾರೆ. ಆ ದಾಖಲಾತಿ ಎರಡು ವಿಭಿನ್ನ ನೆಲಗಳ ಅರಿವುಗಳು ದಾಖಲೆಗೊಳ್ಳುವ ಕ್ರಮವೂ ಹೌದು. ಆ ಅನುಭವ "ಸಾವಿರ ವರ್ಷಗಳ ಋಣ" ಎಂಬ ಪುಟ್ಟ ವಿಭಾಗದಲ್ಲಿ ಆ ಪುಸ್ತಕದಲ್ಲಿ ದಾಖಲಾಗಿದೆ.

ಈ ಋಣದ ಕತೆಯಲ್ಲೂ ಕುಡಿದು ತೇಲಾಡುವ ದಲಿತರು, ಹಣದ ಬಗ್ಗೆ ಜವಬ್ದಾರಿಯಿಲ್ಲದ ದಲಿತರು ಬರುತ್ತಾರೆ. ಅವರ ಈ ಮಾನಸಿಕ ಸ್ಥಿತಿ ಪ್ರೇಮ ಚಂದರ 'ಹೆಣದ ಬಟ್ಟೆ' ಎಂಬ ಹಿಂದಿ ಕತೆಯಲ್ಲಿ ಅದ್ಭುತ ರೂಪಕವಾಗಿ ಬಂದಿದೆ. ಸತ್ತು ಹೊದ ಸೊಸೆಯನ್ನು ಹೊಳಲು ದನಿಗಳ ಬಳಿ ಬೇಡಿ ಬಿಳಿ ಬಟ್ಟೆಗಾಗಿ ತಂದ ದುಡ್ಡಲ್ಲಿ ಅಪ್ಪ ಮಗ (ಸತ್ತವಳ ಗಂಡ ಹಾಗೂ ಮಾವ) ಕುಡಿದು ಮಲಗಿ ಬಿಡುತ್ತಾರೆ. ಬಡತನ ಹಾಗೂ ಅಸ್ಪೃಶ್ಯತೆ ಅವರನ್ನು ಮನುಷ್ಯರೆಂದೇ ಗುರುತಿಸದಿರುವ ಸಾಮಾಜಿಕ ಸ್ಥಿತಿಯಲ್ಲಿ ಉನ್ನತ ಸಮಾಜ ಮನುಷ್ಯತ್ವ ಎಂದು ಸಾರುವ ಮೌಲ್ಯಗಳು ಅವರಲ್ಲಿ ಬೇಕಾಗಿಲ್ಲ ಎಂಬುವದನ್ನು ಸುಲಭವಾಗಿ ಮರೆತುಬಿಡುತ್ತಾರೆ. ಹಾಗೆ ಕುಡಿದು ಹೆಣ ಹೊಳದೆ ಮಲಗಿದವರ ಸ್ಥಿತಿ, ಯಾಕೆ ಹಾಗೆ ಎಂದು ನಮ್ಮನ್ನು ಚಿಂತಿಸುವಂತೆ ಪ್ರೇಮ ಚಂದರ ಕಥೆ ಪ್ರೇರೇಪಿಸುತ್ತದೆ.

ಪ್ರಸದ್ ರಕ್ಷಿದಿ ಕತೆಗಾರರಲ್ಲ 'ಸಾವಿರ ವರ್ಷಗಳ ಋಣ'ವನ್ನುವರು ಸೃಜನಶೀಲ ರೂಪಕವನ್ನಾಗಿಸಲು ಬರೆದುದೂ ಅಲ್ಲ, ಅದೊಂದು ನಿಜ ಅನುಭವದ ನಿರೂಪಣೆ. ಆದರೂ ಅದು 'ಅಗತ್ಯ' ಹಾಗೂ 'ಅರ್ಹತೆ'ಯ ಅನೇಕ ಅರ್ಥಗಳನ್ನು ಅನುಕರಣಿಸುತ್ತದೆ. ನಮ್ಮ ಇಂದಿನ ಸಂಕೀರ್ಣ ಸಾಮಾಜಿಕ ಸ್ಥಿತಿ ಹಾಗೂ ಸಂಬಂಧಗಳಿಗೆ ಕನ್ನಡಿ ಹಿಡಿಯುತ್ತದೆ.

ಪ್ರಸಾದ್ ರಕ್ಷಿದ್ ಅವರ 'ಬೆಳ್ಳೇಕೆರೆ ಹಳ್ಳಿ ಥೇಟರ್' ಪುಸ್ತಕದ 'ಸಾವಿರ ವರ್ಷಗಳ ಋಣ' ಭಾಗ ಜೊತೆಗಿದೆ. ನಿಮಗೆ ಒಪ್ಪಿಗೆಯಾದರೆ 'ಸಂವಾದ' ಪತ್ರಿಕೆಯಲ್ಲಿ ಈ ಪುಟಗಳನ್ನು ಪ್ರಕಟಿಸಿರಿ ಎಂದು ನನ್ನ ವಿನಂತಿ. ಅನೇಕ ಸಮಾನ ಆಸಕ್ತರ ಗಮನಕ್ಕೆ ಇದು ಬರಲಿ ಎಂಬ ಉದ್ದೇಶದಿಂದ ತಮಗೆ ಕಳುಹಿಸುತ್ತಿರುವೆ.

- **ಎಸ್. ಆರ್. ವಿಜಯಶಂಕರ್**



ಸಾವಿರ ವರ್ಷಗಳ ಋಣ

ಒಂದು ಸಾರಿ ಅಗಲಟ್ಟಿ ಗ್ರಾಮದ ಪಕ್ಕದಲ್ಲೇ ಇರುವ ಮಾವಿನಹಳ್ಳಿ ಕಾಲೋನಿಗೆ ಹೋದವು. ಅಲ್ಲಿ ಸುಮಾರು ನಲವತ್ತು ಮನೆಗಳನ್ನು ನಾವು ಕಟ್ಟಿಸಿದ್ದೇವು. ಅಲ್ಲಿನವರಲ್ಲಿ ಸ್ವಲ್ಪ ಮುಂದಾಳತ್ವ ವಹಿಸುತ್ತಿದ್ದ ಕಾಳೀಪ್ರಸಾದ್ ಮತ್ತಿತರನ್ನು ಒಂದೆಡೆ ಸೇರಿಸಿ ರವೀಂದ್ರನಾಥಾರು, 'ನೋಡಿ ನೀವೆಲ್ಲ ತೆಗೆದುಕೊಂಡಿರುವುದು ಬ್ಯಾಂಕ್ ಸಾಲ-ಇದು ಸಾರ್ವಜನಿಕ ಹಣ. ನೀವು ಇದನ್ನು ತೀರಿಸಿದರೆ, ನಿಮಗೆ ಇನ್ನೊಮ್ಮೆ ಸಾಲ ಬೇಕಾದರೆ ಸಿಗುತ್ತದೆ. ನೀವು ಸಾಲ ತೀರಿಸದಿದ್ದಿರೆ-ನಿಮ್ಮೆಲ್ಲೀ ಯಾರಿಗಾದರೂ ಅಗತ್ಯ ಬಿದ್ದರೂ ಸಾಲ ಸಿಕ್ಕುವುದಿಲ್ಲ ಸಾರ್ವಜನಿಕ ಹಣವನ್ನು ದುರುಪಯೋಗ ಮಾಡಲು ಯಾರಿಗೂ ಅಧಿಕಾರ ಇಲ್ಲ.

ನಾವೆಲ್ಲ ಕೆಲಸ ಮಾಡುತ್ತಿದ್ದ ಹಾರ್ಲೆ ತೋಟಗಳ ಮಾಲೀಕಾರದ ಎನ್.ಕೆ.ಗಣಪಯ್ಯ–ಗಾಂಧಿ ಮತ್ತು ರಾಜಾಜಿ ಇಬ್ಬರಿಂದಲೂ ಪ್ರಭಾವಿತರಾಗಿದ್ದರು. ತಮ್ಮನ್ನು ಅನೇಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಸಕಲೇಶಪುರದಲ್ಲಿ ಒಂದು ಅನಾಥಾಶ್ರಮ ಮತ್ತು ವಿಕಲಾಂಗ ಮಕ್ಕಳ ಶಾಲೆ ಸ್ಥಾಪಿಸಿದ್ದರು. ಅನೇಕ ಸಂಘ ಸಂಸ್ಥೆಗಳಲ್ಲೂ ಕೆಲಸ ಮಾಡುತ್ತಿದ್ದರು.

ಇದಲ್ಲದೆ ಹಾರ್ಲೆ, ಕುಂಬರಡಿ, ನಡಹಳ್ಳಿ, ಗಾಣದ ಹೊಳೆ, ಹಾರ್ಲೆಕೂಡಿಗೆ, ಕೃಷ್ಣಾಪುರ, ಅಗಕಟ್ಟೆ ಇಲ್ಲೆಲ್ಲ ನೂರಾರು ಜನರಿಗೆ ಜನತಾ ಮನೆಗಳನ್ನು ಮಾಡಿಸಿಕೊಟ್ಟಿದ್ದರು. ನಡಹಳ್ಳಿಯಲ್ಲಿ ಕೆಲವು ದಲಿತ ಕುಟುಂಬಗಳಿಗೆ ಜಮೀನು ಮಂಜೂರು ಮಾಡಿಸಿ ತಾವೇ ನಿಂತು ತೋಟ ಮಾಡಿಸಿಕೊಟ್ಟಿದ್ದರು. ಅಗಲಟ್ಟಿ ಗ್ರಾಮದಲ್ಲಿ ನಲವತ್ತು ದಲಿತ ಕುಂಟುಬಗಳಿಗೆ ಒಟ್ಟು ಒಂದು ನೂರು ಎಕರೆ ಜಮೀನು ಮಂಜೂರು ಮಾಡಿಸಿಕೊಟ್ಟಿದ್ದರು. ಅಲ್ಲೀಗ ಅವರೆಲ್ಲ ಕೃಷಿ ಮಾಡಿಕೊಂಡಿದ್ದಾರೆ.

ಈ ಜನಾತ ಮನೆಗಳ ನಿರ್ಮಾಣ ಇತ್ಯಾದಿಗಳ ಉಸ್ತುವಾರಿ ನನ್ನ ಮೇಲೆ ಬಿದ್ದಿತ್ತು. ನಾನು ಪ್ರತಿದಿನ ಡೈರಿ ಕೆಲಸ ಮುಗಿಸಿ ಸೈಕಲ್ ತೆಗೆದುಕೊಂಡು ಮನೆ ಕೆಲಸದ ಸ್ಥಳಗಳು, ತಾಲ್ಲೂಕು ಕಚೇರಿ, ಬಿಡಿಓ ಕಚೇರಿ ಇತ್ಯಾದಿ ಕಡೆಗಳಿಗೆ ಹೋಗಬೇಕಾಗುತ್ತಿತ್ತು. ಇದಲ್ಲದೆ ಈ ಮನೆಗಳನ್ನು ಕಟ್ಟಿಕೊಂಡವರಿಗೆ ಗಣಪಯ್ಯನವರ ಮಗ ಎನ್.ಜಿ. ರವೀಂದ್ರನಾಥಾ ಬ್ಯಾಂಕಿನಿಂದ ಸಾಲ ಕೊಡಿಸಿದ್ದರು. ಆದರೆ ಬ್ಯಾಂಕಿನಿಂದ ಸಾಲ ತೆಗೆದುಕೊಂಡವರಲ್ಲಿ ಅನೇಕರು ವಾಪಸ್ ಕಟ್ಟಲೇ ಇಲ್ಲ. ಹಾಗಾಗಿ ರವೀಂದ್ರನಾಥಾ ಆ ಕಡೆ ಬಂದಾಗಲೆಲ್ಲ ಈ ಸಾಲಗಾರರಲ್ಲಿಗೆ ಹೋಗಿ ಬ್ಯಾಂಕ್ ಸಾಲ ತೀರಿಸಿ ಎಂದು ಹೇಳುತ್ತಿದ್ದರು. ಅನೇಕ ಸಾರಿ ನಾನು ಅವರೊಂದಿಗೆ ಇರತ್ತಿದ್ದೆ.

ಒಂದು ಸಾರಿ ಅಗಲಟ್ಟಿ ಗ್ರಾಮದ ಪಕ್ಕದಲ್ಲೇ ಇರುವ ಮಾವಿನಹಳ್ಳಿ ಕಾಲೊನಿಗೆ ಹೋದೆವು. ಅಲ್ಲಿ ಸುಮಾರು ನಲವತ್ತು ಮನೆಗಳನ್ನು ನಾವು ಕಟ್ಟಿಸಿದ್ದೆವು. ಅಲ್ಲಿನವರಲ್ಲಿ ಸ್ವಲ್ಪ ಮುಂದಾಳತ್ವ ವಹಿಸುತ್ತಿದ್ದ ಕಾಳೀಪ್ರಸಾದ್ (ಇವರು ಮುಂದೆ ಜಿಲ್ಲಾ ಪರಿಷತ್ ಸದಸ್ಯರೂ ಆದರು.) ಮತ್ತಿತರನ್ನು ಒಂದೆಡೆ ಸೇರಿಸಿ ರವೀಂದ್ರನಾಥಾರು, 'ನೋಡಿ ನೀವೆಲ್ಲ ತೆಗೆದುಕೊಂಡಿರುವುದು ಬ್ಯಾಂಕ್ ಸಾಲ–ಇದು ಸಾರ್ವಜನಿಕ ಹಣ. ನೀವು ಇದನ್ನು ತೀರಿಸಿದರೆ, ನಿಮಗೆ ಇನ್ನೊಮ್ಮೆ ಸಾಲ ಬೇಕಾದರೆ ಸಿಗುತ್ತದೆ. ನೀವು ಸಾಲ ತೀರಿಸದದ್ದಿರೆ–ನಿಮ್ಮಲ್ಲೇ ಯಾರಿಗಾದರೂ ಅಗತ್ಯ ಬಿದ್ದರೂ ಸಾಲ ಸಿಕ್ಕುವುದಿಲ್ಲ. ಸಾರ್ವಜನಿಕ ಹಣವನ್ನು ದುರುಪಯೋಗ ಮಾಡಲು ಯಾರಿಗೂ ಅಧಿಕಾರ ಇಲ್ಲ. ಎಂದೆಲ್ಲ ತಿಳುವಳಿಕೆ ಹೇಳಿದರು. ಮುಂದುವರೆದು 'ನೀವೆಲ್ಲ ತಪ್ಪು ಮಾಡುತ್ತಿದ್ದೀರಿ, ಯೋಚನೆ ಮಾಡಿ, ನಿಮಗೆ ಕೆಲವು ದಿನ ಸಮಯ ಕೊಡುತ್ತೇನೆ. ಆಗಲೂ ನೀವು ಸಾಲ ವಾಪಸ್ ಕಟ್ಟದಿದ್ದರೆ ನಾನು ಇಲ್ಲಿ ಬಂದು ಧರಣಿ ಕೂರುತ್ತೇನೆ' ಎಂದರು.

ಆಗಲೇ ಸಂಜೆ ಆರು ಗಂಟೆ ಕಳೆದಿತ್ತು. ಕೆಲವರಾಗಲೇ ಕುಡಿದು ತೆಲಾಡುತ್ತಿದ್ದರು. ಇನ್ನು ಕೆಲವರು ಜಗಳ ಪ್ರಾರಂಭಿಸಿದರು. ಕಾಳೀಪ್ರಸಾದ್ ಮತ್ತಿತರರು ಅವರನ್ನು ಬೇರೆಡೆಗೆ ಕರೆದೊಯ್ಯುವ ಪ್ರಯತ್ನ ಮಾಡುತ್ತಿದ್ದರು. ಉಳಿದವರು 'ಇವರು ಈ ಹೊತ್ತಿಗೆ ಇಲ್ಲಿಗ್ಯಾಕೆ ಬಂದರು? ಇವರ ಜೇಬಿಗೆ ಬೆಂಕಿಕೊಟ್ಟರೇನು? ಬೇಕಾದರೆ ಸಾಲವನ್ನು ಇವರೇ ಕಟ್ಟಲಿ' ಎಂದೆಲ್ಲ ತಲೆಗೊಂದು ಮಾತಾಡಿದರು!

ರವೀಂದ್ರನಾಥರ ತಂದೆ ಎನ್.ಕೆ.ಗಣಪಯ್ಯ 1958ರಲ್ಲಿ ಕೊಡಗಿನಿಂದ ಸಕಲೇಶಪುರಕ್ಕೆ ಬಂದು ನೆಲಸಿದವರು. ಕೃಷಿಯಲ್ಲಿ ಸಾಕಷ್ಟು ಪ್ರಯೋಗಳನ್ನೂ ಮಾಡಿದವರು. ಬ್ರಿಟೀಷರಿಂದ ಕೊಂಡು ಕೊಂಡ ಹಾರ್ಲೆ ಎಸ್ಟೇಟನ್ನು ಕರ್ನಾಟಕದ ಪ್ರತಿಷ್ಠಿತ ಕಾಫಿ ಎಸ್ಟೇಟುಗಳಲ್ಲಿ ಒಂದಾಗುವಂತೆ ಬೆಳಿಸಿದರು. ಶಾಲೆಯ ಮೂಲಕ ಹೆಚ್ಚೇನೂ ಓದಿಲ್ಲದಿದ್ದ ಗಣಪಯ್ಯ, ಕೃಷಿ ವಿಶ್ವವಿದ್ಯಾಲಯದ ರೀಜೆಂಟ್ ಕೂಡ ಆದರು. 1977ರಲ್ಲಿ ತುರ್ತು ಪರಿಸ್ಥಿಯಲ್ಲಿ ರಾಮಕೃಷ್ಣ ಹೆಗಡೆ, ಎಲ್.ಕೆ. ಅಡ್ವಾಣಿ ಅವರೊಂದಿಗೆ ಜೈಲಿನಲ್ಲಿದ್ದುದಲ್ಲದೆ ರಾಜಕೀಯ ವಲಯದಲ್ಲಿಯೂ ಗಣ್ಯರಾಗಿದ್ದರು. ರವೀಂದ್ರನಾಥಾ ವೈದ್ಯಕೀಯ ಕಲಿತವರು. ಒಳ್ಳೆಯ ಸಂಸ್ಕೃತಾಭ್ಯಾಸಿ ಕೂಡಾ. ಅರ್ಥವೇದವನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದರೆ. ನಮ್ಮ ರಂಗ ಚಟುವಟಿಕೆಗಳೆಲ್ಲ ನಿರಂತರ ಪ್ರೋತ್ಸಾಹ ಕೊಡುತ್ತ ಬಂದಿದ್ದಾರೆ. ಇವರು ಈ ರೀತಿ ಭೂರಹಿತರಿಗೆ ಜಮೀನು ಮಾಡಿಕೊಡುವುದು, ಮನೆ ಕಟ್ಟಿಸಿ ಕೊಡುವುದು ಇತ್ಯಾದಿಗಳೆನ್ನೆಲ್ಲ ಮಾಡುತ್ತಿರುವುದನ್ನು ನೋಡಿ ಕೆಲವರು 'ಗಣಪಯ್ಯ ದಲಿತರನ್ನು ಎತ್ತಿ ಕಟ್ಟುತ್ತಿದ್ದಾರೆ' ಎಂದು ಹಿಂದಿನಿಂದ ದೂರುತ್ತಿದ್ದರಾದರೂ ಅವರನ್ನು ನೇರವಾಗಿ ಎದುರಿಸುವ ಶಕ್ತಿಯಾಗಲೀ, ಸಾಮರ್ಥ್ಯವಾಗಲೀ ಇರಲಿಲ್ಲವಾದ್ದರಿಂದ ಆ ದಲಿತರಿಗೆ ಕಿರುಕುಳ ಕೊಡಲು ಹೋಗಲಿಲ್ಲ.

ನಾವು ಹೇಗೋ ಅಲ್ಲಿಂದ ಹೊರಟು ಬಂದೆವು. ಇವರ ಹುಚ್ಚಾಟಗಳನ್ನು ನೋಡಿ ನನಗೆ ರೇಗಿಹೋಗಿತ್ತು. ದಾರಿಯಲ್ಲಿ ಬರುವಾಗ ನಾನು ರವೀಂದ್ರನಾಥಾರೊಡನೆ ಜಗಳ ಪ್ರಾರಂಭಿಸಿದೆ.

'ನಿಮಗೆ ಬೇರೆ ಕೆಲಸ ಇಲ್ಲ ಇಂಥವರಿಗೆಲ್ಲಾ ಸಹಾಯ ಮಾಡ್ತೀರಿ, ಇವರಿಗೆ ಅದರ ನೆನಪೇ ಇಲ್ಲ. ಯಾರಾದರೂ ನಮ್ಮಂಥವರಿಗೆ ಸಹಾಯ ಮಾಡಿ, ನೋಡಿದಿರಲ್ಲ ಇವರ ಬುದ್ಧಿ' ಎಂದು ಅವರು ಸ್ವಲ್ಪ ಹೊತ್ತು ಮಾತಾಡಲಿಲ್ಲ. ಆಮೇಲೆ:

'ನೋಡು ನಿನ್ನಂಥವರಿಗೆ ಯಾರ ಸಹಾಯವೂ ಅಗತ್ಯ ಇಲ್ಲ. ಆದರೆ ಇವರಿಗೆ ಸಹಾಯದ ಅಗತ್ಯ ಇದೆ.' ಎಂದರು.

'ಹೌದು ಅವರಿಗೆ ಅಗತ್ಯ ಇರಬಹುದು, ಆದರೆ ಅರ್ಹತೆ ಇಲ್ಲ' ಅಸಹನೆಯಿಂದ ಜೋರಾಗಿ ಹೇಳಿದೆ. ನನಗೆ ಸಮಾಧಾನವಾಗಿರಲಿಲ್ಲ.

'ಅದು ಬೇರೇ ಮಾತು. ಅರ್ಹತೆ ಇದೆಯೋ ಇಲ್ಲವೋ ಗೊತ್ತಾಗುವುದು ತುಂಬ ನಿಧಾನ. ಆದರೆ ಅವರು ಸಾವಿರ ವರ್ಷಗಳಿಂದ ಮೋಸ ಹೋಗಿದ್ದಾರೆ. ಈಗ ಯಾರನ್ನೂ ನಂಬುವ ಸ್ಥಿತಿಯಲ್ಲಿ ಅವರಿಲ್ಲ.'

'ಯಾರೋ ಮೋಸ ಮಾಡಿದ್ದರೆ ಅದಕ್ಕೆ ನಾವೇನು ಮಾಡಬೇಕು. ಅವರು ಹೀಗೆ ಮಾಡಿದರೆ ಅವರಿಗ್ಯಾರು ಸಹಾಯ ಮಾಡುತ್ತಾರೆ' ನನ್ನ ಸಿಟ್ಟು ಇಳಿದಿರಲಿಲ್ಲ.

ರವೀಂದ್ರನಾಥಾ ಮತ್ತೆ ಮೌನವಾದರು. ಕೆಲವು ಕ್ಷಣಗಳ ನಂತರ 'ನೋಡು ಅವರು ಏನು ಹೇಳಿದರು ಎನ್ನುವುದು ಮುಖ್ಯ ಅಲ್ಲ. ನಮ್ಮೆಲ್ಲರಿಗೆ ಅವರ ಸಾವಿರ ವರ್ಷಗಳ ಋಣ ಇದೆ. ಅದರಲ್ಲಿ ಸ್ವಲ್ಪ ತೀರಿತು ಅಂದು ಕೊಂಡರಯಿತು' ಎಂದರು. ಆಗ ನನ್ನ ಸಿಟ್ಟೇನು ತಣಿಯಲಿಲ್ಲ. ಆದರೆ ಅವರು ಹೇಳಿದ ಮಾತು ನನಗೆ ಅರ್ಥವಾಗಲು ಅನೇಕ ವರ್ಷಗಳು ಬೇಕಾದವು.

ರವೀಂದ್ರನಾಥರ ತಂದೆ ಎನ್.ಕೆ.ಗಣಪಯ್ಯ 1958ರಲ್ಲಿ ಕೊಡಗಿನಿಂದ ಸಕಲೇಶಪುರಕ್ಕೆ ಬಂದು ನೆಲಸಿದವರು. ಕೃಷಿಯಲ್ಲಿ ಸಾಕಷ್ಟು ಪ್ರಯೋಗಳನ್ನೂ ಮಾಡಿದವರು. ಬ್ರಿಟೀಷರಿಂದ ಕೊಂಡುಕೊಂಡ ಹಾರ್ಲೆ ಎಸ್ಟೇಟನ್ನು ಕರ್ನಾಟಕದ ಪ್ರತಿಷ್ಠಿತ ಕಾಫಿ ಎಸ್ಟೇಟುಗಳಲ್ಲಿ ಒಂದಾಗುವಂತೆ ಬೆಳಿಸಿದರು. ಶಾಲೆಯ ಮೂಲಕ ಹೆಚ್ಚೇನೂ ಓದಿಲ್ಲದಿದ್ದ ಗಣಪಯ್ಯ, ಕೃಷಿ ವಿಶ್ವವಿದ್ಯಾಲಯದ ರೀಜೆಂಟ್ ಕೊಡ ಆದರು. 1977ರಲ್ಲಿ ತುರ್ತು ಪರಿಸ್ಥಿಯಲ್ಲಿ ರಾಮ ಕೃಷ್ಣ ಹೆಗಡೆ, ಎಲ್.ಕೆ. ಅಡ್ವಾಣಿ ಅವರೊಂದಿಗೆ ಜೈಲಿನಲ್ಲಿದ್ದುದಲ್ಲದೆ ರಾಜಕೀಯ ವಲಯದಲ್ಲಿಯೂ ಗಣ್ಯರಾಗಿದ್ದರು.

ರವೀಂದ್ರನಾಥಾ ವೈದ್ಯಕೀಯ ಕಲಿತವರು. ಒಳ್ಳೆಯ ಸಂಸ್ಕೃತಾಭ್ಯಾಸಿ ಕೂಡಾ. ಅರ್ಥವೇದವನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದರೆ. ನಮ್ಮ ರಂಗ ಚಟುವಟಿಕೆಗಳೆಲ್ಲ ನಿರಂತರ ಪ್ರೋತ್ಸಾಹ ಕೊಡುತ್ತ ಬಂದಿದ್ದಾರೆ.

ಇವರು ಈ ರೀತಿ ಭೂರಹಿತರಿಗೆ ಜಮೀನು ಮಾಡಿಕೊಡುವುದು, ಮನೆಕಟ್ಟಿಸಿ ಕೊಡುವುದು ಇತ್ಯಾದಿಗಳೆನ್ನೆಲ್ಲ ಮಾಡುತ್ತಿರುವುದನ್ನು ನೋಡಿ ಕೆಲವರು 'ಗಣಪಯ್ಯ ದಲಿತರನ್ನು ಎತ್ತಿಕಟ್ಟುತ್ತಿದ್ದಾರೆ' ಎಂದು ಹಿಂದಿನಿಂದ ದೂರುತ್ತಿದ್ದರಾದರೂ ಅವರನ್ನು ನೇರವಾಗಿ ಎದುರಿಸುವ ಶಕ್ತಿಯಾಗಲೀ, ಸಾಮರ್ಥವಾಗಲೀ ಇರಲಿಲ್ಲವಾದ್ದರಿಂದ ಆ ದಲಿತರಿಗೆ ಕಿರುಕುಳ ಕೊಡಲು ಹೋಗಲಿಲ್ಲ.

ಎಲ್ಲಾ ರಾಜಕೀಯ ಪಕ್ಷಗಳೂ ಓಟಿಗಾಗಿ ದಲಿತರಿಗೂ ಇನ್ನಿತರ ಭೂರಹಿತರಿಗೂ ಎರಡು ಗುಂಟೆ ನಿವೇಶನ ಹಂಚಿದ್ದು ಬಿಟ್ಟರೆ, ಕೃಷಿ ಜಮೀನು ಕೊಟ್ಟದ್ದೆ ಇಲ್ಲ. ಅನಂತರವೂ ಕೆಲವು ದಲಿತರಿಗೆ ಕೃಷಿ ಜಮೀನು ಸಿಕ್ಕಿದ್ದರೆ, ಅದು ಅವರ ಸ್ವಂತ ಸಂಘಟಿತ ಶಕ್ತಿಯಿಂದಲೇ. ಹೊರತು ಬೇರೆ ಅಲ್ಲ.

ಆದರೆ ಭೂರಹಿತರಿಗೆ ಜಮೀನು ಕೊಡಿಸುವ ಗಣಪಯ್ಯನವರಂಥವರ ಪ್ರಯತ್ನಗಳೆಲ್ಲ ದಲಿತರಿಗೆ ಜಮೀನು ಸಿಗುವುದಕ್ಕಿಂತ ಹೆಚ್ಚಾಗಿ ಇತರ ಭೂಮಾಲೀಕರ ಒತ್ತುವರಿ ಕಾರ್ಯವನ್ನು ಚುರುಕುಗೊಳಿಸಿಬಿಟ್ಟಿತು. ಈ ಜಮೀನು ಒತ್ತುವರಿ ಕೆಲಸದಲ್ಲಿ ಕೆಲವು ದಲಿತ ಅಧಿಕಾರಿಗಳೇ ಭೂಮಾಲೀಕರ ಜೊತೆ ಶಾಮೀಲಾಗಿದ್ದರೆನ್ನುವುದು ಇನ್ನಷ್ಟು ವಿಪರ್ಯಾಸದ ಸಂಗತಿ. □

ಗೋಹತ್ಯೆಗೆ ನಿಷೇಧ- ನರಹತ್ಯೆಗೆ ಲೈಸೆನ್ಸ್!

ಶಿವಸುಂದರ್

ಒಂದು ಜನಾಂಗ ತನ್ನದೇ ನಿರ್ದಿಷ್ಟ ಪರಿಸರದಲ್ಲಿ ವಿಕಸನಗೊಳ್ಳುವ ಪ್ರಕ್ರಿಯೆಯಲ್ಲಿ ತನ್ನದೇ ಅನನ್ಯವಾದ ಸಂಸ್ಕೃತಿ, ಧಾರ್ಮಿಕ ಶ್ರದ್ಧೆ ಮತ್ತು ಆಹಾರಾಭ್ಯಾಸಗಳನ್ನು ರೂಢಿಸಿಕೊಳ್ಳುತ್ತದೆ. ಅದಕ್ಕೆ ಭಿನ್ನವಾದ ಪರಿಸರದಲ್ಲಿ ಅರಳುವ ಸಂಸ್ಕೃತಿಗಳು ಅದಕ್ಕಿಂತ ಭಿನ್ನವಾದ ಆಹಾರ ಪದ್ಧತಿಗಳನ್ನು ಮತ್ತು ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತವೆ. ಆದರೆ ಒಂದು ದೇಶವಾಗಿ ಮತ್ತು ಅದರ ನಾಗರೀಕರಾಗಿ ಈ ವಿಭಿನ್ನ ಸಂಸ್ಕೃತಿಯ ಜನಾಂಗಗಳು ಐಕ್ಯ ಜೀವನ ನಡೆಸುವಾಗ ಪರಸ್ಪರರ ಸಂಸ್ಕೃತಿಯನ್ನು ಗೌರವಿಸುವ ಮತ್ತು ಸಹಬಾಳ್ವೆ ನಡೆಸುವ ಪ್ರಜಾತಾಂತ್ರಿಕ ಸಂಸ್ಕೃತಿ ಅತ್ಯಗತ್ಯವಾಗುತ್ತದೆ. ಅಂಥಾ ಬಹುಸಂಸ್ಕೃತಿಯುಳ್ಳ ರಾಷ್ಟ್ರವೊಂದರ ಪ್ರಭುತ್ವಕ್ಕೆ ಈ ಸಾಂಸ್ಕೃತಿಕ ಬಹುತ್ವವನ್ನು ಕಾಪಾ ಡಿಕೊಂಡು ಬರುವ ಹೊಣೆಗಾರಿಕೆ ಇರುತ್ತದೆ.

The Karnataka Prevention Of Cow Slaughter And Cattle Preservation (Amendment) Bill, 2009

ಈ ದೇಶವನ್ನು ಮತ್ತು ಈ ದೇಶದ ಅಗತ್ಯಗಳನ್ನು ಬ್ರಾಹ್ಮಣ್ಯದ ಕಣ್ಣಿಂದಲ್ಲದೆ ರೈತಾಪಿಯ ಮತ್ತು ದಮನಿತರ ಕಣ್ಣಿಂದ ಎಂದಿಗೂ ಅರ್ಥಮಾಡಿಕೊಳ್ಳದ ಬಿಜೆಪಿಗೆ ಈ ದೇಶ ಎಂದಿಗೂ ಅರ್ಥವಾಗಿಲ್ಲ. ಹೀಗಾಗಿ ಈ ದೇಶದ ಸಂಸ್ಕೃತಿಯನ್ನು ಉಳಿಸುವ ಹೆಸರಲ್ಲಿ ಅವರು ರೂಪಿಸುತ್ತಿರುವ ಕಾನೂನುಗಳೆಲ್ಲಾ ಈ ದೇಶದ ಬಹುಸಂಖ್ಯಾತರ ಹಿತಾಸಕ್ತಿಗೆ ವಿರುದ್ಧವಾಗಿದೆ ಮತ್ತು ಅವರ ಬದುಕನ್ನು ಮತ್ತಷ್ಟು ದುರ್ಭರಗೊಳಿಸುತ್ತಿದೆ. ಬಿಜೆಪಿಗೆ ಪೂರ್ಣ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರ ಹಿಡಿದ ನಂತರ ಒಂದೆಡೆ ಬ್ರಹ್ಮಾಂಡ ಭ್ರಷ್ಟಾಚಾರ ಮಾಡುತ್ತಾ ನಾಡಿನ ತಿಜೋರಿಯನ್ನು ಮತ್ತು ಸಂಪನ್ಮೂಲಗಳನ್ನು ಲೂಟಿ ಹೊಡೆಯುತ್ತಿದ್ದರೆ ಮತ್ತೊಂದೆಡೆ ದಲಿತ, ಶೂದ್ರ ಮತ್ತು ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯಗಳ ಸಾಂಸ್ಕೃತಿಕ ಸಂಪನ್ಮೂಲಗಳ ಮೇಲೂ ದಾಳಿಮಾಡುತ್ತಾ ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತವಾದ ಬ್ರಾಹ್ಮಣೀಯ ಸಂಸ್ಕೃತಿಯನ್ನು ಸಮಾಜದ ಮೇಲೆ ಹೇರಲು ಸತತ ಪ್ರಯತ್ನ ಪಡುತ್ತಿದೆ.

ಈ ನಿಟ್ಟಿನಲ್ಲಿ ಫೆಬ್ರವರಿಯ ಕೊನೆಗೆ ಪ್ರಾರಂಭವಾಗಲಿರುವ ವಿಧಾನಸಭಾ ಅಧಿವೇಶನದಲ್ಲಿ ಅದು ಕರ್ನಾಟಕದಲ್ಲಿ ಗೋಹತ್ಯೆ ನಿಷೇಧ ಮಾಡುವ ಮತ್ತು ಜಾನುವಾರುಗಳ ಸಂರಕ್ಷಣೆ ಮಾಡುವ ಸಲುವಾಗಿ 1964ರಲ್ಲೇ ಜಾರಿಮಾಡಲಾಗಿದ್ದ The Karnataka Prevention Of Cow Slaughter And Cattle Preservation Act-1964ಗೆ ಹಲವಾರು ದುರುದ್ದೇಶಗಳಿಂದ ಕೂಡಿದ ತಿದ್ದುಪಡಿಗಳನ್ನು ತರಲು The Karnataka Prevention Of Cow Slaughter And Cattle Preservation (Amendment) Bill, 2009 ಎಂಬ ಮಸೂದೆಯನ್ನು ಪಾಸು ಮಾಡುವ ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದೆ. ಇದು ಗೋಹತ್ಯೆಯನ್ನು ನಿಷೇಧ ಮಾಡುವದಕ್ಕಿಂತ ಹೆಚ್ಚಾಗಿ ಅದರ ಹೆಸರಲ್ಲಿ ಅಲ್ಪಸಂಖ್ಯಾತರ ಮೇಲೆ ಈಗ ಕಾನೂನು ಬಾಹಿರವಾಗಿ ರಾಜ್ಯದೆಲ್ಲೆಡೆ ಭಜರಂಗಿಗಳು ನಡೆಸುತ್ತಿರುವ ಆಕ್ರಮಗಳನ್ನು ಸಕ್ರಮಗೊಳಿಸುವ ಉದ್ದೇಶವನ್ನೇ ಹೊಂದಿದೆ. ಮಾಂಸಾಹಾರಿ ಆಹಾರ ಸಂಸ್ಕೃತಿಯ ಮೇಲೆ ಅದರಲ್ಲೂ ಗೋಮಾಂಸ ಭಕ್ಷಣೆ ಮಾಡುವ ಸಂಸ್ಕೃತಿ ಇರುವ ಮುಸ್ಲಿಂ, ಕ್ರಿಶ್ಚಿಯನ್, ದಲಿತ ಹಾಗೂ ಶೂದ್ರ ಜನಾಂಗಗಳ ಸಂಸ್ಕೃತಿಗಳ ಮೇಲೆಯೇ ಸಾಂಸ್ಕೃತಿಕ ಆಕ್ರಮಣ ನಡೆಸುವ ಮತ್ತು ನಿರ್ದಿಷ್ಟವಾಗಿ ಮಾಂಸಾಹಾರ ವ್ಯಾಪಾರದಲ್ಲಿ ತೊಡಗಿಕೊಂಡಿರುವ ಮುಸ್ಲಿಮರ ಮೇಲೆ ನಡೆಸುವ ಭೌತಿಕ ಹಲ್ಲೆಯನ್ನು ಶಾಸನಬದ್ಧ ಗೊಳಿಸುವ ಉದ್ದೇಶವನ್ನೇ ಈ ಮಸೂದೆ ಹೊಂದಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗುತ್ತದೆ.

ಬಿಜೆಪಿ ಮತ್ತು ಸಂಘಪರಿವಾರವು ಮೂಲಭೂತವಾಗಿ ಬ್ರಾಹ್ಮಣ್ಯವನ್ನು ಹೊರತುಪಡಿಸಿ ಮಿಕ್ಕಿದ್ದೆಲ್ಲಾ ಕೀಳೆಂದು ಪ್ರತಿಪಾದಿಸುವ ಶ್ರೇಣೀಕೃತ ವರ್ಣಾಶ್ರಮ ಪದ್ಧತಿಯನ್ನು ಪುನರ್‌ಸ್ಥಾಪನೆ ಮಾಡಲು ಪ್ರಯತ್ನಿಸುತ್ತಲೇ ಬಂದಿದೆ. ಶೂದ್ರ ಹಾಗೂ ದಲಿತ ಶಕ್ತಿಗಳು ಅಥವಾ ಸಮಾನತೆಯನ್ನು ಬೋಧಿಸುವ ಸಿದ್ಧಾಂತಗಳು ಸಮಾಜದಲ್ಲೇ ವೇಲುಗೈ ಪಡೆದಾಗಲೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಅದನ್ನು ಬಲಿಹಾಕುವ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದೆ. ಹಾಗೆ ನೋಡಿದರೆ ಮಹಾನ್ ಗೋಮಾಂಸ ಭಕ್ಷಕರಾಗಿದ್ದ ಈ ಸಂಘಪರಿವಾರದ ಪಿತಾಮಹರು ಬೌದ್ಧಧರ್ಮದಿಂದ ಜನರನ್ನು ತನ್ನೆಡೆಗೆ ಸೆಳೆದುಕೊಳ್ಳಲೆಂದೇ ಶಾಖಾಹಾರಿಗಳಾಗಿಬಿಟ್ಟರು. ಈಗ ಗೋವನ್ನು ಪವಿತ್ರವೆಂದೂ, ಹಿಂದೂ ಸಂಸ್ಕೃತಿಯ ಪೂಜನೀಯ ಸಂಕೇತವೆಂದೂ, ಭಾರತದ ದೇಶದ ಅನನ್ಯತೆಯ ಸಂಕೇತವೆಂದೂ, ಅದರ ಪ್ರತಿಯಾಗಿ ಗೋಮಾಂಸ ಭಕ್ಷಣೆ ಮಾಡುವವರೂ ಮತ್ತು ಗೋಹತ್ಯೆ ಮಾಡುವವರೂ ಹಿಂದೂಗಳಿಗೆ ಮಾತ್ರವಲ್ಲ ದೇಶಕ್ಕೆ ಶತ್ರೂಗಳು ಎಂದೆಲ್ಲಾ ಜನತೆಯನ್ನು ನಂಬಿಸಲು ಹೊರಟಿದ್ದಾರೆ. ಆ ಮೂಲಕ ಅಮಾಯಕ ಜನರನ್ನು ಕೋಮುವಾದಿ ರಾಜಕಾರಣಕ್ಕೆ ಸೆಳೆಯುತ್ತಿದೆ. ಹೀಗಾಗಿ ಈ ಮಸೂದೆಯ ಹಿಂದಿನ ಸಂಘಪರಿವಾರದ ಕರಾಳ ಕಾರಾಸ್ಥಾನಗಳನ್ನು ಅರ್ಥವಾಗಬೇಕೆಂದರೆ ನಮ್ಮ ಆಹಾರ ಸಂಸ್ಕೃತಿಯ ಇತಿಹಾಸವನ್ನು ಮತ್ತು ಈ ದೇಶದ ಬ್ರಾಹ್ಮಣೀಯ ಆಳುವ ವರ್ಗಗಳು ಇತಿಹಾಸದುದ್ದಕ್ಕೂ ಸಾರಿಕೊಂಡು ಬಂದ ಸುಳ್ಳುಪೊಳ್ಳುಗಳನ್ನು, ಆಷಾಢಭೂತಿತನವನ್ನೂ ಅರ್ಥಮಾಡಿಕೊಳ್ಳಲೇಬೇಕು.

ಭಾರತೀಯತೆ ಮತ್ತು ಆಹಾರ ಪದ್ಧತಿಗಳು



ಒಂದು ಜನಾಂಗ ತನ್ನದೇ ನಿರ್ದಿಷ್ಟ ಪರಿಸರದಲ್ಲಿ ವಿಕಸನಗೊಳ್ಳುವ ಪ್ರಕ್ರಿಯೆಯಲ್ಲಿ ತನದೇ ಅನನ್ಯವಾದ ಸಂಸ್ಕೃತಿ, ಧಾರ್ಮಿಕ ಶ್ರದ್ಧೆ ಮತ್ತು ಆಹಾರಾಭ್ಯಾಸಗಳನ್ನು ರೂಢಿಸಿಕೊಳ್ಳುತ್ತದೆ. ಅದಕ್ಕೆ ಭಿನ್ನವಾದ ಪರಿಸರದಲ್ಲಿ ಅರಳುವ ಸಂಸ್ಕೃತಿಗಳು ಅದಕ್ಕಿಂತ ಭಿನ್ನವಾದ ಆಹಾರ ಪದ್ಧತಿಗಳನ್ನು ಮತ್ತು ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತವೆ. ಆದರೆ ಒಂದು ದೇಶವಾಗಿ ಮತ್ತು ಅದರ ನಾಗರೀಕರಾಗಿ ಈ ವಿಭಿನ್ನ ಸಂಸ್ಕೃತಿಯ ಜನಾಂಗಗಳು ಐಕ್ಯಜೀವನ ನಡೆಸುವಾಗ ಪರಸ್ಪರರ ಸಂಸ್ಕೃತಿಯನ್ನು ಗೌರವಿಸುವ ಮತ್ತು ಸಹಬಾಳ್ವೆ ನಡೆಸುವ ಪ್ರಜಾತಾಂತ್ರಿಕ ಸಂಸ್ಕೃತಿ ಅತ್ಯಗತ್ಯವಾಗುತ್ತದೆ. ಅಂಥಾ ಬಹುಸಂಸ್ಕೃತಿಯುಳ್ಳ ರಾಷ್ಟ್ರವೊಂದರ ಪ್ರಭುತ್ವಕ್ಕೆ ಈ ಸಾಂಸ್ಕೃತಿಕ ಬಹುತ್ವವನ್ನು ಕಾಪಾಡಿಕೊಂಡು ಬರುವ ಹೊಣೆಗಾರಿಕೆ ಇರುತ್ತದೆ.

ನಮ್ಮ ದೇಶದಲ್ಲಿ ವಿವಿಧ ಐತಿಹಾಸಿಕ ಕಾರಣಗಳಿಂದ

ಬಗೆ ಬಗೆಯ ಆಹಾರ ಸಂಸ್ಕೃತಿಗಳು ನೆಲಗೊಂಡಿವೆ. ಈ ದೇಶದ ಹಲವು ಸಹಸ್ರ ವರ್ಷಗಳ ನಾಗರಿಕತೆಯಲ್ಲಿ ಶುದ್ಧ ಶಾಕಾಹಾರಿ ಸಂಸ್ಕೃತಿಯಿಂದ ಮೊದಲುಗೊಂಡು ಗೋಮಾಂಸ ಭಕ್ಷಣೆಯವರೆಗಿನ ವೈವಿಧ್ಯಮಯ ಆಹಾರ ಸಂಸ್ಕೃತಿಗಳು ವಿಕಸನಗೊಂಡಿವೆ. ಇವೆಲ್ಲವೂ ಈ ದೇಶದ ಆಹಾರ ಪದ್ಧತಿಗಳೇ ಆಗಿದ್ದು ಯಾವುದೂ ಮತ್ತೊಂದಕ್ಕಿಂತ ಮೇಲೂ ಅಲ್ಲ. ಕೀಳೂ ಅಲ್ಲ. ಬಹುತ್ವವನ್ನು ಗೌರವಿಸುವ ಪರಂಪರೆಯುಳ್ಳ ನಮ್ಮ ದೇಶದಲ್ಲಿ ಯಾವುದೇ ಆಹಾರಪದ್ಧತಿಯನ್ನು ಹೀನಾಯವಾಗಿ ನೋಡುವ ಅಥವಾ ಪ್ರಭುತ್ವ ಯಾವುದಾದರು ಒಂದು ಆಹಾರ ಪದ್ಧತಿಯನ್ನು ಪುರಸ್ಕರಿಸಿ ಮತ್ತೊಂದು ಆಹಾರ ಪದ್ಧತಿಯನ್ನು ನಿಷೇಧಿಸಿದ ಉದಾಹರಣೆಯೂ ಇಲ್ಲ.

ಭಾರತೀಯರೆಲ್ಲರೂ ಗೋಮಾಂಸ ಭಕ್ಷಕರೇ

ಇಷ್ಟಾಗಿಯೂ ಭಾರತದಲ್ಲಿ ಗೋವು ಪವಿತ್ರ ಎಂಬ ಭಾವನೆಗೆ ಅಂಥಾ ದೊಡ್ಡ ಇತಿಹಾಸವಿಲ್ಲ. ಈ ದೇಶದಲ್ಲಿ ಗೋಮಾಂಸ ಭಕ್ಷಣೆ ಪ್ರಾರಂಭವಾಗಿದ್ದೇ ಮುಸ್ಲಿಂ ದೊರೆಗಳ ದಾಳಿಯ ನಂತರ ಎಂದು ಹೇಳುತ್ತಾ ಇತಿಹಾಸವನ್ನು ವಿಕೃತಗೊಳಿಸುತ್ತಿರುವ ಈ ಹಿಂದೂತ್ವವಾದಿಗಳು ಈ ದೇಶದಲ್ಲಿ ಬುದ್ಧಧರ್ಮ ಅಸ್ತಿತ್ವಕ್ಕೆ ಬರುವ ಮುನ್ನ ಆರ್ಯರು ಎಂದು ಹೇಳಿಕೊಳ್ಳುವ ಎಲ್ಲರೂ ಗೋಮಾಂಸ ಭಕ್ಷಕರೇ ಆಗಿದ್ದರೆಂಬುದನ್ನು ಮರೆಮಾಚುತ್ತಿದ್ದಾರೆ. ಆರ್ಯರ ಆಧಾರ ಗ್ರಂಥಗಳಾದ ಮನುಸ್ಮೃತಿ, ತೈತ್ತರೀಯ ಬ್ರಾಹ್ಮಣ, ಹಲವು ವೇದಸ್ಮೃತಿಗಳೂ ಮತ್ತು ಪುರಾಣಗಳೂ ಸಹ ಗೋಮಾಂಸ ಭಕ್ಷಣೆಯನ್ನು ನಿಷೇಧಿಸಿರಲಿಲ್ಲ ಎಂಬುದನ್ನು ಸಹ ಮುಚ್ಚಿಡುತ್ತಿದ್ದಾರೆ. ತಮ್ಮ ಶ್ರೇಣಿಕೃತ ಸಾಮಾಜಿಕ ನೀತಿಗೆ ವಿರುದ್ಧವಾಗಿದ್ದ ಬೌದ್ಧ ಧರ್ಮದಿಂದ ಜನತೆಯನ್ನು ಆಕರ್ಷಿಸಲು ಅವರೆಗೆ ಗೋಮಾಂಸ ಭಕ್ಷಣೆಯನ್ನೇ ಪ್ರಚಾರ ಮಾಡುತ್ತಿದ್ದ ಬ್ರಾಹ್ಮಣಧರ್ಮವು ಗೋಮಾಂಸವನೇ ಅಲ್ಲದೆ ಮಾಂಸಾಹಾರವನ್ನೇ ತ್ಯಜಿಸಿತೆಂಬುದನ್ನು ಡಾ.ಅಂಬೇಡ್ಕರ್‌ರವರು ತಮ್ಮ "Untouchabality, The Dead Cow And The Brahmin" (ಅಂಬೇಡ್ಕರ್ ಬರಹ ಮತ್ತು ಭಾಷಣಗಳು–ಸಂಪುಟ–7) ಎಂಬ ಲೇಖನದಲ್ಲಿ ಸ್ಪಷ್ಟಪಡಿಸುತ್ತಾರೆ ಮತ್ತು ಹೇಗೆ ಈ ಗೋಮಾಂಸ ಭಕ್ಷಣೆಯನ್ನು ಮುಂದುವರೆಸಿದ್ದರಿಂದಲೇ ದಲಿತರನ್ನು ಹಿಂದೂ ಸಮಾಜ ಅಸ್ಪೃಶ್ಯರನ್ನಾಗಿ ಕಾಣಲು ಕಾರಣವಾಯಿತೆಂದು ವಾದಿಸುತ್ತಾರೆ.

ಈ ಕೃತಿಯಲ್ಲಿ ಅಂಬೇಡ್ಕರ್‌ರವರು ಸ್ಪಷ್ಟಪಡಿಸುವಂತೆ ಋಗ್ವೇದದ ಕಾಲದಲ್ಲೂ ಗೋಮಾಂಸ ಭಕ್ಷಣೆ ಪ್ರಚಲಿತದಲ್ಲಿತ್ತು. ಋಗ್ವೇದದ ಕಾಲದಲ್ಲೂ ಬ್ರಾಹ್ಮಣರು ಎತ್ತು, ದನ, ಗೋವು, ಮತ್ತು ಕುದುರೆಗಳನ್ನು ಅಗ್ನಿಗೆ ಬಲಿಗೊಡುತ್ತಿದ್ದರೆಂದು ಉಲ್ಲೇಖಿಸಲಾಗಿದೆ. (ಋ.72.6).

ಅದೇರೀತಿ ತೈತ್ತರೀಯ ಬ್ರಾಹ್ಮಣದ ಕಾಮ್ಯೇಷ್ಟಿಗಳಲ್ಲಿ ಯಾವ ಬಗೆಯ ದನ ಮತ್ತು ಹಸುಗಳನ್ನು ಯಾವ ದೇವತೆಗಳಿಗೆ ಬಲಿಕೊಡಬೇಕೆಂಬ ವಿವರಗಳೂ ಇವೆ. ಕುಳ್ಳ ಎತ್ತನ್ನು ವಿಷ್ಣುವಿಗೂ, ಕೆಂಪು ಎತ್ತನ್ನು ರುದ್ರನಿಗೂ ಸಮರ್ಪಿಸಬೇಕೆಂದು ಅದರಲ್ಲಿ ವಿವರಿಸಲಾಗಿದೆ. ಇದಲ್ಲದೆ ಈ ತೈತ್ತರೀಯ ಬ್ರಾಹ್ಮಣದಲ್ಲಿ ಪ್ರಸ್ತಾಪಿಸಲಾಗಿರುವ ಪಂಚಸರಾದೀಯ ಸೇವಾದ ಪ್ರಕಾರ 17 ವರ್ಷದ ಎತ್ತನ್ನು ಜೀವಂತ ದಹಿಸಿ ಅರ್ಪಿಸಬೇಕೆಂದೂ ಉಲ್ಲೇಖಿಸಲಾಗಿದೆಯೆಂದು ಅಂಬೇಡ್ಕರ್‌ರವರು ವಿವರಗಳನ್ನು ನೀಡುತ್ತಾರೆ.

ಆಗಿನಕಾಲದಲ್ಲಿ ಅತಿಥಿ ಸತ್ಕಾರಕ್ಕೆ ಗೋಮಾಂಸ ಭಕ್ಷಣೆ ಕಡ್ಡಾಯವಾಗಿತ್ತು. ಹೀಗಾಗಿ ಅತಿಥಿಗಳಿಗೆ "ಗೋಘ್ನ"ರು ಎಂದೇ ಕರೆಯಲಾಗುತ್ತಿತ್ತು. ಅಂದರೆ ಗೋಹಂತಕರು ಎಂದರ್ಥ.

ನಮ್ಮ ದೇಶದಲ್ಲಿ ವಿವಿಧ ಐತಿಹಾಸಿಕ ಕಾರಣಗಳಿಂದ ಬಗೆಬಗೆಯ ಆಹಾರ ಸಂಸ್ಕೃತಿಗಳು ನೆಲೆಗೊಂಡಿವೆ. ಈ ದೇಶದ ಹಲವು ಸಹಸ್ರ ವರ್ಷಗಳ ನಾಗರಿಕತೆಯಲ್ಲಿ ಶುದ್ಧ ಶಾಕಾಹಾರಿ ಸಂಸ್ಕೃತಿಯಿಂದ ಮೊದಲುಗೊಂಡು ಗೋಮಾಂಸ ಭಕ್ಷಣೆಯವರೆಗಿನ ವೈವಿಧ್ಯಮಯ ಆಹಾರ ಸಂಸ್ಕೃತಿಗಳು ವಿಕಸನಗೊಂಡಿವೆ. ಇವೆಲ್ಲವೂ ಈ ದೇಶದ ಆಹಾರ ಪದ್ಧತಿಗಳೇ ಆಗಿದ್ದು ಯಾವುದೂ ಮತ್ತೊಂದಕ್ಕಿಂತ ಮೇಲೂ ಅಲ್ಲ. ಕೀಳೂ ಅಲ್ಲ. ಬಹುತ್ವವನ್ನು ಗೌರವಿಸುವ ಪರಂಪರೆಯುಳ್ಳ ನಮ್ಮ ದೇಶದಲ್ಲಿ ಯಾವುದೇ ಆಹಾರಪದ್ಧತಿಯನ್ನು ಹೀನಾಯವಾಗಿ ನೋಡುವ ಅಥವಾ ಪ್ರಭುತ್ವ ಯಾವುದಾದರು ಒಂದು ಆಹಾರ ಪದ್ಧತಿಯನ್ನು ಪುರಸ್ಕರಿಸಿ ಮತ್ತೊಂದು ಆಹಾರ ಪದ್ಧತಿಯನ್ನು ನಿಷೇಧಿಸಿದ ಉದಾಹರಣೆಯೂ ಇಲ್ಲ.

ಗೋಮಾಂಸ ಆಗ ಎಷ್ಟು ಪ್ರಿಯವಾದ ಭಕ್ಷ್ಯವಾಗಿತ್ತೆಂದರೆ ಗೋಮಾಂಸವನ್ನು ತ್ಯಜಿಸಬೇಕೆಂದು ಆ ಕಾಲದಲ್ಲಿ ಪ್ರಖ್ಯಾತನಾಗಿದ ಯಾಜ್ಞವಲ್ಕ್ಯ ಮಹಾಮುನಿಗೆ ಕೇಳಿದಾಗ ಆತ "ಅದನ್ನು ಹದವಾಗಿ ಬೇಯಿಸಿಕೊಟ್ಟರೆ ಈಗಲೂ ನನಗೆ ತಿನ್ನಲು ಇಷ್ಟ"ವೆಂದೇ ಹೇಳಿದರೆಂದು ಸ್ಮೃತಿಗಳಲ್ಲಿ ಉಲ್ಲೇಖವಿದೆ.

ಆದರೆ ಶತಪಥ ಬ್ರಾಹ್ಮಣ ಹಾಗೂ ಇನ್ನಿತ್ಯಾದಿ ಗ್ರಂಥಗಳಲ್ಲಿ ಗೋಹತ್ಯೆಯ ಬಗೆಗೆ ಇರುವ ಉಲ್ಲೇಖವನ್ನು ತೋರಿಸಿ ಕೆಲವರು ಇದು ವೇದಗಳ ಕಾಲದಲ್ಲಿ ಗೋಮಾಂಸ ಭಕ್ಷಣೆ ಮತ್ತು ಹತ್ಯೆಗಳು ಇಲ್ಲದಿದ್ದಕ್ಕೆ ಸಾಕ್ಷಿ ಎಂದು ವಾದಿಸುತ್ತಾರೆ. ಆದರೆ ಗೋಮಾಂಸ ತಿನ್ನಬಾರದೆಂಬ ಪ್ರಸ್ತಾಪ ಇರುವುದೇ ಆಗ ಗೋಮಾಂಸ ಭಕ್ಷಣೆ ನಡೆಯುತ್ತಿತ್ತು ಎಂಬುದಕ್ಕೆ ಪುರಾವೆಯಾಗಿದೆ. ಮತ್ತು ಅಲ್ಲಿ ನಿಷೇಧದ ಪ್ರಸ್ತಾಪವಿರುವುದು ದೊಡ್ಡ ಸಂಖ್ಯೆಯಲ್ಲಿ ನಡೆಯುತ್ತಿದ್ದ ಗೋವು ಮತ್ತು ಇತರ ಪ್ರಾಣಿಗಳ ಬಲಿಯ ಬಗ್ಗೆಯೇ ವಿನಃ ಗೋಮಾಂಸ ಭಕ್ಷಣೆಯ ಬಗೆಗಲ್ಲ.

ಆರ್ಯರು ಗೋಮಾಂಸ ಭಕ್ಷಣೆ ತ್ಯಜಿಸಿದ್ದೇ ಒಂದು ಕುತಂತ್ರ!

ಆದರೆ ಕೃಷಿ ವಿಸ್ತರಣೆಗೆ ಬ್ರಾಹ್ಮಣರ ಈ ಹೋಮಹವನ ಮತ್ತು ಗೋಮಾಂಸ ಭಕ್ಷಣೆಯ ಸಂಸ್ಕೃತಿ ದೊಡ್ಡ ಅಡಚಣೆಯಾಯಿತು. ಆ ಕಾಲದಲ್ಲಿ ಉದಯಿಸಿದ ಬೌದ್ಧ ಧರ್ಮ ಈ ಬಗೆಯಲ್ಲಿ ಪ್ರಾಣಿಗಳ ಮೇಲಾಗುತ್ತಿದ್ದ ಹಿಂಸಾಚಾರವನ್ನು ಕಟುವಾಗಿ ವಿರೋಧಿಸಿತು. ಬೌದ್ಧಧರ್ಮದ ಹಲವಾರು 'ಸುತ್ತಕ'ಗಳಲ್ಲಿ ಆ ಕಾಲದಲ್ಲಿ ಬ್ರಾಹ್ಮಣರು ಯಜ್ಞ ಯಾಗಾದಿಗಳಲ್ಲಿ ನಡೆಸುತ್ತಿದ್ದ ಗೋಹತ್ಯೆಗಳ ವಿವರಗಳು ವಿಪುಲವಾಗಿ ಸಿಗುತ್ತವೆ. ಅದಕ್ಕೆ ಪ್ರತಿಯಾಗಿ ಬೌದ್ಧ ಧರ್ಮ ಪ್ರತಿಪಾದಿಸಿದ ಪ್ರೀತಿ ಮತ್ತು ಅಹಿಂಸೆ ಮತ್ತು ಪ್ರಾಣಿದಯೆಗಳು ಸಾಮಾನ್ಯ ಜನರನ್ನು ಬ್ರಾಹ್ಮಣರಿಂದ ವಿಮುಖಗೊಳಿಸಿ ಬೌದ್ಧಧರ್ಮವನ್ನು ಸೇರುವಂತೆ ಮಾಡಿತು. ಆದರೆ ಬೌದ್ಧಧರ್ಮ ಅಂಕೆಯಿಲ್ಲದ ಗೋಹತ್ಯೆಯನ್ನು ನಿಷೇಧಿಸಿತೇ ವಿನಃ ಗೋಮಾಂಸ ಭಕ್ಷಣೆಯನ್ನಲ್ಲ. ಹೀಗಾಗಿ ಹಳ್ಳಿಯಲ್ಲಿ ಸತ್ತ ದನಗಳ ವಿಲೇವಾರಿ ಮತ್ತು ಚರ್ಮದ ಕೆಲಸದಲ್ಲಿ ತೊಡಗಿದ್ದ ದಲಿತರು ದನ ತಿನ್ನುವುದನ್ನು ಮುಂದುವರೆಸಿದರು. ತಮ್ಮಿಂದ ವಿಮುಖರಾದವರನ್ನು ಮತ್ತೆ ಹಿಂದೂ ಧರ್ಮಕ್ಕೆ ಗೆದ್ದುಕೊಳ್ಳುವ ವ್ಯೂಹದಿಂದಲೇ ಬ್ರಾಹ್ಮಣರು ಮಾಂಸಾಹಾರವನ್ನೇ ತ್ಯಜಿಸಿ ಶಾಕಾಹಾರಿಗಳಾಗಿಬಿಟ್ಟರು. ಮತ್ತು ಆಗಿನಿಂದ ಶಾಕಾಹಾರಿಗಳು ಮಾಂಸಾಹಾರಿಗಳಿಗಿಂತ ಶ್ರೇಷ್ಠರು ಎಂಬ ಮೌಲ್ಯವನ್ನೂ ಸಮಾಜದಲ್ಲಿ ಬಲವಾಗಿ ಆಚರಣೆಗೆ ತಂದರು. ಮಾತ್ರವಲ್ಲದೆ ಗೋಮಾಂಸ ತಿನ್ನುವುದನ್ನು ಮುಂದುವರೆಸಿದವರನ್ನು "ಅಸ್ಪೃಶ್ಯರನ್ನಾಗಿ" ಕಾಣಲು ಮುಂದುವರೆಸಿದರೆಂದು ಅಂಬೇಡ್ಕರ್ ವಿಶ್ಲೇಷಿಸುತ್ತಾರೆ.

ಇಂದಿಗೂ ದಲಿತ, ಆದಿವಾಸಿ ಮತ್ತು ಶೂದ್ರ ಸಮುದಾಯಗಳಿಗೆ ಸುಲಭದಲ್ಲಿ ಸಿಗಬಹುದಾದ ಪೌಷ್ಟಿಕ ಆಹಾರ ಗೋಮಾಂಸವೇ ಆಗಿದೆ. ಈ ಎಲ್ಲಾ ಹಿನ್ನೆಲೆಯಿಂದಲೇ ಡಾ. ಅಂಬೇಡ್ಕರ್‌ರವರು ಗೋಹತ್ಯಾ ನಿಷೇಧವನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿ ಸೇರಿಸಬಾರದೆಂದೂ ಅಥವಾ ಗೋಮಾಂಸ ಭಕ್ಷಣೆಯನ್ನು ಹೀನಾಯವಾಗಿ ನೋಡಬಾರದೆಂದೂ ಬಲವಾಗಿ ವಾದಿಸಿದ್ದರು. ಆದರು ಗೃಹಮಂತ್ರಿ ಆಚಾರ್ಯರವರು ಡಾ. ಅಂಬೇಡ್ಕರ್‌ರವರು ಗೋಹತ್ಯಾ ನಿಷೇಧದ ಪರವಾಗಿದ್ದರೆಂದು ಅಧಿಕೃತ ಹೇಳಿಕೆ ನೀಡುತ್ತಾ ಇತಿಹಾಸವನ್ನೇ ತಿರುಚುತ್ತಿದ್ದಾರೆ.

ಸ್ವಾಮಿ ವಿವೇಕಾನಂದರು ಹೇಳಿದ್ದು– "ಆರ್ಯರು ಗೋಹಂತಕರು"

ಈ ಸಂಘಪರಿವಾರದವರು ಸ್ವಾಮಿ ವಿವೇಕಾನಂದರನ್ನು ಹಿಂದೂತ್ವದ ಪ್ರತಿಪಾದಕನೆಂದು ಚಿತ್ರಿಸಲು ಯತ್ನಿಸುತ್ತಾರೆ. ಆದರೆ ಸ್ವಾಮೀ ವಿವೇಕಾನಂದರೇ ಮಧುರೈನಲ್ಲಿ ಮಾಡಿದ ಭಾಷಣವೊಂದರಲ್ಲಿ "ದನದ ಮಾಂಸವನ್ನು ತಿನ್ನದಿದ್ದಲ್ಲಿ ಬ್ರಾಹ್ಮಣನೊಬ್ಬ ಬ್ರಾಹ್ಮಣನಾಗಿ ಉಳಿಯಲಾಗದ ಕಾಲ ಒಂದಿತ್ತು. ವೇದಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ ಒಬ್ಬ ಗೃಹಸ್ಥನ ಮನೆಗೆ ಗಣ್ಯ ಅತಿಥಿ, ರಾಜ ಅಥವಾ ಸನ್ಯಾಸಿಗಳು ಬಂದರೆ ಅವರನ್ನು ಉಪಚರಿಸಲು ಮನೆಯಲ್ಲಿದ್ದ ಅತ್ಯುತ್ತಮ ದನವನ್ನು ಕೊಂದು ಬಡಿಸಲಾಗುತ್ತಿತ್ತು." ಆದ್ದರಿಂದಲೇ ಆ ಕಾಲದಲ್ಲಿ ಅತಿಥಿಗಳಿಗೆ "ಗೋಘ್ನ" ರೆಂದೂ ಕರೆಯಲಾಗುತ್ತಿತ್ತು. ಅಂದರೆ ಗೋವಿನ ವಧೆಗೆ ಕಾರಣರಾಗುವವರು ಎಂದರ್ಥ!. ಅಲ್ಲದೇ ತಮ್ಮ ಶಿಷ್ಯರಿಗೆ ಯಾವುದೇ ಭಿಡೆಯಿಲ್ಲದೆ ಮಾಂಸ ಮತ್ತು ಮೀನು ತಿನ್ನಲು ಪ್ರೋತ್ಸಾಹಿಸಿರುವ ಕಥನಗಳು ರಾಮಕೃಷ್ಣ ಆಶ್ರಮವೇ ತಂದಿರುವ ಸಾಹಿತ್ಯದಲ್ಲಿ ಅಳಿಸಲಾಗದಷ್ಟು ಸ್ಪಷ್ಟವಾಗಿ ಉಲ್ಲೇಖಿತವಾಗಿದೆ.

ಇದಲ್ಲದೆ ಭಾರತರತ್ನ ಪ್ರಶಸ್ತಿ ವಿಜೇತ ಪುರಾತತ್ವಶಾಸ್ತ್ರಜ್ಞರಾದ ಪಿ.ವಿ.ಕಾಣೆರವರು (ಈವರೆಗೆ ಸರ್ಕಾರದಿಂದ ಈ ಕ್ಷೇತ್ರದಲ್ಲಿ ಭಾರತರತ್ನ ಬಿರುದು ಪಡೆದವರು ಇವರೊಬ್ಬರೇ) ಐದು ಸಂಪುಟಗಳಲ್ಲಿ ಸಂಪಾದಿಸಿರುವ "History Of Dharmashastras"ನಲ್ಲಿ ಅತ್ಯಂತ ಸ್ಪಷ್ಟ

ವಾಗಿ ಹೇಗೆ ವೇದಗಳ ಕಾಲದಲ್ಲೂ – ಅದಕ್ಕೆ ಮುನ್ನವೂ ಭಾರತದಲ್ಲಿ ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆಯೂ ಜಾರಿಯಲ್ಲಿದ್ದ ಪದ್ಧತಿಯೇ ಆಗಿತ್ತೆಂದು ಸಾಬೀತು ಮಾಡುತ್ತಾರೆ. ಪ್ರಖ್ಯಾತ ಇತಿಹಾಸಕಾರ ಸಂಕಾಲಿಯಾರವರು ಪ್ರಾಚೀನ ಭಾರತದಲ್ಲಿ ದನ ಮತ್ತು ಇತರ ಪ್ರಾಣಿಗಳ ಮಾಂಸ ಭಕ್ಷಣೆಯೂ ಒಂದು ಸರ್ವೇಸಾಮಾನ್ಯವಾದ ಅಭ್ಯಾಸವಾಗಿತ್ತೆಂಬುದನ್ನು ರುಜುವಾತು ಮಾಡುತ್ತಾರೆ.

ಹಾಗೆಯೇ ದೆಹಲಿ ವಿಶ್ವವಿದ್ಯಾಲಯದ ಪ್ರಖ್ಯಾತ ಇತಿಹಾಸಕಾರ ಪ್ರೊ. ದ್ವಿಜೇಂದ್ರನಾಥ್ ಜಾ ರವರು ತಮ್ಮ "Myth Of Holy Cow" ಎಂಬ ಪುಸ್ತಕದಲ್ಲಿ ಹಲವಾರು ಹಿಂದೂ, ಜೈನ ಮತ್ತು ಬೌದ್ಧ ಧರ್ಮಶಾಸ್ತ್ರಗಳ ಅಧ್ಯಯನ ಮಾಡಿ ಪ್ರಾಚೀನ ಭಾರತದಲ್ಲಿ ಹೇಗೆ ಗೋಮಾಂಸ ಒಂದು ಪ್ರಮುಖ ಆಹಾರವಾಗಿತ್ತೆಂಬುದನ್ನೂ ಮತ್ತು ಆ ಕಾಲದಲ್ಲಿ ಗೋವು ಪವಿತ್ರವಾಗಿತ್ತೆಂಬ ಅಭಿಪ್ರಾಯ ಸುಳ್ಳೆಂಬುದನ್ನು ಹಲವಾರು ಆಧಾರಗಳ ಸಮೇತ ರುಜುವಾತು ಮಾಡುತ್ತಾರೆ.

ಮನುಸ್ಮೃತಿಗಳು, ಪುರಾಣಗಳೆಲ್ಲಾ ಹೇಳಿದ್ದು–
"ಗೋಮಾಂಸ ತಿಂದರೇ ತಪ್ಪೇನೂ ಇಲ್ಲ!"

ಈ ಮನುವಾದಿಗಳು ಸಂವಿಧಾನಕ್ಕಿಂತ ಪವಿತ್ರವೆಂದು ಎತ್ತಿಹಿಡಿಯುವ "ಮನುಶಾಸ್ತ್ರ"ದಲ್ಲೂ ಗೋಮಾಂಸ ಭಕ್ಷಣೆಯನ್ನು ವರ್ಜ್ಯವೆಂದು ಹೇಳಿಲ್ಲ. ಅದರಲ್ಲಿ ತಿನಬಾರದೆಂದು ದೂರವಿರಿಸಲ್ಪಟ್ಟಿರುವ ಪ್ರಾಣಿ ಒಂಟೆಯೇ ವಿನಃ ಗೋವು ಅಥವಾ ದನವಲ್ಲ. ಮನುಸ್ಮೃತಿಯ ಐದನೇ ಅಧ್ಯಾಯದಲ್ಲಿ ಹಬ್ಬದ ಸಂದರ್ಭದಲ್ಲಿ, ದೇವರಿಗೆ ನೈವೇದ್ಯ ಮಾಡುವ ಸಂದರ್ಭದಲ್ಲಿ ಅಥವಾ ಮನೆಗೆ ಅತಿಥಿ ಬಂದಂತ ಸಂದರ್ಭದಲ್ಲಿ ಮಾಂಸಾಹಾರವನ್ನು ಎಡೆಯಾಗಿ ನೀಡುವುದರಲ್ಲಿ ಏನೂ ತಪ್ಪಿಲವೆಂದು ಸ್ಪಷ್ಟವಾಗಿ ಉಲ್ಲೇಖಗೊಂಡಿದೆ.

ಮತ್ತೊಂದು ಕಡೆ "ಈ ವಿಶ್ವದಲ್ಲಿರುವುದೆಲ್ಲವೂ ಆ ವಿರಾಟ್ ಜೀವಾತ್ಮನನ್ನು ಉಳಿಸಿಕೊಳ್ಳಲೆಂದೇ ಸೃಷ್ಟಿಯಾಗಿದೆ. ಚಲನಶೀಲವಾದ –ಚಲನೆಯಿಲ್ಲದ ಪ್ರತಿಯೊಂದೂ ಜೀವಾತ್ಮನ ಆಹಾರವೇಆಗಿದೆ. ಚಲನರಹಿತವಾದದ್ದು ಚಲನಶೀಲವಾದ್ದರ ಆಹಾರವಾಗಿದೆ. ಹಲ್ಲುದವಡೆ ಇರದ ಪ್ರಾಣಿಗಳು ಹಲ್ಲುದವಡೆ ಇರುವ ಪ್ರಾಣಿಗಳ ಆಹಾರ, ದುರ್ಬಲವಾಗಿರುವ ಪ್ರಾಣಿಗಳು ಬಲಶಾಲಿ ಪ್ರಾಣಿಗಳ ಆಹಾರ. ಹೀಗಾಗಿ ತನ್ನ ಆಹಾರವಾಗಿರುವ ಜೀವಿಯನ್ನು ತಿನ್ನುವುದರಲ್ಲಿ ಏನೂ ಪಾಪವಿಲ್ಲ. ಏಕೆಂದರೆ ಆ ಪರಮಾತ್ಮನೇ ತಿನ್ನುವವರನ್ನೂ – ತಿನ್ನಿಸಿಕೊಳ್ಳುವ ಪ್ರಾಣಿಗಳನ್ನು ಸೃಷ್ಟಿಸಿದ್ದಾನೆ" ಎಂದು ಸ್ಪಷ್ಟವಾಗಿ ಮನು ಘೋಷಿಸುತ್ತಾನೆ. ನಂತರ ಒಂದುಕಡೆ ಮನು ಅಹಿಂಸೆಯನ್ನು ಪರಮ ಧರ್ಮವೆಂದೂ ಸಹ ಹೇಳುವುದು ನಿಜ. ಹೀಗೆ ಮನುಸ್ಮೃತಿಯ ನಂತರದ ಶ್ಲೋಕಗಳಲ್ಲಿ ಹಳೆಯ ನಿಲುವಿಗೆ ವ್ಯತಿರಿಕ್ತವಾದ ಹೇಳಿಕೆಗಳು ಕಾಣಲು ಮನುಸ್ಮೃತಿಗೆ ಕಾಲಕಾಲಕ್ಕೆ ಹಲವಾರು ಸೇರ್ಪಡೆಗಳಾಗಿರುವುದೇ ಕಾರಣ.

ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಬರೆಯಲಾದ ವಿಷ್ಣುಪುರಾಣ, ಸ್ಕಂದ ಪುರಾಣ, ದೇವೀಪುರಾಣ, ಗರುಡ ಪುರಾಣ್ ಅಮತ್ತು ಭವಿಷ್ಯ ಪುರಾಣಗಳಲ್ಲೂ ಹಬ್ಬದ ಸಂದರ್ಭದಲ್ಲಿ ಎಮ್ಮೆಗಳನ್ನು ಬಲಿಕೊಡುವ ವಿಸ್ತೃತ ಉಲ್ಲೇಖಗಳಿವೆ. ಹೀಗಾಗಿ ಈ ಕಾಲಘಟ್ಟದಲ್ಲೂ ಗೋವು ಮಾತ್ರ ಪವಿತ್ರವೆಂಬ ಯಾವ ಸಾಮಾಜಿಕ ಮೌಲ್ಯಗಳೂ ಇರಲಿಲ್ಲ. ಮತ್ತು ಆ ಕಾಲದಲ್ಲೂ ಯಾವುದೇ ಸಾಮಾಜಿಕ ನಿರ್ಬಂಧಗಳಿಲ್ಲದೆ ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆಯೂ ಮುಂದುವರೆದದ್ದು ಸಾಬೀತಾಗುತ್ತದೆ. ಇದೇ ಕಾಲಘಟ್ಟದಲ್ಲಿ ರಚಿತವಾದ ವಾಲ್ಮೀಕಿ ರಾಮಾಯಣ ಮತ್ತು ವ್ಯಾಸನ ಮಹಾಭಾರತದಲ್ಲೂ ಕಾಡಿನ ಪ್ರಾಣಿಗಳನ್ನು ಮತ್ತು ದನಕರುಗಳನ್ನು ಆಹಾರಕ್ಕಾಗಿ ಬೇಟೆಯಾಡಿದ ಘಟನೆಗಳು ಉದ್ದಕ್ಕೂ ಸಿಗುತ್ತವೆ.

ಅದೇ ರೀತಿ ಏಳನೇ ಶತಮಾನದಲ್ಲಿ ರಚಿಸಲ್ಪಟ್ಟಿವೆ ಎಂದು ನಂಬಲಾಗಿರುವ ಚರಕ ಮತ್ತು ಸುಷ್ರತರ ಆರೋಗ್ಯ ಸಂಹಿತೆಗಳಲ್ಲಿ ದನದಮಾಂಸಕ್ಕೆ ಇರುವ ಖಾಯಿಲೆ ಗುಣಪಡಿಸುವ ಗುಣಗಳಬಗ್ಗೆ ವಿಸ್ತೃತವಾದ ಉಲ್ಲೇಖವಿದೆ. ಅದರಲ್ಲೂ ಬಿಟ್ಟುಬಿಟ್ಟು ಬಿರುವ ಜ್ವರಕ್ಕೆ ದನದ ಮಾಂಸ ಅತ್ಯುತ್ತಮ ಔಷಧವೆಂದು ಚರಕಸಂಹಿತೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ವೇದಕಾಲಗಳಿಂದಲೂ ಆರ್ಯರು ಶಾಖಾಹಾರಿಗಳಾಗಿದ್ದರು ಎಂಬ ವಾದಕ್ಕೆ ಪ್ರತಿಯಾಗಿ ಕ್ರಿ.ಶ.7–8ನೇ ಶತಮಾನದ ಮಹಾನ್ ವೈದ್ಯರಾದ ಚರಕ ಮತ್ತು ಸುಷ್ರುತರು ಕನಿಷ್ಟ 150 ಪ್ರಾಣಿ ಮತ್ತು ಪಕ್ಷಿಗಳ ಭಕ್ಷಣೆ ವಿವಿಧ ಕಾಯಿಲೆಗಳಿಗೆ ಉಪಯುಕ್ತವೆಂದು ಸ್ಪಷ್ಟೀಕರಿಸಿದ್ದಾರೆ.

ಹಾಗೆಯೇ ಮಹಾಕವಿಗಳೆಂದು ಪರಿಗಣಿಸಲ್ಪಟ್ಟಿರುವ ಕಾಳಿದಾಸ, ಭವಭೂತಿಗಳಿಂದ ಹಿಡಿದು ಅವುಗಳ ಬಗ್ಗೆ ವ್ಯಾಖ್ಯಾನ ಬರೆದ 18ನೇ ಸತಮಾನದ ಕವಿ ನರಹರಿ ಮತ್ತು ಘನಶ್ಯಾಮರವರೆಗೆ ಯಾರೂ ವೇದ ಮತ್ತು ಪುರಾಣಗಳ ಕಾಲದಲ್ಲಿ ಗೋಮಾಂಸ ಭಕ್ಷಣೆ ಪಾಪಕರವಾಗಿತ್ತೆಂಬ ಮಾಹಿತಿಯನ್ನು ನೀಡುವುದಿಲ್ಲ. ಬದಲಿಗೆ ಅವರ ಪಾತ್ರಗಳು ಸಂತೋಷದಿಂದ ಇತರ ಪ್ರಾಣಿಗಳಂತೆ ಗೋಮಾಂಸ ಭಕ್ಷಣೆಯನ್ನೂ ಮಾಡಿದ್ದನ್ನು ಉತ್ಸಾಹದಿಂದ ಬಣ್ಣಿಸುತ್ತವೆ. ಕಾಳಿದಾಸನ ಮೇಘದೂತದಲ್ಲಿ ಯಕ್ಷನು ಸಾವಿರಾರು ಗೋವಧೆಗಳಿಂದ ಖ್ಯಾತನಾದ ರಂತಿದೇವನಿಗೆ ನಮಸ್ಕರಿಸಬೇಕೆಂದು ಮೇಘಕ್ಕೇ ಹೇಳಿದರೆ, ಭವಭೂತಿಯ ನಾಟಕದಲ್ಲಿ ವಸಿಷ್ಟ ವಾಲ್ಮೀಕಿಯ ಆಶ್ರಮದಲ್ಲಿ ಕರುಮಾಂಸ ತಿನ್ನುತ್ತಾ ವಿಶ್ರಮಿಸುತ್ತಿರುತ್ತಾನೆ. 17ನೇ ಶತಮಾನದ ಪ್ರಖ್ಯಾತ ತರ್ಕಶಾಸ್ತ್ರಜ್ಞ ವಿಶ್ವನಾಥ ನ್ಯಾಯ ಪಂಚನಾನ ಎಂಬುವರು ಆ ಕಾಲದ ಬ್ರಾಹ್ಮಣರೂ ಸಹ ಶ್ರಾದ್ಧ, ಮತ್ತು ಮಧುಪರ್ಕ (ಅತಿಥಿ ಸತ್ಕಾರದ) ಸಂದರ್ಭದಲ್ಲಿ ಗೋಮಾಂಸ ತಿನ್ನುತ್ತಾರೆಂದು ಉಲ್ಲೇಖಿಸಿದ್ದಾರಲ್ಲದೆ ಗೋಮಾಂಸ ತಿನ್ನದ ದಕ್ಷಿಣದ ಬ್ರಾಹ್ಮಣರನ್ನು ಬೌದ್ಧ ಧರ್ಮದ ಪ್ರಭಾವಕ್ಕೆ ಸಿಕ್ಕಿಕೊಟ್ಟವರೆಂದು ನಿಂದಿಸುತ್ತಾನೆ!

> **ಮಹಾಕವಿಗಳೆಂದು ಪರಿಗಣಿಸಲ್ಪಟ್ಟಿರುವ ಕಾಳಿದಾಸ, ಭಾವಭೂತಿಗಳಿಂದ ಹಿಡಿದು ಅವುಗಳ ಬಗ್ಗೆ ವ್ಯಾಖ್ಯಾನ ಬರೆದ 18ನೇ ಶತಮಾನದ ಕವಿ ನರಹರಿ ಮತ್ತು ಘನಶ್ಯಾಮರವರೆಗೆ ಯಾರೂ ವೇದ ಮತ್ತು ಪುರಾಣಗಳ ಕಾಲದಲ್ಲಿ ಗೋಮಾಂಸ ಭಕ್ಷಣೆ ಪಾಪಕರವಾಗಿತ್ತೆಂಬ ಮಾಹಿತಿಯನ್ನು ನೀಡುವುದಿಲ್ಲ. ಬದಲಿಗೆ ಅವರ ಪಾತ್ರಗಳು ಸಂತೋಷದಿಂದ ಇತರ ಪ್ರಾಣಿಗಳಂತೆ ಗೋಮಾಂಸ ಭಕ್ಷಣೆಯನ್ನೂ ಮಾಡಿದ್ದನ್ನು ಉತ್ಸಾಹದಿಂದ ಬಣ್ಣಿಸುತ್ತವೆ.**

ಕರ್ನಾಟಕದಲ್ಲಿ 12ನೇ ಶತಮಾನದ ವಚನಕಾರರಲ್ಲಿ ಹಲವರು ದನದಮಾಂಸವನ್ನು ತಿನ್ನುತ್ತಿದ್ದವರೇ ಆಗಿದ್ದರು. ಆದರೆ ಮೇಲ್ಜಾತಿಗಳಿಂದ ಶರಣಕುಲಕ್ಕೆ ಮತಾಂತರಗೊಂಡವರು ಈ ರೀತಿ ದನದ ಮಾಂಸ ತಿನ್ನುವವವರನ್ನು ಕೀಳಾಗಿ ಕಾಣುತ್ತಿದ್ದರು. ಇದರ ಬಗ್ಗೆ ಶರಣರ ನಡುವೆಯೇ ಸಂಘರ್ಷ ನಡೆದಿರುವುದಕ್ಕೆ ಉದಾಹರಣೆಯಾಗಿ ದಲಿತ ಕವಯತ್ರಿ ಕಾಳವ್ವೆಯ ಈ ವಚನ ಸಾಕ್ಷಿಯಾಗಿದೆ:

ಕುರಿಕೋಳಿ ಕಿರಿಮೀನು ತಿಂಬವರಿಗೆಲ್ಲಾ
ಕುಲಜಕುಲಜರೆಂದೆಂಬರು.
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ
ಮಾದಿಗ ಕೀಳುಜಾತಿ ಎಂಬರು.
ಅವರೆಂತು ಕೀಳುಜಾತಿಯಾದರು?
ಜಾತಿಗಳು ನೀವೇಕೆ ಕೀಳಾದಿರೋ?

–ಕಾಳವ್ವೆ

ಹೀಗೆ ಈ ಭರತ ವರ್ಷದಲ್ಲಿ ಗೋಹತ್ಯೆಯಾಗಲೀ, ಗೋಮಾಂಸ ಭಕ್ಷಣೆಯಾಗಲೀ ಎಂದಿಗೂ ನಿಷೇಧಗೊಂಡಿರಲಿಲ್ಲ. ಅದೇ ರೀತಿ ಗೋವಿಗೆ ಇತರ ಪ್ರಾಣಿಗಳಿಗಿಂತ ವಿಶೇಷವಾದ ಪಾವಿತ್ರ್ಯವಾದ ಸ್ಥಾನಮಾನವೂ ಇರಲಿಲ್ಲ. ವಾಸ್ತವವಾಗಿ ಕೆಲವು ಸ್ಮೃತಿ ಮತ್ತು ಪುರಾಣಗಳಲ್ಲಿ ಗೋವು ಮುಟ್ಟಿದ ಅಹಾರಗಳನ್ನು ಮತ್ತೆ ತೊಳೆದು ತಿನ್ನಬೇಕೆಂಬ ನಿಯಮವಿದೆ. ಹಾಗೆ ನೋಡಿದರೆ ಆಹಾರವಾಗಿ ಬಳಸಬಾರದೆಂದು ಹಿಂದೂ ಸ್ಮೃತಿ ಪುರಾಣಗಳಲ್ಲಿ ನಿಷೇದಿತವಾಗಿದ್ದ ಪ್ರಾಣಿಗಳೆಂದರೆ ಒಂಟೆ ಮತ್ತು ನಾಯಿಯೇ ಹೊರತು ಗೋವಲ್ಲ. ವೇದಸಾಹಿತ್ಯದಲ್ಲಿ ಕುದುರೆಗೆ ಗೋವಿಗಿಂತಲೂ ಹೆಚ್ಚಿನ ಸ್ಥಾನವನ್ನು ನೀಡಲಾಗಿದೆ.

ಕೋಮುವಾದವನ್ನು ಹುಟ್ಟುಹಾಕಲೆಂದೇ ಪಾಪದ ಗೋವನ್ನು ಬಳಸಿಕೊಂಡರು!

ಗೋವಿಗೆ ಪಾವಿತ್ರ್ಯದ ಮತ್ತು ಹಿಂದೂ ಸಂಸ್ಕೃತಿಯ ಸ್ಥಾನ ಸಿಕ್ಕಿದ್ದು 19ನೇ ಶತಮಾನದ ರಾಜಕೀಯದಲ್ಲೇ ಹೊರತು ಅದಕ್ಕೆ ಮುಂಚೆಯಲ್ಲ. ಬಾಬರ್, ಅಕ್ಬರ್ ಹುಮಾಯೂನ್ ಇನ್ನಿತರರು ಪಾಕ್ಷಿಕವಾಗಿ ಗೋಹತ್ಯೆಯ ಮೇಲೆ ನಿಷೇಧ ಹೇರಿದ್ದರೂ, ಶಿವಾಜಿ ತನ್ನ ಸಂಸ್ಥಾನ ಸ್ಥಾಪನೆಯ ಉದ್ದೇಶ ಹಿಂದೂಧರ್ಮ ಮತ್ತು ಗೋವಿನ ರಕ್ಷಣೆ ಎಂದು ಘೋಷಿಸಿದ್ದ ಎಂದು ಹೇಳಲಾಗುತ್ತದೆಯಾದರೂ 1882ರಲ್ಲಿ ದಯಾನಂದ ಸರಸ್ವತಿಯವರು "ಗೋರಕ್ಷಣಾ ಸಭಾ"ವನ್ನು ಸ್ಥಾಪಿಸುವವರೆಗೆ ಗೋಹತ್ಯೆ ಮತ್ತು ಗೋರಕ್ಷಣೆ ಎಂಬುದು ಸಾಮೂಹಿಕ ರಾಜಕಾರಣದ ವಿಷಯವಾಗಿರಲಿಲ್ಲ. ಆನಂತರದಲ್ಲಿ 1947ರ ತನಕ ಹಲವು ಬಾರಿ ಗೋಹತ್ಯೆ–ಗೋರಕ್ಷಣೆಗಳು ಆಗ ವಸಾಹತು ಶಾಹಿಗಳು ಮತ್ತು ಹಿಂದೂ ಮತ್ತು ಮುಸ್ಲಿಂ ಮೂಲಭೂತವಾದಿಗಳು ಸೃಷ್ಟಿಸಿದ್ದ ಕೋಮುವಾದಿ ರಾಜಕಾರಣದ ಭಾಗವಾಗಿ ಬಳಕೆಯಾಗಿ ಸಾಕಷ್ಟು ಕೋಮುಗಲಭೆಗಳೂ ಉಂಟಾದವು.

ಸ್ವಾತಂತ್ರ್ಯಾನಂತರದಲ್ಲಿ ನಮ್ಮ ದೇಶದ ಬಹುತ್ವ ಸಂಸ್ಕೃತಿಯ ಆಶಯವನ್ನು ಧ್ಯೇಯವಾಗಿಟ್ಟುಕೊಂಡು ಸಂವಿಧಾನ ರಚನಾ ಸಭೆಯಲ್ಲಿ ಸಾಕಷ್ಟು ಚರ್ಚೆಗಳು ನಡೆದವು. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಇದ್ದಂತೆ ಸಂವಿಧಾನ ಸಭೆಯಲ್ಲೂ ಹಿಂದೂ ಮೂಲಭೂತವಾದಿಗಳ ಒತ್ತಡ ಪ್ರಬಲವಾಗಿತ್ತು. ಹೀಗಾಗಿಯೇ ಅಂಬೇಡ್ಕರ್‌ರವರ ಪ್ರಯತ್ನವನ್ನೂಮೀರಿ ಸಂವಿಧಾನದಲ್ಲಿ ಹಿಂದೂ ಕೋಮು

ವಾದಕ್ಕೆ ಕುಮ್ಮಕ್ಕು ಕೊಡುವ ಹಲವು ಅಂಶಗಳು ಉಳಿದು ಬಿಟ್ಟಿತು. ಸಂವಿಧಾನ ಸಭೆಯಲ್ಲಿ ಗೋಹತ್ಯೆಯ ನಿಷೇಧದ ಸುತ್ತಾ ಬಹಳಷ್ಟು ಚರ್ಚೆಗಳು ನಡೆದವು.

ಸಂವಿಧಾನ ರಚನಾ ಸಭೆಯಲ್ಲಿ ಗೋವುಗಳು ಮತ್ತು ಗೋಮುಖ ವ್ಯಾಘ್ರಗಳು

1948ರ ನವಂಬರ್ 24ರಂದು ಸಂವಿಧಾನ ರಚನಾ ಸಭೆಯಲ್ಲಿ ಈ ಬಗ್ಗೆ ನಡೆದ ಚರ್ಚೆಯಲ್ಲಿ ಪಂಡಿತ್‌ಠಾಕೂರ್ ದಾಸ್ ಭಾರ್ಗವ, ಸೇಠ್ ಗೋವಿಂದ್ ದಾಸ್ ಹಾಗೂ ಇನ್ನಿತರ ಕೆಲವು ಹಿಂದೂ ಮೂಲಭೂತ ವಾದಿಗಳು ಗೋಹತ್ಯಾ ನಿಷೇಧವನ್ನು ಮೂಲಭೂತ ಹಕ್ಕಾಗಿ ಸೇರಿಸಬೇಕೆಂದು ಸಹಾ ಒತ್ತಾಯಿಸಿದ್ದರು. ಇವರ ಜೊತೆಗೆ ಆಗಿನ ಯುನೈಟೆಡ್ ಪ್ರಾವಿನ್ಸ್ ಪ್ರದೇಶವನ್ನು ಪ್ರತಿನಿಧಿಸುತ್ತಿದ್ದ ಮುಸ್ಲೀಮ್ ಪ್ರತಿನಿಧಿ ಜೆಡ್. ಹೆಚ್. ಲಾರಿ ಮತ್ತು ಅಸ್ಸಾಮಿನ ಮೊಹಮ್ಮದ್ ಸೈದುಲ್ಲಾ ಎಂಬುವರೂ ಸಹ ಇದಕ್ಕೆ ಧ್ವನಿಗೂಡಿಸಿದರು. ಆದರೆ ಡಾ. ಅಂಬೇಡ್ಕರ್ ಮತ್ತು ಅಂದಿನ ಪ್ರಧಾನಿ ನೆಹರೂ ಹಾಗೂ ಇನ್ನಿತರರು ಅದರ ದೂರಗಾಮಿ ಪರಿಣಾಮದ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟರು. ಅಂಥಾ ಒಂದು ಕಾನೂನು ಜಾರಿಗೆ ಬಂದರೆ ರೈತಾಪಿಯ ಹಿತಾಸಕ್ತಿಗೂ ಧಕ್ಕೆ ಬರುವುದರಿಂದ ರೈತಾಪಿಯ ಹಿತಾಸಕ್ತಿಗೂ, ಗೋಮಾಂಸ ಆಹಾರ ಪದ್ಧತಿ ಉಳ್ಳವರ ಆಸಕ್ತಿಗೂ ಮತ್ತು ಗೋವನ್ನು ಪವಿತ್ರ ಎಂದು ಭಾವಿಸುವವರ ಭಾವನೆಗೂ ಧಕ್ಕೆ ಬರದಂತೆ 48ನೇ ಪರಿಚ್ಛೇಧವನ್ನು ಸಂವಿಧಾನದ ನಿರ್ದೇಶನಾ ತತ್ವದಡಿಯಲ್ಲಿ ಸೇರಿಸಲಾಯಿತು.

ಸಂವಿಧಾನದ ನಿರ್ದೇಶನಾ ತತ್ವದಡಿಯಲಿ ಸೇರ್ಪಡೆಗೊಂಡಿರುವ 48 ನೇ ಪರಿಚ್ಛೇಧ

"The State shall endeavour to organise agriculture and animal husbandry on modern and scientific lines and shall in particular take steps for preserving and improving the breeds of cattle and prohibit the slaughter of cow and other useful cattle, specially milch and draught cattle and their young stock."

ಎಂದಷ್ಟೇ ಹೇಳುತ್ತದೆ. ಈ 48ನೇ ಪರಿಚ್ಛೇಧದ ಪ್ರಕಾರ ದೇಶದ ಕೃಷಿಕ್ಷೇತ್ರ ಮತ್ತು ಪಶುಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಪುನರ್ ಸಂಘಟಿಸಬೇಕು ಹಾಗೂ ಪ್ರಭುತ್ವವು ಕೃಷಿಸೇವೆಯಲ್ಲಿ ಮತ್ತು ಹೈನುಗಾರಿಕೆಯಲ್ಲಿ ಬಳಸಲಾಗುವ ಜಾನುವಾರುಗಳಾದ ಹಸು, ದನ, ಕೋಣ, ಎಮ್ಮೆಯಂಥ ರಾಸುಗಳ ಮತ್ತವುಗಳ ಕರುಗಳ ಹತ್ಯೆ ತಡೆಗಟ್ಟಲು ಮತ್ತು ರಕ್ಷಿಸಲು ಕಾನೂನನ್ನು ರಚಿಸಬೇಕು. ಸ್ಪಷ್ಟವಾಗಿ ಕಾಣುವಂತೆ ಈ ಕಲಮಿನಲ್ಲಿ ಗೋಹತ್ಯಾ ನಿಷೇಧವನ್ನು ಸಾರಾಸಗಟಾಗಿ ಮಾಡಬೇಕೆಂಬ ಅಥವಾ ಗೋವು ಮಾತ್ರ ಪವಿತ್ರವೆಂಬ ದೃಷ್ಟಿಯಾಗಲೀ ಇಲ್ಲ.

ಅದೇರೀತಿ 1948ರಲ್ಲಿ ರಚಿಸಲಾದ ದಾತಾರ್ ಸಮಿತಿ ಸಂಪೂರ್ಣ ಗೋಹತ್ಯಾ ನಿಷೇಧ ಅಪೇಕ್ಷಣೀಯವಾದರೂ ಅದನ್ನು ಎರಡು ಹಂತದಲ್ಲಿ ಮಾಡಬೇಕು. ಮೊದಲ ಹಂತದಲ್ಲಿ 14 ವರ್ಷಕ್ಕೆ ಮೇಲ್ಪಟ್ಟ ಹಸುಗಳನ್ನು ಒಳಗೊಂಡಂತೆ ಇತರ ಜಾನುವಾರುಗಳ ಹತ್ಯೆಗೆ ಅವಕಾಶ ನೀಡಬೇಕು. ಆ ನಂತರ ಕ್ರಮೇಣ, ಸಾಧ್ಯವಾದರೆ ಎರಡು ವರ್ಷಗಳಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧ ಜಾರಿಗೆ ತರಬೇಕು ಎಂದು ಶಿಫಾರಸ್ಸು ಮಾಡಿತು. ಅದರಂತೆ

> **ಗೋವಿಗೆ ಪಾವಿತ್ರ್ಯದ ಮತ್ತು ಹಿಂದೂ ಸಂಸ್ಕೃತಿಯ ಸ್ಥಾನ ಸಿಕ್ಕಿದ್ದು 19ನೇ ಶತಮಾನದ ರಾಜಕೀಯದಲ್ಲೇ ಹೊರತು ಅದಕ್ಕೆ ಮುಂಚೆಯಲ್ಲ. ಬಾಬರ್, ಅಕ್ಬರ್ ಹುಮಾಯೂನ್ ಇನ್ನಿತರರು ಪಾಕ್ಷಿಕವಾಗಿ ಗೋಹತ್ಯೆಯ ಮೇಲೆ ನಿಷೇಧ ಹೇರಿದ್ದರೂ, ಶಿವಾಜಿ ತನ್ನ ಸಂಸ್ಥಾನ ಸ್ಥಾಪನೆಯ ಉದ್ದೇಶ ಹಿಂದೂ ಧರ್ಮ ಮತ್ತು ಗೋವಿನ ರಕ್ಷಣೆ ಎಂದು ಘೋಷಿಸಿದ್ದ ಎಂದು ಹೇಳಲಾಗುತ್ತದೆಯಾದರೂ 1882ರಲ್ಲಿ ದಯಾನಂದ ಸರಸ್ವತಿಯವರು "ಗೋ ರಕ್ಷಣಾ ಸಭಾ" ವನ್ನು ಸ್ಥಾಪಿಸುವವರೆಗೆ ಗೋಹತ್ಯೆ ಮತ್ತು ಗೋರಕ್ಷಣೆ ಎಂಬುದು ಸಾಮೂಹಿಕ ರಾಜಕಾರಣದ ವಿಷಯವಾಗಿರಲಿಲ್ಲ.**

ಮೊದಲ ಹಂತದ ನಿಷೇಧ ಅಂದರೆ 14 ವರ್ಷಗಳಾಗದ ಗೋವುಗಳ ಹತ್ಯೆಯನ್ನು ನಿಷೇಧಿಸುವ ಕಾನೂನು ಕರ್ನಾಟಕವನ್ನೂ ಒಳಗೊಂಡಂತೆ ಹಲವು ರಾಜ್ಯಗಳು ಜಾರಿಗೆ ತಂದವು.

ಆದರೆ 1954ರಲ್ಲಿ ಕೇಂದ್ರ ಕೃಷಿ ಇಲಾಖೆಯ ಆಯುಕ್ತ ನಂದಾರವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯು ಭಾರತದಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧ ಸಾಧ್ಯವೂ ಇಲ್ಲ. ಸಾದುವೂ ಅಲ್ಲ ಎಂದು ವರದಿ ನೀಡಿತು. ಭಾರತದಲ್ಲಿ ಹಸಿರು ಹುಲ್ಲು ಮತ್ತು ಪಶು ಆಹಾರದ ಕೊರತೆ ಇರುವುದರಿಂದ ಶೇ.40ರಷ್ಟು ಜಾನುವಾರುಗಳನ್ನು ಮಾತ್ರ ಸಾಕಲು ಸಾಧ್ಯ ಎಂದು ವರದಿ ನೀಡಿತು. ಉಳಿದ ಶೇ. 60 ರಾಸುಗಳನ್ನು ಗೊಡ್ಡು ಮಾಡಬೇಕೊ ಎಂದು ಸಲಹೆ ನೀಡಿತು. ಈ ವರದಿ ನೀಡಿದ್ದು ಮುಸ್ಲಿಮರೂ ಅಲ್ಲ. ಕೃಷಿಯ ಬಗ್ಗೆ ಜ್ಞಾನ ಇಲ್ಲದವರೂ ಅಲ್ಲ ಎಂಬುದನ್ನು ಇಲ್ಲಿ ಒತ್ತಿಹೇಳಲೇ ಬೇಕು.

"ಗೋಹತ್ಯಾ ವಿವಾದ– ಆಷಾಢಭೂತಿ ರಾಜಕಾರಣ"– ಕುವೆಂಪು

1965–66ರ ಚುನಾವಣಾ ವೇಳೆಯಲ್ಲಿ ವಿಶೇಷವಾಗಿ ಉತ್ತರ ಭಾರತದಲ್ಲಿ ಗೋಹತ್ಯಾ ನಿಷೇಧವನ್ನು ರಾಜಕಾರಣದ ಪ್ರಮುಖ ವಿಷಯ ಮಾಡಿಕೊಂಡ ಹಿಂದೂ ಮೂಲಭೂತವಾದಿಗಳು ಗೋವಿನ ಮಮತೆಯನ್ನು ಓಟು ಮಾಡಿಕೊಳ್ಳುವ ಪ್ರಯತ್ನ ನಡೆಸಿದ್ದರು. ಹಿಂದೂತ್ವವಾದಿ ರಾಜಕಾರಣಿಗಳ ಈ ನೀಚ ರಾಜಕಾರಣದ ಬಗ್ಗೆ ಆಗ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕುವೆಂಪುರವರೂ ತೀವ್ರವಾದ ವಿರೋಧವನ್ನೂ ವ್ಯಕ್ತಪಡಿಸಿದ್ದರು. 1966ರ ಡಿಸೆಂಬರ್ 10ರಂದು ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಕವಿಗೋಷ್ಠಿಯ ಅಧ್ಯಕ್ಷ ಭಾಷಣ ಮಾಡುತ್ತಾ ದೇಶದಲ್ಲಿ ಮೂಲಭೂತವಾದಿಗಳ ಎಬ್ಬಿಸಿರುವ ಗೋಹತ್ಯಾ ಹುಯಿಲಿನ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪ್ಡಿಸಿದ್ದರು. ಜೀವಂತ ದನಗಳನ್ನು ನೋಡಿಕೊಳ್ಳಲಾಗದೆ ಅದಕ್ಕೆ ಚಿತ್ರಹಿಂಸೆ ಕೊಡುವವರೇ ಗೋಹತ್ಯಾ ನಿಷೇಧದ ಬಗ್ಗೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಗೋಮಾಂಸ ಭಕ್ಷಣೆ ಮಾಡುವ ದೇಶಗಳಲ್ಲಿ ಜೀವಂತ ಗೋವನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಾರೋ ಗೋವನ್ನು ಪೂಜೆ ಮಾಡುವ ದೇಶದಲ್ಲಿ ಗೋವುಗಳನ್ನು ಅಷ್ಟೇ ಕೆಟ್ಟದಾಗಿ ನೋಡಿಕೊಳ್ಳುತ್ತಾರೆ ಎಂಬುದಕ್ಕಾಗಿ ನಮ್ಮ ಬಡಕಲು ದನಗಳೇ ಸಾಕ್ಷಿ ಎಂದು ವ್ಯಂಗ್ಯಮಾಡುತ್ತಲೇ ಗೋಹತ್ಯಾ ನಿಷೇಧದಿಂದ ಈಗಾಗಲೇ ಬಡಕಲಾಗಿರುವ ರೈತನ ಪರಿಸ್ಥಿತಿ ಏನಾಗುತ್ತದೆಂದು ರೈತನ ಕಷ್ಟವನ್ನು ಚೆನ್ನಾಗಿ ಅರಿತುಕೊಂಡಿದ್ದ ರೈತನ ಮಗ ಕುವೆಂಪು ಆತಂಕ ವ್ಯಕ್ತಪಡಿಸಿದ್ದರು.

ಕರ್ನಾಟಕದ ಗೋರಕ್ಷಣಾ ಕಾಯಿದೆ–1964

ಅದೇನೇ ಇದ್ದರೂ 1964–66ರಲ್ಲಿ ದೇಶದ ಹಲವು ಕಡೆಗಳಲ್ಲಿ ಮೊದಲ ಹಂತದ ಗೋಹತ್ಯಾ ನಿಷೇಧ ಜಾರಿಗೆಬಂದಿತು. ಕರ್ನಾಟಕದಲ್ಲೂ ಉಪಯುಕ್ತ ಗೋವುಗಳ ರಕ್ಷಣೆ ಮಾಡುವ ಶಾಸನವೊಂದು 1964ರಲ್ಲಿ ಜಾರಿಗೆ ಬಂದಿದೆ.

THE KARNATAKA PREVENTION OF COW SLAUGHTER AND CATTLE PRESERVATION ACT, 1964ರ ಪ್ರಕಾರ ಗೋಹತ್ಯೆಯನ್ನು ತಡೆಗಟ್ಟುವ ಬಗ್ಗೆ ಅಸ್ಪಷ್ಟವಾದ ಆದೇಶವಿದ್ದರೂ ಕಾಯಿದೆಯ 5ನೇ ಕಲಮು ಹೀಗೆ ಹೇಳುತ್ತದೆ:

5. Prohibition against slaughter of animals without certificate from competent authority.—(1) Notwithstanding any law, custom, or usage to the contrary, no person shall slaughter or cause to be slaughtered or offer or cause to be offered for slaughter any animal, other than a calf of she-buffalo, unless he has obtained in respect of such animal a certificate in writing from the competent authority appointed for the area that the animal is fit for slaughter.(2) A certificate under sub-section (1) shall be granted by the competent authority, after it has, for reasons to be recorded in writing, certified that,—

(a) the animal is over the age of twelve years; or

(b) the animal has become permanently incapacitated for breeding, draught or giving milk due to injury, deformity or any other cause.

(3) No certificate under sub-section (1) shall be granted if the animal is suffering from any disease which makes its meat unwholesome for human consumption.

(4) A certificate under this section shall be granted in such form and on payment of such fee as may be prescribed.

ಕಾಯಿದೆಯ ಮೇಲಿನ ಅಂಶಗಳು ಸ್ಪಷ್ಟಪಡಿಸುವಂತೆ 12 ವರ್ಷಕ್ಕೆ ಮೇಲ್ಪಟ್ಟ ಜಾನುವಾರುಗಳನ್ನು ಪಶುವೈದ್ಯರ ಅನುಮತಿಯ ಮೇರೆಗೆ ಹತ್ಯೆ ಮಾಡಬಹುದಿತ್ತು

ಈವರೆಗೆ ಕರ್ನಾಟಕದಲ್ಲಿರುವ ಕಸಾಯಿಖಾನೆಗಳೂ ಸಹ ಇದೇ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿವೆ. ಸಾಮಾನ್ಯವಾಗಿ ಸರ್ಕಾರದಿಂದ ಮಾನ್ಯತೆ ಪಡೆದ ಕಸಾಯಿಖಾನೆಗಳಲ್ಲಿ ವ್ಯವಹಾರದಲ್ಲಿರುವ ವ್ಯಾಪಾರಿಗಳ್ಯಾರೂ ಕರುಗಳನ್ನಾಗಲೀ, 12 ವರ್ಷ ವಯಸ್ಸಾಗದ ರಾಸುಗಳನ್ನಾಗಲೀ ಕೊಲ್ಲುವುದಿಲ್ಲ. ಎಲ್ಲಾ ವ್ಯವಹಾರಗಳಲ್ಲಿ ಇರುವಂತೆ ಅಲ್ಲಿಯೂ ಕೆಲವರು ಈ ನಿಯಮವನ್ನು ಉಲ್ಲಂಘಿಸುವುವರು ಇರುತ್ತಾರಾದರೂ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈ ಕಾಯಿದೆಯಲ್ಲಿ ಅವಕಾಶವಿದ್ದೇ ಇತ್ತು.

ಇಂದು ಕೇರಳ, ಪ.ಬಂಗಾಳ ಮತ್ತು ಈಶಾನ್ಯ ರಾಜ್ಯಗಳಲ್ಲಿ ಹೊರತುಪಡಿಸಿದಂತೆ ಮಿಕ್ಕಬಹುಪಾಲು ರಾಜ್ಯಗಳಲ್ಲಿ ಹೆಚ್ಚೂಕಡಿಮೆ ಇದೇ ರೀತಿಯ ಪಾಕ್ಷಿಕ ಗೋಹತ್ಯೆ ನಿಷೇಧಮಾಡುವ ಕಾನೂನುಗಳು ಜಾರಿಗೆ ಬಂದಿವೆ. ಆದರೆ ಆಗಾಗ ಸಂಪೂರ್ಣ ಗೋಹತ್ಯಾ ನಿಷೇಧ ಮಾಡಬೇಕೆಂಬ ರಾಜಕೀಯ ಪ್ರೇರಿತ ಕೂಗುಗಳು ಕೇಳುತ್ತಲೇ ಬಂದಿವೆ. ಆದರೆ 1976ರಲ್ಲಿ ರಾಷ್ಟ್ರೀಯ ಕೃಷಿ ಅಯೋಗವು ನೀಡಿದ್ದ ವರದಿಯಲ್ಲೂ ಎಮ್ಮೆ ಹಾಗೂ ಇತರ ಹಾಲು ನೀಡುವ ಜಾನುವಾರುಗಳ ಗುಣ ಮಟ್ಟವನ್ನು ಹೆಚ್ಚಿಸಬೇಕು ಮತ್ತು ಎಮ್ಮೆಗಳನ್ನು ಕೇವಲ ಹಾಲಿಗಾಗಿ ಮಾತ್ರವಲ್ಲದೆ ಉತ್ತಮ ಮಾಂಸ ಪಡೆಯುವ ದೃಷ್ಟಿಯಿಂದಲೂ ಸಾಕಾಣಿಕೆಗೆ ಉತ್ತೇಜನ ನೀಡಬೇಕೆಂದು ವರದಿನೀಡಿತ್ತು.

ಮತ್ತೆ 1979ರ ಏಪ್ರಿಲ್‌ನಲ್ಲಿ ವಿನೋಬಾ ಭಾವೆಯವರು ಸಂಪೂರ್ಣ ಗೋಹತ್ಯಾ ನಿಷೇಧಕ್ಕಾಗಿ ಆಗ್ರಹಿಸಿ ಸತ್ಯಾಗ್ರಹ ನಡೆಸಿದ್ದನ್ನು ಬಿಟ್ಟರೆ ಮತ್ತೆ ಸಂಪೂರ್ಣ ಗೋಹತ್ಯಾ ನಿಷೇಧದ ಧ್ವನಿ ಭಾರತದ ರಾಜಕಾರಣದಲ್ಲಿ ಹಿಂದೂತ್ವವಾದಿಗಳ ಕೋಮುವಾದಿ ರಾಜಕಾರಣ ಪ್ರಬಲವಾಗುವವರೆಗೆ ಕೇಳಿಬಂದಿರಲಿಲ್ಲ.

ಬಡಕಲು ರೈತ ಬಡಕಲು ಹಸುವನ್ನು ಸಾಕಲಾರ!

ಇದಲ್ಲದೆ ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ಹಿಡಿದು 11ನೇ ಪಂಚವಾರ್ಷಿಕ ಯೋಜನೆಯವರೆಗೆ ಎಲ್ಲಾ ಯೋಜನೆಗಳು ಜೀವಂತವಿರುವ ಎಲ್ಲಾ ಜಾನುವಾರುಗಳನ್ನು ಸಾಕುವಷ್ಟು ಮೇವು ಹಾಗೂ ಪಶು ಆಹಾರವಿಲ್ಲವೆಂದು ಸ್ಪಷ್ಟವಾಗಿಯೇ ಹೇಳುತ್ತಲೇ ಬಂದಿವೆ. ಮೊದಲನೇ ಪಂಚವಾರ್ಷಿಕ ಯೋಜನೆಯ ವೇಳೆಗೆ 1.14 ಕೋಟಿಯಷ್ಟು ಜಾನುವಾರುಗಳಿದ್ದು ದೇಶದಲ್ಲಿ ಶೇ.58 ರಷ್ಟು ಜಾನುವಾರುಗಳಿಗೆ ಆಗುವಷ್ಟು ಮಾತ್ರ ಮೇವು ಲಭ್ಯವಿದೆಯೆಂದು ವರದಿ ಮಾಡಿತ್ತು. ಹೀಗೆ ಮೊದಲನೇ ಯೋಜನಾ ಅಯೋಗ ಯಾವ ಕಾರಣಕ್ಕೂ ಸಂಪೂರ್ಣ ಜಾನುವಾರು ಹತ್ಯಾ ನಿಷೇಧ ತರವಲ್ಲವೆಂದು ಸ್ಪಷ್ಟವಾಗಿ ಅಭಿಪ್ರಾಯ ನೀಡಿತ್ತು.

ಇಂದು ಗೋಹತ್ಯೆಯಿಂದ ಜಾನುವಾರುಗಳ ಸಂಖ್ಯೆ ಇಳಿಯುತ್ತಿದೆಯೆಂದು ಸಂಘಪರಿವಾರ ಬೊಬ್ಬೆ ಹಾಕುತ್ತಿದೆಯಾದರೂ 1977ರಲ್ಲಿ 17 ಕೋಟಿಯಷ್ಟಿದ್ದ ಜಾನುವಾರುಗಳ ಸಂಖ್ಯೆ ಈಗ 20 ಕೋಟಿಯಷ್ಟಾಗಿದೆಯೆಂದು ಸರ್ಕಾರಿ ಅಂಕಿಅಂಶಗಳೇ ಹೇಳುತ್ತಿವೆ. ಆದರೆ ಪಶು ಸಂರಕ್ಷಣೆಗೆ ನೀಡುತ್ತಿದ್ದ ಹಣ ಮಾತ್ರ 9ನೇ ಯೋಜನೆಯಲ್ಲಿ ಯೋಜನಾ ವೆಚ್ಚದ ಶೇ.1.1ರಷ್ಟಿದ್ದದ್ದು 10ನೇ ಅಯೋಗದಲ್ಲಿ ಶೇ.0.6ಕ್ಕೆ ಇಳಿದಿದೆ. ಹೀಗಾಗಿ ಪಶು ಸಾಕಣೆ ಎಂಬುದು ರೈತನ ಪಾಲಿಗೆ ಮತ್ತೊಂದು ನೇಣು ಕುಣಿಕೆಯೇ ಆಗುತ್ತಿದೆ.

ಆದ್ದರಿಂದಲೇ ಈ ಆಶಯವನ್ನು ನಿರ್ದೇಶನಾ ತತ್ವಗಳ ಪಟ್ಟಿಯಲ್ಲಿ ಸೇರಿಸಲಾಯಿತು. 1950ರಿಂದೀಚೆಗೆ ದೇಶದ ಹಲವಾರು ರಾಜ್ಯಗಳಲ್ಲಿ ಈ ಆಶಯಕ್ಕೆ ಅನುಗುಣವಾಗಿ ಉಪಯುಕ್ತ ಗೋವು-ಜಾನುವಾರುಗಳನ್ನು ಮತ್ತು ಅವುಗಳ ಕರುಗಳನ್ನು ರಕ್ಷಿಸುವ ಕಾನೂನನ್ನು ಜಾರಿಗೆ ತಂದಿವೆ. ದೇಶದಲ್ಲಿ ಎಲ್ಲೂ ಸಂಪೂರ್ಣವಾಗಿ ಗೋಹತ್ಯಾ ನಿಷೇಧದ ಕಾನೂನು ಜಾರಿಗೆ ಬಂದಿಲ್ಲ. ಏಕೆಂದರೆ ಅಂಥಾ ಕಾನೂನು ಗೋಮಾಂಸ ತಿನ್ನುವವರಷ್ಟೇ ಈಗಾಗಲೇ ಕೃಷಿ ಬಿಕ್ಕಟ್ಟಿನಿಂದ ಕಂಗೆಟ್ಟಿರುವ ರೈತರನ್ನು ಇನ್ನಷ್ಟು ಸಂಕಷ್ಟಕ್ಕೆ ಈಡು ಮಾಡುತ್ತದೆ. ಅಲ್ಲದೆ ಸರ್ಕಾರ ರೈತನಿಗೆ ನೀಡುತ್ತಿದ್ದ ಎಲ್ಲಾ ಸಹಾಯ-ಸಹಕಾರಗಳನ್ನು ಹಿಂತೆಗೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅನುಪಯುಕ್ತ ಜಾನುವಾರುಗಳ ಕಡ್ಡಾಯ ರಕ್ಷಣೆಯೂ ರೈತನನ್ನು ಇನ್ನಷ್ಟು ಆತ್ಮಹತ್ಯೆ ಕಡೆಗೆ ದೂಡುವ ಕ್ರಮವೇ ಆಗಿಬಿಡುತ್ತದೆ.

ಹಿಂದೂತ್ವ ರಾಜಕಾರಣಕ್ಕೆ ಗೋಬಲಿ ಮಾಡುತ್ತಿರುವ "ಗೋಘ್ನ"ರು!

ಆದರೆ ಭಾರತದ ರಾಜಕಾರಣದಲ್ಲಿ 80ರ ದಶಕದಿಂದ ಹಿಂದೂತ್ವವಾದಿಗಳ ಅಬ್ಬರ ಹೆಚ್ಚಾಗುತ್ತಿದ್ದಂತೆ ಈ ದೇಶದ ಸೆಕ್ಯುಲಾರ್ ಹಂದರಕ್ಕೆ ದೊಡ್ಡ ಪೆಟ್ಟುಬೀಳುತ್ತಾ ಬಂದಿದೆ. ಅಲ್ಪಸಂಖ್ಯಾತ ದ್ವೇಷವನ್ನೇ ತಮ್ಮ ರಾಜಕೀಯ ಪ್ರಚಾರದ ತಿರುಳನ್ನಾಗಿ ಮಾಡಿಕೊಂಡಿರುವ ಈ ಪ್ರತಿಗಾಮಿ ಶಕ್ತಿಗಳು ತಮ್ಮ ಪ್ರಚಾರಕ್ಕೆ ತಕ್ಕಂತೆ ಈ ದೇಶದ ಇತಿಹಾಸವನ್ನು, ಜನತೆಯ ನಂಬಿಕೆ, ವಿಶ್ವಾಸ ಮತ್ತು ಪುರಾಣಗಳನ್ನು ವಿಕೃತವಾಗಿ ತಿರುಚುತ್ತಾ ಬಂದಿವೆ. ಇದೆಲ್ಲದರ ಒಟ್ಟುಮೊತ್ತವಾಗಿ ಹಿಂದೂ ಬಹುಸಂಖ್ಯಾತರಲ್ಲಿ ಅಲ್ಪಸಂಖ್ಯಾತರ ಧರ್ಮ, ಸಂಸ್ಕೃತಿ, ಮತ್ತು ಆಹಾರ ಪದ್ಧತಿಗಳ ಬಗ್ಗೆ ತಿರಸ್ಕಾರ ಮತ್ತು ದ್ವೇಷವನ್ನು ಹುಟ್ಟುಹಾಕುವ ಸತತ ಪ್ರಯತ್ನವನ್ನು ಮಾಡುತ್ತಿವೆ. ಅದರ ಭಾಗವಾಗಿಯೇ ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆಯ ನಿಷೇಧದ ಬಗ್ಗೆಯೂ ಸಮಾಜದಲ್ಲಿ ದೊಡ್ಡ ಮಟ್ಟದ ಅಭಿಯಾನವನ್ನೇ ಪ್ರಾರಂಭಿಸಿವೆ. ಅದಕ್ಕೆ ಪೂರಕವಾಗಿ ಇತಿಹಾಸವನ್ನು, ಪುರಾಣವನ್ನು ಹಾಗೂ ಈ ದೇಶದ ಸಂವಿಧಾನದ ಆಶಯಗಳನ್ನೇ ತಪ್ಪಾಗಿ ವ್ಯಾಖ್ಯಾನ ಮಾಡುತ್ತಿವೆ

ಕರ್ನಾಟಕದಲ್ಲೂ ಕಳೆದ ಒಂದೂವರೆ ದಶಕದಿಂದ ಜನರನ್ನು ಕೋಮುಗಳ ಆಧಾರದಲ್ಲಿ ಒಡೆದಾಳುವ ಮತ್ತು ಇಡೀ ಸಮಾಜವನ್ನು ಮತ್ತೆ ಬ್ರಾಹ್ಮಣ್ಯದ ಅಧೀನಕ್ಕೆ ತಂದುಕೊಳ್ಳುವ ಹಿಂದೂತ್ವವಾದಿಗಳ ಪ್ರಯತ್ನ ತೀವ್ರವಾಗಿ ನಡೆಯುತ್ತಿದೆ. ಅದಕ್ಕೆ ಕರಾವಳಿ ಮತ್ತು ಮಲೆನಾಡು ಮೊದಲ ಬಲಿಯಾಗಿದ್ದರೂ ಇಡೀ ರಾಜ್ಯದಲ್ಲೆ ನಮ್ಮ ಭವ್ಯ ಭಾವೈಕ್ಯ ಪರಂಪರೆಗೆ ಧಕ್ಕೆ ತರುವ ದೊಡ್ಡ ಪ್ರಯತ್ನ ನಡೆಸಿದ್ದಾರೆ. ರಕ್ತದ ಹೊಳೆ ಹರಿಸುತ್ತಿದ್ದಾರೆ. ಅದರ ಬೆಳೆಯಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಆಹಾರ ಸಂಸ್ಕೃತಿಯ ಆಧಾರದ ಮೇಲೂ ದ್ವೇಷ ರಾಜಕಾರಣ ಮಾಡುತ್ತಾ ಗೋಹತ್ಯೆಯನ್ನಿರಲಿ ಗೋಮಾಂಸ ಭಕ್ಷಣೆಯನ್ನೇ ದೇಶದ್ರೋಹದಷ್ಟು ಅಪರಾಧ ಎಂದು ಬಣ್ಣಿಸುತ್ತಿದೆ. ಅದರ ಮೂಲಕ ಅಲ್ಪಸಂಖ್ಯಾತರ ಮೇಲೆ ಮಾತ್ರವಲ್ಲ ದಲಿತ ಮತ್ತು ಶೂದ್ರರ ಆಹಾರ ಸಂಸ್ಕೃತಿಯ ಮೇಲೂ ಸಾಂಸ್ಕೃತಿಕ ದಾಳಿಯನ್ನು ನಡೆಸುತ್ತಿದೆ. ಅದಕ್ಕೆ ಸಂಘಪರಿವಾರ ಆಯ್ದುಕೊಂಡಿರುವ ವಿಷಯ ಗೋ ಸಾಗಾಟ, ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆ. ಅದರಲ್ಲೂ ಕಳೆದ ಐದಾರು ವರ್ಷಗಳಿಂದ ಕರಾವಳಿ ಕರ್ನಾಟಕದಲ್ಲಿ ಸಂಘಪರಿವಾರದ ಭಜರಂಗಿಗಳು ಈ ವಿಷಯವನ್ನು ಮುಂದುಮಾಡಿಕೊಂಡು ಕಾನೂನನ್ನು ಕೈಗೆತೆಗೆದುಕೊಳ್ಳುತ್ತಿರುವುದಲ್ಲದೆ ಅರಾಜಕತೆ, ಹಿಂಸಾಚಾರ ಸೃಷ್ಟಿಸುತ್ತಿದ್ದಾರೆ.

ಇಂದು ಗೋಹತ್ಯೆಯಿಂದ ಜಾನುವಾರುಗಳ ಸಂಖ್ಯೆ ಇಳಿಯುತ್ತಿದೆಯೆಂದು ಸಂಘ ಪರಿವಾರ ಬೊಬ್ಬೆ ಹಾಕುತ್ತಿದೆಯಾದರೂ 1977ರಲ್ಲಿ 17 ಕೋಟಿಯಷ್ಟಿದ್ದ ಜಾನುವಾರುಗಳ ಸಂಖ್ಯೆ ಈಗ 20 ಕೋಟಿಯಷ್ಟಾಗಿದೆಯೆಂದು ಸರ್ಕಾರಿ ಅಂಕಿಅಂಶಗಳೇ ಹೇಳುತ್ತಿವೆ. ಆದರೆ ಪಶು ಸಂರಕ್ಷಣೆಗೆ ನೀಡುತ್ತಿದ್ದ ಹಣ ಮಾತ್ರ 9ನೇ ಯೋಜನೆಯಲ್ಲಿ ಯೋಜನಾ ವೆಚ್ಚದ ಶೇ.1.1ರಷ್ಟಿದ್ದದ್ದು 10ನೇ ಅಯೋಗದಲ್ಲಿ ಶೇ.0.6ಕ್ಕೆ ಇಳಿದಿದೆ.

ಗೋಹತ್ಯೆ ಮಾಡಲು ಗೋ ಸಾಗಾಟ ಮಾಡುತ್ತಿದ್ದಾರೆ ಎನ್ನುವ ನೆಪದಲ್ಲಿ ಮುಸ್ಲಿಮರ ವಾಹನಗಳನ್ನು ಜಫ್ತಿ ಮಾಡುವುದು, ಅವರ ಮೇಲೆ ಮಾರಣಾಂತಿಕ ಹಲ್ಲೆ ಮಾಡುವುದು, ಭೀಕರವಾಗಿ ಕೊಂದುಹಾಕುವುದು, ದನದ ಮಾಂಸ ಮಾರಾಟ ಮಾಡುವ ಹೋಟೆಲ್‌ಗಳ ಮೇಲೆ ದಾಳಿ ಮಾಡುವುದು, ಮುಸ್ಲಿಂ ಮಾರಾಟಗಾರರನ್ನು ಬೆತ್ತಲೆ ಮೆರವಣಿಗೆ ಮಾಡುವುದು ಇತ್ಯಾದಿಗಳನ್ನು ಹೆಚ್ಚು ಕಡಿಮೆ ದಿನನಿತ್ಯ ಮಾಡುತ್ತಾ ಬಂದಿದ್ದಾರೆ. ಬಿಜೆಪಿ ಸರ್ಕಾರ ಬಂದಮೇಲೆ ಅವರ ಈ ಎಲ್ಲಾ ಕಾನೂನು ಬಾಹಿರ ಕೃತ್ಯಗಳಿಗೆ ನೇರ ಕುಮ್ಮಕ್ಕು ಸಿಕ್ಕಿರುವುದರಿಂದ ಈ ಕಾನೂನು ಬಾಹಿರ ಶಕ್ತಿಗಳ ಆಟಾ ಟೋಪ ಇನ್ನಷ್ಟು ಹೆಚ್ಚಾಗಿದೆ. ಇವೆಲ್ಲಕ್ಕೂ ಪ್ರತ್ಯಕ್ಷವಾಗಿ ಕುಮ್ಮಕ್ಕು ಕೊಡುತ್ತಿದ್ದ ಬಿಜೆಪಿ ಸರ್ಕಾರ, ಸಂಘಪರಿವಾರದ ಅಂಗಸಂಸ್ಥೆಗಳು ನಡೆಸುತ್ತಿರುವ ಕಾನೂನುಬಾಹಿರ ಆಕ್ರಮಣಗಳಿಗೆ ಶಾಸನಾತ್ಮಕ ಮಾನ್ಯತೆ ನೀಡಲೆಂದೇ ಬರಲಿರುವ ಅಧಿವೇಶನದಲ್ಲಿ 1964ರ ಕಾಯಿದೆಗೆ ತಿದ್ದುಪಡಿಯನ್ನು ತರುತ್ತಿದೆ.

ಗೋಹತ್ಯೆ ನಿಷೇಧ-ನರಹತ್ಯೆಗೆ ಪರವಾನಗಿ

The Karnataka Prevention Of Cow Slaughter And Cattle Preservation (Amendment) Bill, 2009 ಎಂಬ ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿರುವ ತಿದ್ದುಪಡಿಗಳು ದನದ ಮಾಂಸದ ವ್ಯಾಪಾರದಲ್ಲಿ ತೊಡಗಿಕೊಂಡಿರುವ ಮುಸ್ಲಿಮರ ಮೇಲೆ ದಾಳಿ ಮಾಡುವುದನ್ನು ಪ್ರಧಾನ ಗುರಿಯಾಗಿಟ್ಟುಕೊಂಡಿದ್ದರೂ ಅದು ಗೊಡ್ಡು ದನಗಳನ್ನು ಅನಿವಾರ್ಯವಾಗಿ ಮಾರಾಟ ಮಾಡುವ ರೈತನನ್ನೂ, ದನದ ಮಾಂಸ ಬಳಸುವ ಶೂದ್ರ, ದಲಿತ ಸಮುದಾಯದ ಮೇಲೂ ದಾಳಿ ಮಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಒದಗಿಸುತ್ತದೆ. ಪ್ರಸ್ತಾಪಿಸತಿದ್ದುಪಡಿಯ 2ನೇ ಕಲಮಿನ 3ನೇ ಅಂಶದಲ್ಲಿ :

"iii) after sub section (2)the following sub section shall be inserted,namely:-

"(3) the competent authority or any person authorized to enter and inspect shall have power to seize any animal including vessel or vehicle in which such animal is contained in re-

spect of which he has reason to believe from prasonal knowledge or from information given by any person and taken down by him in writing that offenceunder this Act or Rule is committed or jhas been committed and take or cause to be taken with steps as may be considered by him expedient or necessary to prevent the offence." ಎಂಬ ಅಂಶವನ್ನು ಸೇರ್ಪಡೆ ಮಾಡಬೇಕೆಂಬ ಪ್ರಸ್ತಾಪವಿದೆ. ಅಂದರೆ ಸರ್ಕಾರ ಯಾವುದೇ ವ್ಯಕ್ತಿಯನ್ನು ಈ ಕಾನೂನನ್ನು ಜಾರಿಗೆ ತರಲು "ಅಧಿಕೃತ ವ್ಯಕ್ತಿ"ಯನ್ನಾಗಿ ನೇಮಿಸಬಹುದು. ಮತ್ತು ಆ ವ್ಯಕ್ತಿಗೆ ಎಲ್ಲಿಯಾದರೂ ಈ ಕಾನೂನು ಉಲ್ಲಂಘನೆಯಾಗುತ್ತಿದೆ ಎಂಬ ಮಾಹಿತಿಯು "ತನಗೆ ಯಾರಾದರೂ ದೂರು ಕೊಡುವ ಮೂಲಕ ಅಥವಾ ತನ್ನ ಸ್ವಂತ ತಿಳವಳಿಕೆಗೆ ಬಂದರೆ", ಅಂಥ "ಜಾಗವನ್ನು ತಪಾಸಣೆ ಮಾಡುವ", "ಆ ಜಾನುವಾರುಗಳನ್ನು ಮತ್ತು ಸಾಗಾಟಕ್ಕೆ ಬಳಸುತ್ತಿದ್ದ ವಾಹನವನ್ನು ಜಪ್ತಿ ಮಾಡುವ" ಅಧಿಕಾರವನ್ನು ನೀಡುತ್ತಿದೆ. ಇದಲ್ಲದೆ ಈ ತಿದ್ದುಪಡಿಯ 3ನೇ ಪ್ರಸ್ತಾಪವು 100 ನಾಮಾಂಕಿತದಲ್ಲಿ ಸೇರ್ಪಡೆ ಮಾಡಬಯಸುವ ತಿದ್ದುಪಡಿಯು "ಜಪ್ತಿಯಾದ ವಾಹನವನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಹರಾಜು ಮಾಡುವ ಅಧಿಕಾರವನ್ನು" ಜಿಲ್ಲಾಧಿಕಾರಿಗೆ ನೀಡುತ್ತದೆ. ಇದರ ವಿರುದ್ಧ ಜಿಲ್ಲಾ ನ್ಯಾಯಾಲಯದಾಚೆಗೆ ದಾವೆಯನ್ನೂ ಹೂಡುವ ಅವಕಾಶವನ್ನು ತಿದ್ದುಪಡಿಯ 10C ಪ್ರಸ್ತಾಪವು ನಿರಾಕರಿಸುತ್ತದೆ.

ಇವಿಷ್ಟೂ ಸರ್ಕಾರ ತನ್ನ ಮುದ್ರಿತ ತಿದ್ದುಪಡಿಯಲ್ಲಿ ಈವರೆಗೆ ಸೂಚಿಸಿರುವ ತಿದ್ದುಪಡಿಗಳು. ಆದರೆ ಸರ್ಕಾರದ ಅಧಿಕಾರದ ಸ್ಥಾನದಲ್ಲಿರುವ ಮಂತ್ರಿಗಳು ತಾವು ತರಲಿರುವ ತಿದ್ದುಪಡಿಯು ಗೋಹತ್ಯೆಯನ್ನು ಮಾತ್ರವಲ್ಲ ಗೋ ಮಾಂಸ ಭಕ್ಷಣೆಯನ್ನೇ ಅಪರಾಧವನ್ನಾಗಿಸುತ್ತದೆ ಎಂದು ಘೋಷಿಸಿದ್ದಾರೆ. ಭಜರಂಗದಳವನ್ನು ಅಧಿಕೃತ "ಗೋ ಸೇವಾ ಸಮಿತಿ"ಗಳನ್ನಾಗಿ ರಚಿಸಿ ಅಧಿಕಾರ ಕೊಡುವ ಮಾತಸ)ನ್ನಾಡುತ್ತಿದ್ದಾರೆ. ಅಷ್ಟು ಮಾತ್ರವಲ್ಲದೆ ಪತ್ರಿಕಾ ವರದಿಗಳು ಹೇಳುವಂತೆ ಇಂಥಾ ನಿಯಮಗಳ ಉಲ್ಲಂಘನೆ ಮಾಡುವ ಮೂಲಕ ಘಟಿಸಲಾಗುವ ಅಪರಾಧಕ್ಕೆ 25,000 ರೂ ಇಂದ 50,000 ರೂವರೆಗೆ ದಂಡ ಮತ್ತು 3–7ವರ್ಷಗಳವರೆಗೆ ಜೈಲುಶಿಕ್ಷೆಯನ್ನು ವಿಧಿಸುವ ಪ್ರಸ್ತಾಪ ವಿದೆ(ಡೆಕ್ಕನ್ ಹೆರಾಲ್ಡ್, ಡಿಸೆಂಬರ್ 13, 2009). ಅಂದರೆ ಗೋಹತ್ಯೆ ಮಾತ್ರವಲ್ಲ ಗೋ ಸಾಗಾಟ ಮತ್ತು ಗೋಮಾಂಸ ಭಕ್ಷಣೆಯೂ ಸಹ ದೇಶದ್ರೋಹದಂಥಮ್ ಭಯೋತ್ಪಾದನೆಯಂಥಾ ಅಪರಾಧವಾಗಿಬಿಡುತ್ತದೆ. ಹಾಗಾದಲ್ಲಿ ಅದು ಇಡೀ ಸಮಾಜದ ಮೇಲೆ ಸಂಘಪರಿವಾರಕ್ಕೆ ಅಮಿತವಾದ ಅಧಿಕಾರವನ್ನು ಕೊಟ್ಟು ಕಂಡರಿಯದ ಅರಾಜಕತೆಯನ್ನು ಉಂಟುಮಾಡುತ್ತದೆ. ಹೀಗಾಗಿ ಇದು ಕೇವಲ ಮುಸ್ಲಿಮರ ವಿರುದ್ಧದ ಕಾಯಿದೆ ಮಾತ್ರವಲ್ಲ. ಗೋ ಮಾಂಸ ಭಕ್ಷಣೆಯನು ಮಾಡುವ ದಲಿತರ, ಶೂದ್ರರ ಎಲ್ಲಾ ಅಬ್ರಾಹ್ಮಣರನ್ನು ಅಪರಾಧಿಗಳನ್ನಾಗಿ ಮಾಡುವ ಕಾಯಿದೆಯಾಗಿದೆ.

ಹೀಗಾಗಿ ಈ ಕಾಯಿದೆಗೆ ಸರ್ಕಾರ ತರಬಯಸಿರುವ ತಿದ್ದುಪಡಿಯ ಉದ್ದೇಶ ಮತ್ತು ಅದರಲ್ಲಿ ಅಡಕವಾಗಿರುವ ತಿದ್ದುಪಡೆಗಳು ಅಪ್ರಜಾತಾಂತ್ರಿಕವಾಗಿವೆ. ಸಮಾಜದಲ್ಲಿ ಇನ್ನಷ್ಟು ಅರಾಜಕತೆ ಮತ್ತು ದ್ವೇಷ ರಾಜಕಾರಣವನ್ನು ಉತ್ತೇಜಿಸುವ ಹೊರತಾಗಿ ಇನ್ನಾವುದೇ ಘನವಾದ ಉದ್ದೇಶ ಈ ತಿದ್ದುಪಡಿಗಳಿಗಿಲ್ಲ.

ಗೋವನ್ನು ಪವಿತ್ರ ಎಂದು ಭಾವಿಸುವ ಸಮುದಾಯದ ಭಾವನೆಗಳೂ ಸಹ ಗೌರವಾರ್ಹವೇ. ಆದರೆ ಈ ತಿದ್ದುಪಡಿಗಳು ಅವರ ಭಾವನೆಗಳ ದುರುಪಯೋಗ ಮಾಡಿಕೊಂಡು ದಲಿತ, ಶೂದ್ರ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಭೌತಿಕ ಮತ್ತು ಸಾಂಸ್ಕೃತಿಕ ಹಲ್ಲೆಯನ್ನು ಮಾಡುವ ಉದ್ದೇಶಹೊಂದಿದೆ. ಆದ್ದರಿಂದ ಗೋಮಾಂಸ ಭಕ್ಷಣೆ ಮಾಡುವವರೂ, ಮಾಡದವರೂ, ಗೋವನ್ನು ಪವಿತ್ರ ಎಂದು ಭಾವಿಸುವವರು ಮತ್ತು ಗೋವಿನಂತೆ ಮತ್ತು ಮನುಷ್ಯ ಪ್ರಾಣದ ಮತ್ತು ಆಹಾರದ ಸಂಸ್ಕೃತಿಗಳ ಘನತೆಯೂ ಪವಿತ್ರ ಎಂದು ಭಾವಿಸುವವರೆಲ್ಲರೂ ಈ ತಿದ್ದುಪಡಿಗಳನ್ನು ವಿರೋಧಿಸಲೇ ಬೇಕಾಗಿದೆ. ಏಕೆಂದರೆ ಇದು ಗೋಹತ್ಯೆಯನ್ನು ನಿಷೇಧಿಸಿ ನರಹತ್ಯೆಯನ್ನು ಪ್ರಚೋದಿಸುವ ಫ್ಯಾಸಿಸ್ಟ್ ಕಾಯಿದೆಯಾಗಿದೆ. □

ಒತ್ತಡದ ಹದ್ದುಗಳೇ...





ನೆತ್ತರ
ಇನ್ನೆಷ್ಟು ಹೀರೀತ ಇಷ್ಟುದ್ದ ನಳಿಕೆ
ಎಂದುಕೊಂಡಿತ್ತೇನೋ
ಕೆರಿಬಿಯನ ಸಾಗರ
ಗರಬಡಿದ ಮೂಕಸಾಕ್ಷಿ!

ಇಂಕಾ ಮಾಯಾ ಎಲ್ಲ ಮಾಯವಾದಮೇಲೆ
ಇತಿಹಾಸ ನಮಗೆ ಮರೆವ ಪಾಠ?
ಕತ್ತಲೆ
ಖಂಡ ಖಂಡ ಬಸಿದು ಬೆವರು ಹೀರಿ
ಹಿಪ್ಪೆ ಬೆನ್ನು ಮೂಳೆ
ನಿಮ್ಮದೇ ಹಿಕ್ಕೆ ಬಿಕ್ಕಿದವರ ಮೇಲೆ
ಅರೆಬೆತ್ತಲ ಬದುಕು ಅವರವರ ಕರ್ಮ?
ದಾಹಕ್ಕೆ
ಅದೃಷ್ಟ ಕೊಳವೆಗಳ ಮೂಲಕ ಹೀರುವ
ತಂತ್ರಜ್ಞಾನದ ನಿಮಗೆ ಉಪಾಯದಲ್ಲಿ
ಪಿಪಾಯಿಗಟ್ಟಲೆ ತೈಲ

ಇದೇ ಕೊಲ್ಲಿ!
ಇತ್ತ
ನಿಮ್ಮ ರೆಕ್ಕೆಗಾಳಿ
ಅಣು ಅಣುವೋ ವಿಷಕಣಸವೋ
ನಮಗೆ ಯೋಗ್ಯ
ಒತ್ತಡದ ಒಪ್ಪಿಗೆ?
ಅಣೆಗೊಳಿಸುವೆವಿದೋ ನಿಮಗೆ
ಸಾವಯವ ಭೋಜನ
ಸಾಯುವ ಮುನ್ನ
ತಿಂದು ತೇಗಲು
ಇದ್ದಾರೆ ಇನ್ನೂ
ನಿಮ್ಮ ಕಾಲಿಗೆರಗುವ
ಪರಾಕು ಮಂದಿ!

○ ಕೆ.ಶ್ರೀನಿವಾಸ ಮೂರ್ತಿ

ಛತ್ತೀಸ್‌ಗಢದ ಆದಿವಾಸಿಗಳತ್ತ...

ಮ. ಶ್ರೀ. ಮುರಳಿ ಕೃಷ್ಣ

ವಸಾಹತುಶಾಹಿ ಕಾಲದಿಂದಲೂ ನಮ್ಮ ರಾಷ್ಟ್ರದ ಅರಣ್ಯಗಳ ಮೇಲಿನ ಧಾಳಿ ಅವ್ಯಾಹತವಾಗಿ ಜರಗುತ್ತ ಬಂದಿದೆ. ಸುಮಾರು ಇನ್ನೂರು ವರ್ಷಗಳ ತಮ್ಮ ಆಳ್ವಿಕೆಯಲ್ಲಿ, ಬ್ರಿಟೀಷರು ತಮಗಾಗಿ ತಮ್ಮ ದೇಶದ ಅಭ್ಯುದಯಕ್ಕಾಗಿ ನಮ್ಮ ವನ್ಯ ಪ್ರದೇಶಗಳಲ್ಲಿನ ನೈಸರ್ಗಿಕ ಭಂಡಾರವನ್ನು ಲೂಟಿ ಮಾಡಿದರು. ಸ್ವಾತಂತ್ರ್ಯ ಪಡೆದ ನಂತರ, ಈ ಪ್ರಕ್ರಿಯೆ 'ಅಭಿವೃದ್ಧಿ'ಯ ಹೆಸರಿನಲ್ಲಿ ಮುಂದುವರೆಯಿತು. ಒಂದೆಡೆ, ಪಂಚ ವಾರ್ಷಿಕ ಯೋಜನೆಯಡಿ, ಬೃಹತ್ ಕೈಗಾರಿಕೆಗಳು ಸ್ಥಾಪನೆಗೊಂಡವು. ಇನ್ನೊಂದೆಡೆ, ಕಾಡು ಪ್ರದೇಶಗಳು ಬರಿದಾಗ ತೊಡಗಿದವು. ನಿಸರ್ಗ ನಾಶದ ಜೊತೆಗೆ, ಅರಣ್ಯಗಳ ಮೂಲ ನಿವಾಸಿಗಳಾದ ಆದಿವಾಸಿಗಳ ಬಾಳಿನ ಗೋಳಿನ ಅಧ್ಯಾಯ ಪ್ರಾರಂಭವಾಯಿತು. ಇದು ಭಾರತಕ್ಕೆ ಸೀಮಿತವಾದ ಒಂದು ಬೆಳವಣಿಗೆಯಾಗಿರಲಿಲ್ಲ. ಎಲ್ಲೆಲ್ಲಿ ವಸಾಹತುಶಾಹಿ ಶಕ್ತಿಗಳು ಲಗ್ಗೆ ಹಾಕಿದವೊ, ಅಲ್ಲೆಲ್ಲಾ ಈ ಕತೆ ಬೇರೆ ಬೇರೆ ರೂಪಗಳಲ್ಲಿ ಪ್ರಕಟವಾಯಿತು.

1990ರ ನಂತರದ ಜಾಗತೀಕರಣ-ನವ-ಉದಾರವಾದದ ಅವಧಿಯಲ್ಲಿ ಈ ಆಕ್ರಮಣ-ಲೂಟಿಗಳಿಗೆ ಹೊಸ ಭಾಷ್ಯವನ್ನು ಬರೆಯಲಾಯಿತು. 'ಇಂದಿಗಾಗಿ ಎಲ್ಲವು' ಎಂಬ ಅಘೋಷಿತ ನೀತಿ ಎಲ್ಲೆಡೆ ವಿಜೃಂಭಿಸಿತು. ದೇಶಗಳು ತಮ್ಮ ದ್ವಾರಗಳನ್ನು ತೆರೆದಿಟ್ಟವು. ಕಾರ್ಪೊರೇಟ್ ಶಕ್ತಿ ವಿಶ್ವರೂಪವನ್ನು ಪಡೆಯಿತು. ವಾಣಿಜ್ಯ-ವ್ಯಾಪಾರ-ಲಾಭ ಇವು ಮೂಲ ಮಂತ್ರಗಳಾದವು. ನಮ್ಮ ರಾಷ್ಟ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ದೊಡ್ಡ ರೀತಿಯಲ್ಲಿ ಪ್ರವೇಶ ಮಾಡಿದವು. ಇತರ ಕ್ಷೇತ್ರಗಳ ಜೊತೆ, ಅವು ನಮ್ಮ ಅರಣ್ಯಗಳು ಮತ್ತು ಅವುಗಳಲ್ಲಿರುವ ಅನನ್ಯ ನೈಸರ್ಗಿಕ ಸಂಪನ್ಮೂಲಗಳು, ಖನಿಜಗಳು ಮತ್ತಿತರ ಪದಾರ್ಥಗಳತ್ತ ಗಮನ ಹರಿಸಿದವು. ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಬೃಹತ್ ಯೋಜನೆಗಳಿಗೆ ಅದರಲ್ಲೂ ಮುಖ್ಯವಾಗಿ ಭಾರಿ ನೀರಾವರಿ ಯೋಜನೆಗಳಿಗೆ ಹೆಚ್ಚಾಗಿ ಬಲಿಯಾದವರಲ್ಲಿ ಆದಿವಾಸಿಗಳು ಪ್ರಮುಖರು. ತಮ್ಮ ನೆಲೆಗಳನ್ನು ಕಳೆದುಕೊಂಡ ಅವರ ಜೀವನ ಮೂರಾಬಟ್ಟೆಯಾಯಿತು. ಅವರ ಪುನರ್ವಸತಿ ಸಮರ್ಪಕವಾಗಿ ಆಗಲಿಲ್ಲ. ಅವರು ತಾವು ಹುಟ್ಟಿದ ನಾಡಿನಲ್ಲೇ ನಿರಾಶ್ರಿತರಾಗಿ, ನಿರ್ಗತಿಕರಾದರು.

ಮೇಲೆ ತಿಳಿಸಿದಂತೆ, ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿನ ಖನಿಜಗಳ ಮೇಲೆ ದೇಶೀ ಕಾರ್ಪೊರೇಟ್ ಕಂಪನಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ದೃಷ್ಟಿ ಹರಿಸಿವೆ. ಸರ್ಕಾರಗಳು 'ನಾ ಮುಂದು, ತಾ ಮುಂದು' ಎಂಬ ಸ್ಪರ್ಧೆಯಲ್ಲಿ ತೊಡಗಿ ಈ ಕಂಪನಿಗಳನ್ನು ಸ್ವಾಗತಿಸುವ ನಿಟ್ಟಿನಲ್ಲಿ ರತ್ನಗಂಬಳಿ ಹಾಸಿವೆ, ಮೊದಲೇ, ಎಲ್ಲ ಬಗೆಯ ಸಂಕಷ್ಟಗಳಿಗೆ ಈಡಾಗಿದ್ದ ಆದಿವಾಸಿಗಳು ಈ ನೂತನ ಬೆಳವಣಿಗೆಯಿಂದ ಇನ್ನೂ ಆತಂಕಕ್ಕೆ ಒಳಗಾದರು. ತಮ್ಮ ಹಕ್ಕುಗಳಿಗಾಗಿ, ಅಸ್ಮಿತೆಗಾಗಿ, ದೈನಂದಿನ ಚಾಳಿಗಾಗಿ ಹೋರಾಡಲು ಸನ್ನದ್ಧರಾದರು. ಅವರ ಹೋರಾಟಕ್ಕೆ ಅನೇಕ ಪುರೋಗಾಮಿ ಸಂಘಟನೆಗಳು ಕೈ ಜೋಡಿಸಿದವು. ಪ್ರಭುತ್ವವು ಸುಮ್ಮನೆ ಕೂರಲಿಲ್ಲ. ಅವರ/ಅವುಗಳ ಮೇಲೆ ದಮನಕಾರಿ ರೀತಿಯಲ್ಲಿ ಮುಗಿಬಿದ್ದಿತು. ಛತ್ತೀಸ್‌ಗಢದಂಥ ರಾಜ್ಯಗಳಲ್ಲಿ ವಿಶೇಷ ಸಾರ್ವಜನಿಕ ರಕ್ಷಣಾ ಕಾಯಿದೆ(2005) ಜಾರಿಯಾಯಿತು. ನಕ್ಸಲೀಯರನ್ನು ಸದೆಬಡೆಯಲು ಈ ಕಾಯಿದೆಯನ್ನು ಜಾರಿಮಾಡಬೇಕಾಯಿತೆಂದು ಅಲ್ಲಿನ ಸರ್ಕಾರ ಸಮರ್ಥಿಸಿಕೊಂಡರೂ ಮಾನವ ಹಕ್ಕು ಸಂಘಟನೆಗಳು ಮತ್ತು ಆದಿವಾಸಿ ಚಳುವಳಿಗಳನ್ನು ಬಗ್ಗು ಬಡಿಯಲು ಇದನ್ನು ಬಳಸಲಾಗಿದೆಯೆಂದು ಹಲವರ ಆರೋಪ. ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್), ಪೀಪಲ್ಸ್ ಯೂನಿಯನ್ ಫಾರ್ ಡೆಮೋಕ್ರೆಟಿಕ್ ರೈಟ್ಸ್ (ಪಿಯುಡಿಆರ್) ರಂಥ ಸಂಘಟನೆಗಳ ಸತ್ಯಶೋಧನಾ ಸಮಿತಿಗಳ ವರದಿಗಳು ಈ ಆರೋಪದಲ್ಲಿ ಹುರುಳಿದೆ ಎಂದು ಸಾರಿ ಹೇಳಿವೆ.



ಡಾ|| ಬಿನಾಯಕ್ ಸೇನ್, ಶಿಶು ಚಿಕಿತ್ಸಾ ತಜ್ಞ ಮತ್ತು ಮಾನವಿವ ಹಕ್ಕುಗಳ ಹೋರಾಟಗಾರನನ್ನು ಆಧಾರರಹಿತ ಆಪಾದನೆಗಳಡಿಯಲ್ಲಿ ರಾಯಪುರದ ಬಂದೀಖಾನೆಯಲ್ಲಿ ಸುಮಾರು ಎರಡು ವರ್ಷಗಳ ಕಾಲ ಕೊಳೆಸಿದ್ದು ಛತ್ತೀಸ್‌ಗಢ ಸರ್ಕಾರದ ದೃಷ್ಟಿಕೋನವನ್ನು ಸಾಬೀತು ಪಡಿಸುವ ಒಂದು ಸ್ಪಷ್ಟ ನಿದರ್ಶನ.

ಮಧ್ಯಯ ಪ್ರದೇಶ ರಾಜ್ಯದಿಂದ ವಿಭಜನೆಗೊಂಡು, ಛತ್ತೀಸ್‌ಗಢ ರಾಜ್ಯ ನವೆಂಬರ್ 1, 2000ರಂದು ಅಸ್ತಿತ್ವಕ್ಕೆ ಬಂದಿತು. ಸುಮಾರು 1,36,034 ಚದುರ ಕಿಮಿ ವಿಸ್ತೀರ್ಣವುಳ್ಳ ಈ ರಾಜ್ಯದ ಜನಸಂಖ್ಯೆ ಸುಮಾರು 20.8 ಕೋಟಿ (2001ರ ಅಂಕಿ-ಸಂಖ್ಯೆಗಳ ಅನ್ವಯ), ಸಾಕ್ಷರತೆ-64.7% (ಪುರುಷರದ್ದು- 77.4%, ಮಹಿಳೆಯರದ್ದು-51.9%), ಈ ರಾಜ್ಯದ ವೈಶಿಷ್ಟ್ಯವೆಂದರೆ ಅದರ ಅರಣ್ಯ ಮತ್ತು ಖನಿಜ ಸಂಪತ್ತು. ಅಲ್ಲಿ ಕೋಲ್(ಕಲ್ಲಿದ್ದಲು), ಬಾಕ್ಸೈಟ್ (ಅಲೂಮಿನಿಯಮ್ ಅದಿರು), ಕ್ರೋಮೈಟ್, ಕಾಪರ್(ತಾಮ್ರ), ಐರನ್ ಓರ್ (ಕಬ್ಬಿಣದ ಅದಿರು), ಮ್ಯಾಂಗನೀಸ್, ಡೋಲೋಮೈಟ್, ಫೈರ್ ಕ್ಲೇ, ಲೈಮ್‌ಸ್ಟೋನ್ (ಸುಣ್ಣದ ಕಲ್ಲು) ಇವೇ ಮುಂತಾದ ಖನಿಜಗಳ ಭಂಡಾರವೇ ಇದೆ. ಇವುಗಳ ಜೊತೆಯಲ್ಲಿ ಅಲ್ಲಿ ಇಂಡಸ್ಟ್ರಿಯಲ್ ಗ್ರೇಡ್ ಡೈಮಂಡ್ (IGD) ಎಂಬ ಅತ್ಯಂತ ಬೆಲೆಬಾಳುವ ಖನಿಜವಿದೆಯೆಂದು ಹೇಳಲಾಗಿದೆ. ಸಬ್‌ಮೆರಿನ್‌ಗಳ ಉತ್ಪಾದನೆಯಲ್ಲಿ ಉನ್ನತ ಮಟ್ಟದ ಉಕ್ಕನ್ನು(High grade steel) ಬಳಸಲಾ

ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿನ ಖನಿಗಳ ಮೇಲೆ ದೇಶೀ ಕಾರ್ಪೊರೇಟ್ ಕಂಪನಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ದೃಷ್ಟಿ ಹರಿಸಿವೆ. ಸರ್ಕಾರಗಳು 'ನಾ ಮುಂದು, ತಾ ಮುಂದು' ಎಂಬ ಸ್ಪರ್ಧೆಯಲ್ಲಿ ತೊಡಗಿ ಈ ಕಂಪನಿಗಳನ್ನು ಸ್ವಾಗತಿಸುವ ನಿಟ್ಟಿನಲ್ಲಿ ರತ್ನಗಂಬಳಿ ಹಾಸಿವೆ, ಮೊದಲೇ, ಎಲ್ಲ ಬಗೆಯ ಸಂಕಷ್ಟಗಳಿಗೆ ಈಡಾಗಿದ್ದ ಆದಿವಾಸಿಗಳು ಈ ನೂತನ ಬೆಳವಣಿಗೆಯಿಂದ ಇನ್ನೂ ಆತಂಕಕ್ಕೆ ಒಳಗಾದರು. ತಮ್ಮ ಹಕ್ಕುಗಳಿಗಾಗಿ, ಅಸ್ಮಿತೆಗಾಗಿ, ದೈನಂದಿನ ಚಾಳಿಗಾಗಿ ಹೋರಾಡಲು ಸನ್ನದ್ಧರಾದರು. ಅವರ ಹೋರಾಟಕ್ಕೆ ಅನೇಕ ಪುರೋಗಾಮಿ ಸಂಘಟನೆಗಳು ಕೈ ಜೋಡಿಸಿದವು. ಪ್ರಭುತ್ವವು ಸುಮ್ಮನೆ ಕೂರಲಿಲ್ಲ. ಅವರ/ಅವುಗಳ ಮೇಲೆ ದಮನಕಾರಿ ರೀತಿಯಲ್ಲಿ ಮುಗಿಬಿದ್ದಿತು.

ಗುತ್ತದೆ. ಇದನ್ನು ಕತ್ತರಿಸುವುದಕ್ಕೆ IGDಯನ್ನು ಬಳಸಲಾಗುತ್ತದೆ. ಈ IGDಯ ಬೆಲೆ ಆಭರಣಗಳಲ್ಲಿ ಬಳಸಲಾಗುವ ವಜ್ರಗಳಿಗಿಂತ ಅನೇಕ ಪಟ್ಟು ದುಬಾರಿ. ಅಲ್ಲದೆ, ರಷ್ಯಾ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಮಾತ್ರ IGD ಕಂಡು ಬರುತ್ತದೆ. ಇದೂ ಸಹ ಆದಿವಾಸಿಗಳು ಹೆಚ್ಚಿರುವ ಈ ಭೂಮಿಗೆ ಲಗ್ಗೆ ಹಾಕುತ್ತಿರುವವರ ಆಕರ್ಷಣೆಯ ವಸ್ತುವಾಗಿದೆ.

ಅನೇಕ ವರ್ಷಗಳಿಂದ ಭಾರತದ ಆದಿವಾಸಿಗಳು ಪ್ರಭುತ್ವದಿಂದ ಉಪೇಕ್ಷೆಗೆ ಒಳಗಾಗಿದ್ದಾರೆ. ಅವರು ಅವಜ್ಞೆಗೆ ಈಡಾಗಿರುವ ಪ್ರದೇಶಗಳಲ್ಲಿ ಇಂದು ಮಾವೋವಾದಿಗಳು (ನಕ್ಸಲಿಯರು) ಶಕ್ತಿಯುತವಾಗಿ ಬೆಳೆದಿದ್ದಾರೆ. ಸುಮಾರು ಎರಡೂವರೆ ದಶಕಗಳ ಹಿಂದೆ ಇಲ್ಲಿ ಪೀಪಲ್ಸ್ ವಾರ್ ಗ್ರೂಪ್ (PWG)ನಕ್ಸಲ್ ಸಂಘಟನೆ ಪಾದಾರ್ಪಣೆ ಮಾಡಿತು. ಇಂದಿನ ದಂತೇವಾಡ ಜಿಲ್ಲೆಯಲ್ಲಿ ದಂಡಕಾರಣ್ಯ ಆದಿವಾಸಿ ಕಿಸಾನ್ ಮಜ್ದೂರ್ ಸಂಘಟನೆಗಳನ್ನು ಹುಟ್ಟುಹಾಕಿತು. ಕ್ರಮೇಣ ಅದು ಗ್ರಾಮಗಳಲ್ಲಿ 'ಸಂಘಂ' ಘಟಕಗಳನ್ನು ಸ್ಥಾಪಿಸಲು ಮುಂದಾಯಿತು ಈ ಘಟಕಗಳು ಗ್ರಾಮಮಟ್ಟದಲ್ಲಿ ಸಾಂಪ್ರದಾಯಿಕ ಅಧಿಕಾರವನ್ನು ಬದಲಿಸುವ ಉದ್ದೇಶ ಹೊಂದಿದ್ದವು. ಹಾಗೆಯೇ ಗ್ರಾಮಕ್ಕೆ ಸಂಬಂಧಿಸಿದ ಭೂಮಿ ವಿಷಯ, ಅರಣ್ಯಗಳಿಗೆ ಪ್ರವೇಶ, ನ್ಯಾಯವಾದ ಕೂಲಿ, ಅರಣ್ಯ ಉತ್ಪತ್ತಿಗೆ, ಹೆಚ್ಚಿನ ದರ ಮತ್ತು ವ್ಯಾಜ್ಯಗಳ ಇತ್ಯರ್ಥ ಮುಂತಾದ ವಿಚಾರಗಳ ಬಗೆಗೆ ದನಿಎತ್ತುವ ವಾತಾವರಣವನ್ನು ಸೃಷ್ಟಿಸುವ ಇರಾದೆ ಸಹ ಅವುಗಳಿಗಿತ್ತು, ಸುಮಾರು 2000ರ ಆಸು ಪಾಸಿನ ಅವಧಿಯಲ್ಲಿ ಬಸ್ತಾರ್, ಕಂಕರ್ ಮತ್ತು ದಂತೇವಾಡದಂಥ ಅರಣ್ಯ ಪ್ರದೇಶಗಳ ಸಾಂದ್ರತೆಯಿದ್ದ ಜಿಲ್ಲೆಗಳಲ್ಲಿ PW GOWಪ್ರಭಾವ ಸಾಕಷ್ಟು ಬೆಳೆದಿತ್ತು, ಹಂತ ಹಂತವಾಗಿ ಆದಿವಾಸಿಗಳಲ್ಲಿ ಪರಕೀಯತೆ ತಳವೂರಿತು.

ಅದರಿಂದ್ದ ಸಮಜೋ ಆರ್ಥಿಕ ಪರಿಸ್ಥಿತಿ ನಕ್ಸಲೀಯರಿಗೆ ಹೇಳಿ ಮಾಡಿಸಿದಂತಿತ್ತು ಯಾರದರೂ ಸರಿ, ತಮಗೆ ಸ್ಪಂದಿಸಿದವರ ಬಗೆಗೆ ವಿಶ್ವಾಸದಿಂದ ಕಾಣುವುದು, ಅವರ ಮೇಲೆ ನಂಬಿಕೆ ಇಡುವುದು ಸ್ವಾಭಾವಿಕವಲ್ಲವೇ? ಆದಿವಾಸಿಗಳ ವಿಷಯದಲ್ಲೂ ಹೀಗೆ ಆಯಿತು.

ಪರಿಸ್ಥಿತಿ ಹೀಗಿರಬೇಕಾದರೆ, ಸರ್ಕಾರ (ಬಿಜೆಪಿ ನೇತೃತ್ವದ) ಮಾವೋವಾದಿಗಳನ್ನು ಹತ್ತಿಕ್ಕಲು ಯೋಜನೆ ರೂಪಿಸಿತು. ಈಗಾಗಲೇ ತಿಳಿಸಿರುವಂತೆ, 2005ರಲ್ಲಿ ವಿಶೇಷ ಸಾರ್ವಜನಿಕ ರಕ್ಷಣಾ ಕಾಯಿದೆಯನ್ನು ಜಾರಿ ಮಾಡಿತು. ಇದರಡಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಆಡಳಿತ ಶಕ್ತಿಗಳಿಗೆ ವಿಶೇಷ ಅಧಿಕಾರವನ್ನು ನೀಡಲಾಯಿತು. ಅವರ ಶಂಕೆಗೆ ಒಳಗಾದವರು ನಾನ ರೀತಿಯ ತೊಂದರೆಗಳಿಗೆ ತುತ್ತಾದರು. ಅನೇಕ ಅಮಾಯಕರು ಮಾವೋವಾದಿಗಳ ಬೆಂಬಲಿಗರೆಂದು ಆಪಾದಿಸಲ್ಪಟ್ಟು, ವಿಚಾರಣೆಗೆ ಗುರಿಯಾಗಿ, ಚಿತ್ರ ಹಿಂಸೆ ಅನುಭವಿಸಿದರು. ಈ ಕಾಯಿದೆಯಡಿ ಜಾಮೀನು ತೆಗೆದುಕೊಳ್ಳುವುದು ಸುಲಭದ ವಿಚಾರವಲ್ಲ. ಮಾನವ ಹಕ್ಕುಗಳ ಹೋರಾಟಗಾರರು ಈ ಕಾಯಿದೆಯಿಂದ ಜರುಗಿದ ಅತಿರೇಕಗಳ ಬಗೆಗೆ ಅಪಸ್ವರ ಎತ್ತಿದಾಗ, ಅವರು ಆಳುವ ವರ್ಗದವರ ಕೆಂಗಣ್ಣಿಗೆ ಸಿಲುಕಿದರು. ಯಾರ್‍ಯಾರು ಆದಿವಾಸಿಗಳ ಪರವಾಗಿ ದನಿ ಎತ್ತಲು ತೊಡಗಿದರೋ, ಅಂತಹವರನ್ನು ಸರ್ಕಾರ ನಕ್ಸಲೀಯರ ಸಮರ್ಥಕರೆಂದೇ ಪರಿಗಣಿಸಿತು. ಮುಖ್ಯವಾಹಿನಿಯಲ್ಲಿರುವ ಮಾಧ್ಯಮಗಳು ಈ ತಪ್ಪನ್ನೇ ಮಾಡಿದವು. ನಮ್ಮ ಕರ್ನಾಟಕದಲ್ಲೂ ಈ ಕಥೆ ಬೇರೆಯಾಗಿಲ್ಲ, ಇತ್ತೀ

ಮಾವೋವಾದಿಗಳ ಧ್ಯೇಯಗಳು ಮತ್ತು ಉದ್ದೇಶಗಳು ಬಗೆಗೆ ಸಹಮತ ವ್ಯಕ್ತಪಡಿಸಿದರೂ, ಅದು ಕಾರ್ಯವಿಧಾನಗಳ ಕುರಿತು ಭಿನ್ನಮತ ವ್ಯಕ್ತಪಡಿಸುವುದರಲ್ಲಿ ಎಡಪಂಥೀಯರ ಜೊತೆ ಇನ್ನು ಕೇಲವು ಭಿನ್ನ ವಿಚಾರಧಾರೆಗಳ ಸಂಘಟನೆಗಳು, ವ್ಯಕ್ತಿಗಳು ಇದ್ದಾರೆ. ಈ ವ್ಯತ್ಯಾಸವನ್ನು ಸರಿಯಾಗಿ ಗುರುತಿಸದೆ ಅಥಾವ ಬೇಕಂತಲೇ ವಿಕೃತವಾಗಿ ಬಂದಿಸಿದ್ದರ ಹಿನ್ನಲೆಯಲ್ಲಿ ಯಾವ/ಯಾರ ಹಿತಸಕ್ತಿಗಳು ಆಡಗಿತ್ತು? ಮುಖ್ಯವಾಹಿನಿಯಲ್ಲಿರುವ ಪತ್ರಿಕೆಗಳು, ದೃಶ್ಯ ಮಾಧ್ಯಮಗಳು ಇಂತಹ ವಿಷಯಗಳಲ್ಲಿ, ವರ್ತಿಸುತ್ತವೆ ಎಂದು ಒಂದು ದೃಷ್ಟಾಂತದ ಮುಲಕ ಪ್ರಸ್ತಾಪಿಸಿದ್ದು ವಿಷಯಾಂತರಕ್ಕೆ ಎಡೆಮಾಡಿಕೊಟ್ಟಿಲ್ಲ ಎಂಬುದು ಈ ಲೇಖನ ಅಭಿಮತ.

ಚಿನ ವರ್ಷಗಳಲ್ಲಿ ನಮ್ಮ ರಾಜ್ಯದ ಕೆಲವು ಪ್ರದೇಶಗಳಲ್ಲಿ ನಕ್ಸಲೀಯರ/ಮಾವೋವಾದಿಗಳ ಚಟುವಟಿಕೆಗಳು ಜರುಗುತ್ತಿರುವುದು ವರದಿಯಾಗಿದೆ. ಅವರ ಮತ್ತು ಪ್ರಭುತ್ವದ ನಡುವಿನ ತಿಕ್ಕಾಟದಲ್ಲಿ ಹಿಂಸೆಯ ಕಾರ್ಯಚರಣೆಗಳು ಜರುಗಿದಾಗ ರಾಜ್ಯ ಸರ್ಕಾರ ಬಲಪ್ರಯೋಗ ಮಾಡಲು ನಿಶ್ಚಯಿಸಿತು. ಆದರೆ ಕೆಲವರು ಅದರ ಜೊತೆ ಮಾತುಕತೆ ನಡೆಸಬೇಕೆಂದು ಅಭಿಪ್ರಾಯಪಟ್ಟರು. ಅಂತಹ ನಿಲುವನ್ನು ಕೆಲವು ಪುರೋಗಾಮಿ, ಜನಪರ ಚಳುವಳಿಗಳು ಮತ್ತು ಬುದ್ಧಿಜೀವಿಗಳು ವ್ಯಕ್ತಪಡಿಸಿದ್ದರು. ಅವುಗಳು/ಅವರು ಪ್ರಭುತ್ವ ಮತ್ತು ನಕ್ಸಲೀಯರ ಹಿಂಸೆಯನ್ನು ಸಮಾನವಾಗಿ ಖಂಡಿಸಿದ್ದರು. ಆದರೆ ಕನ್ನಡದ ಎರಡು ಪ್ರಮುಖ ದೈನಿಕಗಳು ಇಂತಹವರನ್ನು ಸಾರಸಗಟಾಗಿ ಮಾವೋವಾದಿಗಳೆಂದೇ ಅಥವಾ ಅವರ ಸಮರ್ಥಕರೆಂದೇ ಬಿಂಬಿಸಿದವು.

ಮಾವೋವಾದಿಗಳ ಧ್ಯೇಯಗಳು ಮತ್ತು ಉದ್ದೇಶಗಳು ಬಗೆಗೆ ಸಹಮತ ವ್ಯಕ್ತಪಡಿಸಿದರೂ, ಅದು ಕಾರ್ಯವಿಧಾನಗಳ ಕುರಿತು ಭಿನ್ನಮತ ವ್ಯಕ್ತಪಡಿಸುವವರಲ್ಲಿ ಎಡಪಂಥೀಯರ ಜೊತೆ ಇನ್ನು ಹಲವು ಭಿನ್ನ ವಿಚಾರಧಾರೆಗಳ ಸಂಘಟನೆಗಳು, ವ್ಯಕ್ತಿಗಳು ಇದ್ದಾರೆ. ಈ ವ್ಯತ್ಯಾಸವನ್ನು ಸರಿಯಾಗಿ ಗುರುತಿಸದೆ ಅಥಾವ ಬೇಕಂತಲೇ ವಿಕೃತವಾಗಿ ಬಿಂಬಿಸಿದ್ದರ ಹಿನ್ನಲೆಯಲ್ಲಿ ಯಾವ/ಯಾರ ಹಿತಾಸಕ್ತಿಗಳು ಆಡಗಿತ್ತುವೆ.? ಮುಖ್ಯವಾಹಿನಿಯಲ್ಲಿರುವ ಪತ್ರಿಕೆಗಳು, ದೃಶ್ಯ ಮಾಧ್ಯಮಗಳು ಇಂತಹ ವಿಷಯಗಳಲ್ಲಿ, ಹೇಗೆ ವರ್ತಿಸುತ್ತವೆ ಎಂದು ಒಂದು ದೃಷ್ಟಾಂತದ ಮುಲಕ ಪ್ರಸ್ತಾಪಿಸಿದ್ದು ವಿಷಯಾಂತರಕ್ಕೆ ಎಡೆಮಾಡಿಕೊಟ್ಟಿಲ್ಲ ಎಂಬುದು ಈ ಲೇಖನ ಅಭಿಮತ. ಇರಲಿ.....

'ಸಲ್ವಾಜುಡಂ' ಅಥಾವ 'ಸಾಲ್ವಾಜುಡಂ' ಎನ್ನುವುದು ಗೊಂಡಿ ಭಾಷೆಯ ಒಂದು ಪದ. ಅದನ್ನು ಅಕ್ಷರಶಃ ಭಾಷಾಂತರಿಸಿದರೆ, 'ಶುದ್ಧಿಕರಣದ ಶಿಕಾರಿ' ಎಂಬ ಅರ್ಥ ಬರುತ್ತದೆ. ಆದರೆ ಚತ್ತಿಸ್‌ಗಢದ ಸರ್ಕಾರ ಅದನ್ನು 'ಶಾಂತಿ ಅಭಿಯಾನ' ಎಂದೇ ಅರ್ಥೈಸುತ್ತದೆ. ಮಾವೋವಾದಿಗಳ ತೆಂದು ಎಲೆಗಳ ಸಂಗ್ರಹದ ಬಗೆಗಿನ ನಿಲುಮೆ ಮತ್ತು ರಸ್ತೆಗಳ ನಿರ್ಮಾಣ, ಶಾಲೆಗಳ ಸ್ಥಾಪನೆ ಮುಂತಾದ ಅಭಿವೃದ್ಧಿ ಕಾರ್ಯಗಳ ವಿರೋಧ ಕುರಿತು ಸುಮಾರು 200 ಗ್ರಾಮಗಳಲ್ಲಿ ಪ್ರತಿರೋಧದ ಅಲೆ ಎದ್ದಿತೆಂದು ನಕ್ಸಲೀಯರ ಪ್ರಭಾವ ಹೆಚ್ಚಿರುವ ಜಿಲ್ಲೆಗಳ ಆಡಳಿತ ವರ್ಗ ನೀಡುವ ವಿವರಣೆ. ಆದರೆ ಈ ಚಿತ್ರಣ ಸತ್ಯಕ್ಕೆ ದೂರವಾದದ್ದು ಎಂಬುದು ಅನೇಕ ಪ್ರತ್ಯಕ್ಷದರ್ಶಿಗಳ ಅಪವಾದ, ಅವರ ಪ್ರಕಾರ 'ಸಲ್ವಾ ಜುಡುಂ'ನ ನೇತೃತ್ವ ವಹಿಸಿರುವುದು ಸ್ಥಳಿಯ ಗಣ್ಯರು, ಕಂಟ್ರಾಕ್ಟರುಗಳು ಮತ್ತು ವ್ಯಾಪಾರಿಗಳು. ಈ ಕಾರ್ಯಕ್ರಮದ ಹಿಂದಿರುವ ಉದ್ದೇಶ ನಕ್ಸಲೀಯರ ನಿಗ್ರಹ ಇದನ್ನು ರಾಜ್ಯ ಸರ್ಕಾರವೇ ಸಂಪೂರ್ಣವಾಗಿ ಬೆಂಬಲಿಸುತ್ತಿದೆ ಎಂಬುದು ಅವರ ದೂರು.

'ಸಲ್ವಾ ಜುಡುಂ' ವ್ಯಾಪಕವಾಗಿ ಪಸರಿಸಿದ್ದು ಚತ್ತಿಸ್‌ಗಢದ ದಂತೇವಾಡ ಜಿಲ್ಲೆಯಲ್ಲಿ. ಅದಕ್ಕೆ ಮುಂದಾಳತ್ವ ನೀಡಿದ್ದು ಆ ಜಿಲ್ಲೆಯ ಕಾಂಗ್ರೆಸ್ ಶಾಸಕ ಮಹೇಂದ್ರ ಶರ್ಮ. ಈತನ ಉಪಕ್ರಮಕ್ಕೆ ಆ ರಾಜ್ಯದ ಬಿಜೆಪಿ ಪಕ್ಷದ ಮುಖ್ಯಮಂತ್ರಿ ಡಾ.ರಾಮನ್ ಸಿಂಗ್‌ರ ಶ್ರೀರಕ್ಷೆಯಿತ್ತು 2005ರಲ್ಲಿ ದಂತೇವಾಢದ ಜಿಲ್ಲಾ ಕಲೆಕ್ಟರ್ ಒಂದು ಅಧಿಕೃತ ಸರ್ಕಾರಿ ದಾಖಲೆಯನ್ನು ತಯಾರು ಮಾಡಿದರು. ಅದರ ಶೀರ್ಷಿಕೆ– 'ನಕ್ಸಲಿಯರ ವಿರುದ್ಧದ ಜನರ ಸಂಘಟನೆ' ಎಂಬುದಾಗಿತ್ತು ಅದರಲ್ಲಿ 'ಸ್ವಲ್ವಾ ಜುಡುಂ' ಕಾರ್ಯಚರಣೆಗಳ ಬಗೆಗೆ ವಿವರಣೆಗಳಿದ್ದವು. ಹಾಗೆಯೇ ಈ ಸಂಘಟನೆಗೆ ನೀಡಬೇಕಾದ ನಾಯಕತ್ವ, ಬಚಿಟ್ಟ ವಿಚಾರ ಮತ್ತು ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ಕಾರ್ಯಗಳ ಬಗೆಗೆ ಪ್ರಸ್ತಾಪವಿದ್ದವು. ಆದುದ್ದರಿಂದ 'ಸಲ್ವಾ ಜುಡುಂ' ಸರ್ಕಾರ ಘೋಷಿಸುವ ಮತ್ತು ಆರ್ಥಿಕ ಸಹಾಯ ನೀಡುತ್ತಿರುವ ಒಂದು ಸಂಘಟನಾತ್ಮಕ ಕಾರ್ಯಕ್ರಮ. ಆದರೆ ಈ ನಿಟ್ಟಿನಲ್ಲಿ ರಾಜ್ಯದ ಆಯವ್ಯಯದಲ್ಲಿ ನಿಗದಿಗೊಳಿಸಿರುವ ಹಣವೆಷ್ಟು ಎಂಬುದನ್ನು ಬಹಿರಂಗಗೊಳಿಸಿಲ್ಲ. ಅಂದರೆ ಈ ಇಡೀ ಸಂಘಟನೆ ಕುರಿತು ರಾಜ್ಯ ಸರ್ಕಾರದ ನಡವಳಿಕೆಯಲ್ಲಿ ಪಾರದರ್ಶಕತೆಯಲ್ಲಿ ಎಂಬುದು ರೀಕಾಕಾರಾರ ತಗಾದೆ.

ಈಗ ದಂತೇವಾಢ ಜಿಲ್ಲೆಯ ವರದಿಯಾಗಿರುವ 'ಸಲ್ವಾ ಜುಡುಂ'ನ ಕಾರ್ಯವೈಖರಿಯ ಬಗೆಗೆ ಗಮನ ಹರಿಸೋಣ......

ಮೊದಲು, ಮಾವೋವಾದಿಗಳಿಗೆ ಬೆಂಬಲ ನೀಡುತ್ತಿದ್ದ ಗ್ರಾಮಗಳಲ್ಲಿ, 'ಸಲ್ವಾ ಜುಡುಂ'ನ ಸಭೆಗಳು ಜರಗುತ್ತಿದ್ದವು ಸಭಾಸರರನ್ನು ಬಸ್ಸುಗಳ ಮೂಲಕ ಕರೆತರಲಾಗುತ್ತಿತ್ತು. ಈ ಕಾರ್ಯಚಾರಣೆಯ ಮುಂಚೂಣಿಯಲ್ಲಿದ್ದದ್ದು ಜಿಲ್ಲಾ ಆಡಳಿತ ಸಾಮಾನ್ಯವಾಗಿ ಸಭೆಗಳನ್ನು ಉದ್ದೇಶಿಸಿ ವಿವಿಧ ಪಕ್ಷಗಳ ರಾಜಕಾರಣಿಗಳು ಮಾತನಾಡುತ್ತಿದ್ದರು. ಕ್ರಮೇಣ ಶಿಬಿರಗಳನ್ನು ಸ್ಥಾಪಿಸಲಾಯಿತು. ಆದಿವಾಸಿಗಳು ಈ ಶಿಬಿರಗಳಲ್ಲಿ ನೆಲಸುವಂಥ ವಾತಾವರಣವನ್ನು ಸೃಷ್ಟಿಸಲಾಯಿತು. ಬಲಪ್ರಯೋಗವು ನಡೆಯಿತೆಂದು ಪ್ರತ್ಯೇಕವಾಗಿ ಪ್ರಸ್ತಾಪಿಸುವುದು ಅನಗತ್ಯ ಹುಟ್ಟಿದಾರಭ್ಯ ವನಗಳಲ್ಲಿ ಸ್ವಚ್ಛಂಧವಾಗಿ ತಿರುಗಾಡಿಕೊಂಡಿದ್ದ ಈ ಗಿರಿಜನರಿಗೆ Make-Shift ಶಿಬಿರಗಳಲ್ಲಿ ತಂಗುವಂತೆ ತಾಕೀತು ಮಾಡಲಾಯಿತು. ಸ್ಥಳಾಂತರ ಮಾಡಲು ನಿರಾಕರಿಸಿದ ಇತರ ಹಳ್ಳಿಗರ ಮನೆಗಳನ್ನು ಲೂಟಿಮಾಡಲಾಯಿತು. ಕೆಲವು

ಸಂದರ್ಭಗಳಲ್ಲಿ ಬೆಂಕಿಯ ಕೆನ್ನಾಲಿಗೆಗೆ ಅವು ತುತ್ತಾದವು. ಈ ಶಿಬಿರಗಳು ದೊಡ್ಡ ಹಳ್ಳಿಗಳಲ್ಲಿದ್ದವು. ಸಲ್ವಾ ಜುಡುಂನ ಮುಂದಾಳುಗಳು ಆಗಾಗ್ಗೆ ಮೆರವಣಿಗೆಗಳನ್ನು ನೆಡಸುತ್ತಿದ್ದರು. ಅವುಗಳನ್ನು 'ಪಾದಯಾತ್ರೆ'ಗಳೆಂದು ಕರೆಯಲಾಯಿತು. ಅವುಗಳ ರಕ್ಷಣೆಗೆ ಭದ್ರತಾ ಪಡೆಗಳ ಬೆಂಗಾವಲಿರುತ್ತಿತ್ತು. ಕೆಲವೂಮ್ಮೆ ಜಿಲ್ಲಾ ಕಲೆಕ್ಟರ್ ಅಥಾವ ಪೂಲೀಸ್ ಸುಪರೀಟೆಂಡೆಂಟ್ ಇಂಥಾ ಪಾದಯತ್ರೆಗಳಲ್ಲಿ ಭಾಗವಹಿಸುತ್ತಿದ್ದರು. ಜನವರಿ 2007ವರೆಗೆ ದಂತೇವಾಢ ಜಿಲ್ಲೆಯಲ್ಲಿ ಸುಮಾರು139 ಪಾದಯಾತ್ರೆಗಳು ಮತ್ತು 47 ಸಭೆಗಳು ಜರುಗಿತೆಂದು ಹೇಳಲಾಗಿದೆ.

'ಸಲ್ವಾ ಜುಡುಂ'ನಲ್ಲಿ ನಾಲ್ಕು ಬಗೆಯ ಅಧಿಕಾರ ಶ್ರೇಣಿಗಳಿವೆ.

ಅ) ಉನ್ನತ ಮಟ್ಟದ ರಾಜಕೀಯ ನಾಯಕತ್ವ: ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ರಾಜಕೀಯ ಬೆಂಬಲ ನೀಡಿದೆ. ಆದರೆ ಕಾಂಗ್ರೆಸ್‌ನ ಮಹೇಂದ್ರ ಶರ್ಮ 'ಸಲ್ವಾ ಜುಡು'ಂನ ಅತ್ಯುನ್ನತ ನಾಯಕನೆಂದು ಪರಿಗಣಿಸಲಾಗಿದೆ.

ಆ) ಶಿಬಿರಗಳ ನಾಯಕರು: ಇವರು 'ಸಲ್ವಾ ಜುಡುಂ'ನ ಸ್ಥಳಿಯ ನಾಯಕರು ಹೆಚ್ಚಾಗಿ ಇವರು ಕಂಟ್ರಾಕ್ಟರ್‌ಗಳು ಮತ್ತು ವ್ಯಾಪಾರಿಗಳು ಆದಿವಾಸಿಗಳ ಸಮುದಾಯಕ್ಕೆ ಸೇರದ ವಲಸಿಗರು.

ಇ) ವಿಶೇಷ ಪೊಲೀಸ್ ಅಧಿಕಾರಿಗಳು: ಅವರನ್ನು ಸರ್ಕಾರವೇ ನೇಮಿಸಿದೆ. ಅವರಿಗೆ ತರಬೇತಿ, ಸಂಬಳ ಮತ್ತು ಶಸ್ತ್ರಾಸ್ತ್ರಗಳನ್ನು ಅದೇ ನೀಡುತ್ತದೆ. ಹೆಚ್ಚಾಗಿ ಅವರು ಆದಿವಾಸಿ ನಿರುದ್ಯೋಗಿಗಳು: ಅನೇಕ ಅಪ್ರಾಪ್ತ ವಯಸ್ಸಿಗರನ್ನು ನೇಮಕ ಮಾಡಲಾಗಿದೆ ಎಂದು ಆರೋಪವಿದೆ.

ಈ) ಸಾಮಾನ್ಯ ಹಳ್ಳಿಗರು: ಇವರು 'ಸಲ್ವಾ ಜುಡುಂ'ನ ಭಾಗವಾಗಿದ್ದಾರೆಂದು ಹೇಳಾಲಾಗಿದೆ. ಸಾಕಷ್ಟು ಸಂಖ್ಯೆಯಲ್ಲಿರುವ ಇವರನ್ನು ಹೆಚ್ಚಾಗಿ ಬಲವಂತದಿಂದ ಶಿಬಿರಗಳಲ್ಲಿ ಇರಿಸಲಾಗಿದೆ ಎಂದು ಆಪಾದಿಸಲಾಗಿದೆ. ಶಿಬಿರಗಳ ನಿವಾಸಿಗಳಾದ ನಂತರ ಇವರನ್ನು ಹಳ್ಳಿಗಳ ಲೂಟಿಗಳಿಗೆ ಬಳಸಲಾಗುತ್ತದೆ. ಇವರು ಮಾವೋವಾದಿಗಳು ಮತ್ತು ನಿವಾಸಗಳನ್ನು ಕಳೆದುಕೊಂಡ ಗ್ರಾಮಸ್ಥರಿಂದ ಆಕ್ರಮಣಗಳಿಗೆ ಒಳಗಾಗುತ್ತಾರೆ.

ಛತ್ತೀಸ್‌ಗಢ ಸರ್ಕಾರ ಸುಮಾರು 5000ವಿಶೇಷ ಪೊಲೀಸ್ ಅಧಿಕಾರಿಗಳನ್ನು (SPO)ನೇಮಿಸಿದೆ. ಅವರಿಗೆ ರೂ 1500/- ಮಾಸಿಕ ವೇತನ ನೀಡಲಾಗುತ್ತಿದೆ. ಅವರು ಹೆಚ್ಚುವರಿ ಭದ್ರತಾ ಪಡೆಗಳು ಮಾತ್ರವಲ್ಲದೆ 'ಸಲ್ವಾ ಜುಡುಂ'ನ ಸಮಗ್ರ ಭಾಗವಾಗಿದ್ದಾರೆ. ನಿರುದ್ಯೋಗಿ ಆದಿವಾಸಿ ಯುವಕರು, ಅಪ್ರಾಪ್ತ ವಯಸ್ಸಿನ ಬಾಲಕರು ಮತ್ತು ಬಾಲಕೀಯರು, 'ಸಲ್ವಾ ಜುಡುಂ'ನಲ್ಲಿ ಸಕ್ರಿಯವಾಗಿರುವ ಕ್ರಿಮಿನಲ್ ವ್ಯಕ್ತಿಗಳು ಮತ್ತಿತರು SPO ಗಳಾಗಿ ಕೆಲಸ ಮಾಡುತ್ತಿದ್ದಾರೆ. ಛತ್ತೀಸ್‌ಗಢ ಸರ್ಕಾರ ಅಳವಡಿಸಿಕೊಂಡಿರುವ ಮಧ್ಯಪ್ರದೇಶ ಪೊಲೀಸ್ ನಿಬಂಧನೆಗಳ ಅನ್ವಯ (ಅನುಸೂಚಿ 17,18,19-ಪೊಲೀಸ್ ಕಾಯಿದೆ 1861) ಸರ್ಕಾರ SPOಗಳನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿದೆ. ಆದರೆ ಇವರನ್ನು ಶಾಂತಿಗೆ ಭಂಗ ತರುವಂಥ ಸನ್ನಿವೇಶಗಳಲ್ಲಿ, ದೊಂಬಿಗಳಾದಾಗ ಮತ್ತು ಅನೈತಿಕ ಸಭೆಗಳನ್ನು ನಡೆಸುವ ನಿಟ್ಟಿನಲ್ಲಿ ಜನರನ್ನು ಜಮಾಯಿಸುವಾಗ SPOಗಳನ್ನು ನೇಮಕ ಮಾಡಬಾಹುದು (ವಿಧಿ17). ಆದರೆ ಈ ಪಡೆಯಿರುವುದು ಗೆರಿಲ್ಲಾ ಯುದ್ಧದಂಥ ದೀರ್ಘ ಕಾಲದ ಸಮಸ್ಯೆಯನ್ನು ಎದುರಿಸುವುದಕ್ಕಲ್ಲ: ಶಾಂತಿಯನ್ನು ಕಾಪಾಡುವಂಥ ಸಮರ್ಥ ಮತ್ತು

ಒಂದು ಹಂತದ ಸ್ಥಾನಮಾನವುಳ್ಳ, ಅನುಭವಸ್ಥ ಜನರನ್ನು SPOಗಳಾಗಿ ನೇಮಕ ಮಾಡಬಹುದು. ಖಂಡಿತ! ಅಪ್ರಾಪ್ತ ವಯಸ್ಕರನ್ನು, ಕ್ರಿಮಿನಲ್ ಹಿನ್ನೆಲೆಯುಳ್ಳ Lumper elements ಗಳನ್ನಲ್ಲ. ಇಂಥಾ SPO ಗಳಿಗೆ ತರಬೇತಿಯನ್ನು 'ಸಲ್ವಾ ಜುಡುಂ' ಶಿಬಿರಗಳ ಬಳಿ ನೀಡಲಾಗುತ್ತಿದೆ ಎಂದು ವರದಿಯಾಗಿದೆ.

ಇನ್ನು ದಂತೇವಾಢಕ್ಕೆ ಭೇಟಿ ನೀಡುವವರನ್ನು ಎಲ್ಲಂದರಲ್ಲಿ ತಡೆ ಹಿಡಿಯಲಾಗುತ್ತದೆ. ಹೀಗೆ ಮಾಡುವ ಜನರು ತಮ್ಮನ್ನು SPOಗಳೆಂದೇ ಗುರುತಿಸಿಕೊಳ್ಳುತ್ತಾರೆ. ಅವರಿಗೆ ಯಾವ ನಿಯಮಗಳು ಅನ್ವಯಿಸುವಂತೆ ಕಾಣುವುದಿಲ್ಲ. ಅವರ ಮೇಲೆ ಹಿಂಸೆ, ಲೂಟಿ ಮಾಡಿರುವ, ಧಮಕಿ ನೀಡಿರುವ, ಮತ್ತು ಬಲವಂತದಿಂದ ಹಣ ಸಂಗ್ರಹಿಸಿರುವ ಆಪಾದನೆಗಳಿವೆ. ಆದರೆ ಇವುಗಳ ಬಗೆಗೆ ತನಿಖೆ ನಡೆಯುವುದಿಲ್ಲ. ಮೊಕದ್ದಮೆಗಳೂ ದಾಖಲಾಗುವುದಿಲ್ಲ. ಇವರು ಪೊಲೀಸರಂತೆ ಶಸ್ತ್ರಧಾರಿಗಳಾಗಿರುವುದಿಲ್ಲ. ಓಬಿರಾಯನ ಕಾಲದ ತುಪಾಕಿಗಳು, ಬಿಲ್ಲು ಹಾಗೂ ಬಾಣಗಳೇ ಅವರ ಆಯುಧಗಳು. Combing ಕಾರ್ಯಚರಣೆಗಳಲ್ಲಿ ಸಾವನ್ನಪ್ಪುವವರಲ್ಲಿ ಇವರೇ ಮೊದಲಿಗರು. ಮಾವೋವಾದಿಗಳ ಆಕ್ರಮಣಗಳಿಗೆ ಗುರಿಯಾಗುವವರೂ ಇವರೇ.

ದಂತೇವಾಢ ಜಿಲ್ಲೆಯಲ್ಲಿ 'ಸಲ್ವಾ ಜುಡುಂ' ಪಡೆಗಳಿಂದ ಅಧಿಕ ಪ್ರಮಾಣದ ಹಿಂಸೆ ಜರುಗಿದೆ ಎಂಬುದು ಸ್ಥಳೀಯ ಪತ್ರಕರ್ತರು ಮತ್ತು ಸ್ವತಂತ್ರ ಗುಂಪುಗಳು ಬಹಿರಂಗಗೊಳಿಸಿರುವ ವಿಷಯ. ಕೊಲ್ಲುವುದು, ಸುಡುವುದು, ಮನೆಗಳನ್ನು ಲೂಟಿ ಮಾಡುವುದು, ಹೆಂಗಸರ ಮೇಲೆ ಅತ್ಯಾಚಾರ ಮಾಡವುದು ಇತ್ಯಾದಿಗಳ್ನು ಅವು ಮಾಡುತ್ತ ಬಂದಿವೆ. ಜನರ ಮನಸ್ಸಿನಲ್ಲಿ ಒಂದು ಬಗೆಯ ಭಯದ ಭಾವನೆಯನ್ನು ಸೃಷ್ಟಿಸಲಾಗಿದೆ. 'ಸಲ್ವಾ ಜುಡುಂ'ಗೆ ಸೇರಲು ಅನೇಕ ರೀತಿಯ ಒತ್ತಡಗಳನ್ನು ಹೇರಲಾಗುತ್ತಿದೆ. ಜನರು ಅಭದ್ರತೆಯ ಭಾವನೆಗೆ ಸಿಲುಕಿದ್ದಾರೆ. ಹಲವು ಸಂದರ್ಭಗಳಲ್ಲಿ ದೂರು ನೀಡಿದರೂ, ಏನೂ ಪ್ರಯೋಜನಾವಾಗುವುದಿಲ್ಲ.

ಗಂತೇವಾಢ ಜಿಲ್ಲೆಯಲ್ಲಿ 'ಸಲ್ವಾ ಜುಡುಂ' ಪಡೆಗಳಿಂದ ಅಧಿಕ ಪ್ರಮಾಣದ ಹಿಂಸೆ ಜರುಗಿದೆ ಎಂಬುದು ಸ್ಥಳೀಯ ಪತ್ರಕರ್ತರು ಮತ್ತು ಸ್ವತಂತ್ರ ಗುಂಪುಗಳು ಬಹಿರಂಗಗೊಳಿಸಿರುವ ವಿಷಯ. ಕೊಲ್ಲವುದು, ಸುಡುವುದು, ಮನೆಗಳನ್ನು ಲೂಟಿ ಮಾಡುವುದು, ಹೆಂಗಸರ ಮೇಲೆ ಅತ್ಯಾಚಾರ ಮಾಡುವುದು ಇತ್ಯಾದಿಗಳನ್ನು ಅವು ಮಾಡುತ್ತ ಬಂದಿವೆ. ಜನರ ಮನಸ್ಸಿನಲ್ಲಿ ಒಂದು ಬಗೆಯ ಭಯದ ಭಾವನೆಯನ್ನು ಸೃಷ್ಟಿಸಲಾಗಿದೆ. 'ಸಲ್ವಾ ಜುಡುಂ'ಗೆ ಸೇರಲು ಅನೇಕ ರೀತಿಯ ಒತ್ತಡಗಳನ್ನು ಹೇರಲಾಗುತ್ತಿದೆ. ಜನರು ಅಭದ್ರತೆಯ ಭಾವನೆಗೆ ಸಿಲುಕಿದ್ದಾರೆ. ಹಲವು ಸಂದರ್ಭಗಳಲ್ಲಿ ದೂರು ನೀಡಿದರೂ, ಏನೂ ಪ್ರಯೋಜನಾವಾಗುವುದಿಲ್ಲ.

'ಸಲ್ವಾ ಜುಡುಂ' ಮತ್ತು ಭದ್ರತಾ ಪಡೆಗಳ ಕಾರ್ಯಚರಣೆಗಳಲ್ಲಿ ಸತ್ತವರ ಸಂಖ್ಯೆ ಬಗೆಗೆ ನಿಖರವಾದ ಮಾಹಿತಿಯಿಲ್ಲ. ಪೊಲೀಸ್ ಮೂಲಗಳ ಪ್ರಕಾರ ಎನ್‌ಕೌಂಟರ್‌ಗಳಲ್ಲಿ 2006ರಲ್ಲಿ 250 ಜನ ಹತರಾಗಿದ್ದಾರೆ. ಸ್ವತಂತ್ರ ಗುಂಪುಗಳ ಪ್ರಕಾರ 2005-2007ರ ಅವಧಿಯಲ್ಲಿ ಸುಮಾರು 500 ಜನ ಸಾವನ್ನಪ್ಪಿದ್ದಾರೆ. ಜೂನ್ 2005-ಮಾರ್ಚ್ 2007ರ ಅವಧಿಯಲ್ಲಿ 450 ಹಳ್ಳಿಗರು ಮೃತರಾಗಿದ್ದಾರೆ ಮತ್ತು 700 ಗ್ರಾಮಗಳನ್ನು ಸುಡಲಾಗಿದೆ ಎಂಬುದನ್ನು ಸಿಪಿಐ (ಮಾವೋವಾದಿ)ಯನ ಪತ್ರಿಕಾ ಪ್ರಕಟನೆ ತಿಳಿಸುತ್ತದೆ. ಈ ಪರಿಯ ಸಾವುಗಳ ಬಗೆಗಿನ ಅಧಿಕೃತ ಪಟ್ಟಿಯಲ್ಲಿ ಏರುಪೇರುಗಳಿವೆ. ಅದು ಪರಿಷ್ಕರಣೆಗೊಳ್ಳುವುದಿಲ್ಲ. ಅನೇಕ ಸಾವುಗಳನ್ನು ಪರಿಗಣಿಸಿಯೇ ಇಲ್ಲ ಮತ್ತು ಅವುಗಳು ಹೇಗೆ ಸಂಭವಿಸಿದವು ಎಂಬುದರ ಬಗೆಗೆ ವಿವರಣೆಗಳು ಸಿಗುವುದಿಲ್ಲ. ಆದರೆ ಕೆಲವು ಸತ್ಯ ಶೋಧನಾ ತಂಡದವರು ಜಿಲ್ಲೆಗೆ ಭೇಟಿ ನೀಡಿದಾಗ, ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳು 'ಸಲ್ವಾ ಜುಡುಂ' ನಿಂದ ಜರುಗಿದ ಹತ್ಯೆಗಳು ಮತ್ತು ಹಿಂಸಾಪ್ರಕರಣಗಳ ಬಗೆಗೆ ಎಫ್‌ಐಆರ್‌ಗಳನ್ನು ದಾಖಲಿಸಿಲ್ಲ ಎಂದು ತಿಳಿಸಿರುವುದು ಗಮನಾರ್ಹ ಸಂಗತಿ. ಅಂದರೆ, ಈ ತರಹದ ಘಟನೆಗಳು ತನಿಖೆಗೆ ಒಳಗಾಗವುದಿಲ್ಲ. ನೊಂದ ಕುಟುಂಬದವರಿಗೆ ಪರಿಹಾರವೂ ದೊರಕುವುದಿಲ್ಲ. ಆದರೆ

ಮಾವೋವಾದಿಗಳಿಂದಾದ ಹತ್ಯೆಗಳು ದಾಖಲಿಸಲ್ಪಡುತ್ತವೆ ಮತ್ತು ಸಂಬಂಧಪಟ್ಟವರಿಗೆ ಪರಿಹಾರ ಸಿಗುತ್ತದೆ.

'ಸಲ್ವಾ ಜುಡುಂ' ಶುರುವಾದ ಎರಡು ವರ್ಷಗಳಲ್ಲಿ ಮಹಿಳೆಯರ ಮೇಲೆ ವಿವಿಧ ರೀತಿಯ ಅತ್ಯಾಚಾರಗಳು ಗ್ರಾಮಗಳಲ್ಲಿ, ಪೊಲೀಸ್ ಠಾಣೆಗಳಲ್ಲಿ ಮತ್ತು ಪುನರ್ವಸತಿ (Relief) ಶಿಬಿರಗಳಲ್ಲಿ ಜರುಗಿದ್ದು ವರದಿಯಾಗಿದೆ. ಗ್ರಾಮಸ್ಥರು ಇಂಥಾ ಹೀನ ಕೃತ್ಯಗಳ ಘಟನೆಗಳು ಜರುಗಿದ್ದನ್ನು ಸರ್ಕಾರೇತರ ಸಂಸ್ಥೆಗಳಿಗೆ ಮತ್ತು ಕೆಲವು ನಾಗರಿಕರಿಗೆ ತಿಳಿಸಿದ್ದಾರೆ. ಆದರೆ ಛತ್ತೀಸ್‌ಗಢ ಸರ್ಕಾರ ಇಂಥ ಘಟನೆಗಳಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮಗಳನ್ನು ಜಾರಿಗೊಳಿಸುವಲ್ಲಿ ವಿಫಲವಾಗಿದೆ.

'ಸಲ್ವಾ ಜುಡುಂ' 2005ರಲ್ಲಿ ಪ್ರಾರಂಭವಾದಾಗಿನಿಂದ ಅನೇಕ ಜನರು ಕಾಣೆಯಾಗಿದ್ದಾರೆ. 'ಸಲ್ವಾ ಜುಡುಂ'ನ ಪಡೆಗಳು ಗ್ರಾಮಗಳ ಮೇಲೆ ಎರಗಿದಾಗ, ಸಂಶಯದ ಆಧಾರದ ಮೇಲೆ ಮಂದಿಯನ್ನು ವಶಕ್ಕೆ ತೆಗೆದುಕೊಂಡು ಅವರನ್ನು ಜೈಲುಗಳಿಗೆ ದೂಡಲಾಗುತ್ತದೆ. ಹಾಗೆಯೇ ಆಕ್ರಮಣದ ನಂತರ ಗ್ರಾಮಗಳು ಸ್ಥಳಾಂತರಗೊಳ್ಳುವಾಗ ಅನೇಕರು ಕಾಣೆಯಾಗುತ್ತಾರೆ. ಇಂಥ ವ್ಯಕ್ತಿಗಳ ಪಟ್ಟಿಗಳು ಅಧಿಕಾರಿಗಳ ಬಳಿ ಸಿಗುವುದಿಲ್ಲ. ಕಾಣೆಯಾದ ವ್ಯಕ್ತಿಗಳ ಕುಟುಂಬಗಳು ಅವರ ಪತ್ತೆಗಾಗಿ ದೂರು ನೀಡಲು ಯಾವುದೇ ವ್ಯವಸ್ಥೆಯಿಲ್ಲ. ಈ ಕುರಿತು ಯಾವುದೇ ಮಾಹಿತಿಗಳನ್ನು ನೀಡಾಗುವುದಿಲ್ಲ. ಅನೇಕರನ್ನು ಕಾನೂನಿನ ಪ್ರಕಾರ ದಸ್ತಗಿರಿ ಮಾಡದೆ, ಬಂದೀಖಾನೆಗಳಿಗೆ ತಳ್ಳಲಾಗಿದೆ.

'ಸಲ್ವಾ ಜುಡುಂ'ನ ಅತ್ಯಂತ ದುರಂತದ ಪರಿಣಾಮವೆಂದರೆ ಆದಿವಾಸಿಗಳ ಬಲವಂತದ ವಲಸೆ. ಅವರನ್ನು ನೆಲೆಗೊಳಿಸಿರುವುದು ರಸ್ತೆಬದಿಯ ಶಿಬಿರಗಳಲ್ಲಿ ಹಲವರು ಆಂಧ್ರ ಪ್ರದೇಶಕ್ಕೆ ತೆರಳಿದ್ದಾರೆ. ದಂತೇವಾಢ ಜಿಲ್ಲೆಯಲ್ಲಿ ವನಗಳ ಅತ್ಯಂತ ಒಳಪ್ರದೇಶಗಳಿಗೆ ದೂಡಲಾಗಿದೆ. ಗ್ರಾಮಗಳು ಅಸ್ತವ್ಯಸ್ತವಾಗಿವೆ. ಕುಟುಂಬಗಳು ಛಿದ್ರವಾಗಿವೆ. ಒಂದು ಅಂದಾಜಿನ ಅನ್ವಯ ಕಡಿಮೆ ಎಂದರೆ ಸುಮಾರು 70,000 ಆದಿವಾಸಿಗಳು ಸ್ಥಳಾಂತರಗೊಂಡಿದ್ದಾರೆ. ಇಂಥವರ ಸಂಖ್ಯೆ ಸುಮಾರು 1 ಲಕ್ಷ ಎಂದು ಕೆಲವರು ಅಂದಾಜಿಸಿದ್ದಾರೆ. ಇವರಲ್ಲಿ ಸುಮಾರು ಅರ್ಧ ಮಂದಿ ರಸ್ತೆಬದಿಯ ಶಿಬಿರಗಳೆಂಬ ಕೂಪಗಳಲ್ಲಿ ಯಾವ ರೀತಿಯ ಕನಿಷ್ಟ ಸೌಲಭ್ಯಗಳಿಲ್ಲದೆ ವಾಸಿಸುತ್ತಿದ್ದಾರೆ. ಇಂತಹವರನ್ನು ಭೂತಾಕಾರವಾಗಿ ಕಾಡುತ್ತಿರುವುದು ಹಸಿವು. ಇದರ ನಿವಾರಣೆಗಾಗಿ ಅವರು ಯಾವ ಕಾರ್ಯವನ್ನೂ ಮಾಡಲು ಸಿದ್ದರಾಗಿರುತ್ತಾರೆ.

> **ದಂತೇವಾಢ ಜಿಲ್ಲೆಯಲ್ಲಂತೂ ಜನ ಜೀವನ ಅಸ್ತವ್ಯಸ್ತವಾಗಿದೆ. ಹಾತ್‌ಗಳು, ಶಾಲೆಗಳು, ಅಂಗನವಾಡಿಗಳು, ಆರೋಗ್ಯ ಸೇವೆಗಳು ಮತ್ತಿತರ ಸೌಲಭ್ಯಗಳು ಕುಂಠಿತಗೊಂಡಿವೆ. ಭದ್ರತಾ ಪಡೆಗಳು ಶಾಲೆಗಳನ್ನು ತಮ್ಮ ತಂಗುದಾಣಗಳಾಗಿ ಬಳಸುತ್ತಿವೆ. ರೂಢಿಯಲ್ಲಿರುವ ಅಂತರರಾಷ್ಟ್ರೀಯ ನಿಬಂಧನೆಗಳಿಗೆ ವಿರುದ್ಧವಾಗಿದೆ ಈ ಕ್ರಮ. ಮಾವೋವಾದಿಗಳು ಈ ತರಹದ ಶಾಲೆಗಳನ್ನು ಸ್ಫೋಟಿಸುತ್ತಿದ್ದಾರೆ. ಸರ್ಕಾರ 'ಸಲ್ವಾ ಜುಡುಂ'ನ ಶಿಬಿರಗಳಲ್ಲಿ ವಾಸಿಸುತ್ತಿರುವವರನ್ನು ನಾಗರಿಕರೆಂದೇ ಪರಿಗಣಿಸುತ್ತಿಲ್ಲ. ಅವರಿಗೆ ಮೂಲಭೂತ ಸೌಕರ್ಯಗಳನ್ನೂ ನೀಡುತ್ತಿಲ್ಲ. ದಿನದಿಂದ ದಿನಕ್ಕೆ ಅಲ್ಲಿನ ಪರಿಸ್ಥಿತಿ ಬಿಗಾಡಯಿಸಿ ಆಂತರಿಕ ಯುದ್ದದ ವಾತಾವರಣ ಸೃಷ್ಟಿಯಾಗಿದೆ. ಆದರೆ ಸರ್ಕಾರ ಇದನ್ನು ಒಪ್ಪಿಕೊಳ್ಳುತ್ತಿಲ್ಲ.**

21-01-2007ರಂದು 47, 238 ಗ್ರಾಮಸ್ಥರು 20 ಶಿಬಿರಗಳಲ್ಲಿ ಇದ್ದರೆಂದು ತಿಳಿಸುತ್ತದೆ ಸರ್ಕಾರದ ಅಂಕಿ-ಸಂಖ್ಯೆಯ ಪಟ್ಟಿ. ಹಳ್ಳಿಗಳಿಂದ ನಿರ್ವಸತಿ ಹೊಂದಿರುವವರ ದೈನಂದಿನ ಜೀವನದ ಪಾಡು ನರಕ ಸದೃಶ. ಬೇಸಾಯದ ಚಟುವಟಿಕೆಗಳನ್ನು ಮುಂದುವರೆಸಲಾಗದ ಪರಿಸ್ಥಿತಿ ಅವರದ್ದು. ಅವರು 'ಸಲ್ವಾ ಜುಡುಂ'ನ ಸಭೆಗಳಲ್ಲಿ ಮತ್ತು ರ್‍ಯಾಲಿಗಳಲ್ಲಿ ಭಾಗವಹಿಸಬೇಕು. ಆಕ್ರಮಣ ಪಡೆಗಳಲ್ಲೂ ಸೇರಿಕೊಳ್ಳಬೇಕು.

ಅಧಿಕ ಸಂಖ್ಯೆಯ ಹಳ್ಳಿಗರು ಪಕ್ಕದ ಜಿಲ್ಲೆಗಳಿಗೆ ಮತ್ತು ಆಂಧ್ರ ಪ್ರದೇಶದಂಥ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ಅಲ್ಲಿ ಮರಗಳ ಕೆಳಗೆ, ಚಿಕ್ಕ ಡೇರೆಗಳಲ್ಲಿ ದಯನೀಯ ಸ್ಥಿತಿಯಲ್ಲಿ ವಾಸಿಸುತ್ತಿದ್ದಾರೆ. ಸ್ನೇಹಿತರ ಮತ್ತು ಸಂಬಂಧಿಕರ ಕೃಪಾಕಟಾಕ್ಷದಿಂದ ದಿನಗಳನ್ನು ದೂಡುತ್ತಿದ್ದಾರೆ. ಅಭ್ಯಾಸವಿರದ ಕೂಲಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಗಾಯಕ್ಕೆ ಬರೆ ಹಾಕಿದಂತೆ, ಅರಣ್ಯ ಮತ್ತು ಪೊಲೀಸ್ ಇಲಾಖೆಯವರಿಂದ ಕಿರುಕುಳಕ್ಕೆ ಒಳಗಾಗುತ್ತಾರೆ. ಇಂಥ ಆಂತರಿಕ ನಿರಾಶ್ರಿತರ ಕರಾರುವಾಕ್ಕಾದ ಸಂಖ್ಯೆ ತಿಳಿದುಬಂದಿಲ್ಲ.

ರಸ್ತೆ ಬದಿಯ ಶಿಬಿರಗಳಲ್ಲಿನ ನಿರಾಶ್ರಿತರಿಗೆ ತೀವ್ರವಾಗಿ ಕಾಡುತ್ತಿರುವುದು ಮೂಲಭೂತ ಸೌಕರ್ಯಗಳ ಕೊರತೆ. ಆಹಾರ, ನೀರು, ನೈರ್ಮಲ್ಯದ ಅಭಾವದಿಂದ ಅಲ್ಲಿನ ಜನರು ತತ್ತರಿಸಿಹೋಗಿದ್ದಾರೆ. ಕೆಲವು ಶಿಬಿರಗಳನ್ನು ಖಾಯಂ ಗ್ರಾಮಗಳಾಗಿ ಪರಿವರ್ತಿಸಲಾಗಿದೆ. ಅಲ್ಲಿನ ಆಡಳಿತ ಅರೆ-ಖಾಯಂ ಮನೆಗಳನ್ನು ಕಟ್ಟಿಸಿದ್ದರೂ, ದೀರ್ಘ-ಕಾಲಿಕ ಸೌಲಭ್ಯಗಳನ್ನು ಒದಗಿಸಿಲ್ಲ.

ಮಾವೋವಾದಿಗಳ ಚಟುವಟಿಕೆಗಳ ವಿರುದ್ಧ ಅಲ್ಲಿನ ಸರ್ಕಾರ ಮಾಡುತ್ತಿರುವುದು ಹೆಚ್ಚಿನ ಪೊಲೀಸ್ ಕಾರ್ಯಾಚರಣೆ ಮತ್ತು 'ಸಲ್ವಾ ಜುಡುಂ'ನ ಹೆಸರಿನಲ್ಲಿ ನಾಗರಿಕರ ಬಳಕೆ ಜನರ ಸಮಸ್ಯೆಗಳನ್ನು ಬಗೆ ಹರಿಸಲು ಸರ್ಕಾರ ಪ್ರಜಾಸತ್ತಾತ್ಮಕ ಮತ್ತು ಸಂವಿಧಾನಬದ್ಧ ಕ್ರಮಗಳನ್ನು ಜರುಗಿಸಬೇಕು. ಆದರೆ ಛತ್ತೀಸ್‌ಗಢದಲ್ಲಿ ಇವುಗಳನ್ನು ಗಾಳಿಗೆ ತೂರಲಾಗಿದೆ. ಆದಿವಾಸಿಗಳಲ್ಲಿ ಮನೆಮಾಡಿರುವ ಅಸಮಾಧಾನ, ಅತೃಪ್ತ ಮತ್ತು ಪರಕೀಯ ಭಾವನೆಗಳ ಮೂಲ ಕಾರಣಗಳನ್ನು ಗುರುತಿಸುವುದರಲ್ಲಿ ಮತ್ತು ಅವುಗಳಿಗೆ ಸೂಕ್ತವಾಗಿ ಸ್ಪಂದಿಸುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದು ದಂತೇವಾಢದಂಥ ಜಿಲ್ಲೆಗಳಲ್ಲಿ ಮಾವೋವಾದಿಗಳು ತಳವೂರಲು ಪೂರಕವಾಗುವಂಥ ಪರಿಸ್ಥಿತಿಯನ್ನು ಕಲ್ಪಿಸಿದೆ ಆದಿವಾಸಿಗಳನ್ನು ಹೆಚ್ಚು ಹೆಚ್ಚಾಗಿ ಹಿಂಸೆಯ ತೆಕ್ಕೆಗೆ ತಳ್ಳುತ್ತಿದೆ ಸರ್ಕಾರದ ಈ ಪರಿಯ ಕ್ರಮಗಳು ಮಾವೋವಾದಿಗಳು ಪ್ಯಾರ ಮಿಲಿಟರಿ ಶಕ್ತಿಗಳು ಮತ್ತು 'ಸಲ್ವಾ ಜುಡುಂ' ಜೊತೆ ಸಂಬಂಧವಿರಿಸಿಕೊಂಡವರ ಮೇಲೆ ಆಕ್ರಮಣಗಳನ್ನು ಜಾಸ್ತಿ ಮಾಡುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ಶಂಕಿತರಾದ ವ್ಯಕ್ತಿಗಳೂ ಹಿಂಸೆಗೆ ಗುರಿಯಾಗುತ್ತಿದ್ದಾರೆ.

ದಂತೇವಾಢ ಜಿಲ್ಲೆಯಲ್ಲಂತೂ ಜನಜೀವನ ಅಸ್ತವ್ಯಸ್ತವಾಗಿದೆ. ಹಾತ್‌ಗಳು(ಹಳ್ಳಿ ಸಂತೆಗಳು), ಶಾಲೆಗಳು, ಅಂಗನವಾಡಿಗಳು, ಆರೋಗ್ಯ ಸೇವೆಗಳು ಮತ್ತಿತರ ಸೌಲಭ್ಯಗಳು ಕುಂಠಿತಗೊಂಡಿವೆ. ಭದ್ರತಾ ಪಡೆಗಳು ಶಾಲೆಗಳನ್ನು ತಮ್ಮ ತಂಗುದಾಣಗಳಾಗಿ ಬಳಸುತ್ತಿವೆ. ರೂಢಿಯಲ್ಲಿರುವ ಅಂತರರಾಷ್ಟ್ರೀಯ ನಿಬಂಧನೆಗಳಿಗೆ ವಿರುದ್ಧವಾಗಿದೆ ಈ ಕ್ರಮ. ಮಾವೋವಾದಿಗಳು ಈ ತರಹದ ಶಾಲೆಗಳನ್ನು ಸ್ಫೋಟಿಸುತ್ತಿದ್ದಾರೆ. ಸರ್ಕಾರ 'ಸಲ್ವಾ ಜುಡುಂ'ನ ಶಿಬಿರಗಳಲ್ಲಿ ವಾಸಿಸುತ್ತಿರುವವರನ್ನು ನಾಗರಿಕರೆಂದೇ ಪರಿಗಣಿಸುತ್ತಿಲ್ಲ. ಅವರಿಗೆ ಮೂಲಭೂತ ಸೌಕರ್ಯಗಳನ್ನೂ ನೀಡುತ್ತಿಲ್ಲ. ದಿನದಿಂದ ದಿನಕ್ಕೆ ಅಲ್ಲಿನ ಪರಿಸ್ಥಿತಿ ಬಿಗಾಡಯಿಸಿ ಆಂತರಿಕ ಯುದ್ದದ ವಾತಾವರಣ ಸೃಷ್ಟಿಯಾಗಿದೆ. ಆದರೆ ಸರ್ಕಾರ ಇದನ್ನು ಒಪ್ಪಿಕೊಳ್ಳುತ್ತಿಲ್ಲ.

ಇದುವರೆಗೆ ಪ್ರಸ್ತಾಪಿಸಿರುವುದು ಛತ್ತೀಸ್‌ಗಢ ರಾಜ್ಯದ, ಅದರಲ್ಲೂ ಪ್ರಮುಖವಾಗಿ ದಂತೇವಾಢ ಜಿಲ್ಲೆಯಲ್ಲಿ ಜುಲೈ 2007ರವರೆಗೆ ಜರುಗಿದ ಆತಂಕಕಾರಿ ಘಟನೆಗಳ ವಿವರಗಳು 'ಸಲ್ವಾ ಜುಡುಂ'ನಂಥ ಕಾರ್ಯಾಚರಣೆಯ ವಿರುದ್ಧ ಮಾನವ ಹಕ್ಕು ಸಂಘಟನೆಗಳು ನಮ್ಮ

ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಕದವನ್ನು ತಟ್ಟಿದವು. ಮೊದಲು ಡಾ.ಬಿನಾಯಕ್ ಸೇನ್ ಬಂಧನದ ವಿಷಯದಲ್ಲಿ ಸರ್ವೋಚ್ಚ ನ್ಯಾಯಲಯ ಜಾಮೀನನ್ನು ನೀಡಲಿಲ್ಲ. ಆದರೆ ನಂತರ ಮೇ25, 2009ರಂದು ಅದು ಜಾಮೀನನ್ನು ನೀಡಿತು. ಈ ಮಧ್ಯೆ ಸರ್ವೋಚ್ಚ ನ್ಯಾಯಾಲಯ ಛತ್ತೀಸ್‌ಗಢ ಸರ್ಕಾರದ 'ಸಲ್ವಾ ಜುಡುಂ' ಕಾರ್ಯಚರಣೆ ಕುರಿತು ಆಕ್ಷೇಪಣೆ ಮಾಡಿತು. ಅಲ್ಲದೆ ರಾಜ್ಯ (ಪ್ರಭುತ್ವ) ಒಂದು ವಿಭಾಗದ ಜನರಿಗೆ ಶಸ್ತ್ರಾಸ್ತ್ರಗಳನ್ನು ನೀಡಿ, ಅವರನ್ನು ಮತ್ತೊಂದು ವಿಭಾಗದ ಮಂದಿಯ ಮೇಲೆ ಎರಗುವಂತೆ ಮಾಡುವುದು ಸರಿಯಾದ ಕ್ರಮದಲ್ಲಿ ಎಂದು ಪ್ರತಿಪಾದಿಸಿತು.

ಇಷ್ಟೆಲ್ಲಾ ಆದರೂ, ಸರ್ಕಾರ 'ಸಲ್ವಾ ಜುಡುಂ' ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿಲ್ಲ. ಮೇ 17, 2009ರಂದು ದಂತೇವಾಢ ಜಿಲ್ಲಾ ಆಡಳಿತ ದಂತೇವಾಡದ ಸಮೀಪವಿರುವ ಕನ್ವಲ್‌ನರ್‌ನ ವನವಾಸಿ ಚೇತನ ಆಶ್ರಮವನ್ನು ಧ್ವಂಸ ಮಾಡಿತು. ಈ ಆಶ್ರಮವನ್ನು 1992 ರಲ್ಲಿ ಸ್ಥಾಪಿಸಿದ್ದು ಉತ್ತರ ಪ್ರದೇಶ ಮೂಲದ ಹೀಮಾಂಶು ಕುಮಾರ್ ಎಂಬ ಗಾಂಧೀವಾದಿ. ಬಸ್ತರ್ ಪ್ರದೇಶದ ದಂತೇವಾಢ ಮತ್ತು ಬಿಜಾಪುರ ಜಿಲ್ಲೆಗಳ ಆದಿವಾಸಿಗಳ ಸಬಲೀಕರಣಕ್ಕೆ ಅವರ ಹಕ್ಕುಗಳಿಗೆ ಮತ್ತು ನ್ಯಾಯಕ್ಕೆ ಸಂಬಂಧಿಸಿದ ವಿಚಾರಗಳು ಸಮುದಾಯ ಸ್ವಾಸ್ಥ ಸೇವೆಗಳು ಪ್ರಾಥಮಿಕ ಶಿಕ್ಷಣ ಮುಂತಾದ ವಿಷಯಗಳ ಬಗೆಗೆ ಈ ಆಶ್ರಮ ಕ್ರಿಯಾಶೀಲವಾಗಿ ಶ್ರಮಿಸುತ್ತಿತ್ತು. 'ಸಲ್ವಾ ಜುಡುಂ' ಜಾರಿಯಾದ ತರುವಾಯ, ಆದಿವಾಸಿಗಳಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ದನಿ ಎತ್ತಿತ್ತು. ಭದ್ರತಾ ಪಡೆಗಳು, 'ಸಲ್ವಾ ಜುಡುಂ', ಮತ್ತು ಮಾವೋವಾದಿಗಳ ಹಿಂಸೆಯಿಂದ ನೊಂದ ಆದಿವಾಸಿಗಳಿಗೆ ನೆರವನ್ನು ನೀಡುವ ಸಾಧನವಾಯಿತು. ಆದುದರಿಂದ ಅದು ಈ ಮೂರು ಶಕ್ತಿಗಳ ಕೋಪಕ್ಕೆ ಗುರಿಯಾಯಿತು. ಆದರೆ ಈ ಆಶ್ರಮದ ಎಲ್ಲ ಪ್ರತಿಭಟನೆಯ ಚಟುವಟಿಕೆಗಳು ಅಹಿಂಸಾ ಮಾರ್ಗದಲ್ಲೇ ಸಾಗಿದ್ದವು ಎಂಬುದು ಗಮನೀಯ ವಿಷಯ.

ಹೀಮಾಂಶು ಕುಮಾರ್ ಜಿಲ್ಲಾ ನ್ಯಾಯ ನೆರವು ಸಮಿತಿ ಸೇರಿದಂತೆ ಸರ್ಕಾರದ ಅನೇಕ ಸಮಿತಿಗಳಲ್ಲಿ ಕೆಲಸ ಮಾಡುತ್ತಿದ್ದರು. ಇಷ್ಟಾದರೂ, ಅವರ ಆಶ್ರಮವನ್ನು ಕೆಡವಲಾಯಿತು. ಅವರು ಭೂಮಿಯನ್ನು ಅಕ್ರಮಿಸಿಕೊಂಡು, ಅದರಲ್ಲಿ ಆಶ್ರಮವನ್ನು ಕಟ್ಟಿಕೊಂಡಿದ್ದರು ಎಂಬುದು ಜಿಲ್ಲಾ ಆಡಳಿತ ಆರೋಪ ಕಳೆದ ತಿಂಗಳು (ನ. 2009) ಬೆಂಗಳೂರಿಗೆ ಆಗಮಿಸಿದ್ದ ಹೀಮಾಂಶು ಕುಮಾರ್ ಭಾರತೀಯ ವಿಜ್ಞಾನ ಮಂದಿರ(ಟಾಟಾ ಇನ್‌ಸ್ಟಿಟ್ಯೂಟ್)ದಲ್ಲಿ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತ ತಮ್ಮ ಆಶ್ರಮದ ಭೂಮಿ ಕುರಿತು ಅವರು ಸಂಬಂಧಪಟ್ಟ ಇಲಾಖೆಯ ಜೊತೆ ನಡೆಸಿದ ಪತ್ರ ವ್ಯವಹಾರ ಇತ್ಯಾದಿಗಳ ವಿವರಗಳನ್ನು ನೀಡಿದರು. ಈ ವಿಷಯ sub-judice ಆಗಿದ್ದರೂ, ಆಶ್ರಮವನ್ನು ನಾಶಗೊಳಿಸಿದ್ದು ಖಂಡನೀಯ ಎಂದು ಸತ್ಯಶೋಧನಾ ಸಮಿತಿಯ ವರದಿ ಯೊಂದರಲ್ಲಿ ತಿಳಿಸಲಾಗಿದೆ. ಆ ಸಮಿತಿಯಲ್ಲಿ ಮ್ಯಾಗಸೇಸೆ ಪ್ರಶಸ್ತಿ ವಿಜೇತರಾದ ಡಾ. ಸಂದೀಪ್ ಪಾಂಡೆ, ಹಿರಿಯ ಪತ್ರಕರ್ತ ಮತ್ತು ಮೈನ್‌ಸ್ಟ್ರೀಂ' ಪತ್ರಿಕೆಯ ಸಂಪಾದಕರಾದ ಸುಮಿತ್ ಚಕ್ರವರ್ತಿ ಮುಂತಾದ ಜನಪರ ಕಾರ್ಯಕರ್ತರಿದ್ದರು.

ಇನ್ನೊಂದು ವಿಷಯ. ಈ ಸಂಸ್ಥೆ ಹಲವು extra-judicial ಹತ್ಯೆಗಳಲ್ಲಿ ರಾಜ್ಯ ಆಡಳಿತದ ಕೈವಾಡಯಿರುವುದರ ಬಗೆಗೆ ಸಂದೇಹ ವ್ಯಕ್ತಪಡಿಸಿ, ಅನೇಕ ಪ್ರಶ್ನೆಗಳನ್ನು ಎತ್ತಿದೆ. ಜನವರಿ 8, 2009ರಂದು ಸಿಂಗಾಪವರಂನಲ್ಲಿ 19 ಹಳ್ಳಿಗರ ಹತ್ಯೆಯಾಯಿತು. ಇವರನ್ನು ಮಾವೋವಾದಿಗಳೆಂದು, ಭದ್ರತಾ ಪಡೆಗಳಿಂದ ಜರುಗಿದ ಎನ್‌ಕೌಂಟರ್‌ನಲ್ಲಿ ಇವರು ಸಾವನಪ್ಪಿದರು ಎಂದು ರಾಜ್ಯಸರ್ಕಾರ ಸಮರ್ಥನೆಯನ್ನು ನೀಡಿತು. ನಂತರ ಮಾಧ್ಯಮಗಳು ಮತ್ತು ಮಾನವ ಹಕ್ಕು ಸಂಘಟನೆಗಳು ಸತ್ತವರು ಸಶಸ್ತ್ರಧಾರಿಗಳಾಗಿರದ ಹಳ್ಳಿಗರಾಗಿದ್ದರೆಂದು ಬಹಿರಂಗಗೊಳಿಸಿದವು. ಇಂತಹ ಘಟನೆಗಳ ಬಗೆಗೆ ವನವಾಸಿ ಚೇತನ ಆಶ್ರಮ ಸರ್ಕಾರದಿಂದ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಒತ್ತಾಯಿಸುತ್ತ ಬಂದಿದೆ. ಸಿಂಗಾವರಂ ಹತ್ಯೆಗಳ ಕುರಿತು ಮ್ಯಾಜಿಸ್ಟ್ರೇಟ್ ಮಟ್ಟದ ತನಿಖೆ ಮಾಡಿದ್ದು SDM –ಅಂಕಿತ್ ಆನಂದ್ ಆತನೆ ಆಶ್ರಮದ ಧ್ವಂಸದ ನೇತೃತ್ವ ವಹಿಸಿದ್ದ ಅಧಿಕಾರಿಯಾಗಿದ್ದು ಕಾಕತಾಳಿಯವೇನಲ್ಲ.

ಛತ್ತೀಸ್‌ಗಢದಲ್ಲಿ ಪ್ರಭುತ್ವ ನಕ್ಸಲೀಯರನ್ನು ಸದೆಬಡಿಯಲು ಮಿಲಿಟರಿ ವಿಧಾನಗಳನ್ನು ಹೆಚ್ಚಾಗಿ ಬಳಸುತ್ತಿದೆ. ಯಾರು ಪ್ರಭುತ್ವದ('ಸಲ್ವಾ ಜುಡುಂ' ಒಳಗೊಂಡು) ಜೊತೆಗಿಲ್ಲವೋ ಅಂಥವರನ್ನು ಸಾರಾಸಗಟಾಗಿ ನಕ್ಸಲೀಯರ ಬೆಂಬಲಿಗರೆಂದು ಬಿಂಬಿಸಲಾಗುತ್ತಿದೆ. ಪ್ರಸ್ತುತ ಅಧಿಕಾರಿಗಳಿಗೆ ಬೇಕಿರುವುದು ನಕ್ಸಲೀಯರ ಪ್ರಭಾವವಿರುವ ಪ್ರದೇಶಗಳಲ್ಲಿ ತಮ್ಮ ಅಧಿಕಾರದ ಪುನಸ್ಥಾಪನೆ. ಆದುದರಿಂದ ಈ ಪ್ರದೇಶಗಳಲ್ಲಿ ಯಾವುದೇ ಜನಪರ ಸಂಘಟನೆಯಾಗಲಿ ಅಥವಾ ಸರ್ಕಾರೇತರ ಸಂಸ್ಥೆಯಾಗಲಿ ಕಾರ್ಯ ನಿರ್ವಹಿಸುವುದನ್ನು ಅವರು ಸಹಿಸುವುದಿಲ್ಲ. ಈ ಮನೋಧರ್ಮಕ್ಕೆ ಉತ್ತಮ ನಿದರ್ಶನವೆಂದರೆ ಆಶ್ರಮದ ಧ್ವಂಸ. ಆದರೆ ಈ ತರಹದ ಪ್ರಭುತ್ವದ ಧೋರಣೆ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಮೌಲ್ಯಗಳಿಗೆ ಮಾರಕವಾಗಿ ಪರಿಣಮಿಸುತ್ತದೆ.

ಛತ್ತೀಸ್‌ಗಢದಲ್ಲಿ ಅದರಲ್ಲೂ ದಂತೇವಾಢದಲ್ಲಿ ಸಹಜ ಸ್ಥಿತಿ ಮರಳಲು ಅಲ್ಲಿನ ಸರ್ಕಾರ ವಿಶೇಷ ಸಾರ್ವಜನಿಕ ಭದ್ರತಾ ಕಾಯಿದೆ(2005)ಯನ್ನು ರದ್ದು ಮಾಡಬೇಕು. 'ಸಲ್ವಾ ಜುಡುಂ'ನ್ನು ವಿಸರ್ಜಿಸಬೇಕು. ಮಾನವ ಹಕ್ಕು ಹೋರಾಟಗಾರರು, ಸಾಮಾಜಿಕರ ಕಾರ್ಯಕರ್ತರ ಮೇಲಾಗುತ್ತಿರುವ ಕಿರುಕುಳವನ್ನು ನಿಲ್ಲಿಸಬೇಕು. ರಾಜಕೀಯ ವಿಷಯಗಳಿಗೆ ರಾಜಕೀಯ ಪರಿಹಾರಗಳು ದೊರಕುವಂತಾಗಲು ಸೂಕ್ತ ಸಂವಾದಗಳು ಜರುಗಬೇಕು. ಅದಕ್ಕೆ ಪೂರಕವಾಗುವಂಥ ಸನ್ನಿವೇಷ ಸಿದ್ಧವಾಗಲು ಸರ್ಕಾರ ಸರ್ವರೀತಿಯ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಬೇಕು. ಮಾವೋವಾದಿಗಳು ಎಲ್ಲ ಬಗೆಯ ಹಿಂಸಾ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕು. 'ಸಲ್ವಾ ಜುಡುಂ' ಕಾರ್ಯಾಚರಣೆಗಳಿಗೆ ಅಪ್ರಾಪ್ತ ವಯಸ್ಸಿನವರನ್ನು/ಹದಿವಯಸ್ಸಿನವರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂಬ ಆರೋಪವಿದೆ. ಮಾವೋವಾದಿಗಳ ಮೇಲೂ ಅಪಾದನೆಯಿದೆ. ಇದು ನಿಲ್ಲಬೇಕು ವಿವಿಯ ಬಣಗಳು ಮಾತುಕತೆ ನಡೆಸುವಂಥ ವಾತಾವರಣ ಸೃಷ್ಟಿಯಾಗಲು ಮಾವೋವಾದಿಗಳು ಮುಂದಾಗಬೇಕು.

ದಂತೇವಾಢ ಜಿಲ್ಲೆಯ ಕೆಲವು ವಿವರಗಳು:

ದಂತೇವಾಢ ಜಿಲ್ಲೆಯಿರುವುದು ಛತ್ತೀಸ್‌ಗಢ ರಾಜ್ಯದ ದಕ್ಷಿಣದ ತುದಿಯಲ್ಲಿ. ಅದಕ್ಕೆ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ ಜೊತೆ ಗಡಿಗಳಿವೆ. ಜಿಲ್ಲೆಯಲ್ಲಿರುವುದು 1354 ಗ್ರಾಮಗಳು. ಅವುಗಳಲ್ಲಿ 455 ಸಂಪೂರ್ಣ ಆದಿವಾಸಿ ಗ್ರಾಮಗಳು ಮತ್ತು 458 ಕ್ಕೂ ಹೆಚ್ಚಿನ ಗಾಮಗಳಲ್ಲಿ ಶೇ.90ರಷ್ಟು ಆದಿವಾಸಿಗಳಿದ್ದಾರೆ. ಅಂದರೆ ಆದಿವಾಸಿ ಗ್ರಾಮಗಳು ಶೇ.75 ರಷ್ಟಿವೆ.

ಗ್ರಾಮವಾಸಿಗಳು ಹೆಚ್ಚಾಗಿ ಕೃಷಿ ಮತ್ತು ಅರಣ್ಯಗಳ ಮೇಲೆ ಅವಲಂಬಿತರಾಗಿದ್ದಾರೆ. ಒಟ್ಟು ಗ್ರಾಮಭೂಮಿಯಲ್ಲಿ, ಶೇ.29ರಷ್ಟು ಮಾತ್ರ ಕೃಷಿ ಚಟುವಟಿಕೆಗಳಿಗೆ ಒಳಗಾಗಿದೆ. ಇನ್ನರ್ಧ ಪ್ರದೇಶದಲ್ಲಿ ಅರಣ್ಯಗಳಿವೆ. ಉಳಿದದ್ದು ಬಂಜರು ಅಥವಾ ಕೃಷಿಗೆ ಯೋಗ್ಯವಲ್ಲದ ಭೂಮಿ, ನೀರಾವರಿ ಸೌಲಭ್ಯವಿರುವುದು ಶೇ 2ರಷ್ಟು ಭೂಮಿಯಲ್ಲಿ ಮಾತ್ರ.

ಗ್ರಾಮೀಣ ಪ್ರದೇಶದಲ್ಲಿ ಪುರುಷರ ಸಾಕ್ಷರತಾ ಮಟ್ಟ ಶೇ.29. ಮಹಿಳೆಯರದ್ದು ಕೇವಲ ಶೇ.14 ಒಟ್ಟು ಗ್ರಾಮೀಣ ಸಾಕ್ಷರತಾ ಮಟ್ಟ–ಶೇ.21. 214 ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳೇ ಇಲ್ಲ. 107 ಗ್ರಾಮಗಳಲ್ಲಿ ಇಂಥ ಶಾಲೆಯಿರುವುದು 5ಕಿಮಿಗೂ ಹೆಚ್ಚಿನ ದೂರದಲ್ಲಿ. 1354 ಗ್ರಾಮಗಳ ಪೈಕಿ 1161 ಗ್ರಾಮಗಳಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಸೌಲಭ್ಯವಿಲ್ಲ. ಕೇವಲ 26 ಹಳ್ಳಿಗಳಲ್ಲಿ ಮಾತ್ರ ಪ್ರಾಥಮಿಕ ಆರೋಗ್ಯ ಘಟಕವಿದೆ.

ಜಿಲ್ಲೆಯ ಬಹುತೇಕ ಜನರು ಬಡವರು. ಆದರೆ ಅಲ್ಲಿನ ವನಗಳು ಮತ್ತು ಖನಿಜಯುಕ್ತ ಭೂಮಿ ಶ್ರೀಮಂತವಾಗಿದೆ. ಎಲ್ಲ ರಾಜ್ಯ ಸರ್ಕಾರಗಳಂತೆ, ಅಲ್ಲಿನ ರಾಜ್ಯ ಸರ್ಕಾರವೂ ಅಭಿವೃದ್ಧಿಯ ಜಪ ಮಾಡುತ್ತದೆ. ಅದು ಸಂಪನ್ಮೂಲಗಳ ಅಭಿವೃದ್ಧಿಯ ಬಗೆಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದೆ. ಅದೂ ಖಾಸಗಿ ಲಾಭಕ್ಕೆ ಅಲ್ಲಿನ ಟಾಟಾ, ಎಸ್ಸಾರ್‌ಗಳಂಥ ದೊಡ್ಡ ಕಾರ್ಪೊರೇಟ್ ಕಂಪನಿಗಳ ಜೊತೆ ಉಕ್ಕು ಉದ್ದಿಮೆಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಒಪಂದಗಳನ್ನು ಮಾಡಿಕೊಂಡಿದೆ.

ಇದು ಈ ಜಿಲ್ಲೆಯ ಸ್ವಾತಂತ್ರ್ಯ ನಂತರದ ಆರು ದಶಕಗಳ ಅಭಿವೃದ್ಧಿಯ ಕಥೆ ಇತರೆಡೆಗಳಲ್ಲಿ ಆಗಿರುವಂತೆ, ಇಲ್ಲೂ ವ್ಯಾಪಾರಿ ಕುಟುಂಬಗಳು, ಅಧಿಕಾರಿಶಾಹಿಯ ವ್ಯಕ್ತಿಗಳು, ಕೆಲವು ಶ್ರೀಮಂತ ಆದಿವಾಸಿ ನಾಯಕರು ಮತ್ತು ಅವರಂಥವರು ಅಭಿವೃದ್ಧಿ ಹೊಂದಿದ್ದಾರೆ. ಆದರೆ ಈ ತರಹದ ಮಂದಿ ಅಲ್ಪಸಂಖ್ಯಾತರಾಗಿದ್ದಾರೆ. □

ದಂತೇವಾಢ ಜಿಲ್ಲೆಯಿರುವುದು ಛತ್ತೀಸ್‌ಗಢ ರಾಜ್ಯದ ದಕ್ಷಿಣದ ತುದಿಯಲ್ಲಿ. ಅದಕ್ಕೆ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ ಜೊತೆ ಗಡಿಗಳಿವೆ. ಜಿಲ್ಲೆಯಲ್ಲಿರುವುದು 1354 ಗ್ರಾಮಗಳು. ಅವುಗಳಲ್ಲಿ 455 ಸಂಪೂರ್ಣ ಆದಿವಾಸಿ ಗ್ರಾಮಗಳು ಮತ್ತು 458 ಕ್ಕೂ ಹೆಚ್ಚಿನ ಗಾಮಗಳಲ್ಲಿ ಶೇ.90ರಷ್ಟು ಆದಿವಾಸಿಗಳಿದ್ದಾರೆ. ಅಂದರೆ ಆದಿವಾಸಿ ಗ್ರಾಮಗಳು ಶೇ.75 ರಷ್ಟಿವೆ. ಗ್ರಾಮವಾಸಿಗಳು ಹೆಚ್ಚಾಗಿ ಕೃಷಿ ಮತ್ತು ಅರಣ್ಯಗಳ ಮೇಲೆ ಅವಲಂಬಿತರಾಗಿದ್ದಾರೆ. ಒಟ್ಟು ಗ್ರಾಮಭೂಮಿಯಲ್ಲಿ, ಶೇ.29ರಷ್ಟು ಮಾತ್ರ ಕೃಷಿ ಚಟುವಟಿಕೆಗಳಿಗೆ ಒಳಗಾಗಿದೆ.

ಡಿಸೆಂಬರ್ ಆರು

ವಾಸಿಯಾಗದ ಗಾಯಗಳಿಗೆ ಉಪ್ಪು ಸವರಿ
ವಾರಸುದಾರರಿಲ್ಲದೆ ಕೊಳೆತುಹೋದ ಹೆಣಗಳಿಗೆ ಮತ್ತೇ
ಜೀವ ಬರುವ ಹೊತ್ತೆ ಡಿಸೆಂಬರ್ ಆರು ಬಂದಿದೆ
ನನ್ನೂರಿನಲ್ಲಿ
ಡಿಸೆಂಬರ್ ಆರು ಹೇಗಿರುತ್ತದೆಂದು
ಡಿಸೆಂಬರ್ ಐದರಂದೇ ಹೇಳಬಲ್ಲೆ

ಆ ಕೊರೆವ ವ್ಯಾಕುಲದ ಚಳಿಯಲ್ಲಿ
ಕ್ರಿಸ್‌ಮಸ್ ಮರಗಳಿಗೆ ಗ್ರೀಟಿಂಗ್ ಕಟ್ಟುತ್ತಾ
ಬರಿಗಾಲ ಕ್ರಿಸ್ತನನ್ನು ತಮ್ಮ ಬೀದಿಗೆ ಕರೆತರುವ ಹುಡುಗರು
ಉರಿವ ಸೂರ್ಯನ ನೋಡಿ ನಗುವರು
ಆ ರಾತ್ರಿ ಆತ್ಮವನ್ನು ಪಣಕ್ಕಿಟ್ಟು
ಕಪ್ಪು ಚೂರಿಯಲ್ಲಿ ಅವರು
ಡಿಸೆಂಬರ್ ಆರರ ಕತ್ತು ಕುಯ್ಯುತ್ತಾರೆ
ಕ್ಯಾಲೆಂಡರಿನಲ್ಲಿ ಆ ದಿನಾಂಕವನ್ನು ಕೆಂಪಕ್ಷರದಲ್ಲಿ
ಗುರುತುಮಾಡಲಾಗಿದೆ

ಯಾರದೋ ಸಾವನ್ನು ಜಗತ್ತಿನ ಕಿವಿಗೆ ಮುಟ್ಟಿಸುವ
ಹಜರತ್ ಖ್ವಾಜಾ ಗರೀಬ್ ನವಾಬರ ಮಸೀದಿಯ
ಮೈಕ್‌ನ ಬಾಯಿಗೆ ಇವತ್ತೇಕೋ ಹೊಲಿಗೆ ಹಾಕಲಾಗಿದೆ
ಸ್ವರ್ಗದ ವಿಳಾಸ ಕಳೆದುಕೊಂಡವರ ಎದೆಗಳಿಗೆ ಮಾತ್ರ
ಸಿಡಿಲು ಬಡಿಯುವುದು ನಿಯಮ

ಸೂತಕದ ಮೆರವಣಿಗೆಯಲ್ಲಿ
ಓಡಲಾಗದೆ ಸಿಕ್ಕಿಬಿದ್ದವರ
ಚೆಡ್ಡಿಜೇಬುಗಳಲ್ಲಿ ಸಿಕ್ಕ ಉರ್ದು ಶಾಯರಿಗಳು
ಈಗ ಫತ್ವಾದ ತೊಗಲು ತೊಟ್ಟಿವೆ

ಹಳೆಯ ಗಾಯಗಳಿಗೆ ಮದ್ದು ಕೊಟ್ಟ ಹಕೀಮನನ್ನು
ಕಾಲ ಇದೇ ದಿನ ಕರುಣೆ ತೋರದೆ ಕೊಂದುಹಾಕಿತು

ಮಸೀದಿಯ ನಮಾಜುಗಳಲ್ಲಿ ಹಗುರಾದ
ಎದೆಗಳಿಗೆ
ಮುಳ್ಳು ಬಿಗಿಯಲಾಗಿದೆ

ಇತ್ತ ಚರ್ಚ್‌ನ ಪಶ್ಚಾತ್ತಾಪದ
ಕೋಣೆಯಲ್ಲಿ
ಕ್ರಿಸ್ತನನ್ನು ಮತ್ತೆಮತ್ತೆ ಕೊಂದವರು
ತಮ್ಮ ರಟ್ಟೆಗಳಿಗೆ ಜೀವದ
ತುತ್ತುಣಿಸುವಂತೆ ರೋಧಿಸತೊಡಗಿದ್ದಾರೆ

ಕ್ಷಮೆಯ ಪಾಠಗಳನ್ನು ಹೇಳಿಕೊಟ್ಟ
ಸಂತನನ್ನು
ನಾಳೆ ಕೊಲ್ಲುವ ಸುದ್ದಿಯಿದೆ

ಈಗ ಚರ್ಚ್‌ನ ಆಲಯದಲ್ಲಿ
ಪಾಪಿಗಳನ್ನು ಏಳೆಪ್ಪತ್ತು ಸಲ
ಕ್ಷಮಿಸುವ
ಹೊಸ ಪಾಠಗಳು ಶುರುವಾಗಿವೆ

ಡಿಸೆಂಬರ್ ಆರರ ಹೆಕ್ಕತ್ತಿನ ಮೇಲೆ
ಡಿಸೆಂಬರ್ ಏಳು
ಸೇಡುಕೇಡಿನ ಊರ ತುಂಬ
ಧರ್ಮದ ಹಾದರ...

○ ಕೆ. ಎಲ್. ಚಂದ್ರಶೇಖರ್ ಐಜೂರ್

ಜ್ಯೋತಿ ಬಸು: ರಾಜಕಾರಣದ ಆಶಾಕಿರಣ

ನಾ ದಿವಾಕರ

ಕಳೆದ ಒಂದು ಶತಮಾನದ ಭಾರತದ ರಾಜಕಾರಣದಲ್ಲಿ ಕೇಳಿ ಬರುವ ಕೆಲವೇ ರಾಜನೀತಿಜ್ಞರ ಪೈಕಿ ಎದ್ದು ಕಾಣುವ ಒಂದು ವ್ಯಕ್ತಿತ್ವ ಎಂದರೆ, ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಧುರೀಣ ಮತ್ತು ಸಮಕಾಲೀನ ರಾಜಕಾರಣದ ಅತ್ಯಂತ ಪ್ರಭಾವಶಾಲಿ ನಾಯಕ, ಕಾಮ್ರೇಡ್ ಜ್ಯೋತಿಬಸು. ಜನವರಿ 17, 2010ರಂದು ನಿಧನರಾದ ಜ್ಯೋತಿಬಸು ಅವರ ವ್ಯಕ್ತಿತ್ವ ಎಷ್ಟು ಅನುಕರಣೀಯವೋ ಅಷ್ಟೇ ವಿವಾದಾಸ್ಪದವೂ ಹೌದು. ತಮ್ಮ ಜೀವಿತಾವಧಿಯಲ್ಲೇ ಭಾರತದ ರಾಜಕೀಯ ವೇದಿಕೆಗಳಲ್ಲಿ ಚರ್ಚೆಗೆ ಗ್ರಾಸವಾಗಿದ್ದ ಬಸು ಅವರ ರಾಜಕೀಯ ಹಾದಿ, ಅವರ ಸಾವಿನ ನಂತರವೂ ಮುಂದುವರೆದಿರುವುದೇ ಅವರ ಹೆಗ್ಗಳಿಕೆ. ವೈಜ್ಞಾನಿಕ ಸಂಶೋಧನೆಗೆ ದೇಹದಾನ ಮಾಡಿದ ಪ್ರಪ್ರಥಮ ರಾಷ್ಟ್ರೀಯ ನಾಯಕರೆನಿಸಿದ ಬಸು ಜೀವಿಸಿದ್ದು 95ವರ್ಷ. ಅವರ ರಾಜಕೀಯ ಬದುಕು 70ವರ್ಷ. ಅದರಲ್ಲಿ ಒಂದು ಪ್ರಮುಖ ರಾಜಕೀಯ ಪಕ್ಷದ ಕೇಂದ್ರ ಬಿಂದುವಾದ ಪಾಲಿಟ್‌ಬ್ಯೂರೋ ಸದಸ್ಯರಾಗಿ ಕಳೆದದ್ದು 41 ವರ್ಷ, ವಿಧಾನಸಭಾ ಸದಸ್ಯರಾಗಿ ಮೆರೆದದ್ದು 58 ವರ್ಷ, ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದು ಸತತ 23 ವರ್ಷ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳೇನೇ ಇದ್ದರು ಇಷ್ಟೊಂದು ದೀರ್ಘಕಾಲದ ರಾಜಕಾರಣದಲ್ಲಿ ತೊಡಗಿದ್ದು, ದೇಶದ ದುಡಿಯುವ ವರ್ಗಗಳ ಪ್ರತಿನಿಧಿಯಾಗಿ ತಮ್ಮ ಅಳಿಲು ಸೇವೆಯನ್ನು ಮಾಡಿದ ಬಸು ಓರ್ವ ಮೇರು ವ್ಯಕ್ತಿಯಾಗಿ ನಿಲ್ಲುವುದು ಅವರ ಸರಳತೆ, ಸಜ್ಜನಿಕೆ ಮತ್ತು ರಾಜಕೀಯ ನಿಷ್ಠುರತೆಗಳಿಗಾಗಿ ಎಂದರೆ ಅತಿಶಯೋಕ್ತಿಯಾಗಲಾರದು.

ಪ್ರಸಕ್ತ ಯುವ ಪೀಳಿಗೆಗೆ ಒಂದು ಮಾದರಿ, ಆದರ್ಶಮಯ, ಅನುಕರಣೀಯ ವ್ಯಕ್ತಿತ್ವಗಳೇ ಗೋಚರಿಸದಿರುವ ಈ ಸಂದರ್ಭದಲ್ಲಿ, ಜ್ಯೋತಿಬಸು ಅವರ ಜೀವನವನ್ನು ಪರಿಚಯಿಸಿದರೆ, ನಮ್ಮೊಳಗೂ ಓರ್ವ ಆದರ್ಶಮಯ ವ್ಯಕ್ತಿ ಇದ್ದರೆಂದು ಯುವ ಜನತೆ ಹೆಮ್ಮೆ ಪಡಬಹುದು. ತಮ್ಮ ಅಂತಿಮ ಘಳಿಗೆಯಲ್ಲಿ ಬಸು ಕಟ್ಟಾ ಮಾರ್ಕ್ಸ್‌ವಾದಿಯಾಗಿ ನಿರ್ಗಮಿಸಿದರೋ ಅಥವಾ ಸೋಷಿಯಲ್ ಡೆಮಾಕ್ರಟ್ ಆಗಿ ನಿರ್ಗಮಿಸಿದರೋ ಎಂಬ ವಾದ ವಿವಾದಗಳ ನಡುವೆಯೇ ಕಾಣಬಹುದಾದ ಒಂದು ಗಂಭೀರ ಸಂಗತಿ ಎಂದರೆ ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಬಸು ಅವರು ಕೈಗೊಂಡ ಜನಪರ ಕಾರ್ಯಕ್ರಮಗಳು ಮತ್ತು ವೈಯ್ಯಕ್ತಿಕವಾಗಿ ಅನುಸರಿಸಿದ ಸರಳ ಜೀವನ ಶೈಲಿ. ತಮ್ಮ 23 ವರ್ಷಗಳ ಅಧಿಕಾರಾವಧಿಯಲ್ಲಿ ಬಸು ಕೈಗೊಂಡ ಎಲ್ಲಾ ಯೋಜನೆಗಳೂ ಸಫಲತೆಯನ್ನು ಕಂಡಿಲ್ಲ. ಹಾಗೆಯೇ ತಮ್ಮ ರಾಜಕೀಯ ಜೀವನದಲ್ಲಿ ಬಸು ತಮ್ಮ ಸೈದ್ಧಾಂತಿಕ ನಿಲುವುಗಳಿಗೆ ತೀವ್ರ ಬದ್ಧತೆಯನ್ನೂ ತೋರಿಲ್ಲ. ಆದಾಗ್ಯೂ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಬಸು ಓರ್ವ ಪ್ರಭಾವಶಾಲಿ ನಾಯಕರಾಗಿ ಹೊರ ಹೊಮ್ಮಿದ್ದಲ್ಲಿ ಅದು ಅವರ ರಾಜಕೀಯ ದಕ್ಷತೆ, ಚತುರತೆ, ಸಮಯ ಪ್ರಜ್ಞೆ ಮತ್ತು ರಾಜನೀತಿಯ ದ್ಯೋತಕವಾಗಿದೆ.



ಸಂಘರ್ಷದ ಹಾದಿ

ಬಂಗಾಲದ ಮೇಲ್ ವರ್ಗದ ಬಂಗಾಲಿ ಕುಟುಂಬದಲ್ಲಿ 1914ರಲ್ಲಿ ಜನಿಸಿದ ಬಸು, ರಾಜಕೀಯ ಹಿನ್ನೆಲೆಯಲ್ಲಿ ಬೆಳೆದವರೇನಲ್ಲ. ತಂದೆ ನಿಶಿಕಾಂತ್ ಬಸು ವೈದ್ಯರಾಗಿದ್ದವರು. ತಂದೆಯ ಸೋದರ ವಸಾಹತು ಆಳ್ವಿಕೆಯಲ್ಲಿ ನ್ಯಾಯಾಧೀಶರಾಗಿದ್ದರು. ಶ್ರೀಮಂತಿಕೆಯಲ್ಲೇ ಬೆಳೆದ ಬಸು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ ನಡೆಸಿದ್ದು ಹುಡುಗಿಯರ ಶಾಲೆಯಲ್ಲಿ. ಆರು ವರ್ಷದ ಬಸು ಇಡೀ ಶಾಲೆಯಲ್ಲಿ ಏಕೈಕ ಬಾಲಕನಾಗಿದ್ದುದು ಒಂದು ವೈಶಿಷ್ಟ್ಯ. ಬಸು ಕುಟುಂಬದಲ್ಲಿ ರಾಜಕೀಯ ಪ್ರಭಾವ ಅಷ್ಟಾಗಿ ಇಲ್ಲದಿದ್ದರೂ, ದೇಶದ ವಿಮೋಚನೆಯ ಬಗ್ಗೆ ಕನಸುಗಳಿದ್ದವು, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಕಳಕಳಿ, ಗೌರವ ಇತ್ತು. ಬಸು ಎಂಟನೆಯ ತರಗತಿಯಲ್ಲಿದ್ದಾಗ, 1930ರಲ್ಲಿ, ಚಿತ್ತಗಾಂಗ್ ಸಶಸ್ತ್ರ ದಂಗೆ ಸಂಭವಿಸಿತ್ತು. ಸ್ವಾತಂತ್ರ ಹೋರಾಟಗಾರರು ಈ ದಂಗೆಯಲ್ಲಿ ತಮ್ಮ ಪ್ರಾಣಗಳನ್ನು ಒತ್ತೆ ಇಟ್ಟು ಹೋರಾಡಿದ್ದರು. ಬಸು ಓದುತ್ತಿದ್ದ ಕ್ಸೇವಿಯರ್ ಶಾಲೆಯ ಆಡಳಿತ ವರ್ಗ ಈ ದಂಗೆಯನ್ನು ಖಂಡಿಸಿ ಸುತ್ತೋಲೆ ಹೊರಡಿಸಿತ್ತು. ಈ ಸಂದರ್ಭದಲ್ಲಿ ಬಸು ತಮ್ಮ ಪ್ರತಿರೋಧದ ದನಿ ಎತ್ತಿದ್ದರು. ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ ಪದವಿಯನ್ನು ಮುಗಿಸಿದ ಬಸು ಕುಟುಂಬದವರ ಇಚ್ಛೆಯ ಮೇರೆಗೆ ಕಾನೂನು ವ್ಯಾಸಂಗಕ್ಕಾಗಿ ಬ್ರಿಟನ್ನಿಗೆ ತೆರಳಬೇಕಾಯಿತು.

ಬ್ರಿಟನ್‌ನಲ್ಲಿ ಕಾನೂನು ಪದವಿಯನ್ನೂ ಪಡೆದ ನಂತರ ಕಮ್ಯುನಿಸ್ಟ್ ನಾಯಕ ಭೂಪೇಶ್ ಗುಪ್ತಾ ಮತ್ತು ಸ್ನೇಹಾಂಶು ಆಚಾರ್ಯ ಅವರ ಪ್ರಭಾವದಿಂದ ಮಾರ್ಕ್ಸ್‌ವಾದಿ ವಿಚಾರಧಾರೆಯೆಡೆಗೆ ಆಕರ್ಷಿತರಾಗಿದ್ದರು. ಬ್ರಿಟನ್ನಿನಲ್ಲಿ ಕಮ್ಯುನಿಸ್ಟ್ ಚಳುವಳಿಯನು ಮುನ್ನಡೆಸಿದ್ದ ರಜನಿ ಪಾಮೆ ದತ್, ಬೆನ್ ಬ್ರಾಡ್ಲಿ, ಹ್ಯಾರಿ ಪಾಲಿಟ್ ಮುಂತಾದವರ ಗರಡಿಯಲ್ಲಿ ಮಾರ್ಕ್ಸ್‌ವಾದಿ ವಿಚಾರಧಾರೆಯನ್ನು ಅಧ್ಯಯನ ಮಾಡಿದ ಬಸು ಹೆರಾಲ್ಡ್ ಲಸ್ಕಿ ಅವರ ಫ್ಯಾಸಿಸ್ಟ್ ವಿರೋಧಿ ನಿಲುವಿನಿಂದಲೂ ಪ್ರಭಾವಿತರಾಗಿದ್ದರು. ಕೃಷ್ಣ ಮೆನನ್ ಅವರ ನೇತೃತ್ವದ ಇಂಡಿಯನ್ ಲೀಗ್ ಸೇರಿದ ಬಸು ನಂತರ ಲಂಡನ್ ಮಜ್ಲಿಸ್ ಸಂಘಟನೆಯನ್ನು ಸ್ಥಾಪಿಸಿದ್ದರು. ಭಾರತದ ವಿಮೋಚನೆಗಾಗಿ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುವುದೇ ಅಲ್ಲದೆ, ಇಂಗ್ಲೆಂಡಿಗೆ ಭೇಟಿ ನೀಡುತ್ತಿದ್ದ ಭಾರತೀಯ ನಾಯಕರಿಗೆ ಅನುಕೂಲ ಮಾಡಿಕೊಡುವುದೂ ಲಂಡನ್ ಮಜ್ಲಿಸ್‌ನ ಆದ್ಯತೆಯಾಗಿತ್ತು. ಈ ಸಂದರ್ಭದಲ್ಲೇ ಜ್ಯೋತಿಬಸುಗೆ ನೆಹರು, ಸುಭಾಷ್ ಚಂದ್ರ ಬೋಸ್, ಗಾಂಧೀಜಿ ಮತ್ತಿತರ ರಾಷ್ಟ್ರೀಯ ನಾಯಕರ ಒಡನಾಟ ಪ್ರಾರಂಭವಾಗಿತ್ತು.

ಬ್ಯಾರಿಸ್ಟರ್ ಹುದ್ದೆಗಳಿಸಿ 1940ರಲ್ಲಿ ಭಾರತಕ್ಕೆ ಹಿಂದಿರುಗಿದ

ಬ್ರಿಟನ್‌ನಲ್ಲಿ ಕಾನೂನು ಪದವಿಯನ್ನೂ ಪಡೆದ ನಂತರ ಕಮ್ಯುನಿಸ್ಟ್ ನಾಯಕ ಭೂಪೇಶ್ ಗುಪ್ತಾ ಮತ್ತು ಸ್ನೇಹಾಂಶು ಆಚಾರ್ಯ ಅವರ ಪ್ರಭಾವದಿಂದ ಮಾರ್ಕ್ಸ್‌ವಾದಿ ವಿಚಾರಧಾರೆಯೆಡೆಗೆ ಆಕರ್ಷಿತರಾಗಿದ್ದರು. ಬ್ರಿಟನ್ನಿನಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಮುನ್ನಡೆಸಿದ್ದ ರಜನಿ ಪಾಮೆ ದತ್, ಬೆನ್ ಬ್ರಾಡ್ಲಿ, ಹ್ಯಾರಿ ಪಾಲಿಟ್ ಮುಂತಾದವರ ಗರಡಿಯಲ್ಲಿ ಮಾರ್ಕ್ಸ್‌ವಾದಿ ವಿಚಾರಧಾರೆಯನ್ನು ಅಧ್ಯಯನ ಮಾಡಿದ ಬಸು ಹೆರಾಲ್ಡ್ ಲಸ್ಕಿ ಅವರ ಫ್ಯಾಸಿಸ್ಟ್ ವಿರೋಧಿ ನಿಲುವಿನಿಂದಲೂ ಪ್ರಭಾವಿತರಾಗಿದ್ದರು. ಕೃಷ್ಣ ಮೆನನ್ ಅವರ ನೇತೃತ್ವದ ಇಂಡಿಯನ್ ಲೀಗ್ ಸೇರಿದ ಬಸು ನಂತರ ಲಂಡನ್ ಮಜ್ಲಿಸ್ ಸಂಘಟನೆಯನ್ನು ಸ್ಥಾಪಿಸಿದ್ದರು.

ನಂತರ ಭಾರತೀಯ ಕಮ್ಯುನಿಸ್ಟ್ ಪಕ್ಷದ (ಅವಿಭಜಿತ ಸಿಪಿಐ) ಪೂರ್ಣಕಾಲಿಕ ಕಾರ್ಯಕರ್ತರಾಗಿ ಸಕ್ರಿಯರಾದ ಬಸು ಅಂದಿನ ದಿನಗಳಲ್ಲಿ ಭೂಗತರಾಗಿದ್ದ ಕಮ್ಯುನಿಸ್ಟ್ ನಾಯಕರೊಡನೆ ಸಂಪರ್ಕ ಸಾಧಿಸುವುದರಲ್ಲಿ ತೊಡಗಿಸಿಕೊಂಡಿದ್ದರು. ಭೂಗತ ಕಾರ್ಯಕರ್ತರಿಗೆ ಆಸರೆ ನೀಡುವುದು, ರಹಸ್ಯ ಸಭೆ ಏರ್ಪಡಿಸುವುದು, ಪಕ್ಷದವಂತಿಗೆ ಸಂಗ್ರಹಿಸುವುದು ಅವರ ಪ್ರಮುಖ ಕಾರ್ಯಗಳಾಗಿದ್ದವು. 1942ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಪಕ್ಷವು ತೀವ್ರ ಟೀಕೆಗೊಳಗಾದರೂ ಎದೆ ಗುಂದದೆ ಮುನ್ನಡೆದ ಬಸು 1943ರ ಬಂಗಾಲದ ಕ್ಷಾಮದ ಸಂದರ್ಭದಲ್ಲಿ ಪರಿಹಾರ ಕಾರ್ಯಗಳಲ್ಲಿ ಸಂಪೂರ್ಣ ತೊಡಗಿಸಿಕೊಂಡಿದ್ದರು.

1944ರಲ್ಲಿ ಕಾರ್ಮಿಕ ಸಂಘಟನೆಗಳಲ್ಲೂ ತೊಡಗಿಸಿಕೊಂಡ ಬಸು ಬಂಗಾಲ ನಾಗಪುರ ರೈಲ್ವೆ ಕಾರ್ಮಿಕ ಸಂಘಟನೆಯನ್ನು ಸ್ಥಾಪಿಸಿ, 1946ರಲ್ಲಿ ರೈಲ್ವೆ ಕ್ಷೇತ್ರದಿಂದಲೇ ಚುನಾವಣೆಗೆ ಸ್ಪರ್ಧಿಸಿದ್ದರು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಧುರೀಣ ಹುಮಾಯುನ್ ಕಬೀರ್ ಅವರನ್ನು ಸೋಲಿಸಿದ ಬಸು ನಂತರ ಸತತವಾಗಿ 1996ರ ಚುನಾವಣೆಗಳವರೆಗೂ (1972 ಹೊರತುಪಡಿಸಿ) ಸೋಲನ್ನೇ ಕಾಣಲಿಲ್ಲ. 1946ರಲ್ಲಿ ಬಂಗಾಲದಲ್ಲಿ ಕೋಮು ಹಿಂಸಾಚಾರ ಭುಗಿಲೆದ್ದಾಗ ಬಸು ನೇತೃತ್ವದ ಕಮ್ಯುನಿಸ್ಟ್ ಕಾರ್ಯಕರ್ತರು ಕೋಮು ಸೌಹಾರ್ದತೆಯನ್ನು ಪುನರ್‌ಸ್ಥಾಪಿಸುವಲ್ಲಿ ಹೆಚ್ಚಿನ ಶ್ರಮ ವಹಿಸಿದ್ದರು. 1948ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಿದ್ದ ಸಂದರ್ಭದಲ್ಲಿ ಭೂಗತರಾಗಿಯೇ ತಮ್ಮ ಹೋರಾಟವನ್ನು ಮುಂದುವರೆಸಿದ್ದ ಬಸು, 1950–60ರ ದಶಕದ ಕಾಂಗ್ರೆಸ್ ಆಳ್ವಿಕೆಯಲ್ಲಿ ಹಲವಾರು ಬಾರಿ ಜೈಲುವಾಸ ಅನುಭವಿಸಿದ್ದರು. ಕಲ್ಕತ್ತಾದ ಟ್ರಾಮ್ ಶುಲ್ಕದಲ್ಲಿ ಏರಿಕೆಯನ್ನು ವಿರೋಧಿಸಿ ನಡೆದ ಹೋರಾಟದಲ್ಲಿ 1953ರಲ್ಲಿ ಬಸು ಜೈಲುವಾಸ ಅನುಭವಿಸಿದ್ದರು. 1952ರ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ 28 ಸ್ಥಾನಗಳನ್ನು ಗಳಿಸಿದರೂ ಬಸು ಅವರಿಗೆ ವಿರೋಧ ಪಕ್ಷದ ಸ್ಥಾನ ನೀಡಲು ಸಭಾಧ್ಯಕ್ಷರು ನಿರಾಕರಿಸಿದ್ದರು. ಪುನಃ 1957ರಲ್ಲಿ ಬರನಗೋರ್ ಕ್ಷೇತ್ರದಲ್ಲಿ ಜಯಗಳಿಸಿದ ಬಸು ವಿರೋಧ ಪಕ್ಷದ ನಾಯಕರಾಗಿದ್ದರು.

1967 ಮತ್ತು 69ರ ಸಂಯುಕ್ತ ರಂಗದ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಬಸು 1977 ರಿಂದ 2000 ದವರೆಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. 1977ರಲ್ಲಿ ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರಕ್ಕೆ ನಾಯಕತ್ವ ನೀಡಿದ ಬಸು ಪಂಚಾಯತ್ ರಾಜ್ ವ್ಯವಸ್ಥೆಯ ಹರಿಕಾರರೆಂದೇ ಹೇಳಬಹುದು. ಪಂಚಾಯತ್ ರಾಜ್ ವ್ಯವಸ್ಥೆಯೊಂದಿಗೇ, ದೇಶದ ಶ್ರಮಿಕವರ್ಗಗಳ ಬಹುದಿನಗಳ ಬೇಡಿಕೆಯಾಗಿದ್ದ ಭೂಸುಧಾರ ಣೆಗಳನ್ನೂ ಜಾರಿಗೊಳಿಸಿದ ಬಸು ಶೀಘ್ರವಾಗಿ ಜನಾನುರಾಗಿ ಮುಖ್ಯಮಂತ್ರಿಯಾಗಿ ಹೊರಹೊಮ್ಮಿದ್ದರು. 1989ರಲ್ಲಿ ರಾಜೀವ್ ಗಾಂಧಿ ಸರ್ಕಾರ ಕೇಂದ್ರದಲ್ಲಿ ಪಂಚಾಯತ್ ರಾಜ್ ಮಸೂದೆಯನ್ನು ಜಾರಿಗೊಳಿಸಲು ಬಸು ಅವರ ಕ್ರಮವೇ ಬುನಾದಿಯಾಗಿತ್ತು. 1970ರ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ ಕೇಂದ್ರ–ರಾಜ್ಯ ಸರ್ಕಾರಗಳ ಸಂಬಂಧಗಳನ್ನು ಕುರಿತು ಜ್ಯೋತಿ ಬಸು ತಮ್ಮ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, 1980ರಲ್ಲಿ ಸರ್ಕಾರಿಯಾ ಸಮಿತಿಯ ನೇಮಕಕ್ಕೂ ಕಾರಣವಾಗಿತ್ತು.

ಬ್ಯಾರಿಸ್ಟರ್ ಹುದ್ದೆಗಳಿಸಿ 1940ರಲ್ಲಿ ಭಾರತಕ್ಕೆ ಹಿಂದಿರುಗಿದ ನಂತರ ಭಾರತೀಯ ಕಮ್ಯುನಿಸ್ಟ್ ಪಕ್ಷದ (ಅವಿಭಜಿತ ಸಿಪಿಐ) ಪೂರ್ಣಕಾಲಿಕ ಕಾರ್ಯಕರ್ತರಾಗಿ ಸಕ್ರಿಯರಾದ ಬಸು ಅಂದಿನ ದಿನಗಳಲ್ಲಿ ಭೂಗತರಾಗಿದ್ದ ಕಮ್ಯುನಿಸ್ಟ್ ನಾಯಕರೊಡನೆ ಸಂಪರ್ಕ ಸಾಧಿಸುವುದರಲ್ಲಿ ತೊಡಗಿಸಿಕೊಂಡಿದ್ದರು. ಭೂಗತ ಕಾರ್ಯಕರ್ತರಿಗೆ ಆಸರೆ ನೀಡುವುದು, ರಹಸ್ಯ ಸಭೆ ಏರ್ಪಡಿಸುವುದು, ಪಕ್ಷದ ವಂತಿಗೆ ಸಂಗ್ರಹಿಸುವುದು ಅವರ ಪ್ರಮುಖ ಕಾರ್ಯಗಳಾಗಿದ್ದವು. 1942ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಪಕ್ಷವು ತೀವ್ರ ಟೀಕೆಗೊಳಗಾದರೂ ಎದೆಗುಂದದೆ ಮುನ್ನಡೆದ ಬಸು 1943ರ ಬಂಗಾಲದ ಕ್ಷಾಮದ ಸಂದರ್ಭದಲ್ಲಿ ಪರಿಹಾರ ಕಾರ್ಯಗಳಲ್ಲಿ ಸಂಪೂರ್ಣ ತೊಡಗಿಸಿಕೊಂಡಿದ್ದರು.

1980ರ ದಶಕದಲ್ಲಿ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳನ್ನು ಒಂದೇ ವೇದಿಕೆಯಡಿ ಸೇರಿಸಿದ ಬಸು, ಕಾಂಗ್ರೆಸ್ಸೇತರ ರಾಜ್ಯ ಸರ್ಕಾರಗಳ ಬಗ್ಗೆ ಕೇಂದ್ರ ಸರ್ಕಾರ ಅನುಸರಿಸುತ್ತಿದ್ದ ಮಲತಾಯಿ ಧೋರಣೆಯ ವಿರುದ್ಧ ಪ್ರತಿಭಟಿಸಿದ್ದರು. 1989ರಲ್ಲಿ ಅತಂತ್ರ ಸಂಸತ್ ಸೃಷ್ಟಿಯಾದಾಗ ಎಲ್ಲಾ ಸಮಾನ ಮನಸ್ಕ ಭಾಜಪ–ಕಾಂಗ್ರೆಸ್ಸೇತರ ಪಕ್ಷಗಳನ್ನು ಒಂದೆಡೆ ಸೇರಿಸಿ ರಾಷ್ಟ್ರೀಯ ರಂಗ–ಎಡರಂಗಗಳ ಸಮ್ಮಿಶ್ರ ಸರ್ಕಾರದ ಸ್ಥಾಪನೆಯಲ್ಲೂ ಬಸು ಪ್ರಮುಖ ಪಾತ್ರವಹಿಸಿದ್ದರು. 1996ರಲ್ಲಿ ತೃತೀಯ ರಂಗದ ಸರ್ಕಾರ ಕೇಂದ್ರದಲ್ಲಿ ಸ್ಥಾಪನೆಯಾದಾಗ ಪ್ರಧಾನಮಂತ್ರಿ ಹುದ್ದೆಯನ್ನು ನಿರಾಕರಿಸುವ ಮೂಲಕ ಬಸು ಇತಿಹಾಸ ಸೃಷ್ಟಿಸಿದ್ದರು. 2000ದಲ್ಲಿ ಅನಾರೋಗ್ಯದ ಕಾರಣ ಖುದ್ದಾಗಿ ಮುಖ್ಯಮಂತ್ರಿ ಪದವಿಯನ್ನು ತ್ಯಜಿಸಿದ ಬಸು, 2005ರ ಪಕ್ಷದ 18ನೆಯ ಸಮಾವೇಶದಲ್ಲಿ ಪಕ್ಷದ ಪಾಲಿಟ್‌ಬ್ಯೂರೊ ತ್ಯಜಿಸಲು ನಿರ್ಧರಿಸಿದ್ದರೂ 2008ರವರೆಗೂ ಪಕ್ಷ ಅವರನ್ನು ಬಿಟ್ಟಿರಲಿಲ್ಲ. ಅಂತಿಮವಾಗಿ 2008ರ ಪಾಲಿಟ್ ಬ್ಯೂರೋದಿಂದ ಬಸು ಅವರನ್ನು ಕೈಬಿಡಲಾಯಿತು. 62 ವರ್ಷಗಳ ಸಕ್ರಿಯ ರಾಜಕೀಯ ಜೀವನದ ಅಂಕದ ಪರದೆ ಜಾರಿತ್ತು.

ಸಾಫಲ್ಯ ವೈಫಲ್ಯಗಳ ಸಂಘರ್ಷ

ಬಸು ಅವರ ಮರಣಾನಂತರ ದೇಶದ ಪ್ರಮುಖ ಮಾಧ್ಯಮಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು, ವಾದ ವಿವಾದಗಳನ್ನು ಅವಲೋಕಿಸಿದಾಗ ಬಸು ಅವರ ವ್ಯಕ್ತಿತ್ವವನ್ನೇ ಕೇಂದ್ರೀಕರಿಸಿದ್ದುದು ಸ್ಪಷ್ಟವಾಗುತ್ತದೆ. ಇನ್ನು ಕೆಲವು ಮಾಧ್ಯಮಗಳಲ್ಲಿ ಬಸು ಅವರನ್ನು ಸಂಭಾವಿತ ಕಮ್ಯುನಿಸ್ಟ್ (ಜೆಂಟಲ್‌ಮ್ಯಾನ್ ಕಮ್ಯುನಿಸ್ಟ್) ಎಂದು ಸಂಭೋದಿಸುವುದರ ಮೂಲಕ, ಕಮ್ಯುನಿಸ್ಟರಲ್ಲಿ ಸಂಭಾವಿತರಿರುವುದು ಅಪವಾದ ಎನ್ನುವ ಕುಚೋದ್ಯವನ್ನೂ ಕಾಣಬಹುದಿತ್ತು. ಪ್ರಸಿದ್ಧ ಕನ್ನಡ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನದಲ್ಲಿ (ಆಂಗ್ಲ ಲೇಖನದ ಅನುವಾದ) ಬಸು ಅವರನ್ನು ಯಾವುದೇ ಲೆಕ್ಕಕ್ಕಿಲ್ಲದ ರಾಜಕೀಯ ನಾಯಕರಂತೆಯೂ ಬಿಂಬಿಸಲಾಗಿತ್ತು. ಕೆಲವು ಮಾಧ್ಯಮಗಳಲ್ಲಿ ಬಸು ಅವರ ವ್ಯಕ್ತಿತ್ವವನ್ನೇ ಕೇಂದ್ರೀಕರಿಸುವ ಮೂಲಕ ಅವರ ಸಾಧನೆಗಳನ್ನು ಮರೆಮಾಚುವ ಹುನ್ನಾರವನ್ನೂ ಕಾಣಬಹುದಿತ್ತು. ಜಾಗತೀಕರಣ ಮತ್ತು ಬಂಡವಾಳಶಾಹಿ ಅಭಿವೃದ್ಧಿ ಪಥವನ್ನು ಆರಾಧಿಸುವ ಹಲವು ವ್ಯಾಖ್ಯಾನಕಾರರಿಗೆ ಬಸು ಜನವಿರೋಧಿ ನಾಯಕರಾಗಿ ಕಂಡುಬಂದಿದ್ದೇ ಅಲ್ಲದೆ, ಪ್ರಸ್ತುತ ಪಶ್ಚಿಮ ಬಂಗಾಲದ ಎಲ್ಲಾ ಸಮಸ್ಯೆಗಳಿಗೂ, ಹಿಂದುಳಿಯುವಿಕೆಗೂ ಬಸು ನೇರವಾಗಿ ಹೊಣೆಗಾರರಾಗಿ ಕಂಡಿದ್ದರು. ಜಾಗತೀಕರಣದ ತುತ್ತೂರಿ ಊದುವ ಸುದ್ದಿ ವಾಹಿನಿಗಳಲ್ಲಿ ಕೆಲವು ಯುವಕರನ್ನು ಸಂದರ್ಶಿಸಿ, ಬಸು ಅವರ ನೀತಿಗಳಿಂದ ಬಂಗಾಲದ ಯುವಕರು ದೇಶವನ್ನೇ ಬಿಟ್ಟು ಹೋಗುತ್ತಿದ್ದಾರೆ ಎಂಬ ಅಭಿಪ್ರಾಯವನ್ನೂ ಮೂಡಿಸಲಾಯಿತು.

ಆದರೆ ಈ ಎಲ್ಲಾ ವಾದ–ವಿವಾದಗಳ ನಡುವೆಯೂ, ಬಂಡವಾಳ ನೀತಿಯನ್ನು ಅನುಸರಿಸುವ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ, ಬಹುತೇಕ ಆಡಳಿತ ನೀತಿಗಳಿಗೆ ಕೇಂದ್ರ ಸರ್ಕಾರವನ್ನೇ ಅವಲಂಬಿಸಬೇಕಾದ ಸಂದರ್ಭದಲ್ಲಿ, ಒಂದು ಪ್ರತಿಷ್ಠಿತ ರಾಜ್ಯದಲ್ಲಿ ಕಮ್ಯುನಿಸ್ಟ್ ಧೋರಣೆಯುಳ್ಳ ಸರ್ಕಾರವನ್ನು ನಡೆಸುವುದು ಸುಲಭದ ಮಾತೇನಲ್ಲ. ಭಾರತೀಯ ಆಳುವ ವರ್ಗಗಳು ಕಮ್ಯುನಿಸ್ಟ್ ಚಳುವಳಿ ಮತ್ತು ಆಡಳಿತವನ್ನು ದಮನಿಸಲು ಅನುಸರಿಸದ ತಂತ್ರಗಳೇ ಇಲ್ಲವೆನ್ನಬಹುದು. 1957ರ ಕೇರಳ ಸರ್ಕಾರದ ಪ್ರಕರಣವೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ. ಇಂದಿಗೂ ಭಾರತೀಯ ಪ್ರಭುತ್ವದ ಮನಸ್ಥಿತಿ ಬದಲಾಗಿಲ್ಲ. ಆದರೆ ಜನತೆಯ ಇಚ್ಛೆಗೆ ವಿರುದ್ಧವಾಗಿ ಕ್ರಮ ಕೈಗೊಳ್ಳಲಾಗದೆ, ಬಂಗಾಲ, ಕೇರಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಸರ್ಕಾರಗಳು ಯಶಸ್ಸು ಕಂಡಿವೆ. ಈ ಸಾಂದರ್ಭಿಕ ಗೊಂದಲಗಳ ಚೌಕಟ್ಟಿನಲ್ಲೇ ಜ್ಯೋತಿಬಸು ಅವರ ಸಾಧನೆ, ಸಾಫಲ್ಯ, ವೈಫಲ್ಯಗಳನ್ನು ವಿಶ್ಲೇಷಿಸಬೇಕಾಗಿದೆ.

"ವೈಯ್ಯಕ್ತಿಕ ನೆಲೆಗಟ್ಟಿನಲ್ಲಿ ನೋಡುವುದಾದರೆ ದೇಶದ ಪ್ರತಿಯೊಂದು ಪೀಳಿಗೆಗೂ ಜ್ಯೋತಿಬಸು ಅವರ ಪ್ರಬಲ ವ್ಯಕ್ತಿತ್ವ ದರ್ಶನವಾಗಿದೆ. ನನಗಿಂತಲೂ ಮುಂಚಿನ ಪೀಳಿಗೆಯವರಿಗೆ ಆತ ದುಡಿಯುವ ವರ್ಗಗಳ ಹಿತಾಸಕ್ತಿಗಾಗಿ ಹೋರಾಡುವ ಕಾರ್ಮಿಕ ನಾಯಕರಾಗಿದ್ದರು, ನನ್ನ ನಂತರದ ಪೀಳಿಗೆಯವರಿಗೆ ಬಸು ಓರ್ವ ಅನುಕರಣೀಯ ರಾಜಕಾರಣಿಯಾಗಿ, ಕೋಮುವಾದಿಗಳ ವಿರುದ್ಧ ಜನಸಂಘಟನೆಯನ್ನು ಬೆಳೆಸುವ ನೇತಾರರಾಗಿ, ಜಾಗತೀಕರಣದ ವಿರುದ್ಧ ಹೋರಾಡಲು ಜನತೆಯನ್ನು ಪ್ರೇರೇಪಿಸುವವರಾಗಿ, ಸಮ್ಮಿಶ್ರ ಸರ್ಕಾರದ ರೂವಾರಿಯಾಗಿ ಕಂಡುಬರುತ್ತಾರೆ. ನನ್ನ ಪೀಳಿಗೆಯವರಿಗೆ ಬಸು ನವ ಬಂಗಾಲದ ನಿರ್ಮಾತೃವಾಗಿ ಕಂಡುಬರುತ್ತಾರೆ" ಎನ್ನುತ್ತಾರೆ ಪ್ರಭಾತ್ ಪಟ್ನಾಯಕ್. (ಫ್ರಂಟ್‌ಲೈನ್ 12–2–10)

ಭಾರತೀಯ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿರುವ ಬಸು ಅವರ ಈ ಕಲ್ಪನೆ ಅರ್ಥಹೀನವೇನಲ್ಲ. ತಮ್ಮ ನೇರ ನಡೆನುಡಿ, ನಿಷ್ಠುರತೆ, ನಿಸ್ಪೃಹತೆ ಮತ್ತು ಸರಳತೆಗಳಿಂದಲೇ ಜನಾನುರಾಗಿಯಾಗಿದ್ದ ಬಸು ಅವರ ಸಾಧನೆಗಳನ್ನು ಮುಕ್ತ ಮನಸ್ಸಿನಿಂದ ವಿಶ್ಲೇಷಿಸುವುದು ವಿವೇಕಯುತವೆನಿಸುತ್ತದೆ. 1977ರಲ್ಲಿ ಎಡರಂಗ ಸರ್ಕಾರ ಅಸ್ತಿ

ತ್ವಕ್ಕೆ ಬರುವ ಮುನ್ನ ಪಶ್ಚಿಮ ಬಂಗಾಲ ಅಧಃಪತನದತ್ತ ಸಾಗುತ್ತಿದ್ದ ಹಿಂದುಳಿದ ರಾಜ್ಯವಾಗಿತ್ತು. ವಸಾಹತು ಆಳ್ವಿಕೆಯಲ್ಲಿ ಕೃಷಿ ಉತ್ಪನ್ನದಲ್ಲಿ ತೀವ ಹಿನ್ನಡೆಯನ್ನು ಕಂಡಿದ್ದ ಬಂಗಾಲದಲ್ಲಿ, ಸ್ವಾತಂತ್ರ್ಯಾನಂತರ ಕೆಲವು ಅಭಿವೃದ್ಧಿ ಕಾರ್ಯಗಳು ನಡೆದರೂ, ಅಪೇಕ್ಷಿತ ಮಟ್ಟದಲ್ಲಿ ಇರಲಿಲ್ಲ. ಕೃಷಿ ಮತ್ತು ಕೈಗಾರಿಕೆ ಎರಡೂ ಕ್ಷೇತ್ರಗಳು ತೀವ್ರ ಬಿಕ್ಕಟ್ಟು ಎದುರಿಸುತ್ತಿದ್ದವು. 1960ರಲ್ಲಿ ಯುದ್ಧಗಳ ಪರಿಣಾಮವಾಗಿ ಆರ್ಥಿಕ ಬಿಕ್ಕಟ್ಟು ತಲೆದೋರಿದ ನಂತರದಲ್ಲಿ ರಾಜ್ಯದ ನಿರುದ್ಯೋಗ ಸಮಸ್ಯೆಯೂ ಉಲ್ಬಣಗೊಂಡಿತ್ತು. 1967ರ ನಕ್ಸಲ್‌ಬಾರಿ ಚಳುವಳಿ ಈ ಸನ್ನಿವೇಶದ ದ್ಯೋತಕವಾಗಿತ್ತು. 1970ರ ದಶಕದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ಸರ್ಕಾರ ತನ್ನ ದಮನಕಾರಿ ಫ್ಯಾಸಿಸ್ಟ್ ನೀತಿಯಿಂದ ಎಲ್ಲ ರೀತಿಯ ಜನಪರ ಚಳುವಳಿಗಳನ್ನೂ ಹತ್ತಿಕ್ಕಲಾರಂಭಿಸಿತ್ತು.

1977ರಲ್ಲಿ ಸಿಪಿಎಂ ನೇತೃತ್ವದಲ್ಲಿ, ಬಸು ಅವರ ಸಾರಥ್ಯದಲ್ಲಿ ಸ್ಥಾಪಿತವಾದ ಪಶ್ಚಿಮ ಬಂಗಾಲದ ಎಡರಂಗ ಸರ್ಕಾರ ಅಧಿಕಾರ ಗ್ರಹಣ ಮಾಡಿದ ಕೆಲವೇ ದಿನಗಳಲ್ಲಿ ರಾಜ್ಯದ ದಿಕ್ಕನ್ನೇ ಬದಲಾಯಿಸಿದ್ದು ಈಗ ಇತಿಹಾಸ. ಈ ಸಾಧನೆಯನ್ನು ಅಲ್ಲಗಳೆಯುವರಿದ್ದರೂ, 1977ಕ್ಕೂ ಮುನ್ನ ಬಂಗಾಲದಲ್ಲಿದ್ದ ಪರಿಸ್ಥಿತಿಯನ್ನು ಅರಿತಿದ್ದವರಿಗೆ ಈ ಸೂಕ್ಷ್ಮತೆಗಳು ಅರಿವಾಗುತ್ತದೆ. ವಸಾಹತುಶಾಹಿ ಆಳ್ವಿಕೆಯಲ್ಲಿ ಬಂಗಾಲದ ಕೃಷಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿತ್ತು. ನೀರಾವರಿಯಲ್ಲಿ ಬಂಡವಾಳ ಹೂಡಿಕೆ ನಗಣ್ಯವಾಗಿತ್ತು. ಸ್ವಾತಂತ್ರ್ಯಾನಂತರ ನೀರಾವರಿ ಯೋಜನೆಗಳು ಜಾರಿಗೊಂಡರೂ ಕೃಷಿ ಕ್ಷೇತ್ರದಲ್ಲಿ ಅಭೂತಪೂರ್ವ ಬೆಳವಣಿಗೆಯೇನೂ ಆಗಿರಲಿಲ್ಲ. ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನೆದುರಿಸಿ, ಸಂಯುಕ್ತ ರಂಗ ಸರ್ಕಾರ ಅನುಷ್ಠಾನಗೊಳಿಸಿದ್ದ ಭೂಸುಧಾರಣಾ ಕಾರ್ಯಕ್ರಮಗಳನ್ನು ಮುಂದುವರೆಸಿದ ಎಡರಂಗ ಸರ್ಕಾರ ಆಪರೇಷನ್ ಬರ್ಗಾ ಯೋಜನೆಯಡಿ ಹಿಡುವಳಿದಾರರಿಗೆ ಭೂಮಿಯ ಹಕ್ಕನ್ನು ನೀಡಿದ್ದೇ ಅಲ್ಲದೆ ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ಹಂಚುವ ಮೂಲಕ ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ತಂದಿತ್ತು.

ಇದೇ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಜನಗಳ ಕೈಗೇ ಅಧಿಕಾರ ನೀಡುವ ಪರಂಪರೆಗೆ ಎಡರಂಗ ಸರ್ಕಾರ ನಾಂದಿ ಹಾಡಿತ್ತು. ಭಾರತದ ಇತರ ರಾಜ್ಯಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಯಶಸ್ಸಿಗೆ ಬುನಾದಿ ಹಾಕಿದ್ದೇ ಪಶ್ಚಿಮಬಂಗಾಲದ ಎಡರಂಗ ಸರ್ಕಾರ ಎಂಬ ಅಂಶ ನಿರ್ವಿವಾದ. ಈ ಅಧಿಕಾರ ವಿಕೇಂದ್ರೀಕರಣದ ಪರಿಣಾಮವಾಗಿ ಗ್ರಾಮೀಣ ಬಂಗಾಲದಲ್ಲಿ ಸಾಮಾಜಿಕ ಸನ್ನಿವೇಶವೂ ಬದಲಾಯಿತು. ನವ ಉತ್ಪಾದಕೀಯ ಶಕ್ತಿಗಳ ಉದಯಕ್ಕೂ ಈ ಪ್ರಕ್ರಿಯೆ ನಾಂದಿ ಹಾಡಿತ್ತು. ಕೃಷಿ ಉತ್ಪಾದನೆಯೂ ಹೆಚ್ಚಾಗಿತ್ತು. ಗ್ರಾಮೀಣ ಮಾರುಕಟ್ಟೆ ವೃದ್ಧಿಯಾಯಿತು. 1980–90ರ ಅವಧಿಯಲ್ಲಿ ಧಾನ್ಯಗಳ ಬಳಕೆಯಲ್ಲಿ ಪ್ರಗತಿ ಸಾಧಿಸಿದ ಎರಡೇ ರಾಜ್ಯಗಳೆಂದರೆ ಕೇರಳ ಮತ್ತು ಪಶ್ಚಿಮ ಬಂಗಾಲ ಎನ್ನುವುದು ಗಮನಾರ್ಹ ಅಂಶ.

ಎಡರಂಗ ಸರ್ಕಾರದ ಭೂ ಸುಧಾರಣಾ ಕ್ರಮಗಳಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಹಿಡುವಳಿದಾರರಿಗೆ, ಗೇಣಿದಾರರಿಗೆ ಕಾನೂನು ರಕ್ಷಣೆ ನೀಡುವ ಮೂಲಕ ಉಚ್ಚಾಟನೆಯನ್ನು ತಡೆಗಟ್ಟಿದ್ದು. ಆಪರೇಷನ್ ಬರ್ಗಾ ಯೋಜನೆಯಲ್ಲಿ ಕೈಗೊಂಡ ಈ ಕ್ರಮದಿಂದ ಕೃಷಿಕರು ಸಂಘಟಿತರಾಗಲೂ ಅನುಕೂಲವಾಯಿತು. ಇಂದು ಬಂಗಾಲದಲ್ಲಿ 15 ಲಕ್ಷಕ್ಕೂ ಹೆಚ್ಚು ಭೂ ಹಿಡುವಳಿದಾರರಿದ್ದಾರೆ. ಒಟ್ಟು ಕೃಷಿ ಕುಟುಂಬಗಳ ಪೈಕಿ ಶೇ. 20ರಷ್ಟು ಅಧಿಕೃತವಾಗಿ ನೊಂದಾಯಿತರಾಗಿದ್ದು, 11 ಲಕ್ಷ ಎಕರೆ ಭೂಮಿಯನ್ನು ಪಡೆದಿದ್ದಾರೆ. ಇವರ ಪೈಕಿ ಶೇ. 41ರಷ್ಟು ದಲಿತ–ಆದಿವಾಸಿಗಳಿದ್ದಾರೆ. ಎರಡನೆಯ ಅಂಶವೆಂದರೆ ನಿಗದಿತ ಮಿತಿಗಿಂತಲೂ ಹೆಚ್ಚುವರಿ ಭೂಮಿಯ ಹಂಚಿಕೆ. ಈ ಕ್ರಮವನ್ನು ಕೇವಲ ಶಾಸನದ ಮೂಲಕ ಕೈಗೊಳ್ಳದೆ ಎಡರಂಗ ಸರ್ಕಾರ ಜನಾಂದೋಲನದ ರೂಪದಲ್ಲಿ ಕೈಗೊಂಡಿತ್ತು. 2008ರ ವೇಳೆಗೆ ಬಂಗಾಲದಲ್ಲಿ 29,71,853 ಭೂಹೀನರಿಗೆ 11,22,116 ಎಕರೆ ಭೂಮಿಯನ್ನು ಹಂಚಲಾಗಿತ್ತು. ಇಡೀ ದೇಶದಲ್ಲಿ 49,64,995 ಎಕರೆ ಭೂಮಿಯನ್ನು 54,57,522 ಭೂಹೀನರಿಗೆ ಹಂಚಲಾಗಿದೆ. ಅಂದರೆ ದೇಶದ ಕೃಷಿ ಭೂಮಿಯಲ್ಲಿ ಕೇವಲ ಶೇ. 3.5 ರಷ್ಟನ್ನು ಹೊಂದಿರುವ ಬಂಗಾಲದಲ್ಲಿ ಶೇ. 22.6 ರಷ್ಟು ಭೂಹಂಚಿಕೆಯಾಗಿದ್ದು, ಶೇ. 54.5ರಷ್ಟು ಭೂಹೀನರು ಫಲಾನುಭವಿಗಳಾಗಿದ್ದಾರೆ. ಇವರ ಪೈಕಿ ದಲಿತ–ಆದಿವಾಸಿಗಳ ಸಂಖ್ಯೆ ಶೇ. 55ರಷ್ಟಿದೆ. ಎಡರಂಗ ಸರ್ಕಾರದ ಭೂಸುಧಾರಣಾ ಕ್ರಮಗಳ ಫಲವಾಗಿ ರಾಜ್ಯದ ಶೇ. 84 ರಷ್ಟು ಭೂಮಿಯನ್ನು ಐದು ಎಕರೆಗೂ ಕಡಿಮೆ ಭೂಮಿ ಹೊಂದಿರುವ ಸಣ್ಣ ರೈತರೇ ಪಡೆದಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಈ ಪ್ರಮಾಣ ಶೇ. 43ರಷ್ಟಿದೆ. ಇದು ಬಸು ಸರ್ಕಾರದ ಮಹತ್ತರ ಕೊಡುಗೆ ಅಲ್ಲವೇ ?

> **ಭಾರತೀಯ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿರುವ ಬಸು ಅವರ ಈ ಕಲ್ಪನೆ ಅರ್ಥಹೀನವೇನಲ್ಲ. ತಮ್ಮ ನೇರ ನಡೆನುಡಿ, ನಿಷ್ಠುರತೆ, ನಿಸ್ಪೃಹತೆ ಮತ್ತು ಸರಳತೆಗಳಿಂದಲೇ ಜನಾನುರಾಗಿಯಾಗಿದ್ದ ಬಸು ಅವರ ಸಾಧನೆಗಳನ್ನು ಮುಕ್ತ ಮನಸ್ಸಿನಿಂದ ವಿಶ್ಲೇಷಿಸುವುದು ವಿವೇಕಯುತವೆನಿಸುತ್ತದೆ. 1977ರಲ್ಲಿ ಎಡರಂಗ ಸರ್ಕಾರ ಅಸ್ತಿತ್ವಕ್ಕೆ ಬರುವ ಮುನ್ನ ಪಶ್ಚಿಮ ಬಂಗಾಲ ಅಧಃಪತನದತ್ತ ಸಾಗುತ್ತಿದ್ದ ಹಿಂದುಳಿದ ರಾಜ್ಯವಾಗಿತ್ತು. ವಸಾಹತು ಆಳ್ವಿಕೆಯಲ್ಲಿ ಕೃಷಿ ಉತ್ಪನ್ನದಲ್ಲಿ ತೀವ್ರ ಹಿನ್ನಡೆಯನ್ನು ಕಂಡಿದ್ದ ಬಂಗಾಲದಲ್ಲಿ, ಸ್ವಾತಂತ್ರ್ಯಾನಂತರ ಕೆಲವು ಅಭಿವೃದ್ಧಿ ಕಾರ್ಯಗಳು ನಡೆದರೂ, ಅಪೇಕ್ಷಿತ ಮಟ್ಟದಲ್ಲಿ ಇರಲಿಲ್ಲ.**

ಈ ಸಾಧನೆಗಳ ಬೆನ್ನಲ್ಲೇ 1990ರ ದಶಕದ ನಂತರದಲ್ಲಿ ಬಸು ಸರ್ಕಾರದ ವೈಫಲ್ಯಗಳನ್ನೂ ಗಮನಿಸದಿರಲಾಗುವುದಿಲ್ಲ. ಭಾರತ ಮುಕ್ತ ಮಾರುಕಟ್ಟೆಯನ್ನು ಸ್ವೀಕರಿಸಿದ ನಂತರದಲ್ಲಿ ಕೇಂದ್ರ ಸರ್ಕಾರದ ನವ ಉದಾರವಾದಿ ನೀತಿಗಳು ರಾಜ್ಯ ಸರ್ಕಾರಗಳನ್ನೂ ಅನಿವಾರ್ಯತೆಗಳ ನಿರ್ಬಂಧಕ್ಕೊಳಪಡಿಸಿದ್ದನ್ನೂ ಅಲ್ಲಗಳೆಯಲಾಗುವುದಿಲ್ಲ. ಭಾರತದಂತಹ ಬೂರ್ಷ್ವಾ ಪ್ರಜಾಸತ್ತೆಯ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರಭುತ್ವ ಮತ್ತು ಸಾಮಾಜಿಕ ವ್ಯವಸ್ಥೆ ಭೂಮಾಲೀಕರ–ಬೂರ್ಷ್ವಾಗಳ ಹಿಡಿತದಲ್ಲಿರುವಾಗ, ಯಾವುದೇ ರಾಜ್ಯದಲ್ಲಿ ಕಮ್ಯುನಿಸ್ಟ್–ಸಮಾಜವಾದಿ ತತ್ವಗಳನ್ನು ಶಿಸ್ತುಬದ್ಧವಾಗಿ ಅನುಷ್ಠಾನಗೊಳಿಸುವುದು ಸಾಧ್ಯವೇ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಎಂಟು ದಶಕಗಳ ಕಮ್ಯುನಿಸ್ಟ್ ಚಳುವಳಿಯ ಹೊರತಾಗಿಯೂ ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಶ್ರಮಜೀವಿಗಳ–ರೈತ ಕೂಲಿಗಳ ಮತ್ತು ಕಾರ್ಮಿಕರ ಜೀವನ ದುಸ್ತರವಾಗಿದೆ ಮತ್ತು ಸಂಘಟಿತ ಹೋರಾಟವನ್ನು ರೂಪಿಸಿ ಪ್ರಭುತ್ವವನ್ನು ಎದುರಿಸುವಲ್ಲಿ ಈ ಶ್ರಮಿಕ ವರ್ಗಗಳು ವಿಫಲವಾಗಿವೆ ಎಂಬ ಅಂಶವನ್ನೂ ಗಂಭೀರವಾಗಿ ಪರಿಗಣಿಸಬೇಕಿದೆ. ಇದು ಭಾರತೀಯ ಕಮ್ಯುನಿಸ್ಟ್ ಚಳುವಳಿಯ ವೈಫಲ್ಯವೂ ಹೌದು, ಬಲಪಂಥೀಯ ಬಂಡವಾಳಶಾಹಿ ಶಕ್ತಿಗಳ ವಿಜಯವೂ ಹೌದು. ಈ ವೈಫಲ್ಯದ ಹೊಣೆಗಾರಿಕೆಯನ್ನು ಜ್ಯೋತಿ ಬಸು ಅವರೂ ಹೊರಬೇಕಾಗುತ್ತದೆ.

ಸೈದ್ಧಾಂತಿಕ ಸಂಘರ್ಷ

ಬಂಡವಾಳ ವ್ಯವಸ್ಥೆಯ ರಾಷ್ಟ್ರದಲ್ಲಿ ಸಂಯುಕ್ತತೆಯ ಲಕ್ಷಣಗಳನ್ನು ಮೇಳೈಸಿಕೊಂಡಿರುವ ಯಾವುದೇ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮೂಲ ನೀತಿಗಳನ್ನು ಮೀರಿದ ಆರ್ಥಿಕ ನೀತಿಗಳನ್ನು ಅನುಸರಿಸುವುದು ದುಸ್ಸಾಧ್ಯ. ಉದಾಹರಣೆಗೆ ಕೃಷಿ ನೀತಿಯ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವ ಪರಮಾಧಿಕಾರ ಕೇಂದ್ರ ಸರ್ಕಾರಕ್ಕಿರುವುದೇ ಹೊರತು, ರಾಜ್ಯ ಸರ್ಕಾರಕ್ಕಿರುವುದಿಲ್ಲ. ಹಾಗೆಯೇ ಬಂಡವಾಳ ಹೂಡಿಕೆ, ಕೈಗಾರಿಕಾ ನೀತಿ, ಕಾರ್ಮಿಕ ಕಾಯ್ದೆಗಳು ಇತ್ಯಾದಿ. ಇಂತಹ ಪರಿಸ್ಥಿತಿಯಲ್ಲಿ ಕಮ್ಯುನಿಸ್ಟ್ ತತ್ವಗಳನ್ನು ಅಳವಡಿಸಲು ತಳಮಟ್ಟದಿಂದಲೇ ಜನಾಂದೋಲನವನ್ನು ಕಟ್ಟುವ ಮೂಲಕ ಕೇಂದ್ರೀಕೃತ ಅಧಿಕಾರವನ್ನು ಪ್ರತಿಭಟಿಸಿ, ರಾಜ್ಯಗಳಿಗೆ ತಮ್ಮದೇ ಆದ ಜನಪರ ನೀತಿಗಳನ್ನು ಅನುಸರಿಸುವ ಹಕ್ಕುಗಳಿಗಾಗಿ ಹೋರಾಡುವುದು ಸಿಪಿಎಂ ಅಥವಾ ಮತ್ತಾವುದೇ ಎಡ ಪಕ್ಷಗಳ ಮೂಲ ಧ್ಯೇಯವಾಗಬೇಕಿತ್ತು. ಅಧಿಕಾರ ಗ್ರಹಣಕ್ಕಿಂತಲೂ ಹೆಚ್ಚಾಗಿ ದೇಶಾದ್ಯಂತ, ಗ್ರಾಮೀಣ ಪ್ರದೇಶಗಳಲ್ಲಿ, ಆದಿವಾಸಿ ಸಮುದಾಯಗಳಲ್ಲಿ ಒಂದು ಪ್ರಜಾಸತ್ತಾತ್ಮಕ ಹೋರಾಟವನ್ನು ರೂಪಿಸುವ ನಿಟ್ಟಿನಲ್ಲಿ ಎಡ ಪಕ್ಷಗಳು ಮುನ್ನಡೆಯಬೇಕಿತ್ತು.

ಆದರೆ 1977ರಲ್ಲಿ ಪಶ್ಚಿಮಬಂಗಾಲದಲ್ಲಿ ಅಧಿಕಾರಕ್ಕೆ ಬಂದ ಸಿಪಿಎಂ ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಅಂತಿಮವಾಗಿ ಅಧಿಕಾರ ರಾಜಕೀಯ ಪರಂಪರೆಗೆ ಶರಣಾದದ್ದು ದುರಂತವೇ ಹೌದು. ಎಡ ರಂಗದಲ್ಲಿ ಪ್ರಬಲ ಪಕ್ಷವಾಗಿ ಹೊರಹೊಮ್ಮಿದ್ದೇ ಅಲ್ಲದೆ ಸಿಪಿಐ ಮತ್ತಿತರ ಪಕ್ಷಗಳನ್ನು ಬಹುತೇಕ ಮೂಲೆಗುಂಪು ಮಾಡಿದ್ದನ್ನೂ ಈ ಸಂದರ್ಭದಲ್ಲಿ ಕಾಣಬಹುದು. 1970ರ ದಶಕದ ಉತ್ತರಾರ್ಧದಲ್ಲಿ ಬಸು ಆಪರೇಷನ್ ಬರ್ಗ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿರಬಹುದು. ಆದರೆ ಅದರ ಮುಂದಿನ ಹಂತವಾಗಿದ್ದ ಗೇಣಿದಾರರಿಗೆ ಭೂ ಒಡೆತನ ನೀಡುವ ವಿಚಾರದಲ್ಲಿ, ಸಹಕಾರ ತತ್ವದ ಕೂಡು ಕೃಷಿಯನ್ನು ಪರಿಚಯಿಸುವ ವಿಚಾರದಲ್ಲಿ ಬಸು ಲಭ್ಯವಿದ್ದ ಅವಕಾಶವನ್ನು ಉಪಯೋಗಿಸಿಕೊಳ್ಳದೆ 1980ರ ಉತ್ತರಾರ್ಧದ ವೇಳೆಗೆ ರಾಜ್ಯದಲ್ಲಿ ಭೂಸುಧಾರಣೆಗಳ ಹಿಂಚಲನೆಗೆ ಕಾರಣರಾಗಿದ್ದರು. ಬಸು ಅವರಿಗೆ ಬಹಳ ಪ್ರಿಯವಾ

ಗಿದ್ದ ಭಾರತೀಯ ರಾಜಕಾರಣದ ಸಂಯುಕ್ತ ಸ್ವರೂಪದ ಪುನಾರಚನೆಯ ಹಾಗು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಮತ್ತು ಸಂಪನ್ಮೂಲಗಳನ್ನು ಒದಗಿಸುವ ವಿಚಾರದಲ್ಲಿಯೂ ಸಿಪಿಎಂ ಹೆಚ್ಚಿನ ಆಸ್ಥೆ ವಹಿಸದೆ ನಡುನೀರಿನಲ್ಲಿ ಕೈತೊಳೆದು ಕೊಂಡಿತ್ತು. ಇಂದಿರಾಗಾಂಧಿಯವರ ಹತ್ಯೆಯ ಹಿನ್ನೆಲೆಯಲ್ಲಿ ಕಂಡುಬಂದ ರಾಷ್ಟ್ರೀಯ ಐಕ್ಯತೆಯ ಭಾವನೆ ಕಾಂಗ್ರೆಸ್ ಪಕ್ಷಕ್ಕೆ ಅತಿ ಹೆಚ್ಚು ಸ್ಥಾನಗಳನ್ನು ತಂದುಕೊಟ್ಟಿದ್ದ ಸಂದರ್ಭದಲ್ಲಿ ಬಸು ಕೊಂಚ ಮಟ್ಟಿಗೆ ಹಿನ್ನಡೆದಿರಬಹುದು, ಆದರೆ ತಮ್ಮ ಪ್ರಿಯ ವಿಚಾರವಾದ ಸಂಯುಕ್ತತೆಯ ಪುನಾರಚನೆಯ ವಿಷಯದಲ್ಲಿ ಬಸು ವಿಭಿನ್ನ ಹಾದಿ ಕ್ರಮಿಸಲು ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್ ಅವರ ಹೊಸ ಆರ್ಥಿಕ ನೀತಿಗಳೇ ಕಾರಣವಾಗಿತ್ತು.

ಪರವಾನಗಿ ಯುಗ ಅಂತ್ಯವಾದ ಸಂದರ್ಭದಲ್ಲೇ, ಆರ್ಥಿಕ ಅಧಿಕಾರಗಳಿಗಾಗಿ ಕೇಂದ್ರ ಸರ್ಕಾರದ ವಿರುದ್ಧ ಹೋರಾಡುವುದು ವ್ಯರ್ಥ ಎಂದು ವಾದಿಸಿದ್ದ ಬಸು ಪಶ್ಚಿಮ ಬಂಗಾಲದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಡುವುದಾಗಿ ಘೋಷಿಸಿದ್ದರು. ರಾಜ್ಯದಲ್ಲಿ ಆರ್ಥಿಕ ಮತ್ತು ಔದ್ಯಮಿಕ ವಿಷಯಗಳಲ್ಲಿ ತಮ್ಮ ಮೂಲ ನಿಲುವುಗಳಿಂದ ಹಿನ್ನಡೆಯುವುದು ಮತ್ತು ದೇಶಿ ವಿದೇಶಿ ಬಂಡವಾಳವನ್ನು ಆಹ್ವಾನಿಸುವುದು ಬಸು ಅವರಿಗೂ ಅನಿವಾರ್ಯವಾಗಿತ್ತು. ಕೇಂದ್ರ ಸರ್ಕಾರ ಹೊಸ ಆರ್ಥಿಕ ನೀತಿಗಳನ್ನು ಅನುಷ್ಠಾನಗೊಳಿಸಿ ಮೂರೇ ವರ್ಷಗಳಲ್ಲಿ ಬಸು ನಾಯಕತ್ವದ ಎಡರಂಗ ಸರ್ಕಾರ ತನ್ನದೇ ಆದ ಕೈಗಾರಿಕಾ ನೀತಿಯನ್ನು ಘೋಷಿಸಿತ್ತು. ಬಸು ಅವರ ಹೊಸ ಘೋಷಣೆ ಕೈಗಾರಿಕಾ ಶಾಂತಿ ಆಗಿತ್ತು. ಆಕ್ರಮಣಕಾರಿ ಕಾರ್ಮಿಕ ಸಂಘಟನೆ ಮತ್ತು ಹೋರಾಟವನ್ನು ಪ್ರೋತ್ಸಾಹಿಸಬಾರದೆಂದೂ ಬಸು ಅವರ ನಿಲುವಾಗಿತ್ತು.

ಆದಾಗ್ಯೂ ಬಂಗಾಲದಲ್ಲಿ ಬಂಡವಾಳ ಹೂಡಿಕೆ ಹೆಚ್ಚಾಗಲಿಲ್ಲ. ಬದಲಾಗಿ ಕೈಗಾರಿಕೆಯಲ್ಲಿ ರೋಗಗ್ರಸ್ತತೆ ಹೆಚ್ಚಾಗಿತ್ತು. ಕಾರ್ಮಿಕ ಭವಿಷ್ಯನಿಧಿಯ ವ್ಯಾಪಕ ದುರುಪಯೋಗವಾಗಿತ್ತು. ವೇತನ ಸಂಬಂಧಿ ಶಾಸನಗಳ ಉಲ್ಲಂಘನೆ ಸಾಮಾನ್ಯವಾಗಿತ್ತು. ಈ ಹಾದಿಯನ್ನು ಬುದ್ಧದೇವ ಭಟ್ಟಾಚಾರ್ಯ ಇನ್ನೂ ಸ್ಪಷ್ಟವಾಗಿ ಅನುಸರಿಸಿದ್ದರು. ಕೇಂದ್ರದ ಹೊಸ ಆರ್ಥಿಕ ನೀತಿಯೊಡನೆ ರಾಜಿಯಾಗಲು ಬಸು ಮೂರು ವರ್ಷದ ಕಾಲಾವಧಿ ತೆಗೆದುಕೊಂಡರೆ, ಬುದ್ಧ ದೇವ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿಶೇಷ ಆರ್ಥಿಕ ವಲಯ ಶಾಸನವನ್ನು ಕೇಂದ್ರ ಸರ್ಕಾರಕ್ಕಿಂತ ಎರಡು ವರ್ಷ ಮುನ್ನವೇ ಜಾರಿಗೊಳಿಸಿದ್ದರು.

ಪ್ರಭುತ್ವ ಪ್ರಾಯೋಜಿತ, ಕಾರ್ಪೋರೇಟ್ ನೇತೃತ್ವದ ಈ ಕ್ರಮವೇ ಸಿಂಗೂರ್ ಮತ್ತು ನಂದಿಗ್ರಾಮದ ಘಟನೆಗಳಲ್ಲಿ ಪರ್ಯವಸಾನಗೊಂಡಿದ್ದವು. ಸಿಂಗೂರ್ ಘಟನೆ ಸಂಭವಿಸಿದಾಗ ರಾಜ್ಯ ಸರ್ಕಾರದ ಭೂಸ್ವಾಧೀನ ನಿರ್ಣಯವನ್ನು ಬಸು ಪ್ರಶ್ನಿಸಲಿಲ್ಲ, ಬದಲಾಗಿ ಟಾಟಾ ಅವರ ಪ್ರವೇಶಕ್ಕೆ ಹಾದಿ ಸುಗಮಗೊಳಿಸಲು ಸಿಪಿಎಂ ಪಕ್ಷದ ರೈತ ಸಂಘಟನೆಯನ್ನು ಏಕೆ ಸಮರ್ಥವಾಗಿ ಬಳಸಿಕೊಳ್ಳಲಿಲ್ಲ ಎಂಬ ಆಕ್ಷೇಪವನ್ನು ಮಾತ್ರ ವ್ಯಕ್ತಪಡಿಸಿದ್ದರು. ನಂದಿಗ್ರಾಮದಲ್ಲಿ ನಡೆದ ಸರಣಿ ಹತ್ಯೆಗಳನ್ನು ಕುರಿತಾಗಿಯೂ ಬಸು ಯಾವುದೇ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಲಿಲ್ಲ. ಒಂದು ವೇಳೆ ಬಸು ಮಧ್ಯ ಪ್ರವೇಶಿಸಿದ್ದರೂ ಎಡರಂಗದಲ್ಲಿ ನಡೆಯುತ್ತಿದ್ದ ವಾಗ್ವಾದಗಳನ್ನು ಕೊನೆಗೊಳಿಸುವ ಉದ್ದೇಶದಿಂದ ಮಾತ್ರವಾಗಿತ್ತು.

ಅವರ ಅಧಿಕಾರಾವಧಿಯಲ್ಲೇ ಅನೇಕ ಸಂದರ್ಭಗಳಲ್ಲಿ ಪೊಲೀಸ್ ಆಕ್ರಮಣಗಳು ಸಂಭವಿಸಿದ್ದು ಅನೇಕ ಹತ್ಯೆಗಳು ನಡೆದಿವೆ. ಆದರೆ ಘಟನೆಗಳು ಸಿಂಗೂರ್, ನಂದಿಗ್ರಾಮ್ ಮತ್ತು ಲಾಲ್‌ಘಡದಂತೆ ಪ್ರಭಾ ವವನ್ನು ಬೀರಲಿಲ್ಲವಷ್ಟೆ. ಟಿವಿ ಮಾಧ್ಯಮಗಳ ದಿನವಿಡೀ ಪ್ರಸಾರವೂ ಈ ಘಟನೆಗಳ ಪ್ರಚಾರಕ್ಕೆ ಇಂಬು ನೀಡಿತ್ತು. ಮೇ 1967ರಲ್ಲಿ ಉತ್ತರ ಬಂಗಾಲದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ನಕ್ಸಲ್‌ಬಾರಿ ದಂಗೆ ಭುಗಿಲೆದ್ದ ಸಂದರ್ಭದಲ್ಲಿ ರಾಜ್ಯ ಮಂತ್ರಿಮಂಡಲದಲ್ಲಿ ಗೃಹಮಂತ್ರಿಗಳಾಗಿದ್ದ ಬಸು ಕೈಗೊಂಡ ಏಕೈಕ ಕ್ರಮವೆಂದರೆ ಅರೆ ಸೇನಾಪಡೆಗಳನ್ನು ಉಪಯೋಗಿಸಿ ಹೋರಾಟದ ದಂಗೆಯ ದಮನಕ್ಕೆ ಪ್ರಯತ್ನಿಸಿದ್ದು. ಅಂದಿನ ಸಿಪಿಎಂ ರಾಜ್ಯ ಕಾರ್ಯದರ್ಶಿಯಾಗಿದ್ದ ಪ್ರಮೋದ್ ದಾಸ್‌ಗುಪ್ತ ಅವರೊಡನೆ ಸೇರಿ ಬಸು ಕಮ್ಯುನಿಸ್ಟ್ ಕ್ರಾಂತಿಕಾರಿಗಳ ವಿರುದ್ಧ ದಮನಕಾರಿ ನೀತಿಯನ್ನು ಅನುಸರಿಸಿದ್ದರು. ಆದರೆ ಕೆಲವೇ ವರ್ಷಗಳ ನಂತರ ಸಿದ್ಧಾರ್ಥ ಶಂಕರ್ ರೇ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಆಳ್ವಿಕೆಗೆ ಬಂದಾಗ ಸಿಪಿಎಂ ಕಾರ್ಯಕರ್ತರನ್ನೂ ಸೇರಿದಂತೆ ಇಡೀ ಎಡಪಂಥೀಯ ಕಾರ್ಯಕರ್ತರ ವಿರುದ್ಧ ಬರ್ಬರವಾದ ಫ್ಯಾಸಿಸ್ಟ್ ಆಕ್ರಮಣ ನೀತಿಯನ್ನು ಅನುಸರಿಸಲಾಗಿತ್ತು.

1977ರಲ್ಲಿ ಸಿಪಿಎಂ ಸಾಂಘಿಕವಾಗಿ ಮತ್ತು ರಾಜಕೀಯವಾಗಿ ಹೆಚ್ಚಿನ ಸಾಮರ್ಥ್ಯ ಮತ್ತು ಪ್ರಾಬಲ್ಯ ಹೊಂದಿಲ್ಲದಿದ್ದರೂ ಗೆಲುವು ಸಾಧಿಸಿದ್ದಕ್ಕೆ , ಪ್ರಜಾತಂತ್ರಕ್ಕಾಗಿ ಹಪಹಪಿಸುತ್ತಿದ್ದ ಬಂಗಾಲದ ಜನತೆ ದಮನಕಾರಿ ಸಿದ್ಧಾರ್ಥ ಶಂಕರ್ ರೇ ಅವರ ಸರ್ಕಾರವನ್ನು ಪದಚ್ಯುತಗೊಳಿಸುವ ನಿರ್ಧಾರ ತಾಳಿದ್ದು ಕಾರಣವಾಗಿತ್ತು. ಆದರೆ ಪ್ರಜಾಸತ್ತಾತ್ಮಕ ಚಳುವಳಿಗಳಲ್ಲಿ ಪೊಲೀಸರು ಹಸ್ತಕ್ಷೇಪ ಮಾಡುವುದಿಲ್ಲ ಎಂದು ಆಶ್ವಾಸನೆ ನೀಡಿದ್ದರೂ ಶೀಘ್ರದಲ್ಲೇ ಉಲ್ಲಂಘನೆಯ ಸೂಚನೆಗಳು ಸ್ಪಷ್ಟವಾಗತೊಡಗಿದ್ದವು. ಅನೇಕ ಹತ್ಯೆಗಳು, ಲಾಕಪ್ ಸಾವುಗಳು, ಅತ್ಯಾಚಾರಗಳು ಮತ್ತು ಚಿತ್ರಹಿಂಸೆಯ ಪ್ರಕರಣಗಳಲ್ಲಿ ಅಪರಾಧಿಗಳಾಗಿದ್ದವರನ್ನು ಶಿಕ್ಷಿಸಲು ಬಸು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬದಲಾಗಿ ಅಂತಹ ಅಪರಾಧಿಗಳಿಗೆ ಬಹುಮಾನಗಳನ್ನು ನೀಡಲಾಗಿತ್ತು. ಅಧಿಕಾರ ವಹಿಸಿಕೊಂಡ ಎರಡೇ ವರ್ಷಗಳಲ್ಲಿ, ಉ.ಬಂಗಾಲದ ಸುಂದರಬಾನ್ ಅರಣ್ಯ ಪ್ರದೇಶದ ಮೊರಿಚಾಂಪಿಯಲ್ಲಿ ಬಂದು ನೆಲೆಸಿದ ನಿರಾಶ್ರಿತರನ್ನು ರಕ್ಷಿಸಲು ಬಸು ಸರ್ಕಾರ ವಿಫಲವಾಗಿತ್ತು. ಸುಮಾರು ನಾಲ್ಕು ಸಾವಿರ ಕುಟುಂಬಗಳು ಹಸಿವಿನಿಂದ ನಿರ್ನಾಮವಾದವು, ಸಾವಿರಾರು ಜನರು ಕೊಲೆ, ಅತ್ಯಾಚಾರಕ್ಕೊಳಗಾಗಿ, ಸರ್ಕಾರದ ಆದೇಶದ ಮೇಲೆ ಉಚ್ಚಾಟಿತರಾಗಿದ್ದರು. ಮೊರಿಚಾಂಪಿ ಘಟನೆ ನಂದಿಗ್ರಾಮದಂತೆ ಪ್ರಭಾವ ಬೀರದಿದ್ದರೂ, ಪ್ರಭುತ್ವ ಪ್ರೇರಿತ ಮಾನವ ವಿರೋಧಿ ಪಾತಕ ಕೃತ್ಯಗಳಿಗೆ ಸ್ಪಷ್ಟ ನಿದರ್ಶನವಾಗಿ ನಿಲ್ಲುತ್ತದೆ.

1990ರ ದಶಕದ ಅಂತ್ಯದ ವೇಳೆಗೆ ಜ್ಯೋತಿ ಬಸು ಅವರ ಜನಪ್ರಿಯತೆ ಕ್ಷೀಣಿಸತೊಡಗಿತ್ತು. 1996ರ ವಿಧಾನ ಸಭಾ ಚುನಾವಣೆಗಳಲ್ಲಿ ಬಸು ಅವರ ಗೆಲುವಿನ ಅಂತರ ಸಾಕಷ್ಟು ಕ್ಷೀಣಿಸಿತ್ತು. ಒಂದು ಹಂತದಲ್ಲಿ ಸಿಪಿಎಂ ಪಕ್ಷ ಬಸು ಅವರ ನಾಯಕತ್ವದ ವರ್ಚಸ್ಸಿನಿಂದ ಲಾಭ ಪಡೆದಿದ್ದರೂ, 2000ರ ನವಂಬರ್‌ನಲ್ಲಿ ಬಸು ಅವರ ರಾಜೀನಾಮೆಯೇ 2001ರ ಚುನಾವಣೆಗಳ ಪಕ್ಷದ ಗೆಲುವಿಗೆ ಕಾರಣವಾಗಿತ್ತು. ಬಸು ಅವರ ನಿರ್ಧಾರ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಕಂಗೆಡಿಸಿದ್ದಲ್ಲದೆ, ಅದರ ಪ್ರಮುಖ ವೈರಿಯನ್ನೇ ಇಲ್ಲವಾಗಿಸಿತ್ತು. ಚುನಾವಣಾ ಹಿನ್ನಡೆಯನ್ನು ತಡೆಗಟ್ಟುವ ಕೊನೆಯ ಹತಾಶ ಪ್ರಯತ್ನದಲ್ಲಿ ಅಂತಿಮವಾಗಿ ಜ್ಯೋತಿ ಬಸು, ಕಾಂಗ್ರೆಸ್ ಪಕ್ಷದ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಪಿಎಂ ಬೆಂಬಲ ನೀಡಿರುವುದಕ್ಕೆ ಪ್ರತಿಯಾಗಿ, ರಾಜ್ಯದಲ್ಲಿ ಶಾಂತಿ–ಸ್ಥಿರತೆಗಾಗಿ ಸಿಪಿಎಂ ಪಕ್ಷಕ್ಕೆ ಮತ ನೀಡುವಂತೆ ಕಾಂಗ್ರೆಸ್ ಬೆಂಬಲಿಗರಲ್ಲಿ ನಿವೇದಿಸಿದ್ದರು. ಆದರೆ ರಾಜ್ಯದಲ್ಲಿ ರಾಜಕೀಯ ಗಾಳಿ ಆ ವೇಳೆಗಾಗಲೇ

ಪ್ರಭುತ್ವ ಪ್ರಾಯೋಜಿತ, ಕಾರ್ಪೋರೇಟ್ ನೇತೃತ್ವದ ಈ ಕ್ರಮವೇ ಸಿಂಗೂರ್ ಮತ್ತು ನಂದಿಗ್ರಾಮದ ಘಟನೆಗಳಲ್ಲಿ ಪರ್ಯವಸಾನಗೊಂಡಿದ್ದವು. ಸಿಂಗೂರ್ ಘಟನೆ ಸಂಭವಿಸಿದಾಗ ರಾಜ್ಯ ಸರ್ಕಾರದ ಭೂಸ್ವಾಧೀನ ನಿರ್ಣಯವನ್ನು ಬಸು ಪ್ರಶ್ನಿಸಲಿಲ್ಲ, ಬದಲಾಗಿ ಟಾಟಾ ಅವರ ಪ್ರವೇಶಕ್ಕೆ ಹಾದಿ ಸುಗಮಗೊಳಿಸಲು ಸಿಪಿಎಂ ಪಕ್ಷದ ರೈತ ಸಂಘಟನೆಯನ್ನು ಏಕೆ ಸಮರ್ಥವಾಗಿ ಬಳಸಿಕೊಳ್ಳಲಿಲ್ಲ ಎಂಬ ಆಕ್ಷೇಪವನ್ನು ಮಾತ್ರ ವ್ಯಕ್ತಪಡಿಸಿದ್ದರು.

ಸಿಪಿಎಂ ವಿರುದ್ಧ ಚಲಿಸಲಾರಂಭಿಸಿದ್ದರಿಂದ ಬಸು ಅವರ ನಿವೇದನೆ ಅರಣ್ಯರೋದನವಾಗಿಯೇ ಉಳಿಯಿತು. 2009ರ ಆಗಸ್ಟ್‌ನಲ್ಲಿ ನಡೆದ ಉಪಚುನಾವಣೆಗಳಲ್ಲಿ ಸಿಪಿಎಂ ಹತ್ತು ಕ್ಷೇತ್ರಗಳಲ್ಲಿ ಒಂದನ್ನೂ ಉಳಿಸಿಕೊಳ್ಳಲಾಗಲಿಲ್ಲ.

2004ರ ಚುನಾವಣಾ ಪ್ರಚಾರದ ಅವಧಿಯಲ್ಲಿ ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಗ್ರಹಣ ಮಾಡಬಹುದೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಬಸು "ನಾವು ಅದನ್ನೇ ಅಪೇಕ್ಷಿಸುತ್ತಿದ್ದೇವೆ ಮತ್ತು ಈ ನಿಟ್ಟಿನಲ್ಲೇ ಕಾರ್ಯನಿರತರಾಗಿದ್ದೇವೆ" ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು (ವಾಕ್ ದಿ ಟಾಕ್ ಶೇಖರ್ ಗುಪ್ತಾ ಅವರೊಡನೆ ಎನ್‌ಡಿಟಿವಿ 24x7). ತಮ್ಮ ಸಂತಾಪ ಸೂಚಕ ಹೇಳಿಕೆಗಳಲ್ಲೂ ಕಾಂಗ್ರೆಸ್ ನಾಯಕರು ಬಸು ಅವರನ್ನು ಯುಪಿಎ ಸಮ್ಮಿಶ್ರ ಸರ್ಕಾರದ ಶಿಲ್ಪಿ ಎಂದೇ ಬಣ್ಣಿಸಿದ್ದನ್ನೂ, ಭಾರತ–ಅಮೆರಿಕಾ ಪರಮಾಣು ಒಪ್ಪಂದದ ಹಿನ್ನೆಲೆಯಲ್ಲಿ ಸಿಪಿಎಂ ಯುಪಿಎ ಸರ್ಕಾರಕ್ಕೆ ನೀಡಿದ್ದ ಬಾಹ್ಯ ಬೆಂಬಲವನ್ನು ಹಿಂಪಡೆದಾಗಲೂ ಬಸು ಪಕ್ಷದ ನಿರ್ಣಯವನ್ನು ಒಪ್ಪುವುದಿಲ್ಲವೆಂದೇ ಹೇಳಿದ್ದನ್ನೂ, ತಮಗೆ ಲೋಕಸಭಾ ಅಧ್ಯಕ್ಷರ ಸ್ಥಾನದಿಂದ ರಾಜಿನಾಮೆ ನೀಡದಂತೆಯೂ ಬಸು ಸಲಹೆ ನೀಡಿದ್ದರು ಎಂದು ಸೋಮನಾಥ ಚಟರ್ಜಿ ಹೇಳಿರುವುದನ್ನೂ, ಬಸು ಅವರ ಮತ್ತೊರ್ವ ಶಿಷ್ಯರಾದ ಸುಭಾಷ್ ಚಕ್ರವರ್ತಿಯವರೂ ಸಹ ಸಾಮ್ರಾಜ್ಯಶಾಹಿ ವಿರೋಧಿ ನೆಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ವಿರೋಧಿಸುವುದು ತರವಲ್ಲ, ಕಾಂಗ್ರೆಸ್ ಇಲ್ಲದೆ ಸಾಮ್ರಾಜ್ಯಶಾಹಿಯ ವಿರುದ್ಧ ಐಕ್ಯತೆ ಸಾಧಿಸಲು ಸಾಧ್ಯವೇ ಇಲ್ಲ ಎಂದು ಹೇಳಿದ್ದನ್ನೂ ಇಲ್ಲಿ ಸ್ಮರಿಸಬಹುದು.

ಕಾಕತಾಳೀಯವೇನೋ ಎಂಬಂತೆ ಮೇ 2004ರ ಬಸು ಅವರ ಸಂದರ್ಶನದಂತೆಯೇ ತಮ್ಮ ಅಕಾಲಿಕ ಮರಣದ ಕೆಲವೇ ದಿನಗಳ ಹಿಂದೆ ಸುಭಾಷ್ ಚಕ್ರವರ್ತಿ ನೀಡಿದ ಹೇಳಿಕೆಯೂ 2009ರ ಸಂಸದೀಯ ಚುನಾವಣೆಗಳ ಸಂದರ್ಭವೇ ಆಗಿತ್ತು.

ಪ.ಬಂಗಾಲ – ರಾಷ್ಟ್ರ ರಾಜಕಾರಣದಲ್ಲಿ ಸಿಪಿಎಂ ಪಕ್ಷದ ವರ್ಚಸ್ಸು ಕ್ಷೀಣಿಸುತ್ತಿರುವುದಕ್ಕೆ ಪಕ್ಷ ಬಸು ಅವರ ಪರಂಪರೆಯಿಂದ ದೂರ ಸರಿಯುತ್ತಿದ್ದುದೇ ಕಾರಣ ಎಂದು ಬಸು ಅವರ ಬಹುಪಾಲು ಬೆಂಬಲಿಗರು ಪ್ರತಿಪಾದಿಸುತ್ತಾರೆ. ಬಸು ಪ್ರಧಾನಮಂತ್ರಿ ಪಟ್ಟವನ್ನು ನಿರಾಕರಿಸಿದಾಗಿನಿಂದಲೇ ಈ ಪ್ರಕ್ರಿಯೆ ಪ್ರಾರಂಭವಾಯಿತೆಂದೂ ಹೇಳಲಾಗುತ್ತದೆ. ಒಂದು ವೇಳೆ 1996 ರಲ್ಲಿ ಕಾಂಗ್ರೆಸ್ ಬೆಂಬಲಿತ ಸಂಯುಕ್ತ ರಂಗ ಸರ್ಕಾರದಲ್ಲಿ ತಾವು ಪ್ರಧಾನಿಯಾಗಿದ್ದಿದ್ದಲ್ಲಿ ಭಾರತದ ರಾಜಕೀಯ ಗತಿ ಭಿನ್ನವಾಗಿಯೇ ಇರುತ್ತಿತ್ತು ಎಂದು ಬಸು ಅವರೂ ಖುದ್ದಾಗಿ ಪ್ರತಿಪಾದಿಸುತ್ತಿದ್ದರು. ಸಮ್ಮಿಶ್ರ ಸರ್ಕಾರದ ನಾಯಕತ್ವ ವಹಿಸುವ ದಶಕಗಳ ಅನುಭವ ಇದ್ದ ಬಸು ಖಚಿತವಾಗಿ ಕೇಂದ್ರದಲ್ಲಿ ಸ್ಥಿರ ಸರ್ಕಾರ ಒದಗಿಸುವ ಸಾಮರ್ಥ್ಯ ಉಳ್ಳವರಾಗಿದ್ದರು, ಇದರಿಂದ 1998ರಲ್ಲಿ ಭಾಜಪ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬರುವುದೂ ತಪ್ಪುತ್ತಿತ್ತು ಎಂದು ಬಸು ಬೆಂಬಲಿಗರ ಅಂಬೋಣ. ಕೆಲವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಬಸು ಅವರ ನಾಯಕತ್ವದಲ್ಲಿ ಸಂಯುಕ್ತ ಸರ್ಕಾರ ತನ್ನ ನವ ಉದಾರವಾದಿ ನೀತಿಗಳನ್ನು ಆಮ್ ಆದ್ಮಿ(ಜನಸಾಮಾನ್ಯ)ಗೆ ಅನುಕೂಲವಾಗುವಂತೆ ರೂಪಿಸುತ್ತಿದ್ದರು, ತತ್ಪರಿಣಾಮವಾಗಿ ಕಾಂಗ್ರೆಸ್ ಪಕ್ಷದ ಪುನರುಜ್ಜೀವನ ಆಗುತ್ತಿರಲಿಲ್ಲ ಎಂದೂ ವಾದಿಸುತ್ತಾರೆ.

ಆದರೆ ವರ್ಗ ಶಕ್ತಿಗಳ ಪುನರುತ್ಥಾನಕ್ಕೆ ಹೆಚ್ಚು

ಓರ್ವ ಕಮ್ಯುನಿಸ್ಟ್ ನಾಯಕರಾಗಿ ಜ್ಯೋತಿ ಬಸು ಅವರು ಭಾರತೀಯ ಶ್ರಮಜೀವಿಗಳ ಹೋರಾಟಕ್ಕೆ ಅಪಾರವಾದ ಸೇವೆ ಸಲ್ಲಿಸಿರುವುದು ಅಲ್ಲಗಳೆಯಲಾಗದ ಸತ್ಯ. ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸ್ ದುರಾಡಳಿತವನ್ನು ಕೊನೆಗೊಳಿಸಿ ಭೂಸುಧಾರಣೆ –ಪಂಚಾಯತ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಗಟ್ಟಿಗೊಳಿಸುವಲ್ಲೂ ಬಸು ಅವರ ಕೊಡುಗೆ ಅಪಾರ. ಬಂಗಾಲದಲ್ಲಿ ಭೂಸುಧಾರಣೆ ಪೂರ್ಣ ಪ್ರಮಾಣದಲ್ಲಿ ಸ್ಥಾಪಿತವಾಗದಿದ್ದರೂ, ಅಲ್ಪಮಟ್ಟಿಗಾದರೂ ಭೂಮಾಲಿಕರ ಶೋಷಣೆಯನ್ನು ಕೊನೆಗಾಣಿಸಿರುವುದೂ ಅಷ್ಟೇ ಸತ್ಯ.

ಸಮಯ ಬೇಕಾಗುವುದಿಲ್ಲ ಎಂಬ ಅಂಶವನ್ನು ಇವರು ಮರೆಮಾಚುತ್ತಾರೆ. ಬಸು ಅವರು ಪಶ್ಚಿಮ ಬಂಗಾಲದಲ್ಲಿ ಉತ್ತಮ ಒಡಂಬಡಿಕೆಯ ಎಡರಂಗ ಸರ್ಕಾರವನ್ನು ಮುನ್ನಡೆಸುವುದಕ್ಕೂ, ಕಾಂಗ್ರೆಸ್ ಬೆಂಬಲದೊಂದಿಗೆ ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರ ನಡೆಸುವುದಕ್ಕೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಗಮನಿಸಬೇಕಾಗಿದೆ. ರಾಷ್ಟ್ರ ರಾಜಕಾರಣದಲ್ಲಿ ಸಿಪಿಎಂ ನಾಯಕತ್ವ ಸ್ಥಾನದಲ್ಲಿ ನಿಲ್ಲುವುದನ್ನು ಘೋಷಿಸುವ ಬದಲು ಈ ರೀತಿ ಕಾಂಗ್ರೆಸ್ ಬೆಂಬಲದಿಂದ ಸರ್ಕಾರ ನಡೆಸಿದ್ದಲ್ಲಿ ಪಕ್ಷ ತನ್ನ ಸ್ಥಾಪಿತ ಕ್ಷೇತ್ರಗಳಲ್ಲೂ ಹಿನ್ನಡೆ ಅನುಭವಿಸಿ ಒಂದು ದಶಕದ ನಂತರ ಪ್ರಾರಂಭವಾದ ಪಕ್ಷದ ಪತನ ಆಗಲೇ ಪ್ರಾರಂಭವಾಗುತ್ತಿತ್ತು. ರಾಷ್ಟ್ರ ರಾಜಕಾರಣದಲ್ಲಿ ಏನಾಗಬಹುದಿತ್ತು ಎಂಬ ಊಹಾಲೋಕದಲ್ಲಿ ವಿಹರಿಸುವ ಬದಲು ಬಸು ಅವರ ಸ್ವಕ್ಷೇತ್ರವಾದ ಪಶ್ಚಿಮ ಬಂಗಾಲದಲ್ಲಿ ಏನಾಗುತ್ತಿದೆ ಎಂದು ಯೋಚಿಸುವುದು ಸೂಕ್ತ ಎನಿಸುತ್ತದೆ.

ಬಸು ಅವರ ಪರಂಪರೆಯಿಂದ ದೂರವಾದದ್ದಕ್ಕೆ ಸಿಪಿಎಂ ಪ.ಬಂಗಾಲದಲ್ಲಿ ಬೆಲೆ ತೆರುತ್ತಿರುವುದೇ? ಪಶ್ಚಿಮ ಬಂಗಾಲದಲ್ಲಿ ಸಿಪಿಎಂ ಎಂದಿಗೂ ಬಸು ಅವರ ಹಾದಿಯಿಂದ ದೂರ ಸರಿದಿಲ್ಲ. ಇಂದು ರಾಜ್ಯದಲ್ಲಿ ಏನೇ ಸಂಭವಿಸುತ್ತಿದ್ದರೂ ಅದನ್ನು ಸಾಮಾಜಿಕ ಪರಿವರ್ತನೆಯ ಸಂಘರ್ಷದ ಹಾದಿಗಿಂತಲೂ ಅಧಿಕಾರ ರಾಜಕಾರಣವನ್ನೇ ಅವಲಂಬಿಸಿದ ಬಸು ಪರಂಪರೆಯ ದೃಷ್ಟಿಯಿಂದಲೇ ಅವಲೋಕಿಸಬೇಕಾಗುತ್ತದೆ.

ಸಿದ್ಧಾಂತ ಮತ್ತು ಸಂದಿಗ್ಧತೆ

ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಬದ್ಧರಾಗಿದ್ದ ಜ್ಯೋತಿ ಬಸು ಭಾರತೀಯ ಕಮ್ಯುನಿಸ್ಟ್ ಚಳುವಳಿಗೆ ಸಲ್ಲಿಸಿರುವ ಕೊಡುಗೆ ಅಪಾರ. ಅಧಿಕಾರ ವಹಿಸಿಕೊಳ್ಳುವ ಮುನ್ನವೂ ದುಡಿಯುವ ಜನತೆಯ ಹೋರಾಟಗಳಿಗೆ ಸ್ಫೂರ್ತಿ ತುಂಬುವುದೇ ಅಲ್ಲದೆ ದೇಶದ ಕಾರ್ಮಿಕ ಚಳುವಳಿಗೆ ಒಂದು ಸೈದ್ಧಾಂತಿಕ ಆಯಾಮ ನೀಡಿದ ಕೀರ್ತಿ ಬಸು ಅವರಿಗೆ ಸಲ್ಲಬೇಕಾಗುತ್ತದೆ. ಕಮ್ಯುನಿಸ್ಟ್ ಪಕ್ಷದ ಇಬ್ಭಾಗದ ನಂತರದಲ್ಲಿ ಅನೇಕ ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಿದ ಬಸು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮಿತ್ರ ಪಕ್ಷವಾಗಿದ್ದ ಸಿಪಿಐ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸಿದ್ದನ್ನೂ ಖಂಡಿಸಿದ್ದರು. ಆದರೆ ಹಲವು ವರ್ಷಗಳ ನಂತರ ಇದೇ ಜ್ಯೋತಿ ಬಸು ಕಾಂಗ್ರೆಸ್ ಪಕ್ಷದ ಪರವಾಗಿ ನಿಂತಿದ್ದನ್ನೂ ಮರೆಯುವಂತಿಲ್ಲ. ಬಹುಶಃ 1980ರ ದಶಕದಲ್ಲಿ ದೇಶದ ರಾಜಕೀಯದಲ್ಲುಂಟಾದ ಮಹತ್ತರ ಬದಲಾವಣೆಗಳು, 1991ರಲ್ಲಿ ಸಂಭವಿಸಿದ ಆರ್ಥಿಕ ಸುಧಾರಣೆಗಳೂ ಬಸು ಅವರ ರಾಜಕೀಯ ಚಿಂತನೆಗಳಿಗೆ ವಿಭಿನ್ನ ಆಯಾಮವನ್ನು ನೀಡಿತ್ತೆಂದು ಹೇಳಬಹುದು. ಕೇರಳದಲ್ಲಿ ಭೂಮಾಲಿಕರ ವಿರುದ್ಧ ಹೋರಾಡುತ್ತಲೇ ಬೆಳೆದ ಕಮ್ಯುನಿಸ್ಟ್ ಚಳುವಳಿ ಪಶ್ಚಿಮ ಬಂಗಾಲದಲ್ಲಿ ಕಾರ್ಮಿಕರ ಹೋರಾಟಗಳನ್ನಾಧರಿಸಿ ರೂಪುಗೊಂಡಿತ್ತು.

ಓರ್ವ ಕಮ್ಯುನಿಸ್ಟ್ ನಾಯಕರಾಗಿ ಜ್ಯೋತಿ ಬಸು ಅವರು ಭಾರತೀಯ ಶ್ರಮಜೀವಿಗಳ ಹೋರಾಟಕ್ಕೆ ಅಪಾರವಾದ ಸೇವೆ ಸಲ್ಲಿಸಿರುವುದು ಅಲ್ಲಗಳೆಯಲಾಗದ ಸತ್ಯ. ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸ್ ದುರಾಡಳಿತವನ್ನು ಕೊನೆಗೊಳಿಸಿ ಭೂಸುಧಾರಣೆ ಮತ್ತು ಪಂಚಾಯತ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಗಟ್ಟಿಗೊಳಿಸುವಲ್ಲೂ ಬಸು ಅವರ ಕೊಡುಗೆ ಅಪಾರ. ಬಂಗಾಲದಲ್ಲಿ ಭೂಸುಧಾರಣೆ ಪೂರ್ಣ ಪ್ರಮಾಣದಲ್ಲಿ ಸ್ಥಾಪಿತವಾಗದಿದ್ದರೂ, ಅಲ್ಪಮಟ್ಟಿಗಾದರೂ ಭೂಮಾಲಿಕರ ಶೋಷಣೆಯನ್ನು ಕೊನೆಗಾಣಿಸಿರುವುದೂ ಅಷ್ಟೇ ಸತ್ಯ. ಬಂಗಾಲದ ಗ್ರಾಮೀಣ ಪ್ರದೇಶಗಳಲ್ಲಿ ಬಸು ಅವರ ಸರ್ಕಾರದ ಅವಧಿಯಲ್ಲಿ ಅನುಷ್ಠಾನಗೊಳಿಸಿದ ಅನೇಕ ಜನಪರ ಕಾರ್ಯಕ್ರಮಗಳೇ ಇಂದಿಗೂ ಸಿಪಿಎಂ ಪಕ್ಷಕ್ಕೆ ಶ್ರೀರಕ್ಷೆಯಾಗಿದೆ. ಪಕ್ಷದ ನಿಷ್ಠಾವಂತ ಸೇವಕನಾಗಿದ್ದುಕೊಂಡೇ ತಮ್ಮ ಸ್ವತಂತ್ರ ನಿರ್ಣಯಗಳನ್ನು ಅಧಿಕೃತವಾಗಿ ಅನುಸರಿಸುವ ಚಾಣಕ್ಷತೆ ಬಸು ಅವರಲ್ಲಿ ಇದ್ದುದರಿಂದಲೇ 23 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮೆರೆದಿದ್ದರು.

ಜಾಗತಿಕ ಬಂಡವಾಳ ವ್ಯವಸ್ಥೆಯ ವಿರೋಧವನ್ನೇ ತಳಹದಿಯನ್ನಾಗಿರಿಸಿಕೊಂಡಿದ್ದ ಕಮ್ಯುನಿಸ್ಟ್ ಪಕ್ಷದ ನೇತೃತ್ವ ವಹಿಸಿದ್ದ ಬಸು ಬಂಗಾಲದಲ್ಲಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಪರೋಕ್ಷವಾಗಿ ಬಂಡವಾಳ ವ್ಯವಸ್ಥೆಯನ್ನು ಸಮರ್ಥಿಸಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು. ಸಮಾಜವಾದ ಕೊನೆಗೊಂಡಿದೆ ಎಂಬ ಮಾತನ್ನು ಒಪ್ಪದಿದ್ದರೂ ಸಮಾಜವಾದವೊಂದೇ ಪರಿಹಾರವಲ್ಲ ಎಂಬ ತೀರ್ಮಾನಕ್ಕೆ ಬಸು ತಲುಪಿದ್ದುದು ಎಡಪಂಥೀಯ ವೇದಿಕೆಗಳಲ್ಲಿ ಚರ್ಚೆಗೆ ಗ್ರಾಸವಾಗಿತ್ತು. 1991ರಲ್ಲಿ ನರಸಿಂಹ ರಾವ್ ಸರ್ಕಾರ ಮುಕ್ತ ಆರ್ಥಿಕ ನೀತಿಯನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಗ್ಯಾಟ್ ವಿರೋಧಿ ಆಂದೋಲನಕ್ಕೆ ನೇತೃತ್ವ ವಹಿಸಿದ್ದ ಸಿಪಿಎಂ ಬಸು ಅವರ ನೇತೃತ್ವದಲ್ಲಿ ಉದಾರವಾದ ನೀತಿಯನ್ನು ಉಗ್ರವಾಗಿ ಪ್ರತಿಭಟಿಸಿತ್ತು. ಆದರೆ ಕೆಲವು ವರ್ಷಗಳ ನಂತರ ವಿದೇಶೀ ಬಂಡವಾಳವನ್ನು ಆಹ್ವಾನಿಸಲು ವಿದೇಶಗಳಿಗೆ ಭೇಟಿ ನೀಡಿದ ಬಸು ತಮ್ಮ ಪಕ್ಷದವರಿಂದಲೇ ಟೀಕೆಗಳನ್ನು ಎದುರಿಸಬೇಕಾಯಿತು. "ನಮಗೆ ವಿದೇಶಿ ಮತ್ತು ದೇಶೀ ಬಂಡವಾಳದ ಅವಶ್ಯಕತೆ ಇದೆ. ನಾವು ಬಂಡವಾಳ ವ್ಯವಸ್ಥೆಯಲ್ಲಿದ್ದೇವೆ, ಸಮಾಜವಾದ ಈಗ ಸಾಧುವಲ್ಲ" ಎಂಬ ಬಸು ಅವರ ಹೇಳಿಕೆಯೂ ವಿವಾದಗ್ರಸ್ತವಾಗಿತ್ತು.

ಇಡೀ ದೇಶದಲ್ಲಿ ಕೋಮುದ್ವೇಷದ ದಳ್ಳುರಿ ಹಬ್ಬಿ,

ಸಾವಿರಾರು ಅಮಾಯಕ ಜನತೆ ಕೋಮು ಜ್ವಾಲೆಗೆ ಬಲಿಯಾಗುತ್ತಿದ್ದಾಗ, ಪಶ್ಚಿಮ ಬಂಗಾಲದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಿದ್ದುದು ಬಸು ಅವರ ಹೆಗ್ಗಳಿಕೆ. ಎಲ್.ಕೆ ಅದ್ವಾನಿಯವರ ಸೋಮನಾಥ ರಥಯಾತ್ರೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಿದ್ದೇ ಅಲ್ಲದೆ, ಸಂಘಪರಿವಾರದ ಕೋಮುವಾದಿ ಪ್ರಚಾರಕ್ಕೆ ರಾಜ್ಯದಲ್ಲಿ ಅವಕಾಶವೀಯದೆ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬಂದದ್ದೂ ಬಸು ಅವರ ಹೆಗ್ಗಳಿಕೆ. ಬಂಗಾಲದ ಈ ವಿಶಿಷ್ಟ ಸನ್ನಿವೇಶಕ್ಕೆ ಬಸು ಅವರ ವರ್ಚಸ್ಸು ಒಂದು ಕಾರಣವಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಬಸು ಅವರ ಸರ್ಕಾರ ಕೈಗೊಂಡ ಅನೇಕ ಜನಪರ ಕಾರ್ಯಕ್ರಮಗಳೂ ಮತ್ತೊಂದು ಕಾರಣವಾಗಿದ್ದವು.

ಸೈದ್ಧಾಂತಿಕ ದೃಷ್ಟಿಕೋನದಿಂದ ಬಸು ಅವರಲ್ಲಿ ಅನೇಕ ನ್ಯೂನತೆಗಳನ್ನೂ ಕಾಣಬಹುದು. ಕಾಂಗ್ರೆಸ್ ವಿರೋಧಿ ನೆಲೆಯಿಂದ, ಭಾಜಪವನ್ನು ವಿರೋಧಿಸುವ ನೆಪದಲ್ಲಿ ಕಾಂಗ್ರೆಸ್‌ಪರ ನಿಲುವಿಗೆ ಬದಲಾದದ್ದು, ಪ್ರಧಾನ ಮಂತ್ರಿ ಪದವಿಯನ್ನು ಪಕ್ಷದ ಆದೇಶದ ಮೇರೆಗೆ ನಿರಾಕರಿಸಿ ನಂತರ ತಮ್ಮ ನಿರ್ಣಯವನ್ನು ಐತಿಹಾಸಿಕ ಪ್ರಮಾದ ಎಂದು ಬಣ್ಣಿಸಿದ್ದು, 1989ರಲ್ಲಿ ರಾಷ್ಟ್ರೀಯ ರಂಗ ಸರ್ಕಾರಕ್ಕೆ ಭಾಜಪ ಬೆಂಬಲವಿದ್ದಾಗ್ಯೂ ಬಾಹ್ಯ ಬೆಂಬಲ ನೀಡಲು ನಿರ್ಧರಿಸಿದ್ದು, ಮಾರ್ಕ್ಸ್‌ವಾದಿ ಸಿದ್ಧಾಂತವನ್ನೇ ಅನುಸರಿಸುವ ಮಾವೋವಾದಿಗಳ ಹೋರಾಟವನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸದೆ, ಇತರ ಬೂರ್ಷ್ವಾ ಪಕ್ಷಗಳಂತೆಯೇ ನಕ್ಸಲ್ ಚಳುವಳಿಯನ್ನು ದಮನಿಸಲು ಯತ್ನಿಸಿದ್ದು ಬಸು ಅವರ ಪ್ರಮುಖ ವೈಫಲ್ಯಗಳು. ಸಮಾಜವಾದವೇ ಅಂತಿಮ ಗುರಿ ಎಂಬ ಮಾರ್ಕ್ಸ್‌ವಾದಿ ನೆಲೆಗಟ್ಟಿನಲ್ಲಿ ನಿಂತು ಬಂಡವಾಳ ವ್ಯವಸ್ಥೆಯನ್ನು ಅಪ್ಪಿಕೊಂಡ ಬಸು ಅವರ ಅವಕಾಶವಾದಿ ರಾಜಕಾರಣ ಸೈದ್ಧಾಂತಿಕವಾಗಿ ಪ್ರಶ್ನಾರ್ಹವಾದುದು.

ಸದಾ ಎಡಪಕ್ಷಗಳ ಐಕ್ಯತೆಯನ್ನು ಬಯಸುತ್ತಿದ್ದ ಬಸು ಸಿಪಿಎಂ ಪಕ್ಷದಲ್ಲಿ ಬೇರೂರಿದ್ದ ದೊಡ್ಡಣ್ಣನ ಮನೋಭಾವವನ್ನು ಬದಲಿಸಲು ಯಾವುದೇ ಪ್ರಯತ್ನಗಳನ್ನು ಮಾಡಿದಂತಿಲ್ಲ. ಬಾಂಗ್ಲಾ ದೇಶದಿಂದ ಅಕ್ರಮ ವಲಸೆ ಬರುತ್ತಿರುವ ಆ ದೇಶದ ಪ್ರಜೆಗಳನ್ನು ಬಂಗಾಲದ ಸಿಪಿಎಂ ವೋಟ್ ಬ್ಯಾಂಕುಗಳಂತೆ ಬಳಸಿಕೊಂಡಿತ್ತು ಎಂಬ ಆರೋಪವೂ ಅವರ ಮೇಲಿದೆ. ಈ ಆರೋಪದಲ್ಲಿ ಹುರುಳಿದೆಯೋ ಇಲ್ಲವೋ ಇಂತಹ ಕ್ಷುಲ್ಲಕ ಆರೋಪಗಳನ್ನು ನಿರಾಕರಿಸುವಲ್ಲಿ ಸ್ಪಷ್ಟತೆಯನ್ನೂ ಬಸು ತೋರಲಿಲ್ಲವೆಂದೇ ಹೇಳಬಹುದು. ತಮ್ಮ ನಿವೃತ್ತಿಯ ನಂತರವೂ ಪಕ್ಷದಲ್ಲಿ ಪ್ರಮುಖ ನಿರ್ಣಯಗಳಲ್ಲಿ ಭಾಗಿಯಾಗಿರುತ್ತಿದ್ದ ಬಸು ಹಾಲಿ ಮುಖ್ಯಮಂತ್ರಿ ಬುದ್ಧದೇವ ಅವರ ಕಟ್ಟಾ ಸಮರ್ಥಕರಾಗಿದ್ದು, ಪ್ರಸ್ತುತ ಬೆಳವಣಿಗೆಗಳಿಗೂ ಪರೋಕ್ಷವಾಗಿ ಬೆಂಬಲಿಸಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಜ್ಯೋತಿ ಬಸು ತಮ್ಮ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ಮತ್ತಷ್ಟು ತೀಕ್ಷ್ಣಗೊಳಿಸಿ, ರಾಜಕೀಯ ಅಧಿಕಾರಕ್ಕಿಂತಲೂ ಶ್ರಮಜೀವಿಗಳ ಹೋರಾಟಗಳನ್ನು ದೃಢಗೊಳಿಸುವ, ಕ್ರೋಢೀಕರಿಸುವ ಪ್ರಕ್ರಿಯೆಗೆ ಹೆಚ್ಚಿನ ಒತ್ತು ನೀಡಿದ್ದ ಪಕ್ಷದಲ್ಲಿ ಭಾರತೀಯ ಕಮ್ಯುನಿಸ್ಟ್ ಚಳುವಳಿ ಇಂದು ಪ್ರಬಲ ಶಕ್ತಿಯಾಗಿ ಹೊರಹೊಮ್ಮಬಹುದಾಗಿತ್ತು. ಜಾಗತೀಕರಣ-ನವ ಉದಾರವಾದ ಮತ್ತು ಕೋಮುವಾದಿ ಫ್ಯಾಸಿಸಂ, ಈ ತ್ರಿಶೂಲದಂಚಿಗೆ ಸಿಲುಕಿ ನಲುಗುತ್ತಿರುವ ಭಾರತೀಯ ಸಮಾಜಕ್ಕೆ ಒಂದು ಪ್ರಜಾತಾಂತ್ರಿಕ ಪರ್ಯಾಯದ ಅಗತ್ಯತೆ ಎಂದಿಗಿಂತಲೂ ಹೆಚ್ಚಾಗಿದೆ. ಈ ಪರ್ಯಾಯಕ್ಕೆ ವೇದಿಕೆಯಾಗುವ ಇಚ್ಛಾಶಕ್ತಿ, ವಾಂಛೆ ಭಾರತದ ಶ್ರಮಜೀವಿಗಳಲ್ಲಿ, ದುಡಿಯುವ ವರ್ಗಗಳಲ್ಲಿ, ಕಾರ್ಮಿಕರಲ್ಲಿ ಇದ್ದರೂ, ಇಂತಹ ಒಂದು ಪ್ರಜಾಸತ್ತಾತ್ಮಕ ವೇದಿಕೆಯ ನೇತೃತ್ವ ವಹಿಸುವ ಇಚ್ಛಾಶಕ್ತಿ, ಸೈದ್ಧಾಂತಿಕ ಬದ್ಧತೆ ಯಾರಲ್ಲೂ ಇಲ್ಲವಾಗಿದೆ. ಜ್ಯೋತಿ ಬಸು ಅವರಲ್ಲಿ ಈ ಸಾಮರ್ಥ್ಯ - ಸೈದ್ಧಾಂತಿಕ ಬದ್ಧತೆ ಇದ್ದಿತಾದರೂ, ಅವರು ಅದನ್ನು ಪ್ರಯೋಗಿಸುವ ಪ್ರಯತ್ನವನ್ನೇ ಮಾಡಲಿಲ್ಲ.

ಬಸು ಕಮ್ಯುನಿಸ್ಟ್ ಕಾರ್ಯಕರ್ತನಾಗಿ ಭಾರತದ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದರೂ ಅಂತ್ಯ ಕಾಲದಲ್ಲಿ ಸೋಷಿಯಲ್ ಡೆಮಾಕ್ರಟ್ ಆಗಿ ನಿರ್ಗಮಿಸಿದರು ಎನ್ನುವುದು ಮಾರ್ಕ್ಸ್‌ವಾದಿ ವೇದಿಕೆಗಳಲ್ಲಿ ಕೇಳಿಬರುವ ಅಪವಾದ. ಇದು ಸತ್ಯವೂ ಹೌದು. ಸಿಪಿಐ ಮತ್ತು ಸಿಪಿಎಂ ಪಕ್ಷಗಳೇ ತಮ್ಮ ಪರಿಷ್ಕರಣವಾದದ ಪರಿಣಾಮವಾಗಿ ಸೋಷಿಯಲ್ ಡೆಮಾಕ್ರಟ್ ಪಕ್ಷಗಳಾಗಿವೆ. ಇಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕಾದ ಒಂದು ಅಂಶವನ್ನು ಉಲ್ಲೇಖಿಸುವುದು ಸೂಕ್ತ. ಮೂಲತಃ ಪ್ರಜಾತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡರೂ ಭಾರತದ ಸಂವಿಧಾನದ ಪರಿಧಿಯಲ್ಲಿ ಸ್ವೀಕೃತವಾಗಿರುವ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯನ್ನು ಸ್ವೀಕರಿಸದೆ ಹೋದಲ್ಲಿ, ಭಾರತದಲ್ಲಿ ಯಾವುದೇ ಪಕ್ಷವೂ ಅಧಿಕಾರ ಗ್ರಹಣ ಮಾಡುವುದು ಅಸಾಧ್ಯ. ಈ ಸೈದ್ಧಾಂತಿಕ ಹಿನ್ನೆಲೆಯಲ್ಲೇ 1967ರ ನಕ್ಸಲ್‌ಬಾರಿಯ ನಂತರ ಕಮ್ಯುನಿಸ್ಟ್ ಚಳುವಳಿ ಛಿದ್ರವಾಗಿತ್ತು. ಈಗಲೂ ಈ ಧೋರಣೆಯ ಅನೇಕ ಎಂಎಲ್ ಪಕ್ಷಗಳು ಕಾರ್ಯನಿರತವಾಗಿವೆ. ಅವುಗಳಲ್ಲಿ ಪ್ರಭುತ್ವದ ದೃಷ್ಟಿಯಲ್ಲಿ ಪ್ರಥಮ ಶತ್ರು ಎನಿಸಿರುವ ಸಿಪಿಐ ಮಾವೋವಾದಿ ಪಕ್ಷವೂ ಒಂದು.

ಸೈದ್ಧಾಂತಿಕ ದೃಷ್ಟಿಕೋನದಿಂದ ಬಸು ಅವರಲ್ಲಿ ಅನೇಕ ನ್ಯೂನತೆಗಳನ್ನೂ ಕಾಣಬಹುದು. ಕಾಂಗ್ರೆಸ್ ವಿರೋಧಿ ನೆಲೆಯಿಂದ ಭಾಜಪವನ್ನು ವಿರೋಧಿಸುವ ನೆಪದಲ್ಲಿ ಕಾಂಗ್ರೆಸ್‌ಪರ ನಿಲುವಿಗೆ ಬದಲಾದದ್ದು, ಪ್ರಧಾನಮಂತ್ರಿ ಪದವಿಯನ್ನು ಪಕ್ಷದ ಆದೇಶದ ಮೇರೆಗೆ ನಿರಾಕರಿಸಿ ನಂತರ ತಮ್ಮ ನಿರ್ಣಯವನ್ನು ಐತಿಹಾಸಿಕ ಪ್ರಮಾದ ಎಂದು ಬಣ್ಣಿಸಿದ್ದು, 1989 ರಲ್ಲಿ ರಾಷ್ಟ್ರೀಯರಂಗ ಸರ್ಕಾರಕ್ಕೆ ಭಾಜಪ ಬೆಂಬಲವಿದ್ದಾಗ್ಯೂ ಬಾಹ್ಯ ಬೆಂಬಲ ನೀಡಲು ನಿರ್ಧರಿಸಿದ್ದು, ಮಾರ್ಕ್ಸ್‌ವಾದಿ ಸಿದ್ಧಾಂತವನ್ನೇ ಅನುಸರಿಸುವ ಮಾವೋವಾದಿಗಳ ಹೋರಾಟವನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸದೆ, ಇತರ ಬೂರ್ಷ್ವಾ ಪಕ್ಷಗಳಂತೆಯೇ ನಕ್ಸಲ್ ಚಳುವಳಿಯನ್ನು ದಮನಿಸಲು ಯತ್ನಿಸಿದ್ದು ಬಸು ಅವರ ಪ್ರಮುಖ ವೈಫಲ್ಯಗಳು.

ಆದರೆ ಇದೇ ನಕ್ಸಲ್ ಬಾರಿ ಆಂದೋಲನದ ಮೂಲ ಆಶಯಗಳನ್ನು ಭಾರತೀಯ ವ್ಯವಸ್ಥೆಯಲ್ಲಿ ಈಡೇರಿಸಲು ಸಂಸದೀಯ ಮಾರ್ಗವನ್ನು ಅನುಸರಿಸುವುದು ಅನಿವಾರ್ಯ ಮತ್ತು ಅತ್ಯಗತ್ಯ ಎಂದು ಮನಗಂಡ ಕೆಲವು ಪಕ್ಷಗಳು ಈಗ ತಮ್ಮ ಸಶಸ್ತ್ರ ಹೋರಾಟವನ್ನು ತ್ಯಜಿಸಿ, ಸಂಸದೀಯ ಪಕ್ಷವಾಗಿ ಹೊರಹೊಮ್ಮಿವೆ. ಯಶಸ್ಸನ್ನೂ ಕಾಣುತ್ತಿವೆ. ವಿವಿಧ ರಾಜ್ಯಗಳಲ್ಲಿ ತಮ್ಮ ಸ್ವಂತ ಬಲದ ಮೇಲೆ ಅಧಿಕಾರ ಗಳಿಸಲು ಸರ್ವಪ್ರಯತ್ನವನ್ನೂ ಮಾಡುತ್ತಿವೆ. ಇದು ಸ್ವಾಗತಾರ್ಹವೂ ಹೌದು.

ಆದರೆ ಒಂದು ವೇಳೆ ಅಧಿಕಾರಕ್ಕೆ ಬಂದರೆ, ಬಸು ಅವರಿಗಿಂತಲೂ ವಿಭಿನ್ನವಾದ ಮಾರ್ಗ ಅನುಸರಿಸಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ಬಸು ಅವರ ವೈಫಲ್ಯಗಳನ್ನೇ ತಳಹದಿಯನ್ನಾಗಿ ಪರಿಗಣಿಸಿ, ಮತ್ತಾವ ರೀತಿಯಲ್ಲಿ ಒಂದು ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಲು ಸಾಧ್ಯ? ಈಗಾಗಲೇ ಕಂಡಿರುವಂತೆ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣಾ ಹೊಂದಾಣಿಕೆ, ಸಮ್ಮಿಶ್ರ ಸರ್ಕಾರ ಮತ್ತು ವಾಸ್ತವಗಳ ನೆಲೆಗಟ್ಟಿನಲ್ಲಿ ರಾಜಕೀಯ ತಂತ್ರಗಾರಿಕೆ ನಡೆಸುವುದು ಅನಿವಾರ್ಯವಾಗಿಬಿಟ್ಟಿದೆ. ಒಂದು ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷವಾಗಿಯೇ ಚುನಾವಣೆಗಳಲ್ಲಿ ಸ್ಪರ್ಧಿಸಿ, ಅಧಿಕಾರ ಗಳಿಸಿದಲ್ಲಿ, ಕೇಂದ್ರ ಸರ್ಕಾರದ ನಿಯಂತ್ರಣವನ್ನು ಧಿಕ್ಕರಿಸಿ, ಕಮ್ಯುನಿಸ್ಟ್ ತತ್ವಗಳನ್ನು ಅನುಸರಿಸಲು ಸಾಧ್ಯವೇ ಎಂಬ ಪ್ರಶ್ನೆ ಗಂಭೀರವಾದದ್ದು.

ಭಾರತೀಯ ವ್ಯವಸ್ಥೆಯಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕಮ್ಯುನಿಸ್ಟ್ ಆಗಿದ್ದ ಬಸು ಅವರನ್ನು ಸೋಷಿಯಲ್ ಡೆಮಾಕ್ರಟ್ ಆಗಿ ರೂಪುಗೊಂಡರೋ, ಅಥವಾ ಬಸು ಮತ್ತು ಅವರ ಪಕ್ಷದ ಸೋಷಿಯಲ್ ಡೆಮಾಕ್ರಟಿಕ್ ಲಕ್ಷಣಗಳೇ ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಹಿನ್ನಡೆಗೆ ಕಾರಣವೋ ಎಂಬುದರ ಬಗ್ಗೆ ವ್ಯಾಪಕವಾದ ಚರ್ಚೆಯಾಗುವ ಅವಶ್ಯಕತೆ ಇದೆ. ಈ ಚರ್ಚೆಯ ಮೂಲಕವೇ ಬಸು ಮತ್ತು ಅವರು ಪ್ರತಿನಿಧಿಸಿದ ಮಾರ್ಕ್ಸ್‌ವಾದಿ ಪರಂಪರೆಯ ದಶಕಗಳ ರಾಜಕೀಯ ಜೀವನವನ್ನು ಪರಾಮರ್ಶಿಸುವ ಅಗತ್ಯವೂ ಇದೆ.

ಈ ಎಲ್ಲಾ ಸಾಫಲ್ಯ ವೈಫಲ್ಯಗಳ ನಡುವೆಯೂ ಕಾಮ್ರೇಡ್ ಜ್ಯೋತಿ ಬಸು ಭಾರತದ ಓರ್ವ ದಾರ್ಶನಿಕ ನಾಯಕರಾಗಿ ಪ್ರಜ್ವಲಿಸುತ್ತಾರೆ. ಅವರ ಬದ್ಧತೆ, ಶಿಸ್ತು, ಸರಳತೆ, ಸೌಹಾರ್ದತೆ ಮತ್ತು ರಾಜಕೀಯ ಜೀವನವೇ ಅವರನ್ನು ಸ್ತುತ್ಯಾರ್ಹ ನಾಯಕನನ್ನಾಗಿ ನಿಲ್ಲಿಸುತ್ತದೆ. ಪಕ್ಷದ ಎಲ್ಲೆಗಳನ್ನು ಮೀರಿ ಎಲ್ಲರ ಮನಗಳನ್ನು ಗೆದ್ದ ಜ್ಯೋತಿ ಬಸು ಓರ್ವ ಅನುಕರಣೀಯ ನಾಯಕರಾಗಿ ಸದಾ ನೆನಪಿನಲ್ಲಿರುತ್ತಾರೆ. ರಾಜಕೀಯ ಎಂದರೆ ಮೂಗು ಮುಚ್ಚಿಕೊಳ್ಳುವ ಪ್ರಸ್ತುತ ಸನ್ನಿವೇಶದಲ್ಲಿ ಬಸು ಅವರಂತಹ ಅಪರೂಪದ ರಾಜಕಾರಣಿ ಅಮೂಲ್ಯ ವಜ್ರದಂತೆ ಹೊಳೆದರೆ ಅಚ್ಚರಿಯೇನಿಲ್ಲ. ಭಾರತದ ತನ್ನ ಅಮೂಲ್ಯ ನಾಯಕನೊಬ್ಬನನ್ನು ಕಳೆದುಕೊಂಡಿದೆ. ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಒಂದು ಯುಗ ಅಂತ್ಯಗೊಂಡಿದೆ ಎಂದರೂ ತಪ್ಪಾಗಲಾರದು. ತಪ್ಪು ಒಪ್ಪುಗಳ ಪರಾಮರ್ಶೆಯೊಂದಿಗೇ ಜ್ಯೋತಿ ಬಸು ಅವರು ಮೆಟ್ಟಿದ ಹಾದಿಯಲ್ಲಿ ಮುನ್ನುಗ್ಗುವುದೇ ಭಾರತೀಯ ಶ್ರಮಿಕ ವರ್ಗ ಅವರಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ.

(ಲೇಖನದ ಕೆಲವು ಅಂಶಗಳನ್ನು ಕಾಂ. ಶಂಕರ್ ಸಿಪಿಐ ಎಂಎಲ್ ಲಿಬರೇಷನ್ ಅವರ ಲೇಖನದಿಂದ ಆಯ್ದುಕೊಳ್ಳಲಾಗಿದೆ). □

ಬ್ರಾಹ್ಮಣವಾದಿಗಳ ದೃಷ್ಟಿಯಲ್ಲಿ ಬುದ್ಧ

ತೆಲುಗು ಮೂಲ: **ಅನ್ನಪರೆಡ್ಡಿ ವೆಂಕಟೇಶ್ವರ ರೆಡ್ಡಿ**
ಕನ್ನಡಕ್ಕೆ : **ಹರಿಹರಪ್ರಿಯ**

ವಿಶ್ವವಿದಾದ್ಯಂತ ಬೌದ್ಧಧರ್ಮ ಮತ್ತೆ ಪುನರುಜ್ಜೀವಗೊಳ್ಳುತ್ತಿದೆ. ಆಂಧ್ರಪ್ರದೇಶದಲ್ಲಿ ಅದಕ್ಕೆ ಹೆಚ್ಚಿನ ಕೃಷಿ ಮಾಡುತ್ತಿರುವವರಲ್ಲಿ ಪ್ರಮುಖರು ಉಪಾಸಕ ಅನ್ನಪರೆಡ್ಡಿ ವೆಂಕಟೇಶ್ವರ ರೆಡ್ಡಿಯವರು. (ಜನನ 22 ಫೆಬ್ರವರಿ 1933) ತತ್ತ್ವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನಿಗಳ ಜ್ಞಾನ ಶಾಖೆಗಳಲ್ಲಿ ಪರಿಣತರಾದ ಅನ್ನಪರೆಡ್ಡಿಯವರು, ಈವರೆಗೆ 38 ಕೃತಿಗಳನ್ನು ಹೊರತಂದಿದ್ದಾರೆ. ಅದರಲ್ಲಿ 'ಆಚಾರ್ಯ ನಾಗಾರ್ಜುನುಡು' ಹಾಗೂ 'ಮಹಾಬೌದ್ಧ ಸರ್ವಸ್ವ ನಿಘಂಟುವು'- ಈವರೆಗೆ ಭಾರತದ ಬೇರೆ ಯಾವ ಭಾಷೆಯಲ್ಲೂ ಹೊರಬರದ ಮೌಲಿಕ ಗ್ರಂಥಗಳು. ಕಳೆದ 20 ವರ್ಷಗಳಿಂದ ಬೌದ್ಧಧರ್ಮ ಅಧ್ಯಯನಕ್ಕಾಗಿಯೇ ಹೈದರಾಬಾದಿನಿಂದ 'ಮಿಸಿಮಿ' ಎಂಬ ಮಾಸ ಪತ್ರಿಕೆ ಪ್ರಕಟವಾಗುತ್ತಿದ್ದು, ಅದರ ಸಂಪಾದಕರೂ ಕೂಡ. 2553ನೇ ಬುದ್ಧ ಜಯಂತಿ ಸಂದರ್ಭದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಅನ್ನಪರೆಡ್ಡಿ ಅವರ ಈ ಲೇಖನವನ್ನು, ಕನ್ನಡ ಓದಿಗೆ ದಕ್ಕಲಿ ಎಂದು ನೀಡಲಾಗುತ್ತಿದೆ. ಸದ್ಯದಲ್ಲೇ ಮೇಲ್ಕಂಡ ಎರಡೂ ಗ್ರಂಥಗಳನ್ನು ಕನ್ನಡಕ್ಕೆ ತರುವ ಪ್ರಯತ್ನ ನಡೆದಿದೆ.

-ಸಂಪಾದಕ

'ಬುದ್ಧ ದೊಡ್ಡವನೇ ಹೊರತು ಬೌದ್ಧ ಅಲ್ಲ' ಎನ್ನುವ ವಿವೇಕಾನಂದ, ಎಸ್. ರಾಧಾಕೃಷ್ಣನ್, ಪಾಂಡುರಂಗ ವಾಮನ ಕಾಣೆ, ಆನಂದ ಕುಮಾರ ಸ್ವಾಮಿ- ಅದ್ವೈತ ಹೈಂದವ ಪಂಡಿತರು, ಬುದ್ಧನನ್ನು ಒಪ್ಪಿಕೊಳ್ಳದೇ ಇರಲಾರದೆ, ಬೌದ್ಧವನ್ನು ತಿರುಚಿ ತಮ್ಮ ಹಿಂದೂ ಮೂಸೆಗೆ ಬದಲಿಸಿಕೊಂಡು, ಬೌದ್ಧವು ಹೈಂದವವಲ್ಲದೆ ಬೇರೆಯಲ್ಲ ಎನ್ನುವವರೆಗೆ ಮುಂದುವರೆದಿದ್ದಾರೆ. ಇವರೆಲ್ಲ ಬುದ್ಧನನ್ನು ಆಕಾಶಕ್ಕೇರಿಸಿದ್ದಾರೆ. ಒಂದು ವಿಧದಲ್ಲಿ ಹೇಳಬೇಕೆಂದರೆ ಬುದ್ಧನನ್ನು ಅಷ್ಟು ದೊಡ್ಡದಾಗಿ ಇಪ್ಪತ್ತನೆಯ ಶತಮಾನದಲ್ಲಿ, ಬೇರೆ ಯಾವ ಬೌದ್ಧನಿಗಿಂತಲೂ ಕೂಡ, ಪ್ರಚಾರಮಾಡಿದ್ದು ಇವರೇ, ಬುದ್ಧನ ನುಡಿಗಳನ್ನು ಕೇಳಿಸಿದ್ದು ಕೂಡ ಇವರೇ. ಆದರೆ ವಕ್ರೀಕರಿಸಿ.

ಪಂಡಿತ್ ಜವಹರಲಾಲ್ ನೆಹರು, ಬರ್ಟ್ರಂಡ್ ರಸೆಲ್, ಎಚ್. ಜಿ.ವೆಲ್ಸ್, ಐನ್‌ಸ್ಟೈನ್- ಅಂತಹ ಪ್ರಸಿದ್ಧ ಮೇಧಾವಿಗಳು ಬುದ್ಧನನ್ನು ಹಿರಿದಾಗಿ ಕೀರ್ತಿಸಿದವರಲ್ಲಿ ಸೇರಿದ್ದಾರೆ. ಇವರೆಲ್ಲ ಬುದ್ಧ ದರ್ಶನವನ್ನು ಕುರಿತಲ್ಲದೆ ಬುದ್ಧಧರ್ಮದ ಔನ್ನತ್ಯವನ್ನು ಪ್ರಶಂಸಿಸಿದ್ದಾರೆ. ಇವರು ದೃಷ್ಟಿಗತವಾಗಿಯಲ್ಲದೆ ವಿಷಯಗತವಾಗಿ ವಿಷಯವನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯ ನೀಡಿದ್ದಾರೆ. ರಾಧಾಕೃಷ್ಣ ಮುಂತಾದವರು ಹಿಂದೂ ದೃಷ್ಟಿಗತರಾದ್ದರಿಂದ ಹಿಂದೂ ಬಣ್ಣದ ಕನ್ನಡಕದಲ್ಲಿ ಬೌದ್ಧನನ್ನು ನೋಡುವುದರಿಂದ ತಪ್ಪು ಬರವಣಿಗೆಯ ಪಾಲಿಗೆ ಬಿದ್ದಿದ್ದಾರೆ.

ಈ ಲೇಖನದಲ್ಲಿ ಮೊದಲಿಗೆ ಅವರು ಬುದ್ಧನನ್ನು ಹೇಗೆ ಪ್ರಶಂಸಿಸಿದ್ದಾರೆ ಎಂಬುದನ್ನು ವಿವರಿಸಿ, ಆನಂತರ ಬುದ್ಧನನ್ನು; ಬೌದ್ಧವನ್ನು ಹೇಗೆ ಹಿಂದೂವಾಗಿ, ಹಿಂದೂಮತವಾಗಿ ತೋರಿಸಬೇಕೆಂಬ ಬೇಗುದಿಯಿಂದ ವಕ್ರೀಕರಿಸಿರುವುದೂ, ಆ ವಕ್ರೀಕರಣ ಹೇಗೆ ತಕ್ಕದ್ದಲ್ಲ ಎಂಬುದನ್ನೂ ವಿವರಿಸುತ್ತೇನೆ.

ಆಧುನಿಕ ಕಾಲದಲ್ಲಿ ಬುದ್ಧನನ್ನು, ಆತನ ಹಿರಿಮೆಯನ್ನು ಕುರಿತು ತನ್ನ ದೇಶದವರಿಗೂ, ಯೂರೋಪಿಯನ್ನರಿಗೂ ಮಿಗಿಲಾಗಿ ಅಮೆರಿಕನ್ನರಿಗೂ ಸಾರಿ ಹೇಳಿದ ತುಂಬಾ ದೊಡ್ಡ ಭಾರತೀಯ ವಿವೇಕಾನಂದ. ವಿಶ್ವದ ಬೌದ್ಧರು, ಬೌದ್ಧಾಭಿಮಾನಿಗಳೆಲ್ಲ ಬುದ್ಧನನ್ನು ಕುರಿತು ಆತನ ಬೋಧನೆ ಕುರಿತು, ಬುದ್ಧನ ಹೆಸರನ್ನೇ ಹೆಚ್ಚು ಕಡಿಮೆ ಶತಮಾನಗಳೇ ಮರೆತು ಹೋಗಿದ್ದ ಭಾರತ ದೇಶದಲ್ಲು, ವಿಶ್ವದಲ್ಲು ಬಹಳ ವ್ಯಾಪ್ತಿಗೆ ತಂದದ್ದಕ್ಕೆ ವಿವೇಕಾನಂದ ಸ್ವಾಮಿಗೆ ತುಂಬಾ ತುಂಬಾ (ನಾವು) ಕೃತಜ್ಞರಾಗಿರಬೇಕು. ವಿವೇಕಾನಂದರಿಗೆ ಕೃತಜ್ಞತೆಯನ್ನು ತಿಳಿಸಲಿಕ್ಕೆ ನಾವು ಕ್ರಿ.ಶ.1ನೇ ಶತಮಾನದ ಒಬ್ಬ ಬೌದ್ಧಕವಿ ಮಾತೃಚೇತ ಹೇಳಿದ ಈ ಪದ್ಯವನ್ನು ಉಲ್ಲೇಖಿಸೋಣ!

"ಯಾವಾಗಲೂ, ಯಾವುದೇ ರೀತಿಯಲ್ಲೂ, ಯಾರಲ್ಲಿ, ಯಾವ ದೋಷವೂ ಇರುವುದಿಲ್ಲವೋ, ಯಾರಲ್ಲಿ ಎಲ್ಲಾ ವಿಧದ ಎಲ್ಲ ಸುಗುಣಗಳೂ ಸ್ಥಾಪಿತವಾಗಿರುತ್ತವೋ, ಅವನನ್ನು ಅರ್ಥಮಾಡಿಕೊಂಡಾಗ ನಾವು, ಅವನನ್ನು ಶರಣು ಹೋಗೋಣ. ಅವನನ್ನು ಕೀರ್ತಿಸೋಣ. ಸೇವಿಸೋಣ. ಅವನ ಬೋಧನೆಗಳನ್ನು ಬಲವಾಗಿ ಆಚರಿಸೋಣ"[1]

ರಾಧಾಕೃಷ್ಣನ್ ಅನ್ನುತ್ತಾರೆ: "ಮಾನವಾತ್ಮಕ್ಕೆ ಸ್ಫೂರ್ತಿ ನೀಡುವ ಅಪಾರವಾದ ಸಂಪತ್ತು ಬುದ್ಧನ ಸ್ಮೃತಿ. ಕೋಟ್ಯಂತರ ಮಾನವರ ಆಲೋಚನೆ ಮೇಲೆ ಅದರ ಪ್ರಭಾವ ವಿಪರೀತ. 'ಧೈರ್ಯ ಸಾಹಸೋಪೇತವಾದ ಉನ್ನತ ಜೀವನವನ್ನು ನಡೆಸಲಿಕ್ಕೆ ಶತಮಾನಗಳ ಕಾಲ ಅದು ನೀಡಿದ ಸ್ಫೂರ್ತಿ ಹೇಳತೀರದು. ಮಾನವಾತ್ಮವನ್ನು ಪರಿಶುದ್ಧಗೊಳಿಸುವಲ್ಲಿ ಸಾಮಾಜಿಕ ಸಂಬಂಧಗಳನ್ನು ಮಾನವೀಕರಿಸುವಲ್ಲಿ ಅದು ಮಾಡಿದ ನೆರವು ಎದ್ದು ಕಾಣಿಸುತ್ತಿದೆ".[2]

ಇಷ್ಟೇ ಅಲ್ಲ, ರಾಧಾಕೃಷ್ಣನ್ ಬುದ್ಧನನ್ನು ಒಬ್ಬ ಶ್ರೇಷ್ಠ ವಿಚಾರವಾದಿ ಎಂದು ಹೊಗಳಿದ್ದಾರೆ: "ಎಲ್ಲಿಯಾದರೂ ಯಾವಾಗಲಾದರೂ ಈ ವಿಶ್ವದಲ್ಲಿ ಒಬ್ಬ ವಿಚಾರವಾದಿ ಇದ್ದಾನೆಂದರೆ ಆತ ಬುದ್ಧನೇ"[2]. ಬುದ್ಧನನ್ನು ವಿಚಾರವಾದಿ ಎಂದು ಪ್ರಶಂಸಿಸಿದ್ದು ರಾಧಾಕೃಷ್ಣನ್ ಒಬ್ಬರೇ ಅಲ್ಲ. ವಿವೇ

ಬುದ್ಧನು ನಮ್ಮನ್ನು ದೇವರಿಗೆ, ದೇವತೆಗಳಿಗೆ ಗುಲಾಮರಾಗದಂತೆ ಸ್ವಚ್ಛಂದವನ್ನು ಪ್ರಸಾದಿಸಿದ್ದಾನೆ. ಅವನು ವೇದಗಳ ಮುಂದೆ ಗೋಗರೆಯಲಿಲ್ಲ. ಬ್ರಾಹ್ಮಣ ಪೂಜಾರಿಗಳಿಗೆ ತಲೆ ಬಗ್ಗಿಸಲಿಲ್ಲ. ಆಚಾರಗಳಿಗೆ ಅದಕ್ಕಿಂತ ಬಗ್ಗಿರಿ ಎನ್ನಲಿಲ್ಲ. ಯಾವ ಗ್ರಂಥವನ್ನೂ ನಂಬಬೇಡಿರಿ ಎಂದಿದ್ದಾನೆ. ವೇದಗಳೆಲ್ಲಾ ಬರೀ ವಂಚನೆ ಎಂದಿದ್ದಾನೆ.[4] ಈ ವಿಶ್ವದಲ್ಲಿ ಹುಟ್ಟಿದವರಲ್ಲಿ ಸ್ವಾಸ್ಥ್ಯ ಮನಸ್ಸಿನವರಲ್ಲಿ ಯಾರಾದರೂ ಇದ್ದಾರೆಂದರೆ ಅದು ಬುದ್ಧ ಮಾತ್ರವೇ.* ಇಲ್ಲಿ ಮಾನಸಿಕ ಸ್ವಾಸ್ಥ್ಯ ಎಂದರೆ 'ನಿನ್ನ ಆಲೋಚನೆ ಮೇಲೆ ನೀನು ಆಧಾರಪಟ್ಟು, ಯಾರೋ ಹೇಳಿದ್ದಾರೆಂದು ಕಣ್ಣುಮುಚ್ಚಿ ಕೇಳದಿರು' ಎಂದು ಅರ್ಥ. ಈ ವಿಷಯವನ್ನು ಬುದ್ಧನು ಕೇಸಮುತ್ತಕಲಾಮರಿಗೆ ಬೋಧಿಸಿದ್ದಾನೆ.

ಕಾನಂದ ಕೂಡ. ಅವರು ಹೀಗೆನ್ನುತ್ತಾರೆ:

ಬುದ್ಧನು ನಮ್ಮನ್ನು ದೇವರಿಗೆ, ದೇವತೆಗಳಿಗೆ ಗುಲಾಮಗ್ಳಾಗದಂತೆ ಸ್ವಚ್ಛಂದವನ್ನು ಪ್ರಸಾದಿಸಿದ್ದಾನೆ. ಅವನು ವೇದಗಳ ಮುಂದೆ ಗೋಗರೆಯಲಿಲ್ಲ. ಬ್ರಾಹ್ಮಣ ಪೂಜಾರಿಗಳಿಗೆ ತಲೆ ಬಗ್ಗಿಸಲಿಲ್ಲ. ಆಚಾರಗಳಿಗೆ ಅದಕ್ಕಿಂತ ಬಗ್ಗಿರಿ ಎನ್ನಲಿಲ್ಲ. ಯಾವ ಗ್ರಂಥವನ್ನೂ ನಂಬಬೇಡಿರಿ ಎಂದಿದ್ದಾನೆ. ವೇದಗಳೆಲ್ಲಾ ಬರೀ ವಂಚನೆ (huning) ಎಂದಿದ್ದಾನೆ.[4] ಈ ವಿಶ್ವದಲ್ಲಿ ಹುಟ್ಟಿದವರಲ್ಲಿ ಸ್ವಾಸ್ಥ್ಯ ಮನಸ್ಸಿನವರಲ್ಲಿ (ಚಿತ್ತಭ್ರಮೆಗಳಿಲ್ಲದವರು) ಯಾರಾದರೂ ಇದ್ದಾರೆಂದರೆ ಅದು ಬುದ್ಧ ಮಾತ್ರವೇ.[5] ಇಲ್ಲಿ ಮಾನಸಿಕ ಸ್ವಾಸ್ಥ್ಯ ಎಂದರೆ 'ನಿನ್ನ ಆಲೋಚನೆ ಮೇಲೆ ನೀನು ಆಧಾರಪಟ್ಟು, ಯಾರೋ ಹೇಳಿದ್ದಾರೆಂದು ಕಣ್ಣುಮುಚ್ಚಿ ಕೇಳದಿರು' ಎಂದು ಅರ್ಥ. ಈ ವಿಷಯವನ್ನು ಬುದ್ಧನು ಕೇಸಮುತ್ತಕ ಲಾಮರಿಗೆ ಬೋಧಿಸಿದ್ದಾನೆ. ಇದನ್ನು ಕಲಾಮಸುತ್ತ ಅನ್ನುತ್ತಾರೆ. ಈ ಸುತ್ತ ಸಾರಾಂಶವನ್ನು ನಮ್ಮ ವಿವೇಕಾನಂದ ಸ್ವಾಮಿ ಅನೇಕ ಸಾರಿ ಹೇಳಿದ್ದಾರೆ. ಹೀಗೆ : "ಇವು ಗುರುತಿಸಿಕೊಳ್ಳಬೇಕಾದ ಬುದ್ಧನ ಮಾತುಗಳು: 'ಯಾವುದೊ ಒಂದು ಆಧಾರಿಕಗ್ರಂಥ ಹೇಳಿದೆ ಎಂದು ನಂಬಬೇಡ. ನಮ್ಮ ಅಪ್ಪಂದಿರು ನಂಬಿರಿ ಎಂದಿದ್ದಾರೆಂದು ನಂಬದಿರು. ನಿನ್ನಂತಹ ಇತರರು ನಂಬುತ್ತಿದ್ದಾರೆಂದು ನೀನು ನಂಬಬೇಡ. ಪ್ರತಿಯೊಂದನ್ನು ಪರೀಕ್ಷಿಸು, ಪ್ರಯೋಗಿಸು. ಆಗ ನಂಬು. ಅದು ಎಲ್ಲರಿಗೂ ಒಳಿತು ಎಂದಾದರೆ ಅದನ್ನು ಎಲ್ಲರಿಗೂ ಹಂಚು. ಈ ಮಾತುಗಳನ್ನು ಹೇಳಿ ಬುದ್ಧ ಗತಿಸಿದ."[6]

ಇಲ್ಲಿ ವಿವೇಕಾನಂದ ಎಡವಿಬಿದ್ದಿದ್ದಾರೆ. ಈ ಕಲಾಮ ಸುತ್ತ ಹೇಳುತ್ತಿದಂತೆಯೇ ಅವನು ಮರಣಿಸಲಿಲ್ಲ. ಬುದ್ಧ ಯಾವಾಗಲೂ ಕೂಡ ತನ್ನ ಮೇಲಿನ ಗೌರವದಿಂದ ತಾನು ಹೇಳಿದುದನ್ನು ನಂಬಬೇಕೆಂದು ಕೋರಲಿಲ್ಲ. ಪ್ರಪಂಚದಲ್ಲಿ ಹುಟ್ಟಿದ ಯಾವ ಪ್ರವಕ್ತ ಕೂಡ ಇಂತಹ ವಿಚಾರವಾದವನ್ನು ನುಡಿಯಲಿಲ್ಲ. ಅವರೆಲ್ಲಾ ಮಾನವಾತೀತ ಶಕ್ತಿ(ದೇವರು) ಮಾರ್ಗನಿರ್ದೇಶಕತ್ವದಲ್ಲಿಯೇ ನಡೆಯಿರಿ ಅಂದಿದ್ದಾರೆ. ಆದರೆ ಬುದ್ಧ ಮಾತ್ರ ಹಾಗಲ್ಲದೆ, ಶಾಂತ ರಕ್ಷಿತ ಮಾತುಗಳಲ್ಲಿ ಹೇಳಬೇಕೆಂದರೆ: 'ಹೇಭಿಕ್ಷುಗಳೇ, ನನ್ನ ಮಾತುಗಳನ್ನು ವಿಜ್ಞರು ನನ್ನ ಮೇಲಿನ ಗೌರವದಿಂದಲ್ಲದೆ ಪೂರ್ತಿಯಾಗಿ ಪರಿಶೀಲಿಸಿದ ನಂತರವೇ, ಬಂಗಾರವನ್ನು ಪುಟಕ್ಕಿಟ್ಟು ಒರೆಗೆಹಚ್ಚಿ ಹೊಳಪುಗೊಂಡ ಮೇಲೆ ಅಂಗೀಕರಿಸಬೇಕು."[7] ಎಂದಿದ್ದಾನೆ. ಅಷ್ಟೇ ಅಲ್ಲ ಅನುಮಾನವಿದ್ದರೆ 'ಎಹಿ ಪಸ್ಸಿಕೋ' (ಬಾ, ಬಂದು ನೋಡಿಕೋ come and see) ಎಂದು ಕೂಡ ಬುದ್ಧ ಹೇಳಿದ್ದಾನೆ. ಅಂದರೆ ಅನುಭವ ಪೂರ್ವಕವಾಗಿ ಪರೀಕ್ಷಿಸಿಕೊಳ್ಳಿ ಎಂದಿದ್ದಾನೆ.

ವಿವೇಕಾನಂದರು ಇನ್ನೂ ಹೀಗೆಂದಿದ್ದಾರೆ: "ಬುದ್ಧ ಹುಟ್ಟಿದಾಗ ಎಷ್ಟು ಶುದ್ಧವಾಗಿದ್ದಾನೆ ಎಂದರೆ, ಅವನನ್ನು ನೋಡಿದವರು 'ಕರ್ಮಾಚರಣೆಯ ಮತವನ್ನು' (ceremonial religion)ತೊರೆದು ಭಿಕ್ಷುಗಳಾಗಿ, ದಕ್ಷಿತರಾಗುತ್ತಾರೆ."[8]

ಪುರಾತನ, ಆಧುನಿಕ ಬೌದ್ಧರು, ಬೌದ್ಧೇತರರು ಬುದ್ಧನನ್ನು ಹೊಗಳಿದವರಲ್ಲಿದ್ದಾರೆ. "ನಿನ್ನನ್ನು ಹೊಗಳಲು ಸಾವಿರ ನಾಲಿಗೆಗಳು ನನಗಿಲ್ಲ" ಎಂದಿದ್ದಾಳೆ ಮಣಿಮೇಖಲೈ. ದಶಾವತಾರಸ್ತೋತ್ರದಲ್ಲಿ ಶಂಕರ, ಬುದ್ಧನನ್ನು ಪರಮಯೋಗಿ ಎಂದು ಕೀರ್ತಿಸಿ, ಅನುಗ್ರಹ ಯಾಚಿಸಿದ್ದಾನೆ. 1925ರಲ್ಲಿ ಬುದ್ಧ ಜಯಂತಿ ಸಂದರ್ಭದಲ್ಲಿ ಮಹಾತ್ಮ ಗಾಂಧೀ, "ಬೌದ್ಧವನ್ನು ಭಾರತದೇಶದಿಂದ ಹೊರಗಟ್ಟಿದ್ದಾರೆಂದು ನಾನು ಅಂದುಕೊಳ್ಳುವುದಿಲ್ಲ. ಬೌದ್ಧವನ್ನು ಭಾರತ ದೇಶದಲ್ಲಿ ಇಲ್ಲದಂತೆ ಮಾಡುವುದು ಅಸಂಭವ. ಅಂತಹ ಮಾನವಜನಾಂಗದ ಗುರುವನ್ನು, ಮಹಾನುಭಾವನನ್ನು ಇಲ್ಲದಂತೆ ಮಾಡುವುದೂ ಅಸಂಭವ. ಪ್ರಪಂಚವಿರುವವರೆಗೆ ಅವನು ಇದ್ದೇ ಇರುತ್ತಾನೆ ಎನ್ನುವಲ್ಲಿ ಯಾವ ಮಾತ್ರವೂ ಸಂದೇಹವಿಲ್ಲ." ಅಂದಿದ್ದಾರೆ.

> **ಮಾನವಾತ್ಮಕ್ಕೆ ಸ್ಫೂರ್ತಿ ನೀಡುವ ಅಪಾರವಾದ ಸಂಪತ್ತು ಬುದ್ಧನ ಸ್ಮೃತಿ. ಕೋಟ್ಯಂತರ ಮಾನವರ ಆಲೋಚನೆ ಮೇಲೆ ಅದರ ಪ್ರಭಾವ ವಿಪರೀತ. 'ಧೈರ್ಯ ಸಾಹಸೋಪೇತವಾದ ಉನ್ನತ ಜೀವನವನ್ನು ನಡೆಸಲಿಕ್ಕೆ ಶತಮಾನಗಳ ಕಾಲ ಅದು ನೀಡಿದ ಸ್ಫೂರ್ತಿ ಹೇಳತೀರದು. ಮಾನವಾತ್ಮವನ್ನು ಪರಿಶುದ್ಧಗೊಳಿಸುವಲ್ಲಿ ಸಾಮಾಜಿಕ ಸಂಬಂಧಗಳನ್ನು ಮಾನವೀಕರಿಸುವಲ್ಲಿ ಅದು ಮಾಡಿದ ನೆರವು ಎದ್ದು ಕಾಣಿಸುತ್ತಿದೆ.**

ಸಂಪ್ರದಾಯ ಹಿಂದೂಗಳಿಗೆ ಸ್ವಲ್ಪ ದೂರದಲ್ಲಿರುವ ಭಾರತೀಯ ಬುದ್ಧಿ ಜೀವಿಗಳಲ್ಲಿ ಒಬ್ಬರಾದ ನೆಹ್ರು "ಅಸಂಖ್ಯಾತ ಪ್ರೇಮ ಪೂರಿತ ಹಸ್ತುಗಳು ಕಲ್ಲಿನಲ್ಲಿ, ಹಾಲುಗಲ್ಲಿನಲ್ಲಿ, ಕಂಚಿನಲ್ಲಿ ಕಡೆದ ಬುದ್ಧ ಪ್ರತಿಮೆ ಭಾರತೀಯ ಚಿಂತನಾಸ್ಫೂರ್ತಿಯನ್ನು ಒಟ್ಟಾರೆಯಾಗಿ, ಇಲ್ಲವೇ, ಅದರ ಒಂದು ಸಜೀವ ಪಕ್ಷವನ್ನು ಪ್ರತೀಕೀಕರಿಸುವಂತೆ ಕಾಣುತ್ತಿದೆ. ಅನುದ್ವೇಗ ಪ್ರಶಾಂತಿಯಿಂದ, ರಾಗದ್ವೇಷಗಳಿಗೆ ಅತೀತವಾಗಿ, ಈ ಪ್ರಪಂಚದ ಅಳಲು, ಗಂದರಗೋಳ ಘರ್ಷಣೆಗಳ ಹೊರಗೆ ಪದ್ಮ ಪತ್ರಗಳ ಮೇಲೆ ಕುಳಿತು ಎಟುಕಲಾರದ ಅನಧಿಗಮನ ಅನಂತ ದೂರದಲ್ಲಿರುವಂತೆ ಕಾಣಿಸುತ್ತಿದ್ದಾನೆ. ಆದರೂ ಮತ್ತೆ ನಾವು ಆ ಸ್ಥಿರ ಅಚಂಚಲ ಲಕ್ಷಣಗಳ ಹಿಂದೆ, ನಾವು ಬಲ್ಲ ರಾಗೋದ್ವೇಗಗಳಿಗಿಂತ, ಅಪೂರ್ವವಾದ ಶಕ್ತಿವಂತನಾದ ಒಂದು ರಾಗವನ್ನು, ಒಂದು ಉದ್ವೇಗವನ್ನು ಕಾಣಬಹುದು. ಅವನ ನಿಮೀಲಿತ ನೇತ್ರಗಳು. ಆದರೆ ಅವುಗಳಿಂದ ಒಂದು ಜೀವಂತ ಸ್ಫೂರ್ತಿ ಹೊರ ಹೊಮ್ಮುತ್ತದೆ. ಒಂದು ಪ್ರಾಣಿಕಶಕ್ತಿ ಆ ಶಿಲೆಯನ್ನು ತುಂಬುತ್ತದೆ. ಯುಗಗಳು ಉರುಳಿ ಹೋಗುತ್ತಿವೆ. ಆದರೂ ಬುದ್ಧ ನಮಗೆ ಅಷ್ಟೇನೂ ದೂರವಾಗಿಲ್ಲ. ಅವನ ವಾಣಿ ನಮ್ಮ ಕಿವಿಗಳಲ್ಲಿ ಪಿಸುಗುಡುತ್ತಲೇ ಇದೆ. (ಜೀವನ) ಸಮರದಿಂದ ಓಡಿಹೋಗಬೇಡ ಎನ್ನುತ್ತಿದೆ. ಪ್ರಶಾಂತ ನೇತ್ರಗಳಿಂದ ಅದನ್ನು ಎದುರಿಸು ಎನ್ನುತ್ತಿದೆ. ಪ್ರಗತಿಗೆ, ಪಕ್ವತೆಗೆ ದೊಡ್ಡ ಅವಕಾಶಗಳನ್ನು ಬದುಕಿನಲ್ಲಿ ನಿರೀಕ್ಷಿಸು ಎನ್ನುತ್ತಿದೆ..." ಅದ್ಭುತವಾದ ವ್ಯಕ್ತಿ, ಬಾರ್ತ್ ಹೇಳುವಂತೆ: "ಪ್ರಶಾಂತತೆಯಲ್ಲಿ, ಮಧುರ ರಾಜಸತೆಯಲ್ಲಿ, ಅನಂತ ಮಾರ್ದವತೆಯಲ್ಲಿ..... ಪರಿಪೂರ್ಣ ಮಾನವ ಬುದ್ಧ.

ನಿಜವಾಗಿಯೂ ಅಂತಹ ನಮೂನೆಯ ಮೂರ್ತಿಯನ್ನು ಉತ್ಪಾದಿಸಬಲ್ಲ ದೇಶ, ಜನಾಂಗ, ಯಾವುದಾದರೆ ಏನು, ಅದಕ್ಕೆ ಅಗಾಧವಾದ ಪ್ರಜ್ಞೆ, ಅಂತರ್ಗತ ಶಕ್ತಿ ಪುಷ್ಕಲವಾಗಿ ತುಂಬಿರಲೇಸಬೇಕು.[9]

ರಾಜೇಂದ್ರಪ್ರಸಾದ್, ರಾಜಗೋಪಾಲಾಚಾರಿ ಅವರು ಕೂಡ ಬುದ್ಧನನ್ನು ತಮ್ಮ ಶೈಲಿಯಲ್ಲಿ ಪ್ರಶಂಸಿಸಿದ್ದಾರೆ...... ಮಾನವ ಜನಾಂಗದ ಚರಿತ್ರೆಯಲ್ಲಿ ಅನನ್ಯ ಸ್ಥಾನವನ್ನು ಆಕ್ರಮಿಸುತ್ತಾನೆ ಬುದ್ಧ... ಚರಿತ್ರೆಗೆ ದಕ್ಕಿದವರೆಗೆ ಆತ ಅತ್ಯಂತ ಶ್ರೇಷ್ಠ ಭಾರತೀಯ ಎನ್ನುತ್ತಾರೆ ಮುನ್ಷೀ.[10]

ಬುದ್ಧನು ಹಿಂದು, ಬೌದ್ಧ ಒಂದು ಹಿಂದೂಮತದ ಶಾಖೆ

ಬುದ್ಧನು ಹಿಂದುವೇ ಎಂದು, ಬೌದ್ಧ ಹಿಂದೂ ಮತವನ್ನು ಸಂಸ್ಕರಿಸಿದ ಒಂದು ಶಾಖೆ ಎಂದು ರುಜು ಮಾಡಲಿಕ್ಕೆ ವಿವೇಕಾನಂದರು, ಇವರನ್ನು ಅನುಸರಿಸಿ ಸರ್ವೇಪಲ್ಲಿ ರಾಧಾಕೃಷ್ಣನ್-ವಿಪರೀತವಾಗಿ ಪ್ರಯಾಸಪಟ್ಟಿದ್ದಾರೆ. ಇಷ್ಟಕ್ಕೂ ಹಿಂದೂಮತ ಯಾವಾಗಿನದು? ಬೌದ್ಧ ಯಾವಾಗಿನದು? ಬೌದ್ಧ ಕ್ರಿ.ಪೂ. 6ನೇ ಶತಮಾನದಲ್ಲಿ ಬಂದರೆ, ಹಿಂದೂಮತ ಇತ್ತೀಚಿನ ಮಹಮ್ಮದೀಯರು ಭಾರತದೇಶದ ಮೇಲೆ ದಂಡೆತ್ತಿ ಬಂದ ನಂತರ ರೂಪುಗೊಂಡದ್ದು. ಆದರೆ ಹಿಂದೂಮತದಲ್ಲಿ ವೇದ, ಬ್ರಾಹ್ಮಣ, ಉಪನಿಷತ್ತುಗಳ ಮೌಲ್ಯಗಳನ್ನೆಲ್ಲೆ ತುರುಕಿರಿಸಲಾಗಿದೆ. ಈ ವಿಧದಲ್ಲಿ ನೋಡಿದರೆ ಹಿಂದೂ ಮತ ಹಳೆಯದೆ. ವಿವೇಕಾನಂದರ ಪ್ರಕಾರ ಹಿಂದೂಮತ ಅಂದರೆ ವೇದ ಮತ, ಉಪನಿಷದ್ಮತ. ಅವರ ದೃಷ್ಟಿಯಲ್ಲಿ ನಿಜವಾದ ಹಿಂದೂ ಮತವೆಲ್ಲಾ ವೇದಾಂತದಲ್ಲಿಯೇ ಇದೆ.

ಬುದ್ಧನು ಒಬ್ಬ ವೇದಾಂತ ಸಂನಯಾಸಿ. ಬೌದ್ಧ ಭಾವನೆಗಳು ಬುದ್ಧನವಲ್ಲ ಎಂದು, ತುಂಬಾ ಪ್ರಾಚೀನವಾದವು (V 39). ಅಂದರೆ ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಬೌದ್ಧವೆಲ್ಲಾ ವೇದಗಳಿಂದ, ಉಪನಿಷತ್ತುಗಳಿಂದ ಬಂದದ್ದು ಎಂದಂತೆ. ತಿರುಗಿಮುರುಗಿ ವಿವೇಕಾನಂದರು ಹೇಳುವುದು ಬುದ್ಧನ ಬೋಧನೆ ಎಲ್ಲಾ ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಇರುವುದೇ.. (VI 225, 227) ಸಿದ್ಧಾಂತಗಳೆಲ್ಲಾ ಉಪನಿಷತ್ತುಗಳಿಂದ ಕಡ ತಂದುಕೊಂಡವೇ. (III. 230) ಇದು ವಿವೇಕಾನಂದರ ವಾದದಲ್ಲಿ ಒಂದು ಖಂಡ.

ಇನ್ನು ಎರಡನೆಯ ಕಾಂಡ-ಬ್ರಾಹ್ಮಣ ಮತದಿಂದಲೇ ಬೌದ್ಧ ಒಂದು ಎದುರು ಬಿದ್ದ, ಕ್ರಾಂತಿ ಕಾರಿಯಾದ, ಸಂಸ್ಕರಣ ಶಾಖೆ. ಬೌದ್ಧ ಎಷ್ಟು ದೊಡ್ಡದಾದರೂ ಅದು ನಮ್ಮ ಮತದಲ್ಲಿನ ಎದುರುಬಿದ್ದ ಮಗು. (III. 275) ಅಂದರೆ, ವಿವೇಕಾನಂದರ ದೃಷ್ಟಿಯಲ್ಲಿ ಬೌದ್ಧ ವೇದ ಯಜ್ಞಗಳಿಗೆ, ಪೂಜಾಕ್ರತುಗಳಿಗೆ, ವರ್ಣವ್ಯವಸ್ಥೆಗೆ ವಿರುದ್ಧವಾಗಿ ಆವಿರ್ಭವಿಸಿದ ಮತ.

ಆಗಾಗ್ಗೆ ವಿವೇಕಾನಂದರು ಬೌದ್ಧ ಕ್ಷತ್ರಿಯ ವರ್ಗಕ್ಕೆ, ಪೂಜಾರಿ ಇಲ್ಲವೆ ಬ್ರಾಹ್ಮಣ ವರ್ಗಕ್ಕೆ ಮಧ್ಯೆಯಿರುವ ವೈಮನಸ್ಸಿನ ಕಾರಣವಾಗಿ ಹುಟ್ಟಿದ್ದು ಎನ್ನುತ್ತಾರೆ.

ಅಷ್ಟೇ ಅಲ್ಲ, ಮುಖ್ಯವಾಗಿ ಬೌದ್ಧವನ್ನು ಒಂದು ಸಂಸ್ಕರಣ ವಾದವಾಗಿ ಪರಿಗಣಿಸಿದ್ದಾರೆ. ಬುದ್ಧನು ಏನೋ ನೂತನವಾದವನ್ನು ಬೋಧಿಸಲು ಬರಲಿಲ್ಲವೆಂದು. ಹಿಂದೂ ಮತ ಆಶಂಸೆಯನ್ನು ಪೂರೈಸಲು (fulfill) ಮಾತ್ರವೇ ಬಂದಿದ್ದಾನೆ. ಹಿಂದೂ ಮತ ತಾರ್ಕಿಕ ವಿಕಾಸ ಪೂರ್ತಿಗೊಳಿಸಲಿಕ್ಕೆ ಬಂದಿದ್ದು. (I.21)ವೇದಗಳಲ್ಲಿ ಅಡಗಿರುವ ಸತ್ಯಗಳನ್ನು ಮಾತ್ರವೇ ಹೊರಕ್ಕೆ ತಂದಿದ್ದಾನೆ. (I.22)

ಸರ್ ರಾಧಾಕೃಷ್ಣನ್ ಕೂಡ ಹೆಚ್ಚು ಕಡಿಮೆ ಇದೇ ಶೈಲಿಯಲ್ಲಿ ಸಿದ್ಧಾಂತೀಕರಿಸುತ್ತಾರೆ. ವಿವೇಕಾನಂದರಿಂದ ರಾಧಾಕೃಷ್ಣನ್ ತುಂಬಾ ಪ್ರಭಾವಿತರಾಗಿದ್ದಾರೆ. ಆದರೂ

ವಿವೇಕಾನಂದರ ಹೆಸರೇ ಎತ್ತದೆಯೇ ಅದೇ ವಿಷಯವನ್ನು ಮತ್ತೆ ಹೇಳುತ್ತಾರೆ: 'ಬುದ್ಧನು ತಾನೊಂದು ನೂತನ ಮತವನ್ನು ಆವಿಷ್ಕರಿಸುತ್ತಿದ್ದೇನೆಂದು ಭಾವಿಸಲಿಲ್ಲ. ಅವನು ಹಿಂದುವಾಗಿ ಹುಟ್ಟಿ, ಹಿಂದುವಾಗಿ ಬೆಳೆದು, ಹಿಂದುವಾಗಿ ಮರಣಿಸಿದನು. ಇಂಡೋ-ಆರ್ಯನ್ ಪ್ರಾಚೀನ ನಾಗರಿಕೆಯ ಆದರ್ಶಗಳನ್ನು ಹೊಸದಾಗಿ ಮತ್ತೆ ಗಟ್ಟಿಯಾಗಿ ಹೇಳುತ್ತಿದ್ದಾನೆ"[11] ಎನ್ನುತ್ತಾರೆ ರಾಧಾಕೃಷ್ಣನ್. ವಿವೇಕಾನಂದರಂತೆಯೇ ತನಗೆ ಇಷ್ಟವಾದ ವಿಷಯವನ್ನು ಎರಡು ಮೂರು ಸಲ ಹೇಳುತ್ತಾರೆ ರಾಧಾಕೃಷ್ಣನ್. "ಬೌದ್ಧ ಒಂದು ನೂತನ ಸ್ವತಂತ್ರ ಮತವಾಗಿ ಆರಂಭಗೊಳ್ಳಲಿಲ್ಲ". ಇಷ್ಟಕ್ಕೂ ಬೌದ್ಧ "ಮೊದಲಿದ್ದ ಹಿಂದೂಗಳ ಪ್ರಾಚೀನ ವಿಶ್ವಾಸಕ್ಕೆ ಸೇರಿದ ಒಂದು ಶಾಖೆಯೇ ಬೌದ್ಧ. ಬಹುಶಃ ಅದರಿಂದ ಭೇದಗೊಂಡು ಬೇರೆಯಾದ, ಎದುರು ತಿರುಗಿದ ಶಾಖೆ... ಬುದ್ಧನ ಮುಖ್ಯ ಉದ್ದೇಶ ಮತ ಆಚರಣೆಗಳನ್ನು ಸಂಸ್ಕರಿಸಿ, ಪ್ರಾಥಮಿಕ ಸೂತ್ರಗಳತ್ತ ತಿರುಗಿಸುವುದೇ.... ಅವನು ತುಂಬಿಸಲಿಕ್ಕಾಗಿ ಬಂದಿದ್ದಾನೆಯೇ ಹೊರತು ನಾಶ ಮಾಡಲಿಕ್ಕಾಗಿಯಲ್ಲ.[12] ಅನ್ನುತ್ತಾರೆ ರಾಧಾಕೃಷ್ಣನ್.

ಈ ಸಂಸ್ಕರಣ ವಾದವನ್ನೇ ಅಸಮಾನ ಆಧುನಿಕ ಪಂಡಿತ, ಹಿಂದೂಧರ್ಮ ಚರಿತ್ರಕಾರರಾದ ಪಾಂಡುರಂಗ ವಾಮನ ಕಾಣೆ ಕೈಹಿಡಿದಿದ್ದಾರೆ. "ಬೌದ್ಧನು ಅಂದಿನ ಹಿಂದೂ ಮತದ ದೊಡ್ಡ ಸಂಸ್ಕೃತ. ಅವನು ಹೊಸ ಮತವನ್ನು ಸ್ಥಪಿಸುತ್ತಿದ್ದೇನೆ ಎಂದುಕೊಳ್ಳಲಿಲ್ಲ. ಅವನು ಹಿಂದೂ ಮತವನ್ನು, ಅದರ ನಂಬಿಕೆಗಳನ್ನು, ಆಚರಣೆಗಳನ್ನು ಬಿಟ್ಟುಬಿಡಲಿಲ್ಲ. ಹಿಂದೂ ಈ ಋಷಿಗಳನ್ನು, ವೇದಗಳನ್ನು ತನ್ನ ಮಾತುಕತೆಗಳಲ್ಲಿ ಉಲ್ಲೇಖಿಸಿದ್ದಾನೆ. ಅವನು ಯೋಗ, ಧ್ಯಾನಗಳ ಪ್ರಾಮುಖ್ಯವನ್ನು ಗುರ್ತಿಸಿದ್ದಾನೆ. ಕರ್ಮ, ಪುನರ್ಜನ್ಮ, ವಿಶ್ವಶಾಸ್ತ್ರದಂತಹ ಭಾವಗಳನ್ನು ಹಿಂದೂ ಮತದಿಂದಲೇ ಗ್ರಹಿಸಿದನು. ಉಪನಿಷತ್ ಕಾಲ ಸಿದ್ಧಾಂತಗಳೇ ಆತನ ಬೋಧನೆಗಳಲ್ಲಿ ಮುಖ್ಯ ಭಾಗ.... ಶಾಕ್ಯರು ಪ್ರಾಚೀನ ಬ್ರಾಹ್ಮಣಗಳನ್ನು, ಬೈದಂತೆ ಯಾವ ಗ್ರಂಥಗಳಲ್ಲಿಯೂ ಇಲ್ಲ... ಬುದ್ಧನು ಎಂದಿಗೂ ಉಪನಿಷತ್ತುಗಳ ಕೇಂದ್ರ ಬಿಂದುವಾಗ ಬ್ರಹ್ಮನ್‌ನನ್ನು ಎದುರಿಸಲಿಲ್ಲ."[13]

ಬುದ್ಧನಿಗೆ ಹಿಂದೂಮತ ಬಣ್ಣ ಬಳಿದು ಹೇಗಾದರೂ ಹಿಂದುವಾಗಿ ತೋರಿಸಬೇಕು. ಇದು ರಾಧಾಕೃಷ್ಣನ್-ಕಾಣೆ-ವಿವೇಕಾನಂದರ ಒಳಗಿನ ಉದ್ದೇಶ. ಆದರೆ ಬುದ್ಧನು ಅನಾತ್ಮವಾದಿ, ನಿರೀಶ್ವರವಾದಿ, ವೇದಗಳನ್ನು ಒಪ್ಪಿಕೊಳ್ಳದವನು. ಹೀಗಿರುವಾಗ ಹೇಗೆ ಬಣ್ಣ ಬಳಿಯುವುದು? ಈ ಮೂರನ್ನೂ- ಆತ್ಮವನ್ನು, ದೇವರನ್ನು, ವೇದಗಳನ್ನು-ಅಂಗೀಕರಿಸಿದವ ಎನ್ನಬೇಕು. ಹೇಗೆ? ವಕ್ರೀಕರಣವೇ ತೆರೆದಿರುವ ಒಂದೇ ಒಂದು ದಾರಿ.

ಪ್ರಪಂಚವು ಸಾಂತವೇ? ಅನಂತವೇ? ಎರಡೂನಾ? ಎರಡೂ ಅಲ್ಲವೇ? ಮರಣಾನಂತರ ಜೀವ ಇರುತ್ತದೆಯೇ? ಇರುವುದಿಲ್ಲವೇ? ಎರಡೂನಾ? ಎರಡೂ ಅಲ್ಲವೇ? ಎಂದು ವಚ್ಚಗೊತ್ತ ಕೇಳಿದ 14 ಅವ್ಯಾಕತೆಗಳ (unanswerable)ವಿಷಯಗಳಲ್ಲಿ ಬುದ್ಧನು ಮೌನ ವಹಿಸಿದನು. 'ಮಹಾಮೌನ'ವನ್ನು ಆಸರೆಯಾಗಿ ಮಾಡಿಕೊಂಡು ಬುದ್ಧನು 'ಆತ್ಮವನ್ನು ಇಲ್ಲ ಅನ್ನಲಿಲ್ಲ' "ಆದ್ದರಿಂದ, ಎರಡನೇ ಪಕ್ಷಕ್ಕೆ ಎಳೆದು, 'ಒಪ್ಪಿಕೊಂಡಂತೆಯೇ" ಎಂದು ವ್ಯಾಖ್ಯಾನಿಸಿ ಬುದ್ಧನನ್ನು ಹಿಂದೂತ್ವದತ್ತ ಎಳೆದಿದ್ದಾರೆ. ಆದರೆ ವಾಸ್ತವಕ್ಕು ಬುದ್ಧನು ತನ್ನ ಧರ್ಮ ಚಕ್ರ ಪ್ರವರ್ತನ

ಸೂತ್ರದಲ್ಲಿ ಲೋಕ ತ್ರಿಲಕ್ಷಣಗಳನ್ನು (ಅನತ್ತ, ಅನಿತ್ಯ, ದುಃಖ) ಹೇಳುವಾಗ 'ಆತ್ಮ ಇಲ್ಲವೆಂದು' (ಅನತ್ತವನ್ನು) ಸ್ಪಷ್ಟವಾಗಿಯೇ ಹೇಳಿದ್ದಾನೆ. ಮಿಗಿಲಾಗಿ ಆ ಅನಾತ್ಮ ಭಾವನೆಯನ್ನು ಯಥಾರ್ಥೀಕರಿಸಿಕೊಂಡರೇನೆ ನಿರ್ವಾಣಸಾಧ್ಯ ಎಂದಿದ್ದಾನೆ. ಈ ವಿಷಯವನ್ನು ವಿವೇಕಾನಂದಾದಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ' ತಿರುಗಿಸಿಕೊಂಡಿದ್ದಾರೆ.

ಇವರದೇ ಮತ್ತೊಂದು ವಿಷಯ: ಬುದ್ಧನು ಶಿಷ್ಯರು, ಅನುಯಾಯಿಗಳು ಯಾರೂ ಬುದ್ಧನ ಬೋಧನೆಗಳನ್ನು ಸರಿಯಾಗಿ 'ಅರ್ಥಮಾಡಿಕೊಳ್ಳಲಿಲ್ಲ.[14] ಅರ್ಥಮಾಡಿಕೊಂಡಿದ್ದಾರೆ, ಅವನು ಹಿಂದೂಮತ ಸಂಸ್ಕರಣಕ್ಕಾಗಿ, ಅದನ್ನು ಪೂರಣಗೊಳಿಸಲಿಕ್ಕೆ (fulfill) ಬಂದಿದ್ದಾನೆಂದು ಅರ್ಥಮಾಡಿಕೊಳ್ಳುತ್ತಿದ್ದರು.

ಇಲ್ಲಿ ನಾವು ಕೇಳಬೇಕಾದ ಪ್ರಶ್ನೆ ಒಂದೇ: ಬುದ್ಧನ ಶಿಷ್ಯರು ಅನುಯಾಯಿಗಳು ಆದ ಆನಂದ, ಸಾರಿಪುತ್ರ, ಮಹಾಕಾಶ್ಯಪನ ನಾಗಸೇನ, ನಾಗಾರ್ಜುನ, ಬುದ್ಧಘೋಷ, ವಸುಬಂಧು, ಧರ್ಮಕೀರ್ತಿ, ಶಾಂತಿದೇವ, ಶಾಂತರಕ್ಷಿತರು ಬುದ್ಧನು ಬೋಧನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಒಬ್ಬನೇ ಒಬ್ಬ ವಿವೇಕಾನಂದರು ಮಾತ್ರವೇ ಅರ್ಥ ಮಾಡಿಕೊಂಡರೆಂದು ಭಾವಿಸಬೇಕೇ?

ಪ್ರಪಂಚವು ಸಾಂತವೇ? ಅನಂತವೇ? ಎರಡೂನಾ? ಎರಡೂ ಅಲ್ಲವೇ? ಮರಣಾನಂತರ ಜೀವ ಇರುತ್ತದೆಯೇ? ಇರುವುದಿಲ್ಲವೇ? ಎರಡೂನಾ? ಎರಡೂ ಅಲ್ಲವೇ? ಎಂದು ವಚ್ಚಗೊತ್ತ ಕೇಳಿದ 14 ಅವ್ಯಾಕತೆಗಳ ವಿಷಯಗಳಲ್ಲಿ ಬುದ್ಧನು ಮೌನವಹಿಸಿದನು. 'ಮಹಾಮೌನ' ವನ್ನು ಆಸರೆಯಾಗಿ ಮಾಡಿಕೊಂಡು ಬುದ್ಧನು 'ಆತ್ಮವನ್ನು ಇಲ್ಲ ಅನ್ನಲಿಲ್ಲ' "ಆದ್ದರಿಂದ, ಎರಡನೇ ಪಕ್ಷಕ್ಕೆ ಎಳೆದು, 'ಒಪ್ಪಿಕೊಂಡಂತೆಯೇ" ಎಂದು ವ್ಯಾಖ್ಯಾನಿಸಿ ಬುದ್ಧನನ್ನು ಹಿಂದೂತ್ವದತ್ತ ಎಳೆದಿದ್ದಾರೆ.

ಎಂತಹ ಹಾಸ್ಯಾಸ್ಪದ?

ಈವರೆಗೂ ನಮ್ಮ ಬ್ರಾಹ್ಮಣವಾದಿಗಳು-ಮುಖ್ಯವಾಗಿ, ವಿವೇಕಾನಂದ, ರಾಧಾಕೃಷ್ಣನ್, ಕಾಣೆಗಳ್-ಬೌದ್ಧ ಹೇಗೆ ಬ್ರಾಹ್ಮಣ(ಹಿಂದೂ) ಮತದಿಂದ ಆವಿರ್ಭವಿಸಿದ್ದೆಂದು ರುಜುಗೊಳಿಸಲಿಕ್ಕೆ ತಿಪ್ಪರಲಾಗ ಹಾಕಿದ್ದಾರೋ ನೋಡಿದೆವು. ಎಷ್ಟಮಟ್ಟಿಗೆ ಇದು ಚಾರಿತ್ರಿಕ ಸತ್ಯವೋ, ವಾಸ್ತವವೋ ಪರಿಶೀಲಿಸಬೇಕಾದ ಅಗತ್ಯ ಇದೆ.

ಬೌದ್ಧ ನಿಜವಾಗಿಯೂ ಹಿಂದೂ ಮತದಿಂದಲೇ ಹುಟ್ಟಿದೆ, ಅದರ ಸಂಸ್ಕರಣವೇ ಇದು, ಅದರಲ್ಲಿ ನೂತನ ಭಾವಗಳು ಯಾವುವೂ ಇಲ್ಲ. ಎಲ್ಲಾ ಹಳೆಯ ವಾಸನೆಯೇ ಎಂದು ಅಂಗೀಕರಿಸೋಣ. ಹಾಗಿದ್ದಾಗ, ಹಿಂದೂ ಮತದಿಂದಲೇ ಬೌದ್ಧ ಬಂದದ್ದು ಒಂದು ಚಾರಿತ್ರಿಕ ಸತ್ಯವೇ ಅದರೆ, ಒಬ್ಬ ವಿವೇಕಾನಂದ, ಒಬ್ಬ ರಾಧಾಕೃಷ್ಣನ್, ಒಬ್ಬ ಕಾಣೆ ಇನ್ನೂ ಯಾರುಯಾರೋ ಅದನ್ನೇ ಮತ್ತೆ ಮತ್ತೆ ಅನೇಕ ಪರ್ಯಾಯಗಳು ಹೇಳಬೇಕಾದ ಅಗತ್ಯವೇನಿತ್ತು? ಬೌದ್ಧನಲ್ಲಿರುವುದೆಲ್ಲ ನಮ್ಮದೇ, ನಮ್ಮ ಸ್ವಂತವೇ ಎಂದು ಗಂಟಲು ಸೀಳಿಕೊಳ್ಳುವ ಅಗತ್ಯವೇನಿತ್ತು? ಸರ್ಪವನ್ನು ತಬ್ಬಿಕೊಳ್ಳುವ ಧೃತರಾಷ್ಟ್ರ ಆಲಿಂಗನದಂತಹ ವಿಚಿತ್ರ ವರ್ಣನಿರ್ಮಿತ ಹಿಂದೂ ಮತಕ್ಕೆ ಅಗಿಯಲಾರದ, ನುಂಗಲಾರದ ಬುದ್ಧನು ದೊಡ್ಡವನಾಗಿಯೇ ಇರಬೇಕು. ಬುದ್ಧನ ವಾರಸತ್ವವೆಲ್ಲವೂ ಸಮೃದ್ಧವಾದುದಾಗಿಯೇ ಇರಬೇಕು. ಅಷ್ಟೇ ಅಲ್ಲ, ತುಂಬಾಜನ ಆಧುನಿಕ ಹಿಂದೂಗಳು ಬುದ್ಧನಿಗೂ ಭಾರತೀಯ ಸಂಸ್ಕೃತಿಗೂ ಅವನ ವಾರಸತ್ವ ಸೃಷ್ಟಿಸಿದ ಬಣ್ಣಕ್ಕೂ ತಾವೆಷ್ಟು ಋಣಿಪಟ್ಟು ಇರಬೇಕೆಂದು ಒಂದು ಕಡೆ ಹೇಳುತ್ತಲೇ, ಬೌದ್ಧ ಹಿಂದೂ ಮತದಿಂದಲೇ ಎಲ್ಲಾ ಗ್ರಹಿಸಿದೆ ಎಂದು ರುಜುಗೊಳಿಸಲಿಕ್ಕೆ ಚರಿತ್ರೆಯನ್ನೇ ತಾರುಮಾರು ಗೊಳಿಸುತ್ತಿದ್ದಾರೆ. ಈಗ ಈ ಚರಿತ್ರೆ ತಾರುಮಾರನ್ನು (anachronism)ನೋಡೋಣ.

"ಎಲ್ಲಾ ವೇದಗಳಲ್ಲಿಯೇ ಇರೋದಂತೆ, ಉಪನಿಷತ್ತುಗಳಲ್ಲಿಯೇ ಇರೋದಂತೆ." ಒಂದು ಅಪಭ್ರಂಶದ ವಿಶ್ವಾಸ ನಮ್ಮ ದೊಡ್ಡವರಾದ ವಿವೇಕಾನಂದರನ್ನು, ರಾಧಾಕೃಷ್ಣನ್‌ರನ್ನು ತಪ್ಪುದಾರಿ ಹಿಡಿಸಿತು. ವಿವೇಕಾನಂದರಾದರೋ ಒಳ್ಳೆಯ ಹಿಂದೂ ಮತ ಪ್ರಚಾರ ಚಳುವಳಿಯ ಕರ್ತರೇ ಹೊರತು ತೃಣಮೂಲ ತಾತ್ವಿಕರು(grassroot philosopher) ಅಲ್ಲ. ಅದಕ್ಕಾಗಿ ಬುದ್ಧನು ಎಲ್ಲವನ್ನೂ ವೇದೋಪನಿಷತ್ತುಗಳಿಂದಲೇ ಗ್ರಹಿಸಿದ್ದಾನೆಂದು ವಿವೇಕಾನಂದರು ಅಂದರೂ ಎಂದರೆ ಅದನ್ನು ನಾವು ದೊಡ್ಡದಾಗಿ ತೆಗೆದುಕೊಳ್ಳಬೇಕಾದ ಕೆಲಸವೇನಿಲ್ಲ. ಆದರೆ ಅದೇ ಮಾತನ್ನು, ಶಾಸ್ತ್ರೀಯವಾಗಿ ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಿದ, ಆಮೇಲೆ ಆ ಬಗ್ಗೆ, ಅನೇಕ ಭಾರತೀಯ ಹಿಂದೂ, ವೇದಾಂತ ಗ್ರಂಥಗಳನ್ನು ಬರೆದ ರಾಧಾಕೃಷ್ಣ ಪಂಡಿತರಂಹವರು 'ಅಸಂಬದ್ಧ'ಕ್ಕೆ ಕಟ್ಟುಬೀಳುವುದೆಂದರೆ ಏನನ್ನ ಬೇಕು?

ಬುದ್ಧನು ಸನಾತನ ವೇದ, ಉಪನಿಷದ್ಧರ್ಮವನ್ನೇ ಅನುಸರಿಸಿದ್ದನೆಂದು ಹೇಳಲಿಕ್ಕೆ ಸಾಕ್ಷಿ, ಬುದ್ಧನು ತಾನು ಪುರಾಣಮಾರ್ಗವನ್ನು, ಪ್ರಾಚೀನ ಧರ್ಮ ಮಾರ್ಗವನ್ನು, ಪೂರ್ತಿಯಾಗಿ ಬೋಧನೆಗೊಂಡ ಆ ಪ್ರಾಚೀನರ ಮಾರ್ಗದಲ್ಲೇ ನಡೆದಿದ್ದೇನೆಂದು ಹೇಳುವ ಮಾತುಗಳಿರುವ ಸಂಯುಕ್ತ ನಿಕಾಯ ಪಾಠವನ್ನು ಪದೇ ಪದೇ ರಾಧಾಕೃಷ್ಣನ್, ಕಾಣೆ ಅವರು ಉಲ್ಲೇಖಿಸಿದ್ದಾರೆ. ಆದರೆ ಇದರಲ್ಲಿ ಉಲ್ಲೇಖಿಸಿದ ಆ ಪುರಾಣ ಬೋಧನಾಪುರುಷರು(ಪುಬ್ಬಕೇಹಿ ಸಮ್ಮಾಸಂಬುದ್ದೇಹಿ) ಯಾರು? ರಾಧಾಕೃಷ್ಣನ್-

ಕಾಣೆ ಅವರ ಪ್ರಕಾರ ಅವರು ಯಾಜ್ಞವಲ್ಕ್ಯ, ಜನಕ, ಜಾಬಾಲ್ಲಿ, ಶ್ವೇತಕೇತು, ನಚಿಕೇತು, ಯಮ, ಅಶ್ವಪತಿ–ಕೈಕೇಯ, ಉದ್ದಾಲಕ ಅರುಣಿ ಮೊದಲಾದ ಉಪನಿಷದ್ಋಷಿಗಳು. ಈ ಋಷಿಗಳಲ್ಲಿ ಬೌದ್ಧರ ಪ್ರಕಾರ, ಒಬ್ಬರಿಗೂ ಕೂಡ ಜ್ಞಾನೋದಯವಾಗಲಿಲ್ಲ. ಯಾರೂ ಸಮ್ಮಾ ಸಂಬುದ್ಧರಾಗಲಿಲ್ಲ. ಉಪನಿಷತ್ತುಗಳಲ್ಲಿ ಹೇಳಿದ ಇವರ ಸಿದ್ಧಾಂತಗಳೆಲ್ಲ ಮಿಥ್ಯಾದೃಷ್ಟಿ ಸಿದ್ಧಾಂತಗಳು, ಶಾಶ್ವತಾತ್ಮ ಇದೆ ಎಂದು ಪ್ರಭೋಧಿಸುವ ಈ ಋಷಿಗಳ ಮಾರ್ಗವನ್ನು ಬುದ್ಧನು ಅನುಸರಿಸಿದ್ದಾನೆಂದು ಹೇಳುವುದು ಎಷ್ಟರ ಮಟ್ಟಿಗೆ ಸೂಕ್ತ?

ಪುರಾಣ ಮಾರ್ಗವೆಂದರೆ ಈ ಪ್ರಾಚೀನರ ಮಾರ್ಗವಲ್ಲ, ಬೌದ್ಧದಲ್ಲಿ ಬುದ್ಧನಿಗಿಂತ ಮೊದಲು ವಿಪಸ್ಸಿ, ಶಿಖೀ, ವಿಶ್ವಭೂ, ಕಕುಛಂದ ಕನಕಮುನಿ, ಕಾಶ್ಯಪ ಎಂಬ ಆರುಜನ ಬುದ್ಧರಿದ್ದಾರೆ. ಈ ಆರುಜನರು ಆರ್ಯ ಅಷ್ಟಾಂಗ ಮಾರ್ಗವನ್ನು ಅನುಸರಿಸಿದ್ದಾರೆ. ಇವರು ಆಚರಿಸಿದ ಆರ್ಯ ಅಷ್ಟಾಂಗ ಮಾರ್ಗವೇ ನಮ್ಮ ಬುದ್ಧನು (ಶಾಕ್ಯಮುನಿ) ಅನುಸರಿಸಿದ ಪುರಾಣಮಾರ್ಗ. ಅಷ್ಟಲ್ಲದೆ, ರಾಧಾಕೃಷ್ಣನ್, ಕಾಣೆ ಅವರು ಬೇಕೆಂದೇ ಮಸಿಬಳೆದು ಬಿಲ್ವಕಾಯಿ ಮಾಡಿದಂತೆ, ಸನಾತನ ಇಂಡೋ ಆರ್ಯನ್ ಆದರ್ಶಗಳ ಮಾರ್ಗವಲ್ಲ ಅದು.

ಇದಾದನಂತರ ಬುದ್ಧನು ಹಿಂದುವಾಗಿ ಹುಟ್ಟಿ, ಹಿಂದುವಾಗಿ ಬೆಳೆದು, ಹಿಂದುವಾಗಿ ಮರಣಿಸಿದ ಎಂಬುದು. ಬುದ್ಧನನ್ನು ಹಿಂದುವಾಗಿ ಎತ್ತಿತೋರಿಸುವ ರಾಧಾಕೃಷ್ಣನ್, ಕಾಣೆ ಅವರ ಪ್ರಯಾಸವನ್ನು ನೋಡೋಣ. ಈ ಬೇಕೆಂದೇ ಮಾಡುವ ತಪ್ಪುಗಳ ಮೂಲಕ ಭಾರತೀಯ ಚರಿತ್ರೆ ಸಂಸ್ಕೃತಿಗಳ ಮೇಲೆ ಅವರಿಗಿರುವ ಅಜ್ಞಾನ ಬಹಿರಂಗಗೊಳ್ಳುತ್ತಿದೆ.

ಬುದ್ಧನ ಕಾಲದ ಹೊತ್ತಿಗೆ ಉತ್ತರ ಭಾರತದಲ್ಲಿ, ಹಿಮಾಲಯ ಸಮೀಪದಲ್ಲಿ ಇರುವ ಕಪಿಲವಸ್ತು ಶಾಕ್ಯರು, ಕುಶೀನಗರಮಲ್ಲರು, ವೈಶಾಲಿ ಲಿಚ್ಚವಿಗಳು ಆರ್ಯೀಕರಣಗೊಂಡಂತೆ ಎಂದರೆ ವೈದಿಕ, ಬ್ರಾಹ್ಮಣಮತ ಪ್ರಭಾವಕ್ಕೆ ಒಳಗಾದಂತೆ ಚಾರಿತ್ರಿಕ ದಾಖಲೆಗಳು ಇಲ್ಲ. ಬುದ್ಧನು ನಡೆದಾಡಿದ, ಬೋಧನೆ ಮಾಡಿದ ಉತ್ತರ ಭಾರತವು ಕ್ರಿ.ಪೂ. 6ನೇ ಶತಮಾನಕ್ಕೆ ಪೂರ್ತಿಯಾಗಿ ಆರ್ಯೀಕರಣಗೊಂಡಿರಲಿಲ್ಲ. ಬುದ್ಧನ ಕಾಲದಲ್ಲಿ ಆಗ ತಾನೇ ವೈದಿಕಾರ್ಯ ಸಂಸ್ಕೃತಿ ಮಗಧದಲ್ಲಿ ಮಾತ್ರ ಮೊಳಕೆ ಹೊಡೆಯುತ್ತಿತ್ತು. ಜೈನ ಮಹಾವೀರನ, ಬುದ್ಧನ, ಇನ್ನೂ ಇತರ ಸಮಣರ ಸಮಣ ಸಂಪ್ರದಾಯವೇ ಕೋಸಲ, ಮಗಧಗಳನ್ನು ಆಳುತ್ತಿತ್ತು. ಹೀಗಿರುವಾಗ ಬುದ್ಧನು ಹಿಂದುವಾಗಿ ಹುಟ್ಟಿದನೆಂದು, ಬೆಳೆದನೆಂದು, ಮರಣಿಸಿದನೆಂದು ಅನ್ನುತ್ತಿದ್ದಾರೆಂದರೆ ಅವರನ್ನು ಏನನ್ನಬೇಕು?

'ಏವಂ ವಾದಿ ಮಹಾ ಸಮಣೋ' (ಮಹಾ ಸಮಣನು ಹೀಗೆಂದಿದ್ದಾನೆ) ಎಂದು ಹೇಳುವಲ್ಲಿಯೇ ಪಂಚವರ್ಗೀಯ ಭಿಕ್ಷುಗಳಲ್ಲಿ ಒಬ್ಬನಾದ ಅಸ್ಸಜಿ, ಬುದ್ಧನ ಮಹಾಸ್ಸಣ ಎಂದು ವರ್ಣಿಸಿದ್ದಾನೆ. ಬುದ್ಧನು ಮಹಾಸಮಣನಾದ ಮೇಲೆ, ಸಮಣ ಸಂಪ್ರದಾಯವನ್ನು ಪ್ರಚಲಿತಗೊಳಿಸುತ್ತಿರುವಾಗ, ಹಿಂದುವಲ್ಲದ ಅವನು, ಹಿಂದೂ ಮತವನ್ನು ಸಂಸ್ಕರಿಸುತ್ತಾನೆ, ಹಿಂದೂ ಮತದಲ್ಲಿನ ಕಲ್ಮಶವನ್ನು ತೊಳೆದುಹಾಕುತ್ತಿದ್ದಾನೆ. ಹಿಂದೂಮತ ಶಾಖೆಯಾಗಿ ಬೌದ್ಧವನ್ನು ಸ್ಥಾಪಿಸುತ್ತಿದ್ದಾನೆ–ಎಂದು ಹೇಳುವುದು ಹೇಗೆ ಸಮರ್ಥನೀಯ?

ಅವನನ್ನು ಇಷ್ಟಕ್ಕೂ ವೈದಿಕ ಸಂಸ್ಕರಣಕರ್ತ ಎನ್ನುವುದೇ ಮಹಾದೋಷ, ಏಕೆಂದರೆ ಅವನು ಸ್ವಯಂಭೂ. ಅಂದರೆ ತಾನು ಸಾಕ್ಷಾತ್ಕಾರ ಯದೀಥಾರ್ಥೀಕರಣ ಮಾಡಿಕೊಂಡ 'ಬುದ್ಧತ',(ನಿರ್ವಾಣ) ಅವನ ಅನ್ವೇಷಣೆ. ಅವನ ಪರಿಶೋಧನೆ. ಇದನ್ನು ಹೊಂದಲಿಕ್ಕಾಗಿ ಅವನು ಕಂಡುಕೊಂಡ ಮಾರ್ಗದಲ್ಲಿ ಅವನ ಮೌಲಿಕ ಸೃಜನಾತ್ಮಕತೆ ಇದೆ. ಇದನ್ನು ಆತ ಯಾರಿಂದಲೂ ಕಲಿತುಕೊಳ್ಳಲಿಲ್ಲ. ತಿಳಿದುಕೊಳ್ಳಲಿಲ್ಲ. ಇದು ಯಾವ ವೇದಗಳಲ್ಲಿಯೂ ಇಲ್ಲ. ಯಾವ ಉಪನಿಷತ್ತುಗಳಲ್ಲಿಯೂ ಇಲ್ಲ. ಏಕೆಂದರೆ ಯಾವ ವೈದಿಕ ಉಪನಿದೃಷ್ಟ ಬೋಧನೆಯನ್ನೂ ಪಡೆಯಲಿಲ್ಲ.

> **ಬೌದ್ಧ ನಿಜವಾಗಿಯೂ ಹಿಂದೂ ಮತದಿಂದಲೇ ಹುಟ್ಟಿದೆ, ಅದರ ಸಂಸ್ಕರಣವೇ ಇದು, ಅದರಲ್ಲಿ ನೂತನ ಭಾವಗಳು ಯಾವುವೂ ಇಲ್ಲ. ಎಲ್ಲಾ ಹಳೆಯ ವಾಸನೆಯೇ ಎಂದು ಅಂಗೀಕರಿಸೋಣ. ಹಾಗಿದ್ದಾಗ, ಹಿಂದೂ ಮತದಿಂದಲೇ ಬೌದ್ಧ ಬಂದದ್ದು ಒಂದು ಚಾರಿತ್ರಿಕ ಸತ್ಯವೇ ಅದರೆ, ಒಬ್ಬ ವಿವೇಕಾನಂದ, ಒಬ್ಬ ರಾಧಾಕೃಷ್ಣನ್, ಒಬ್ಬ ಕಾಣೆ ಇನ್ನೂ ಯಾರು ಯಾರೋ ಅದನ್ನೇ ಮತ್ತೆ ಮತ್ತೆ ಅನೇಕ ಪರ್ಯಾಯಗಳು ಹೇಳಬೇಕಾದ ಅಗತ್ಯವೇನಿತ್ತು? ಬೌದ್ಧನಲ್ಲಿರುವುದೆಲ್ಲ ನಮ್ಮದೇ, ನಮ್ಮ ಸ್ವಂತವೇ ಎಂದು ಗಂಟಲು ಸೀಳಿಕೊಳ್ಳುವ ಅಗತ್ಯವೇನಿತ್ತು?**

ಇನ್ನು ಬುದ್ಧನು ಸ್ವಯಂ ಆಗಿ ಆವಿಷ್ಕರಿಸಿದ್ದು ಏನೂ ಇಲ್ಲ ಎನ್ನುವ ರಾಧಾಕೃಷ್ಣನ್, 'ಉಪನಿಷದ್ ಚಿಂತೆಯನ್ನು ನೂತನ ದೃಕ್ಕೋಣದಿಂದ ಪ್ರದರ್ಶಿಸುವಿಕೆಯೇ ಪ್ರಾರಂಭದ ಬೌದ್ಧ' ಎಂದು ತನ್ನ ಭಾರತೀಯ ತತ್ತ್ವ ಶಾಸ್ತ್ರಗ್ರಂಥದಲ್ಲಿ ಬರೆದಿದ್ದಾರೆ.[15] ಯಾರಾದರೂ ಬುದ್ಧಿವಂತ ಹಾಕಬಹುದಾದ ಪ್ರಶ್ನೆ: 'ಬುದ್ಧನು ಯಾವಾಗಿನವ? ಉಪನಿಷತ್ತುಗಳು ಯಾವಾಗಿನವು? ಯಾವುದು ಮೊದಲು? ಯಾವುದು ಆನಂತರದ್ದು?" ಈ ಪ್ರಶ್ನೆಗಳಿಗೆ ಸಮಾಧಾನ ತಿಳಿದುಕೊಂಡರೆ ಬುದ್ಧನು ಉಪನಿಷತ್ತುಗಳನ್ನೇ ಮತ್ತೆ ಹೇಳಿದ್ದಾನೆಯೋ, ಇಲ್ಲವೆ ಉಪನಿಷತ್ತುಗಳೇ ಬುದ್ಧನನ್ನು ನಿರಾಕರಿಸುತ್ತ ಏನನ್ನಾದರೂ ಹೇಳಿವೆಯೋ ತಿಳಿಯುತ್ತದೆ.

ನಾವು ಚರಿತ್ರೆಯನ್ನು ನಿಶಿತವಾಗಿ ಪರಿಶೀಲಿಸಿದ್ದೇ ಆದಲ್ಲಿ, ಮಹೇಂಜೋದಾರೋ, ಹರಪ್ಪಾಗಳ ಕಾಲದಿಂದಲೇ (ಕ್ರಿ.ಪೂ.3000) ಶ್ರಮಣ ಸಂಪ್ರದಾಯ ನಡೆದು ಬರುತ್ತಿರುವುದನ್ನು ಇಲ್ಲ ಎನ್ನಲಿಕ್ಕಾಗದ ಚಾರಿತ್ರಿಕ ಆಧಾರಗಳು ಇವೆ ಎಂಬುದು ಸ್ಪಷ್ಟವಾಗುತ್ತದೆ. ಆರ್ಯರು ಎಂದೋ ಆನಂತರ ಕ್ರಿ.ಪೂ. 1700ರ ಸುಮಾರಿಗೆ ಸಿಂಧುನಾಗರಿಕತೆ ಮೂಲೆ ಪಾಲಾದ ನಂತರ ದೇಶಕ್ಕೆ ಪರ್ಷಿಯಾದಿಂದ ವಲಸೆ ಬಂದರು. ಅವರೊಂದಿಗೆ 'ಆರ್ಯ ಪಶುಪಾಲನೆ, ಯಜ್ಞಯಾಗಾದಿ ಸಂಸ್ಕೃತಿ' ಬಂದಿತು. ಅವರ ವೇದಗಳ ಕಾಲವನ್ನು ತುಂಬಾಜನ ಚರಿತ್ರಕಾರರು ಕ್ರಿ.ಪೂ.1200 ಎಂದು ನಿರ್ಣಯಿಸಿದ್ದಾರೆ.

ಇನ್ನು ಉಪನಿಷತ್ತುಗಳ ವಿಷಯಕ್ಕೆ ಬಂದರೆ, ಅವುಗಳಲ್ಲಿ ಅತ್ಯಂತ ಪ್ರಾಚೀನವೆಂದು ಹೇಳುವ ಬೃಹದಾರಣ್ಯಕ, ಛಾಂದೋಗ್ಯೋಪನಿಷತ್ತುಗಳು ಕ್ರಿ.ಪೂ. 500ಕ್ಕೆ ದಾಟಿ ಹಿಂದಕ್ಕೆ ಹೋಗುವುದಿಲ್ಲ ಎಂದು ಎ.ಬಿ. ಕೀತ್ 1925ರಲ್ಲಿ ಬರೆದಿದ್ದಾರೆ.[16] ಇದನ್ನು ಹಿಡಿದು ಉಪನಿಷತ್ತುಗಳು ಬುದ್ಧನಿಗೆ ನಂತರದವೇ ಎಂದು ಅರ್ಥಮಾಡಿಕೊಳ್ಳಬೇಕು. 'ಉಪನಿಷತ್ತುಗಳು ಬೇರೆ ಸ್ವತಂತ್ರ ಗ್ರಂಥಗಳಾಗಿ ನಿಲುಗಡೆಗೊಳ್ಳುವ ಮುಂಚೆಯೇ, ಅಂದರೆ ಬ್ರಾಹ್ಮಣಗಳ ಯುಗ ಪೂರ್ತಿಯಾಗದ ಮೊದಲೇ, ಪಾಳಿಯಲ್ಲಿ ತುಂಬಾ ಪ್ರಾಚೀನವಾದ ಸುತ್ತಗಳು– ದೀಘನಿಕಾಯ–ಸಂರಚನೆ ನಡೆದಿದೆ' ಎಂದು ವಿಜೇಶೇಖರ ಅನ್ನುತ್ತಿದ್ದಾರೆ.[17]

ಬುದ್ಧನು ಉಪನಿಷತ್ತುಗಳಿಂದ ಗ್ರಹಿಸಿದ್ದಾನೆ ಎಂಬುದು ನಿಜವಾದಲ್ಲಿ, ಪಾಳಿಸಾಹಿತ್ಯದಲ್ಲಿ ಎಲ್ಲಿಯೂ ಉಪನಿಷದ್ 'ಬ್ರಹ್ಮನ್'ನನ್ನು ನಪುಂಸಕ(neuter) ಲಿಂಗವಾಗಿ ಹೆಸರಿಸಲಿಲ್ಲ.

ಅಷ್ಟೇ ಅಲ್ಲ, ಪಾಳಿಬೌದ್ಧ ಸಾಹಿತ್ಯದಲ್ಲಿ ಆಗಿನ 62 ದೃಷ್ಟರನ್ನು ಖಂಡಿಸಿದ ಬುದ್ಧ, ಎಲ್ಲಿಯೂ 'ಉಪನಿಷತ್' ಎಂಬ ಪದವನ್ನು ಉಪಯೋಗಿಸಲಿಲ್ಲ. ಉಪನಿಷತ್ತುಗಳ ಪ್ರಭಾವ ಬುದ್ಧನ ಮೇಲೆ ಬಿದ್ದಿದ್ದರೆ ಅಷ್ಟು ದುಷ್ಟರನ್ನು ಖಂಡಿಸಿದ ಬುದ್ಧನು, ಉಪನಿಷತ್ತುಗಳ ಕುರಿತು ಚಕಾರ ಎತ್ತುವುದಿಲ್ಲ ಏಕೋ?

ಉಪನಿಷತ್ತುಗಳು ಬುದ್ಧನ ನಂತರವೇ ಎಂಬುದಕ್ಕೆ ಆಧಾರಗಳು ಯಾವುವೆಂದರೆ:

1) ಬೃಹದಾರಣ್ಯಕೋಪನಿಷತ್ತು ಕಾಶೀರಾಜನು ಅಜಾತಶತ್ರುವು ಎಂದಿದೆ. ಇದೇ ರಾಜನನ್ನು ಕಾಷೀತಕಿ ಹೆಸರಿಸಿದೆ. ಬಹುಶಃ ಇವನು ಮಗಧ ಆಳಿದ ಬುದ್ಧನ ಸಮಕಾಲೀನ ಅಜಾತಶತ್ರುವೇ ಇರಬಹುದು.

2) ಛಾಂದೋಗ್ಯೋಪನಿಷತ್ತು 'ಅಹಿಂಸ' ಭಾವನೆಯನ್ನು ಹೇಳುತ್ತದೆ. ಈ ಭಾವನೆ ಜೈನ ಮಹಾವೀರ, ಬುದ್ಧರಿಗೂ ಮೊದಲು ಇರಲಿಲ್ಲ.

3) ಬೃಹದಾರಣ್ಯಕೋಪನಿಷತ್‌ನಲ್ಲಿ 'ಕರ್ಮಪುನರ್ಜನ್ಮವನ್ನು ಪ್ರಭಾವಿತಗೊಳಿಸುತ್ತದೆ' ಎಂದಿದೆ. ಈ ಭಾವನೆ ಬೌದ್ಧ, ಜೈನ, ಶ್ರಮಣ ಭಾವನೆಯೇ. ಈ ಕಾರಣವಾಗಿ ಉಪನಿಷತ್ತುಗಳ ಮೇಲೆ (ಇವು ಆಮೇಲೆ ಬಂದದ್ದವಾದ್ದರಿಂದ) ಬೌದ್ಧ ಪ್ರಭಾವವಿದೆ ಎಂದು ಆರ್. ಈ. ಹ್ಯೂಮ್ ಎಂದಿದ್ದಾರೆ.[18]

4) ಕೌಷಿತಕೀ ಅರಣ್ಯದಲ್ಲಿ ಗುಣಾಖ್ಯ ಸಂಖಾಯನ ಹೆಸರು ಬರುತ್ತದೆ. ಇವರು ಕಹೋಲ ಕೌಷೀತಕಿ ಶಿಷ್ಯನೆಂದು ಅಲ್ಲಿಯೇ ಹೇಳಲ್ಪಟ್ಟಿದೆ. ಈ ಗುಣಾಖ್ಯ ಸಂಖಾಯನ ಕೋಸಲಕ್ಕೆ ಸೇರಿದ ಆಶ್ವಲಾಯನ ಸಹ ವಿದ್ಯಾರ್ಥಿಯಾಗಿ ಕಾಣಿಸುತ್ತಿದ್ದಾನೆ. ಏಕೆಂದರೆ ಆಶ್ವಲಾಯನ ಕಹೋಲಾ ತನ್ನ ಗುರುವಾಗಿ ಗೌರವಿಸುತ್ತಿದಾನೆ.[19] ಪ್ರಶ್ನೋಪನಿಷತ್ತಿನಲ್ಲಿ ಹೆಸರಿಸಲ್ಪಟ್ಟ ಆಶ್ವಲಾಯನ ಕೌಶಲ್ಯಾ, ಸ್ಥಾವಷ್ಠಿ (ಶ್ರಾವಸ್ತಿ)ಗೆ ಸೇರಿದ ಅಸ್ಸಲಾಯನ ಒಬ್ಬರೇ. ಈ ಅಸ್ಸಲಾಯನ ಒಬ್ಬರೇ. ಈ ಅಸ್ಸಲಾಯನ ಬುದ್ಧನ ಸಮಕಾಲೀನ. ಮಜ್ಜಿಮನಿಕಾಯದಲ್ಲಿ ಇವನ ಹೆಸರಿನಲ್ಲಿ ಅಸ್ಸಲಾಯನ ಸೂತ್ರ ಇದೆ. ವೈದಿಕ ಯುಗದ ನಂತರದ ಕಾಲಕ್ಕೆ ಸೇರಿದ ವೇದ ಋಷಿಗಳು ಪೌಷ್ಕರಸಾತಿ (ಪುಕ್ಕುರ ಸಾತಿ), ಲೌಹಿತ್ಯ (ಲೋಹಿಚ್ಚ)ರು ಬುದ್ಧನೊಂದಿಗೆ ಸಂವಾದ ನಡೆಸುತ್ತಾರೆ ದೀರ್ಘನಿಕಾಯದಲ್ಲಿ. 20 ಆದ್ದರಿಂದ ಇವರು

(41ನೇ ಪುಟಕ್ಕೆ)

ಶಿಲ್ಪ ವಿರೂಪಗಳ ಸಂದರ್ಭದಲ್ಲಿ...... ಕ್ರಾಂತಿಕಾರಿ ಅಂಬೇಡ್ಕರರ ಅನ್ವೇಷಣೆಯಲ್ಲಿ....

ಖ್ಯಾತ ಚಿಂತಕ ಉಪೇಂದ್ರ ಭಕ್ಷಿಯವರನ್ನು ಅಂಬೇಡ್ಕರ್ ಶತಮಾನೋತ್ಸವದ ಸಂದರ್ಭದಲ್ಲಿ ಅಂಬೇಡ್ಕರ್ ಬಗ್ಗೆ ಮಾತನಾಡಲು ಕೇಳಲಾಯಿತಂತೆ. ಆಗ ಅವರು "ನೀವು ಯಾವ ಅಂಬೇಡ್ಕರ್ ಬಗ್ಗೆ ಮಾತನಾಡಲು ಕೇಳುತ್ತಿದ್ದೀರಿ? ನನಗೆ ಗೊತ್ತಿರುವ ಹಾಗೆ ಇಂದು ಭಾರತದಲ್ಲಿ ಹಾಲಿ ಹಲವು ಅಂಬೇಡ್ಕರ್‌ಗಳಿದ್ದಾರೆ. ತಮ್ಮ ಅಂಬೇಡ್ಕರ್ ಯಾರು?" ಎಂದು ಕೇಳಿದರಂತೆ.

ಇಂದು ಈ ದೇಶದಲ್ಲಿ ಬೌದ್ಧಿಕವಾಗಿ ಅತ್ಯಂತ ಸಮತೋಲನದಿಂದ ದೇಶದ ಬಗ್ಗೆ ಮತ್ತು ವಿಶೇಷವಾಗಿ ದಲಿತ ವಿಮೋಚನೆಯ ಬಗ್ಗೆ ಚಿಂತಿಸಬಲ್ಲ ಕೆಲವೇ ಕೆಲವು ಪ್ರಖರ ಬುದ್ಧಿಜೀವಿಗಳಲ್ಲಿ ಒಬ್ಬರಾದ ಡಾ. ಆನಂದ್ ತೇಲ್‌ತುಂಬ್ಡೆಯವರೂ ಸಹ ತಮ್ಮ "ಅಂಬೇಡ್ಕರೋತ್ತರ ದಲಿತ ಸಂಘರ್ಷ- ದಾರಿ-ದಿಕ್ಕು" ಪುಸ್ತಕದಲ್ಲಿ ಇದೇ ಪ್ರಶ್ನೆಯನ್ನು ಕೇಳುತ್ತಾರೆ. ಮತ್ತು ಆ ಪ್ರಶ್ನೆಗೆ ತಾವೇ ಉತ್ತರವನ್ನೂ ಕೊಡುತ್ತಾ ಇಂದು ದಲಿತರ ಮತ್ತು ಈ ದೇಶದ ನಿಜವಾದ ವಿಮೋಚನೆಗೆ ಬೇಕಿರುವುದು "ಕ್ರಾಂತಿಕಾರಿ ಅಂಬೇಡ್ಕರ್" ಎಂದು ಉತ್ತರಿಸುತ್ತಾರೆ. ಅಷ್ಟು ಮಾತ್ರವಲ್ಲದೆ ಹಲವು ಪಟ್ಟಭದ್ರ ಹಿತಾಸಕ್ತಿಗಳು ಮಾಡಿರುವ ಶಿಲ್ಪ ವಿರೂಪದಲ್ಲಿ ಕಳೆದುಹೋಗಿರುವ "ಕ್ರಾಂತಿಕಾರಿ ಅಂಬೇಡ್ಕರ್"ರವನ್ನು ಅದರ ಸಂಪೂರ್ಣ ಕ್ರಾಂತಿಕಾರಿ ಸತ್ವದೊಂದಿಗೆ ಈ ಪುಸ್ತಕದಲ್ಲಿ ಪುನರ್ ಸ್ಥಾಪಿಸುತ್ತಾರೆ. ಹೀಗಾಗಿ ಆನಂದರ ಈ ಪುಸ್ತಕ ಇಡೀ ದೇಶದಲ್ಲಿ (ಹಾಗೂ ಕರ್ನಾಟಕದಲ್ಲಿ) ದಲಿತ ಸಂಘರ್ಷಗಳು ಸಾರ್ವತ್ರಿಕ ಅವನತಿಯ ಹಾದಿ ಹಿಡಿದಿರುವ ಸಂದರ್ಭದಲ್ಲಿ ಅತ್ಯಂತ ಮೌಲಿಕ ಕೊಡುಗೆಯಾಗಿದೆ.

ಈ ಸುದೀರ್ಘ ಪ್ರಬಂಧವನ್ನು ಡಾ. ಆನಂದ್ ತೇಲ್‌ತುಂಬ್ಡೆಯವರು 1997ರಲ್ಲೇ ಪ್ರಕಟಿಸಿದ್ದರು. ನಾನು ಮಾಡಿದ ಇದರ ಸಂಕ್ಷಿಪ್ತ ಅನುವಾದ 2006ರಲ್ಲಿ "ಸಂವಾದ" ಪತ್ರಿಕೆಯಲ್ಲೂ ಪ್ರಕಟವಾಗಿತ್ತು. ಈಗ ಪ್ರೊ. ಆರ್.ಕೆ. ಹುಡುಗಿಯವರು ಇಡೀ ಪ್ರಬಂಧವನ್ನು ಸಮಗ್ರವಾಗಿ ಮತ್ತು ಅದ್ಭುತವಾಗಿ ಕನ್ನಡದಲ್ಲಿ ಅನುವಾದ ಮಾಡಿದ್ದಾರೆ. ಮತ್ತು ಬೆಂಗಳೂರಿನ "ಚಿಂತನ" ಪ್ರಕಾಶನ ಇದನ್ನು ಸುಂದರವಾಗಿ ಅಚ್ಚುಹಾಕಿ ಪ್ರಕಟಿಸಿದೆ. ಹೀಗೆ ಅಂಬೇಡ್ಕರ್ ಚಿಂತನೆಯ ಬಗ್ಗೆ ಇದ್ದ ವಿಶ್ಲೇಷಣಾತ್ಮಕ ಗ್ರಹಿಕೆಯ ಕೊರತೆಯನ್ನು ಈ ಪುಸ್ತಕ ಕೊಂಚವಾದರೂ ನೀಗಿಸುತ್ತದೆ.

ಡಾ. ತೇಲೆತುಂಬ್ಡೆಯವರು ತಮ್ಮ ಪ್ರತಿಪಾದನೆಯನ್ನು ನಾಲ್ಕು ಭಾಗಗಳಲ್ಲಿ ಮಾಡುತ್ತಾರೆ. ಮೊದಲನೆಯ ಭಾಗದಲ್ಲಿ ಅಂಬೇಡ್ಕರೋತ್ತರ ದಲಿತ ಚಳವಳಿಯ ಮುಖ್ಯ ಮಜಲುಗಳು ಮತ್ತು ಅದು ತೋರಿದ ಒಲವು ನಿಲುವುಗಳೂ ಹಾಗೂ ಅದಕ್ಕೆ ಇಂಬಾಗಿ ನಿಂತ ಅಂಬೇಡ್ಕರರ ಪ್ರತಿಮೆಗಳು ಯಾವುದು ಮತ್ತು ಏಕೆ ಎಂಬ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳುತ್ತಾರೆ. ಎರಡನೇ ಭಾಗದಲ್ಲಿ ಅಂಬೇಡ್ಕರ್ ಚಿಂತನೆಯ ಶಕ್ತಿ ಮತ್ತು ಅದಕ್ಕಿದ್ದ ಸಂದರ್ಭನಿಷ್ಠ ಮಿತಿಗಳನ್ನು ಗುರುತಿಸುತ್ತಾರೆ. ಮತ್ತು ಅವೆರಡರ ನಡುವೆ ಅಂತರ್ಧಾರೆಯಾಗಿ ಹರಿಯುತ್ತಿದ್ದ ವಿಮೋಚನೆಯೆಡೆಗಿನ ಅವರ ಕ್ರಾಂತಿಕಾರಿ ನೆಲೆಗಳನ್ನು ಪ್ರಸ್ತುತ ಸಂದರ್ಭದಲ್ಲಿ ಪುನರ್‌ವ್ಯಾಖ್ಯಾನ ಹೇಗೆ ಮಾಡಬಹುದೆಂಬ ಸೂತ್ರಗಳನ್ನು ಮುಂದಿಡುತ್ತಾರೆ. ಈ ತರ್ಕಸಲಕರಣೆಯ ಹಿನ್ನೆಲೆಯಲ್ಲಿ ಅಂಬೇಡ್ಕರ್ ಬರಹ ಬದುಕಿನಲ್ಲಿ ಹುದುಗಿರುವ, ಆದರೆ ಪಟ್ಟಭದ್ರ ಹಿತಾಸಕ್ತಿಗಳು ಮರೆಮಾಚಿರುವ "ಕ್ರಾಂತಿಕಾರಿ"ಯನ್ನು ಮೂರನೆಯ ಅಧ್ಯಾಯದಲ್ಲಿ ಮುನ್ನೆಲೆಗೆ ತರುತ್ತಾರೆ. ನಾಲ್ಕನೆಯ ಅಧ್ಯಾಯದಲ್ಲಿ ಈ ಎಲ್ಲಾ ಚರ್ಚೆಯನ್ನು ಒಟ್ಟುಗೂಡಿಸಿ ಅಂಬೇಡ್ಕರ್‌ರ ಇಂದಿನ ಸಂದರ್ಭದ ಕ್ರಾಂತಿಕಾರಿ ವ್ಯಾಖ್ಯಾನವೇನೆಂದು ಮುಂದಿಡುತ್ತಾರೆ.

ದಲಿತ ಆಂದೋಲನದ ನಡೆಗಳು ಬದಲಾದಂತೆ ಅವರು ಕಟ್ಟಿಕೊಂಡ ಅಂಬೇಡ್ಕರ್ ಪ್ರತಿಮೆಯೂ ಬದಲಾಗುತ್ತಾ ಬಂದಿವೆಯಲ್ಲದೆ ಈ ಬದಲಾವಣೆಗಳಿಗೆ ಅಂಬೇಡ್ಕರವರ ವ್ಯಕ್ತಿತ್ವದಲ್ಲೇ ಭೌತಿಕ ನೆಲೆಯೂ ಇದೆಯೆಂದು ತೇಲ್‌ತುಂಬ್ಡೆಯವರು ವಾದಿಸುತ್ತಾರೆ. ಅಂಬೇಡ್ಕರರನ್ನು ಇಂದು "ಭಾರತದ ಸಂವಿಧಾನ ಶಿಲ್ಪಿ"ಯೆಂಬ, "ಆಧುನಿಕ ಬೋಧಿಸತ್ವ"ನೆಂಬ, "ಸಂವಿಧಾನವಾದಿ", "ಅವತಾರ ಪುರುಷ", "ಉದಾರವಾದಿ ಪ್ರಜಾತಾಂತ್ರಿಕ", "ಕಟ್ಟಾ ಕಮ್ಯುನಿಸ್ಟ್ ವಿರೋಧಿ", "ಸುಧಾರಣವಾದಿ" ಇನ್ನಿತ್ಯಾದಿ ಪ್ರತಿಮೆಗಳ ಮೂಲಕ ಗುರುತಿಸಲಾಗುತ್ತದೆ. ಇವುಗಳ ಮಧ್ಯೆ ದಲಿತರ ಮತ್ತು ಈ ದೇಶದ ಎಲ್ಲಾ ಶ್ರಮಜೀವಿಗಳ ಬದುಕಿನ ಮೂಲಭೂತ ಬದಲಾವಣೆಗೆ ಅಹರ್ನಿಶಿ ಹೋರಾಡಿದ ಕ್ರಾಂತಿಕಾರಿ ಅಂಬೇಡ್ಕರ್ ಕಣ್ಮರೆಯಾಗಿದ್ದಾರೆ. ನೈಜ ಅಂಬೇಡ್ಕರ್ ಕಣ್ಮರೆಯಾಗಲು ಇಂದಿನ ದಲಿತ ರಾಜಕಾರಣದ ಮುಂಚೂಣಿಯಲ್ಲಿರುವ ಅವಕಾಶವಾದಿ, ಮಧ್ಯಮವರ್ಗೀನ ದಲಿತ ನಾಯಕರೇ ಕಾರಣವೆಂದು ತೇಲ್‌ತುಂಬ್ಡೆ ಬಯಲಿಗೆಳೆಯುತ್ತಾರೆ.

ಪುಸ್ತಕ ಅವಲೋಕನ



ಲೇ : ಮೂಲ: ಡಾ. ಆನಂದ್ ತೇಲ್‌ತುಂಬ್ಡೆ
ಕನ್ನಡಕ್ಕೆ : ರಾಹು
ಬೆಲೆ: ರೂ. 100
ಪ್ರಕಾಶನ: "ಚಿಂತನ" ಪ್ರಕಾಶನ
ಬೆಂಗಳೂರು

ಶಿವಸುಂದರ್

ಉದಾಹರಣೆಗೆ ಪುಸ್ತಕದ ಮೊದಲೆರಡು ಭಾಗದಲ್ಲಿ ಅಂಬೇಡ್ಕರೋತ್ತರ ದಲಿತ ಚಳವಳಿಯ ಸ್ಥಿತಿಗತಿಗಳನ್ನು ವಿಶ್ಲೇಷಿಸುವ ಲೇಖಕರು ಹೇಗೆ ಬುಡಮಟ್ಟದಲ್ಲಿ ಗ್ರಾಮೀಣ ಬಡ ದಲಿತರನ್ನು ಸಂಘಟಿಸುತ್ತಿದ್ದ ಗಾಯಕ್‌ವಾಡ್‌ರಂಥ ದಲಿತ ನಾಯಕರು ಆಂದೋಲನಕ್ಕೆ ಮಾರ್ಗದರ್ಶನ ತೋರಲು ಸಾಧ್ಯವಿಲ್ಲವೆಂಬಷ್ಟು ಧಾರ್ಷ್ಟ್ಯವನ್ನು ನವಸುಶಿಕ್ಷಿತ ದಲಿತರು ತೋರಿದರು ಎಂಬುದನ್ನು ವಿವರಿಸುತ್ತಾರೆ. ಇದನ್ನು ಸಮರ್ಥಿಸಿಕೊಳ್ಳಲು ಅವರು ಅಂಬೇಡ್ಕರರನ್ನು ಬಾಬಾಸಾಹೇಬ್ ಅಂಬೇಡ್ಕರ್ ಅರ್ಥಾತ್ "ಸಾಹೇಬ"ರನ್ನಾಗಿ, ಸುಶಿಕ್ಷಿತ ಮೇಧಾವಿ ನಾಯಕನ ಪ್ರತಿಮೆಯಲ್ಲಿ ಕಟ್ಟಿಹಾಕಿದರು. ಈ ಪ್ರತಿಮೆಯ ಪ್ರಭಾವಳಿಯಲ್ಲಿ ಶಿಕ್ಷಣ ಪಡೆದು ಮೇಲೇರುವುದೇ ದಲಿತರ ವಿಮೋಚನೆಯೆಂದೂ ಮತ್ತು ಅಂಥವರು ಮಾತ್ರ ದಲಿತ ನಾಯಕರಾಗಬಹುದೆಂಬ ರಾಜಕೀಯವೂ ನಡೆಯಿತು. ನಂತರದಲ್ಲಿ ರಾಜಕೀಯ ಪಕ್ಷಗಳನ್ನು ಕಟ್ಟುವ, ಅಥವಾ ಅಸ್ತಿತ್ವದಲ್ಲಿರುವ ಚುನಾವಣಾ ಪಕ್ಷಗಳ ಜೊತೆ ಅವಕಾಶವಾದಿ ಮೈತ್ರಿಗಳನ್ನು ಮಾಡಿಕೊಳ್ಳುವ ನೈಚ್ಯಾನುಸಂಧಾನ ದಲಿತಾಂದೋಲನದಲ್ಲಿ ಒಂದು ಹವ್ಯಾಸವಾಗಿಯೇ ಬೆಳೆದುಬಿಟ್ಟಿತು.

ಈ ಅವಕಾಶ ವಾದವನ್ನು ಸಮರ್ಥಿಸಿಕೊಳ್ಳಲು ದಲಿತ ನಾಯಕರು ಸೃಷ್ಟಿಸಿದ ಅಂಬೇಡ್ಕರ್ ಪ್ರತಿಮೆ "ಸಂವಿಧಾನ ಶಿಲ್ಪಿ", "ಈ ವ್ಯವಸ್ಥೆಯ ಕರ್ತೃ" ಇತ್ಯಾದಿಗಳು. ದಲಿತರು ಅಧಿಕಾರ ಹಿಡಿಯಬೇಕೆನ್ನುವುದು ಅಂಬೇಡ್ಕರರ ಗುರಿಯಾಗಿದ್ದರೂ ಅದರರ್ಥ ಅಸ್ತಿತ್ವದಲ್ಲಿರುವ ಶೋಷಕ ಆಳುವವರ್ಗದ ಭಾಗವಾಗಬೇಕು ಎಂಬುದಾಗಿರಲಿಲ್ಲ. ಹೀಗೆ ಅಂಬೇಡ್ಕರ್ ಚಿಂತನೆಯನ್ನು ಅಪಭ್ರಂಶಗೊಳಿಸಿದ ದಲಿತ ನಾಯಕರು ದಲಿತಶಕ್ತಿಯನ್ನು ಕಾಂಗ್ರೆಸ್‌ನ್ ಅಥವಾ ಇನ್ನಿತರ ಪಕ್ಷಗಳ ಬಾಲಂಗೋಚಿಯನ್ನಾಗಿ ಮಾಡಿಬಿಟ್ಟರು. ದಲಿತ ರಾಜಕಾರಣದಲ್ಲಿ "ಬಹುಜನ ಸಮಾಜ ಪಕ್ಷದ" ಉದಯವಾದ ನಂತರವಂತೂ ಎಂಥಹ ಅವಕಾಶವಾದಿ ಮೈತ್ರಿ ಮಾಡಿಕೊಂಡರೂ ಪರವಾಗಿಲ್ಲ. ಅಧಿಕಾರ ಹಿಡಿಯುವುದಷ್ಟೇ ಮುಖ್ಯ ಎಂಬ ತತ್ವವನ್ನು ಯಾವುದೇ ಹಿಂಜರಿಕೆಯಿಲ್ಲದೆ ಮುಂದಿಡಲಾಯಿತು. ಅದರ ಸಮರ್ಥನೆಗೆ ಅವರು ಮುಂದಿಟ್ಟ ಅಂಬೇಡ್ಕರ್ ಪ್ರತಿಮೆ "ಒಬ್ಬ ರಾಜಕೀಯ ತಂತ್ರಕುಶಲಿ" ಅಂಬೇಡ್ಕರ್‌ದು ಮಾತ್ರವಾಗಿತ್ತು. ಅವರ ಪ್ರಕಾರ ಅಂಬೇಡ್ಕರ್ ದಲಿತರ ಆಸಕ್ತಿಗಳನ್ನು ಮುನ್ನಡೆಸಲು ಕಾಂಗ್ರೆಸ್‌ನಂಥ ಶತ್ರೂಗಳೊಂದಿಗೂ ರಾಜಿಮಾಡಿಕೊಂಡು ರಾಜಕೀಯ ಅಧಿಕಾರ ಪಡೆದರು. ಇದೇ ಅವರು ಕಟ್ಟಿಕೊಡುವ ಅಂಬೇ

ಡ್ಕರ್. ಆದರೆ ಈ ತಾತ್ಕಾಲಿಕ ಕಾರ್ಯತಂತ್ರ ಗಳಾಚೆ ಅಂಬೇಡ್ಕರ್‌ರವರು ದಲಿತರ ಇಬ್ಬರು ಶತ್ರುಗಳಾದ "ಬ್ರಾಹ್ಮಣವಾದ" ಮತ್ತು "ಬಂಡವಾಳವಾದ" ವಿರುದ್ಧ ಸತತವಾಗಿ ನಡೆಸಿಕೊಂಡು ಬಂದ ರಾಜಕೀಯ ಹೋರಾಟಗಳಿಂದ ಯಾವುದೇ ಪಾಠಗಳನ್ನು ಕಲಿಯಲು ತಯಾರಿಲ್ಲ ಮತ್ತು ಅಂಥಾ ಸಮರಶೀಲ ಅಂಬೇಡ್ಕರ್‌ರನ್ನು ಮುಂದಿಡಲೂ ತಯಾರಿಲ್ಲ. ಏಕೆಂದರೆ ಅಂಥಾ ಅಂಬೇಡ್ಕರ್ ಬಹುಜನ ಸಮಾಜ ಪಕ್ಷಕ್ಕೆ ಬೇಕಾಗಿಲ್ಲ ಎಂದು ತೇಲ್‌ತುಂಬ್ಡೆಯವರು ಬಿಎಸ್‌ಪಿಯ ಹೂರಣವನ್ನು ಬಯಲಿಗೆಳೆಯುತ್ತಾರೆ.

ಅದೇ ರೀತಿ ಅಂಬೇಡ್ಕರ್‌ರವರು ಬೌದ್ಧಧರ್ಮಕ್ಕೆ ಮತಾಂತರಗೊಂಡ ಘಟನೆಯನ್ನು ಆ ರಾಜಕೀಯ ಸಂದರ್ಭದಾಚೆಗೆಳೆದು ಪ್ರಚಾರ ಮಾಡುತ್ತಿರುವವರು ಕಟ್ಟಿಕೊಡುತ್ತಿರುವ ಪ್ರತಿಮೆ "ಬೌದ್ಧ ಭಿಕ್ಷು" ಅಂಬೇಡ್ಕರದ್ದು. ಆದರೆ ಈಗ ಬೌದ್ಧಧರ್ಮವೇ ತನ್ನ ನಿಜವಾದ "ಧಮ್ಮ" ಸತ್ವವನ್ನು ಕಳೆದುಕೊಂಡು ತನ್ನ ಅನುಯಾಯಿಗಳನ್ನು ಅದರಲ್ಲೂ ದಲಿತರನ್ನು ತಮ್ಮ ಸ್ಥಿತಿಗೆ ತಮ್ಮನ್ನೇ ದೂರುವಂತೆ ಮಾಡುತ್ತಿರುವ ವ್ಯಂಗ್ಯವನ್ನು ಲೇಖಕರು ವಿಷಾದದಿಂದ ಗಮನಕ್ಕೆ ತರುತ್ತಾರೆ. ಅದೇ ರೀತಿ ತಮ್ಮ ನಿಜವಾದ ಭೌತಿಕ ಪರಿಸ್ಥಿತಿಗೆ ವಿಮುಖವಾದ ನಿಲುವನ್ನು ದಲಿತರು ಹೊಂದಬೇಕೆಂದು ಆಗ್ರಹಿಸುವ ಈ ಮುಖಂಡರ ನಿಲುವನ್ನು ತರಾಟೆಗೆ ತೆಗೆದುಕೊಳ್ಳುವ ಲೇಖಕರು ಗಾಂಧಿಯ ಜೊತೆ ಸುದೀರ್ಘ ಚರ್ಚೆಯ ನಂತರ ಗಾಂಧಿಯ ಅಹಿಂಸೆಯ ಗೀಳಿನ ಬಗ್ಗೆ ಅಂಬೇಡ್ಕರ್ ತೆಗೆದುಕೊಂಡ ನಿಲುವನ್ನು ಉದಾಹರಿಸುತ್ತಾರೆ. "ಈ ವಿಷಯದಲ್ಲಿ ಅಂಬೇಡ್ಕರ್‌ರವರದ್ದು ಬುದ್ಧನ ದೃಷ್ಟಿಯೇ ಆಗಿದೆ." ಎಂದು ಹೇಳುವ ಲೇಖಕರು "ಸಾಧ್ಯವಿದ್ದ ಮಟ್ಟಿಗೆ ಅಹಿಂಸೆಯೇ ಸಾಧುವಾದದ್ದು: ಅವಶ್ಯವಿದ್ದರೆ, ಹಿಂಸೆಯೂ ಸರಿ ಎಂಬ ಬುದ್ಧನ ಮಾತಿಗೆ ಬಾಬಾ ಸಾಹೇಬರ ಸಮ್ಮತಿಯಿತ್ತೆಂದು" ದಾಖಲಿಸುತ್ತಾರೆ. ಇಂಥಾ ಅಂಬೇಡ್ಕರ್ ಹಾಗೂ ಬುದ್ಧನನ್ನು ಅಹಿಂಸೆಯ ನಿರಪೇಕ್ಷ ಪ್ರತಿಪಾದಕನೆಂಬ ಪ್ರತಿಮೆಗಳಲ್ಲಿ ಕಟ್ಟಿಹಾಕಿ ದಲಿತರ ಮೇಲೆ ಎಂಥಾ ದೌರ್ಜನ್ಯಗಳು ನಡೆದರೂ ಅವರು ಶಾಂತಿಯುತವಾಗಿ ಪ್ರತಿಭಟಿಸಿ ಸಂವಿಧಾನಾತ್ಮಕ ಕ್ರಮಗಳನ್ನು ಮಾತ್ರ ಅನುಸರಿಸಬೇಕೆಂಬ ಬೋಧನೆಗೆ ಒತ್ತುಕೊಡುತ್ತಿರುವುದೇಕೆ ಎಂದು ಲೇಖಕರು ಪ್ರಶ್ನಿಸುತ್ತಾರೆ.

ಈ ಯಾವೊಂದು ಮೂರ್ತಿಗಳು ಸಮ ಸಮಾಜದ ಕನಸನ್ನು ಕಂಡ ಮತ್ತು ಅದರ ಸ್ಥಾಪನೆಗೆ ಅವಿರತ ಹೋರಾಟ ನಡೆಸಿದ ಅಂಬೇಡ್ಕರ್‌ರನ್ನು ಪ್ರತಿನಿಧಿಸುವುದಿಲ್ಲ ಎಂದು ಘೋಷಿಸುವ ಡಾ. ತೇಲ್‌ತುಂಬ್ಡೆಯವರು ಇವರೆಲ್ಲರೂ ಸೃಷ್ಟಿಸಬಯಸುವ "ಉದಾರವಾದಿ ಪ್ರಜಾತಾಂತ್ರಿಕ ಅಂಬೇಡ್ಕರ್" ದಲಿತರ ಅಂತಿಮ ವಿಮೋಚನೆಗೆ ನಡೆಸಬೇಕಾದ ಹೋರಾಟಕ್ಕೆ ಸಮರ್ಥವಾದ ಆಯುಧವಾಗಲಾರರು. ಏಕೆಂದರೆ "ಈ ಅಂಬೇಡ್ಕರ್" ಈ ದೇಶದ ಸುಸಂಘಟಿತ ಕ್ಷೇತ್ರಗಳಲ್ಲಿ ಪ್ರವೇಶ ಪಡೆದ ಸಣ್ಣ ಸಂಖ್ಯೆಯ ದಲಿತ ವರ್ಗದ ಸೃಷ್ಟಿಯಾಗಿದ್ದು ಇದು ಈ ದೇಶದ ಒಟ್ಟಾರೆ ದಲಿತರ ವಾಸ್ತವಿಕ ಸ್ಥಿಗತಿಯನ್ನು ಮತ್ತು ಆಶಯಗಳನ್ನು ಬಿಂಬಿಸುವುದಿಲ್ಲ ಎಂದು ವಿವರಿಸುತ್ತಾರೆ.

ಆದರೆ ಈ ದೇಶದ ಎಲ್ಲಾ ದಲಿತರ ವಿಮೋಚನೆಗೆ ಬೇಕಾದ ಸಿದ್ಧಾಂತ ಚೌಕಟ್ಟನ್ನೂ ಅಂಬೇಡ್ಕರರೇ ಒದಗಿಸಬಲ್ಲರೆಂದು ಪ್ರತಿಪಾದಿಸುವ ಲೇಖಕರು ಅಂಬೇಡ್ಕರರ ಕ್ರಾಂತಿಕಾರಿ ವ್ಯಾಖ್ಯಾನಕ್ಕೆ ಮುಂದಾಗುತ್ತಾರೆ. ಇದಕ್ಕಾಗಿ ಅವರು "ಅಂಬೇಡ್ಕರರ ಬದುಕಿನ ವಿಶ್ಲೇಷಣಾತ್ಮಕ ಅಧ್ಯಯನದ ಮೂಲಕ ಅವರ ಪ್ರಧಾನ ದೃಷ್ಟಿ ಮತ್ತು ವೈಚಾರಿಕ ಒಲವುಗಳನ್ನು ಗುರುತಿಸುವ ಮತ್ತು ಹಾಗೆ ಗುರುತಿಸಿದ್ದನ್ನು ಹೊಸ ಪರಿಕಲ್ಪನೆಗಳಲ್ಲಿ ಸೆರೆಹಿಡಿಯುವ ಮತ್ತು ಅವರ ವಿಚಾರಧಾರೆಯಲ್ಲಿನ ನಿರಂತರತೆಯ ಅಂಶಗಳನ್ನು ಸ್ಥಾಯಿಗೊಳಿಸುವ" ಮಾರ್ಗವನ್ನು ಅನುಸರಿಸುತ್ತಾರೆ.

ತೇಲ್‌ತುಂಬ್ಡೆಯವರು ಪುನರ್‌ವ್ಯಾಖ್ಯಾನ ಮಾಡುವ ಅಂಬೇಡ್ಕರ್‌ರವ ಕ್ರಾಂತಿಕಾರಿ ಅಂಶಗಳನ್ನು ಕೆಲವು ನಿರ್ದಿಷ್ಟ ತಲೆಬರಹದಡಿ ಚರ್ಚಿಸುತ್ತಾರೆ. ಅಂಬೇಡ್ಕರ್‌ರವರು ಎಲ್ಲಾ ಬಗೆಯ ಶೋಷಣೆಯ ವಿರುದ್ಧವೂ ಹೋರಾಟ ಮಾಡುತ್ತಿದ್ದರು. ಅವರ ಹೋರಾಟದ ವಾಹಕವಾಗಿದ್ದ "ಬಹಿಷ್ಕೃತ ಹಿತಕಾರಿಣಿ"ಯ ಕಾರ್ಯ ಸಮಿತಿಯ ಬಹುಸಂಖ್ಯಾತರು ಮೇಲ್ಜಾತಿಯವರೇ ಆಗಿದ್ದರು ಎಂಬುದನ್ನು ಅವರು ವಿಶೇಷವಾಗಿ ಪ್ರಸ್ತಾಪಿಸುತ್ತಾರೆ. ಅದೇ ರೀತಿ ದಲಿತ ವಿಮೋಚನೆಯ ಹೋರಾಟದ ಜೊತೆಜೊತೆಗೆ ಕಾರ್ಮಿಕ, ರೈತ ಮತ್ತು ಮಹಿಳಾ ಶೋಷಣೆಯ ವಿರುದ್ಧವೂ ಅವರು ಸಂಗ್ರಾಮ ಸಾರಿದ್ದರೆಂಬುದನ್ನು ಲೇಖಕರು ನೆನಪಿಸುತ್ತಾರೆ. ಬಂಡವಾಳವಾದ ಮತ್ತು ಬ್ರಾಹ್ಮಣವಾದಗಳೆರಡು ದಲಿತರ ಶತ್ರುಗಳೆಂಬುದನ್ನು ಸ್ಪಷ್ಟವಾಗಿ ಸಾರಿದ್ದ ಅಂಬೇಡ್ಕರ್‌ರವು, ಮೊದಲು ಕಟ್ಟಿದ್ದು "ಇಂಡಿಪೆಂಡೆಂಟ್ ಲೇಬರ್ ಪಾರ್ಟಿ"ಯೆಂಬುದನ್ನು ದಲಿತರೂ ಮರೆತಿದ್ದಾರೆ, ಕಮ್ಯುನಿಸ್ಟರೂ ಮರೆತಿದ್ದಾರೆ ಎಂದು ದಟ್ಟ ವಿಷಾದದಿಂದ ದಾಖಲಿಸುತ್ತಾರೆ.

ಅವರು ಸಾಮ್ರಾಜ್ಯವಾದ ವಿರೋಧಿತನ ಪ್ರಶ್ನಾತೀತವಾಗಿತ್ತೆಂದು ಪ್ರತಿಪಾದಿಸುವ ಲೇಖಕರು ಸಾಮ್ರಾಜ್ಯವಾದದ ವಾಹಕಗಳಾದ ಸ್ಥಳೀಯ ಭೂಮಾಲಿಕ ಮತ್ತು ಬಂಡವಳಶಾಹಿ ಶಕ್ತಿಗಳ ವಿರುದ್ಧ ಹೋರಾಡದೇ ಹೇಗೆ ಸಾಮ್ರಾಜ್ಯವಾದದ ವಿರುದ್ಧ ಹೋರಾಡುತ್ತೀರಿ ಎಂದು ಅಂಬೇಡ್ಕರ್ ಕೇಳುತ್ತಿದ್ದ ಪ್ರಶ್ನೆಗಳಿಗೆ ಯಾಕೆ ಉತ್ತರವಿರಲಿಲ್ಲ ಎಂದು ಪ್ರಶ್ನಿಸುತ್ತಾರೆ. ಏಕಕಾಲದಲ್ಲಿ ಎಲ್ಲಾ ಶತ್ರುಗಳನ್ನು ಒಟ್ಟಿಗೆ ಎದುರುಹಾಕಿಕೊಳ್ಳುವುದು ಕಷ್ಟ ಎಂಬ ವ್ಯೂಹತಂತ್ರದ ಆಧಾರದಲ್ಲಿ ಅವರು ಕೆಲವು ತಾತ್ಕಾಲಿಕ ಮೈತ್ರಿಗಳನ್ನು ಮಾಡಿಕೊಂಡಿದ್ದರೂ ಈ ಶತ್ರುಗಳ ವಿರುದ್ಧ ಅವರು ನಡೆಸುತ್ತಿದ್ದ ಹೋರಾಟ ಮಾತ್ರ ಶಾಶ್ವತವಾದದ್ದಾಗಿತ್ತೆಂಬುದನ್ನು ಮರೆಯಬಾರದೆಂದು ಎಚ್ಚರಿಸುತ್ತಾರೆ.

ಈ ದೇಶದ ಎಲ್ಲಾ ದಲಿತರ ವಿಮೋಚನೆಗೆ ಬೇಕಾದ ಸಿದ್ಧಾಂತ ಚೌಕಟ್ಟನ್ನೂ ಅಂಬೇಡ್ಕರರೇ ಒದಗಿಸಬಲ್ಲರೆಂದು ಪ್ರತಿಪಾದಿಸುವ ಲೇಖಕರು ಅಂಬೇಡ್ಕರರ ಕ್ರಾಂತಿಕಾರಿ ವ್ಯಾಖ್ಯಾನಕ್ಕೆ ಮುಂದಾಗುತ್ತಾರೆ. ಇದಕ್ಕಾಗಿ ಅವರು "ಅಂಬೇಡ್ಕರರ ಬದುಕಿನ ವಿಶ್ಲೇಷಣಾತ್ಮಕ ಅಧ್ಯಯನದ ಮೂಲಕ ಅವರ ಪ್ರಧಾನ ದೃಷ್ಟಿ ಮತ್ತು ವೈಚಾರಿಕ ಒಲವುಗಳನ್ನು ಗುರುತಿಸುವ ಮತ್ತು ಹಾಗೆ ಗುರುತಿಸಿದ್ದನ್ನು ಹೊಸ ಪರಿಕಲ್ಪನೆಗಳಲ್ಲಿ ಸೆರೆಹಿಡಿಯುವ ಮತ್ತು ಅವರ ವಿಚಾರಧಾರೆಯಲ್ಲಿನ ನಿರಂತರತೆಯ ಅಂಶಗಳನ್ನು ಸ್ಥಾಯಿಗೊಳಿಸುವ" ಮಾರ್ಗವನ್ನು ಅನುಸರಿಸುತ್ತಾರೆ.

ಅಂಬೇಡ್ಕರರನ್ನು ಉದಾರವಾದಿ ಪ್ರಜಾತಂತ್ರದ ಪ್ರತಿಪಾದಕನೆಂದು ಮಾತ್ರ ಕುಬ್ಜೀಕರಿಸುವ ಬಲು ದೊಡ್ಡ ಪ್ರಯತ್ನವೊಂದು ನಡೆಯುತ್ತಲೇ ಇದೆ. ಅದಕ್ಕೆ ಅಂಬೇಡ್ಕರ್ ಅವರು ಫ್ರೆಂಚ್ ಕ್ರಾಂತಿಯ ಘೋಷಣೆಗಳಾದ "ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ" ಪ್ರತಿಪಾದಕರಾಗಿದ್ದರೆಂದು ಹೇಳಲಾಗುತ್ತದೆ. ಆದರೆ ಅಂಬೇಡ್ಕರ್‌ರವರು ಈ ಸ್ಫೂರ್ತಿಯನ್ನು ಪಡೆದದ್ದು ಬುದ್ಧನಿಂದಲೇ ಹೊರತು ಫ್ರೆಂಚ್ ಕ್ರಾಂತಿಯಿಂದಲ್ಲವೆಂದೂ ಮತ್ತು ಇತರ ಉದಾರವಾದಿಗಳ ವ್ಯತಿರಿಕ್ತವಾಗಿ ಸಮಾನತೆಯಿಲ್ಲದ ಸ್ವಾತಂತ್ರ್ಯ ಆತಂಕಕಾರಿಯೆಂಬುದನ್ನು ಪ್ರತಿಪಾದಿಸುತ್ತಿದ್ದರೆಂದು ಲೇಖಕರು ವಾದಿಸುತ್ತಾರೆ. ಅದಕ್ಕಾಗಿ ಅವರು ಬರೆದ "ಸ್ಟೇಟ್ ಅಂಡ ಮೈನಾರಿಟೀಸ್" ಲೇಖನದಲ್ಲಿ ಹೇಗೆ ಉತ್ಪಾದನಾ ಸಾಧನಗಳು ರಾಷ್ಟ್ರೀಕರಣವಾಗಬೇಕೆಂದೂ ಮತ್ತು ಕೃಷಿಯಲ್ಲಿ ಸಾಮುದಾಯಿಕ ತತ್ವದ ಮೇಲೆ ಸಹಕಾರಿ ಪದ್ಧತಿಯನ್ನು ತರಬೇಕೆಂದು ಪ್ರತಿಪಾದಿಸಿದ್ದನ್ನು ಉಲ್ಲೇಖಿಸುತ್ತಾರೆ. ಹಾಗೆಯೇ ಅಂಬೇಡ್ಕರ್‌ರವರು ಈ ಸಂಸದೀಯ ಪ್ರಜಾಸತ್ತೆಯ ಅವಿಮರ್ಶಾತ್ಮಕ ಆರಾಧಕರಾಗಿದ್ದರೆಂಬ ಪ್ರಚಾರವನ್ನು ಕೆಲವು ದಲಿತ ರಾಜಕಾರಣಿಗಳು ಮಾಡುತ್ತಾರೆ. ಆದರೆ ಸಂಸದೀಯ ಪ್ರಜಾಸತ್ತೆಯ ಬಗ್ಗೆ ಅಂಬೇಡ್ಕರ್‌ರವರ ನಿಲುವು ಏನಾಗಿತ್ತೆಂಬುದನ್ನು ತಿಳಿಸಲು ಅವರ ಈ ಹೇಳಿಕೆಯನ್ನೇ ಉಲ್ಲೇಖಿಸುತ್ತಾರೆ. "ಸಂಸದೀಯ ಪ್ರಜಾಸತ್ತೆ ಎಂದರೆ ಜನತೆ ತಮ್ಮನ್ನಾಳುವ ಹಕ್ಕನ್ನು ತಮ್ಮ ಮಾಲೀಕರ ಕೈಗೆ ಮತದಾನದ ಮೂಲಕ ಹಸ್ತಾಂತರಿಸುವುದು."

ಬೌದ್ಧಧರ್ಮವನು ಆಯ್ಕೆ ಮಾಡಿಕೊಂಡ ಅಂಬೇಡ್ಕರ್‌ರವರು ಮಾರ್ಕ್ಸ್‌ವಾದದ ಆಶಯಗಳಿಗೆ ವಿರುದ್ಧವಾಗಿದ್ದರೆ ಎಂಬ ಕೆಲವರ ವಾದವನ್ನು ವಿವರವಾಗಿ ಪರಿಶೀಲಿಸುತ್ತಾ ಅಂಬೇಡ್ಕರ್‌ರವರು "ಮೂಲತಃ ವ್ಯಕ್ತಿಯ ಸಹಜ ಪ್ರವೃತ್ತಿ ಮತ್ತು ಸಾಮಾಜಿಕ ವರ್ತನೆ ಎರಡನ್ನೂ ಒಳಗಿನಿಂದಲೇ ನಿಯಂತ್ರಿಸಬಲ್ಲ ಒಂದು ಧಾರ್ಮಿಕ ಸಾಧನದ ಶೋಧನೆಯಲ್ಲಿದ್ದರು" ಎಂದು ತೇಲ್‌ತುಂಬ್ಡೆ ಅಭಿಪ್ರಾಯಪಡುತ್ತಾರೆ. ಬೌದ್ಧಧರ್ಮದ ಆಶಯಗಳೊಂದಿಗೆ ಇಂದಿಗೂ ಸಹಾನುಭೂತಿ ವ್ಯಕ್ತಪಡಿಸುವುದು ಮತ್ತು ಅಳವಡಿಸಿಕೊಳ್ಳುವುದನ್ನು ಅರ್ಥಮಾಡಿಕೊಳ್ಳಬಹುದಾದರೂ "ಬೌದ್ಧಧರ್ಮವು ಮಾರ್ಕ್ಸ್‌ವಾದಕ್ಕೆ ಸಂವಾದಿಯೆಂದು ಹೇಳುವುದು ಅಥವಾ ಇಡೀ ಪ್ರಪಂಚವನ್ನು ವಿಮೋಚನೆಗೊಳಿಸಬಲ್ಲ ತತ್ವವೆಂದು ಪ್ರತಿಪಾದಿಸಲು ಪ್ರಯತ್ನಿಸುವುದನ್ನು "ಲೇಖಕರು ಒಪ್ಪುವುದಿಲ್ಲ. ಅಲ್ಲದೇ ಲೇಖಕರ ಪ್ರಕಾರ "ಅಂಬೇಡ್ಕರ್ ತಮ್ಮ ಆಯ್ಕೆಯ ಧರ್ಮ ಮಾರ್ಕ್ಸ್‌ವಾದದ ಸರ್ವಸ್ವವನ್ನೂ ಒಳಗೊಂಡು ಅದಕ್ಕಿಂತಲೂ ಶ್ರೇಷ್ಠವಾಗಿರಬೇಕೆಂದು ಬಯಸಿದ್ದರು." ಹೀಗಾಗಿ ಮಾರ್ಕ್ಸ್‌ವಾದದ ಯಾವ ಆಯಾಮಗಳನ್ನು ಮುಖ್ಯವೆಂದು ಅವರು ಭಾವಿಸಿದ್ದರೋ ಮತ್ತು ಭೌದ್ಧಧರ್ಮದಲ್ಲಿನ ಯಾವ ಸಂವಾದಿ ಅಂಶಗಳೊಂದಿಗೆ ಅವುಗಳನ್ನು ಹೋಲಿಸಲು ಬಳಸಿದ್ದರೋ ಆ ವಿಧಾನದ ಅಧ್ಯಯನವನ್ನು ಕೈಗೊಳ್ಳುವ ಅಗತ್ಯವಿದೆಯೆಂದು ಲೇಖಕರು ಸಲಹೆ ಮಾಡುತ್ತಾರೆ.

ಎಲ್ಲಕ್ಕಿಂತ ಹೆಚ್ಚಾಗಿ ದಲಿತರು ಮತ್ತು ಕಮ್ಯುನಿಸ್ಟ್ ಆಂದೋಲನಗಳ ನಡುವೆ ಉಂಟಾಗಿರುವ ಕಂದರ

ವನ್ನು ವಿಷಾದದಿಂದ ಗುರುತಿಸುವ ಡಾ. ತೇಲೆತುಂಬ್ಡೆಯವರು ಮಾರ್ಕ್ಸ್‌ವಾದದ ಬಗ್ಗೆ ಮತ್ತು ಕಮ್ಯುನಿಸ್ಟರ ಬಗ್ಗೆ ಅಂಬೇಡ್ಕರ್ ರೂಪಿಸಿಕೊಂಡಿದ್ದ ಅಭಿಪ್ರಾಯಗಳಲ್ಲಿ ಇದ್ದ ತಪ್ಪುಗಳಿಗೆ ಪ್ರಧಾನವಾಗಿ ಆ ಕಾಲದ ಕಮ್ಯುನಿಸ್ಟರೇ ಕಾರಣವೆಂದು ಘಂಟಾಘೋಷವಾಗಿ ಸಾರುತ್ತಾರೆ. ಏಕೆಂದರೆ ಮಾರ್ಕ್ಸ್‌ವಾದವನ್ನು ಅಂಬೇಡ್ಕರ್ ಅರ್ಥಮಾಡಿಕೊಂಡಿದ್ದ ರೀತಿಗೆ ಒಂದು ಚಾರಿತ್ರಿಕ ಮಿತಿಯಿತ್ತು. ಅದನ್ನು ದೂರ ಮಾಡಬಹುದಾದ ಸಾಧ್ಯತೆ ಇದ್ದ ಕಮ್ಯುನಿಸ್ಟರು ಅದರಲ್ಲು ಆ ಕಾಲದ ಮುಂಬೈ ಕಮ್ಯುನಿಸ್ಟರು ಜಾತಿಯನ್ನು ಈ ದೇಶದ ಕ್ರಾಂತಿಯ ಒಂದು ಗಂಭೀರ ಸಮಸ್ಯೆಯೆಂದು ಅರ್ಥಮಾಡಿಕೊಳ್ಳುವುದನ್ನೇ ನಿರಾಕರಿಸಿದ್ದರು. ಇದಲ್ಲದೆ ಅಂಬೇಡ್ಕರ್‌ರವರ ಮೇಲಿದ್ದ ಫೇಬಿಯನ್ ಸಮಾಜವಾದ ಸೈದ್ಧಾಂತಿಕ ಪ್ರಭಾವ ಹಾಗೂ ಆ ಕಾಲದಲ್ಲಿ ಮಾರ್ಕ್ಸ್‌ವಾದದ ಬಗ್ಗೆ ಸಿಗುತ್ತಿದ್ದ ಮೂಲ ಆಕರಗಳ ಕೊರತೆ ಇವೆಲ್ಲವೂ ಕಮ್ಯುನಿಸ್ಟರ ಬಗೆಗೆ ಅಂಬೇಡ್ಕರರ ಅಭಿಪ್ರಾಯವನ್ನು ರೂಪಿಸಿತ್ತು.

ಇಷ್ಟಾದರೂ ಅಂಬೇಡ್ಕರ್‌ರವರು "ಒಂದು ವೇಳೆ ಬೌದ್ಧಧರ್ಮ ಅಪೇಕ್ಷಿತ ಫಲ ನೀಡಲು ವಿಫಲವಾದರೆ, ಇಡೀ ಜಗತ್ತು ಮಾರ್ಕ್ಸ್‌ವಾದದ ಮಾರ್ಗದಲ್ಲಿಯೇ ಹೋಗಬೇಕಾಗುತ್ತದೆ" ಎಂದು ಹೇಳಿದ್ದನ್ನು ಉಲ್ಲೇಖಿಸುತ್ತಾರೆ. ಇದನ್ನು ಅರ್ಥಮಾಡಿಕೊಳ್ಳದ ದಲಿತ-ನಾಯಕರು ಮತ್ತು ಕಮ್ಯುನಿಸ್ಟರು ಈಗಲೂ ಅಂಬೇಡ್ಕರರ ಕ್ರಾಂತಿಕಾರಿ ಸತ್ವವನ್ನು ಅರ್ಥಮಾಡಿಕೊಳ್ಳದೆ ದಲಿತರು ಮತ್ತು ನೈಜ ಕಮ್ಯುನಿಸ್ಟ್ ಆಂದೋಲನದ ನಡುವೆ ಕಂದರ ಮುಂದುವರೆಯಲು ಕಾರಣರಾಗಿದ್ದಾರೆ ಎಂದು ಕಟುವಾಗಿ ಟೀಕಿಸುತ್ತಾರೆ. ಇದನ್ನು ಮುರಿಯಲು ಅಂಬೇಡ್ಕರರ ಎಲ್ಲಾ ಪರಿಕಲ್ಪನೆಗಳನ್ನು ಸುಸಂಬದ್ಧವಾಗಿ ಪರೀಕ್ಷಿಸಿ ಅದನ್ನು ಮಾರ್ಕ್ಸ್‌ವಾದಕ್ಕೆ ಸಂಬಂಧಿಸಿದಂತೆ ಪುನರ್‌ಸ್ಥಾಪಿಸಬೇಕೆಂದು ಸಲಹೆ ಮಾಡುತ್ತಾರೆ.

ಹೀಗೆ ಅಂಬೇಡ್ಕರ್‌ರವರು ಸಾಂದರ್ಭಿಕವಾಗಿ ಪ್ರಸ್ತಾಪಿಸಿದ ಕೆಲವು ಯೋಜನೆ ಮತ್ತು ಪರಿಕಲ್ಪನೆಗಳಿಗೆ ಚಾರಿತ್ರಿಕ ಮಿತಿಗಳಿದ್ದರೂ ಒಟ್ಟಾರೆಯಾಗಿ ಅಂಬೇಡ್ಕರ್‌ರವರ ಚಿಂತನೆಗಳ ಕ್ರಾಂತಿಕಾರಿ ಸತ್ವ ಭಾರತದಲ್ಲಿ ಇನ್ನೂ ಘಟಿಸಬೇಕಿರುವ ಪ್ರಜಾಸತ್ತಾತ್ಮಕ ಕ್ರಾಂತಿಗೆ ಬೇಕಾದ ಅಂತಃಸತ್ವವನ್ನೂ ನೀಡುವುದಲ್ಲದೆ ದಲಿತರು ಮತ್ತು ದಲಿತೇತರ ದಮನಿತರು ಒಗ್ಗೂಡಿ ಈ ಕ್ರಾಂತಿಯ ಪ್ರಧಾನ ಚಾಲಕ ಶಕ್ತಿಗಳಾಗುವಂತೆ ಮಾಡುವುದರಲ್ಲಿ ಸಂಶಯವಿಲ್ಲ ಎಂದು ಡಾ. ಆನಂದ್ ತೇಲ್‌ತುಂಬ್ಡೆ ಪ್ರತಿಪಾದಿಸುತ್ತಾರೆ.

ಹೀಗಾಗಿ ಹೇಗೆ ಅಂಬೇಡ್ಕರ್‌ರವರು ಬುದ್ಧನ ಧಮ್ಮಕ್ಕೆ ಅಂಟಿಕೊಂಡಿದ್ದ ಕೆಸರುಗಳನ್ನು ತೊಡೆದು ತಮ್ಮ ಕಾಲಕ್ಕೆ ತಕ್ಕಂತೆ ಪುನರ್‌ವ್ಯಾಖ್ಯಾನ ಮಾಡಿದರೋ ಅದೇ ರೀತಿ ಈ ಕಾಲದ ಅಂಬೇಡ್ಕರರ ಪ್ರತಿಮೆಗೆ ರಾಜಕೀಯರು, ಅವಕಾಶವಾದಿಗಳು, ಮತ್ತು ಆಳುವವರ್ಗ ಮೆತ್ತಿರುವ ಕೆಸರನ್ನು ತೊಳೆದು ಅವರ ಮೂಲ ಚಿಂತನೆಯನ್ನು ತಾರ್ಕಿಕ ಕುಲುಮೆಗೆ ಹಾಕಿ, ಸೋಸಿ, ಪುನರ್‌ಎರಕ ಹೊಯ್ಯುವ ಅವಶ್ಯಕತೆ ಇದೆ ಎಂದು ಆಗ್ರಹಿಸುತ್ತಾರೆ. ಏಕೆಂದರೆ "ಅನುಯಾಯಿಗಳು ತಮ್ಮ ನೇತಾರರಿಂದ ದಿಸೆ-ದಿಕ್ಕುಗಳನ್ನು ಕಂಡು ಕೊಳ್ಳುತ್ತಾರೆಯೇ ವಿನಃ ಅವರು ತೀರ್ಪು-ತೀರ್ಮಾನಗಳಿಂದ ಬಂಧಿತರಾಗುವುದಿಲ್ಲ" ಎಂದು ಎಚ್ಚರಿಸುತ್ತಾರೆ.

ಹೀಗೆ ಈ ಪುಸ್ತಕ ಈ ಸಮಾಜದ ಬದಲಾವಣೆಯಲ್ಲಿ, ಆದ್ದರಿಂದಲೇ ಅಂಬೇಡ್ಕರ್‌ರನ್ನು ಅರ್ಥಮಾಡಿಕೊಳ್ಳುವಲ್ಲಿ, ಆಸಕ್ತರಾಗಿರುವವರಿಗೆ ಅತ್ಯುತ್ತಮ ಮಾರ್ಗದರ್ಶಿ ಪುಸ್ತಕವಾಗಿದೆ. ಆದರೆ ಈ ಪುಸ್ತಕದಲ್ಲಿ ಅಲ್ಲಲ್ಲಿ ಕೆಲವು ಲೋಪಗಳು ಕಂಡುಬರುತ್ತವೆ. ಉದಾಹರಣೆಗೆ ಅವರಿಗೆ ಮಹಾರಾಷ್ಟ್ರ ಮತ್ತು ಉತ್ತರಪ್ರದೇಶದ ದಲಿತ ಆಂದೋಲನದ ಬಗ್ಗೆ ಇರುವಷ್ಟು ಪರಿಚಯ ಕರ್ನಾಟಕದ ದಲಿತ ಆಂದೋಲನದ ಬಗ್ಗೆ ಇದ್ದಂತೆ ಕಾಣುವುದಿಲ್ಲ. ಎರಡನೆಯದಾಗಿ ಕೆಲವು ಕಡೆ "ಯಾವ ದಲಿತ ನಾಯಕರು ಈವರೆಗೆ ದಲಿತ ಸಮಸ್ಯೆಗಳ ರಾಷ್ಟ್ರೀಯ ಮತು ಅಂತರ ರಾಷ್ಟ್ರೀಯ ಆಯಾಮಗಳ ಬಗ್ಗೆ ಚಿಂತಿಸಿಲ್ಲ" ಎಂಬ ರೀತಿಯ ಬಿಡುಬೀಸು ಹೇಳಿಕೆಗಳಿವೆ. ಆದರೆ ಈ ಯಾವುದೇ ಲೋಪಗಳು ಲೇಖಕರ ಮೂಲವಾದದ ಪ್ರಖರತೆ ಮತ್ತು ಸುಸಂಬದ್ಧತೆಯನ್ನು ಕಡಿಮೆ ಮಾಡುವುದಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಪ್ರೊ.ಆರ್.ಕೆ ಹುಡುಗಿ(ರಾಹು)ಯವರ ಅನುವಾದದಲ್ಲಿ ತಾದಾತ್ಮ ಮತ್ತು ಪರಿಶ್ರಮ ಎರಡು ಇರುವುದರಿಂದ ಕನ್ನಡೀಕರಣ ಅತ್ಯುತ್ತಮವಾಗಿದೆ. ಕನ್ನಡ ಆವೃತ್ತಿಯಲ್ಲಿ ಪ್ರಕಾಶಕರು ಕರ್ನಾಟಕದ ದಲಿತ ಚಳವಳಿಯ ಬಗ್ಗೆ ಲಕ್ಷ್ಮಣ್ ತೆಲಗಾವಿಯವರ ಲೇಖನವನ್ನು ಸೇರಿಸಿದ್ದಾರೆ. ಇದು ಕರ್ನಾಟಕದ ಭಿತ್ತಿಯಲ್ಲಿ ಲೇಖಕರ ಪ್ರತಿಪಾದನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಪೂರಕವಾಗಿದೆ. ಎರಡನೇ ಅನುಬಂಧದಲ್ಲಿ ಈ ದೇಶದ ಜಾತಿ ಪರಿಸ್ಥಿತಿಯ ಸ್ಥಿಗತಿಗಳ ಬಗ್ಗೆ ಸಿಪಿಎಂ ಪಕ್ಷದ ತೀರ್ಮಾನದ ಭಾಗವನ್ನು ಹಾಕಿಕೊಳ್ಳಲಾಗಿದೆ. ಮೂರನೇ ಅನುಬಂಧದಲ್ಲಿ ಈ ಪುಸ್ತಕದ ಬಗ್ಗೆ ಎಲ್. ಹನುಮಂತಯ್ಯ, ಸಿಪಿಎಂ ಪಕ್ಷದ ಪ್ರಕಾಶ್, ದಲಿತ ಸಂಘರ್ಶ ಸಮಿತಿಯ ಡಿ.ಜಿ. ಸಾಗರ್, ಲಕ್ಷ್ಮೀನಾರಾಯಣ್ ನಾಗವಾರ ಇವರುಗಳ ಅಭಿಪ್ರಾಯವನ್ನು ಸೇರಿಸಲಾಗಿದೆ. ಅವರ ಅಭಿಪ್ರಾಯಗಳೇನೇ ಇದ್ದರೂ ಈ ಸೇರ್ಪಡೆ ಪುಸ್ತಕದ ಓದಿಗೆ ಪೂರಕವಾಗಿದೆಯೆಂತೇನೂ ಅನಿಸುವುದಿಲ್ಲ.

ಅದೇನೇ ಇರಲಿ ಸಮಕಾಲೀನ ಸಂದರ್ಭದಲ್ಲಿ ಅತ್ಯಂತ ಗಂಭೀರವಾದ ವಿಷಯವೊಂದರ ಬಗ್ಗೆ ಕನ್ನಡಿಗರಿಗೆ ಅತ್ಯುತ್ತಮ ಪುಸ್ತಕವನ್ನು ಒದಗಿಸಿರುವ "ಚಿಂತನ" ಪ್ರಕಾಶನದವರು ಅಭಿನಂದನಾರ್ಹರು. □

ಇಷ್ಟಾದರೂ ಅಂಬೇಡ್ಕರ್‌ರವರು "ಒಂದುವೇಳೆ ಬೌದ್ಧಧರ್ಮ ಅಪೇಕ್ಷಿತ ಫಲ ನೀಡಲು ವಿಫಲವಾದರೆ, ಇಡೀ ಜಗತ್ತು ಮಾರ್ಕ್ಸ್‌ವಾದದ ಮಾರ್ಗದಲ್ಲಿಯೇ ಹೋಗಬೇಕಾಗುತ್ತದೆ" ಎಂದು ಹೇಳಿದ್ದನ್ನು ಉಲ್ಲೇಖಿಸುತ್ತಾರೆ. ಇದನ್ನು ಅರ್ಥಮಾಡಿಕೊಳ್ಳದ ದಲಿತ ನಾಯಕರು ಮತ್ತು ಕಮ್ಯುನಿಸ್ಟರು ಈಗಲೂ ಅಂಬೇಡ್ಕರರ ಕ್ರಾಂತಿಕಾರಿ ಸತ್ವವನ್ನು ಅರ್ಥಮಾಡಿಕೊಳ್ಳದೆ ದಲಿತರು ಮತ್ತು ನೈಜ ಕಮ್ಯುನಿಸ್ಟ್ ಆಂದೋಲನದ ನಡುವೆ ಕಂದರ ಮುಂದುವರೆಯಲು ಕಾರಣರಾಗಿದ್ದಾರೆ ಎಂದು ಕಟುವಾಗಿಟೀಕಿಸುತ್ತಾರೆ.

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಪ್ರಣತಿ

ಕಾವಿ ಕೇಸರಿಯಾಯಿತು
ಕರಡಿಗೆ ಕಳಚಿ
ಬಿತ್ತು ಗಂಟು ಶಿವದಾರಕ್ಕೆ

ನ್ಯಾಯನಿಷ್ಠುರಿ ದಾಕ್ಷಿಣ್ಯರರೆಲ್ಲ
ನಿಲುಕಿದರು ಹೊಗಳಿಕೆಯ ಹೊನ್ನಶೂಲಕ್ಕೆ
ತೋರಿದರು ನಿಷ್ಠೆ ಹಣ ಜಾತಿ ಅಧಿಕಾರಕ್ಕೆ

ಲಂಗೋಟಿ ಮೇಲೆಲ್ಲ ಮೆತ್ತಿದರು
ಸ್ವಸ್ತಿಕದ ಚಿತ್ರ
ಕಲಿಸಿದರು ಸಮತೆ ಸೈರಣೆಗೆ
ಹಿಂಸೆಯ ಮಂತ್ರ

ಬಣ್ಣ ಗೆಟ್ಟಿತ್ತು ಕಾವಿ
ಹುಸಿ ಭಕ್ತಿಯಲ್ಲಿ ವಿಷಬಿತ್ತಿ–
ಆಶೀರ್ವದಿಸಿದರು
ಕೋಟಿ ಪಡೆದು ಲೂಟಿ ಮಾಡಲು

ತೂತು ಬಿದ್ದಿತ್ತು
ಸದುವಿನಯದ ತುಂಬಿದ ಕೊಡಕ್ಕೆ
ಕೂಳ ಕಂಡು ಕೂಗಿ ಕರೆದವು
ಕಾಗೆ ಗೂಗೆಗಳೆಲ್ಲ ತಮ್ಮ ಕುಲಕ್ಕೆ

ಹಣವೇ ಮೂಲವಯ್ಯ
ಅಂತರಂಗ ಶುದ್ಧಿಗೆ
ಬಹಿರಂಗದ ಬದುಕಿಗೆ
ಸ್ಥಾವರಕ್ಕೆ ಖಲಿಯುಂಟು ಜಂಗಮಕ್ಕಲ್ಲ



ಸೋರಿತ್ತು ತೈಲ ಒಣಗಿತ್ತು ಬತ್ತಿ
ಬಯಲಾಯಿತು ಜ್ಯೋತಿ
ಒಡೆದು ಬಸವ ಹಚ್ಚಿ ಪ್ರಣತಿ.

○ ಪ್ರಭು ಖಾನಾಪುರೆ

ಐಡೆಂಟಿಟಿ, ಕುಲಾಂತರಿಯ ರಾಜಕಾರಣ ಹಾಗೂ ಭಾರತ



ಕಾಲಮಾನ-೪

ಡಾ. ಮುಜಾಫರ್ ಅಸ್ಸಾದಿ

ಈ ಸಲದ ಹೊಸ ವರುಷ ಆರಂಭಗೊಂಡದ್ದು ಒಂದು ವಿಚಿತ್ರ ಸನ್ನಿವೇಶದಲ್ಲಿ. ಈ ಸನ್ನಿವೇಶದಲ್ಲಿ ಉಪೇಕ್ಷೆಗೊಳಗಾಗಿದ್ದ ಬಿಟಿ ಬದನೆಕಾಯಿ ಪ್ರಪ್ರಥಮ ಬಾರಿಗೆ ಬಹು ದೊಡ್ಡ ಚರ್ಚೆಯ ವಿಷಯವಾಯಿತು. ಸಾಮಾಜಿಕ ಚಳುವಳಿಗಳು, ಸರಕಾರೇತರ ಸಂಘಟನೆಗಳು, ಬುದ್ದಿಜೀವಿಗಳು, ವಿವಿಧ ರಾಜಕೀಯ ಧುರೀಣರು ಒಂದೇ ವೇದಿಕೆಯಲ್ಲಿ ಬಿಟಿ ಬದನೆಕಾಯಿಗೆ ಭಾರತದಲ್ಲಿ ಅವಕಾಶ ನೀಡಬಾರದೆಂಬ ನಿಲುವನ್ನು ತೆಗೆದುಕೊಂಡರು. ಇದು ಭಾರತದ ವಿಜ್ಞಾನಿಗಳ ಮೇಲೂ ಪ್ರಭಾವ ಬೀರಿತ್ತು. ಒಂದು ಗುಂಪು ಬಿಟಿ ಬದನೆಕಾಯಿಯನ್ನು ಬೆಂಬಲಿಸಿದರೆ, ಇನ್ನೊಂದು ಗುಂಪು ಅದನ್ನು ವಿರೋಧಿಸಿತ್ತು. ಸಧ್ಯಕ್ಕೆ ಬಿಟಿ ಬದನೆಕಾಯಿ ಭಾರತದಲ್ಲಿ ಬರಲಾರದು. ಆದರೆ ಅದು ಭಾರತದಲ್ಲಿ ನೆಲೆಯೂರಲು ಬಹಳ ದಿನಗಳು ಬೇಕಾಗಿಲ್ಲ. ಈ ರಾಜಕಾರಣದಲ್ಲಿ "ಬಹುರಾಷ್ಟ್ರೀಯರ "ಕಾರಾಸ್ಥಾನ"ವಿರುವುದನ್ನು ಕೆಲವರು ಗುರುತಿಸುತ್ತಾರೆ.

ಇದು ಬರೇ ಬಿಟಿ ಅಥವಾ ಕುಲಾಂತರಿ ಬದನೆಕಾಯಿಯ ವಿಷಯವಲ್ಲ. ಇಲ್ಲಿ ಇಡೀ ಆಹಾರ ಸಂಸ್ಕೃತಿಯ ಪ್ರಶ್ನೆಗಳು ಅಡಗಿವೆ, ರೈತರ ಐಡೆಂಟಿಟಿಯ ಪ್ರಶ್ನೆಗಳು ಅಡಗಿವೆ ಮಾತ್ರವಲ್ಲದೇ ವಿಶಾಲವಾದ ತಾತ್ವಿಕತೆ ಹಾಗೂ ಅಜೆಂಡಾಗಳು ಕೂಡ ಅಡಗಿವೆ.

ಚರ್ಚೆ ಆರಂಭಗೊಂಡದ್ದು ಮಹಾರಾಷ್ಟ್ರದಲ್ಲಿರುವ ಬಹುರಾಷ್ಟ್ರೀಯ ಕಂಪೆನಿ ಮಹಿಕೋ ಭಾರತದಲ್ಲಿ ಬಿಟಿ ಅಥವಾ ಕುಲಾಂತರಿ ಬದನೆಕಾಯಿಯನ್ನು ಬಿಡುಗಡೆ ಮಾಡಲು ಅನುಮತಿಯನ್ನು ಕೇಳಿದಾಗ. ಈ ರೀತಿಯ ಚರ್ಚೆ ಹೊಸತೇನಲ್ಲ. ಕೆಲವು ವರುಷಗಳ ಹಿಂದೆ ಕುಲಾಂತರಿ ಹತ್ತಿಯನ್ನು ಭಾರತದಲ್ಲಿ ಬಿಡುಗಡೆಗೊಳಿಸಿದಾಗ ಇದೇ ರೀತಿಯ ವಿರೋಧಗಳು ಬಂದಿದ್ದವು. ಯಾಕೆಂದರೆ ಈ ಪ್ರಯೋಗ ಭಾರತದ ವಿವಿಧೆಡೆ ವಿಫಲವಾಗಿತ್ತು. ಹತ್ತು ಹಲವು ಜಾನುವಾರಗಳು ಬಿಟಿ ಹತ್ತಿ ಪ್ರದೇಶದಲ್ಲಿ ಸತ್ತ ವರದಿಗಳಿದ್ದವು. ಮಧ್ಯಪ್ರದೇಶದಲ್ಲಿ ಬಿಟಿ ಹತ್ತಿ ಬೆಳೆ ನೂರಕ್ಕೆ ನೂರರಷ್ಟು ಸಂಪೂರ್ಣವಾಗಿ ನಾಶವಾಗಿತ್ತು, ಮಹಾರಾಷ್ಟ್ರದಲ್ಲಿ ಹೆಚ್ಚು ಕಡಿಮೆ 30,000 ಸಾವಿರ ಹೆಕ್ಟೇರಗಳಷ್ಟು ಹತ್ತಿ ಬೆಳೆ ನಾಶವಾಗಿತ್ತು. ಗುಜಾರಾತ್‌ನಲ್ಲಿ ಬೆಳೆ ಹುಳಗಳಿಂದ ಸಂಪೂರ್ಣವಾಗಿ ನಾಶವಾಗಿತ್ತು. ಒಂದು ಅಂದಾಜಿನ ಪ್ರಕಾರ ರೈತರು ಹೆಚ್ಚು ಕಮ್ಮಿ 1128 ಕೋಟಿಯಷ್ಟು ನಷ್ಟವನ್ನು ಅನುಭವಿಸಿದ್ದರು. ಈ ನಷ್ಟವನ್ನು ಯಾವುದೇ ಬಹುರಾಷ್ಟ್ರೀಯ ಕಂಪೆನಿ, ಅದರಲ್ಲೂ ಮೊನ್ಸೆಂಟೋ ಭರಿಸಲು ತಯಾರಿರಲ್ಲ. 2006 ರಲ್ಲಿ ಸುಂಪ್ರಿಕೋರ್ಟ್ ಕುಲಾಂತರಿ ಬೀಜಗಳ ಪ್ರಯೋಗವನ್ನು ನಿಷೇಧಿಸಿದ್ದರೂ ಅದು ಪುನ: ಪುನ: ಭಾರತದಲ್ಲಿ ನೆಲೆಯೂರಲು ಯತ್ನಿಸುತ್ತಿರುವುದನ್ನು ಇಲ್ಲಿ ಗಮನಿಸಬೇಕು: ಇದು ಒಂದೆಡೆ ಬಹುರಾಷ್ಟ್ರೀಯ ಕಂಪೆನಿ ಹಾಗೂ ಸರಕಾರದ ನಡುವಿನ ಅನ್ಯೋನ್ಯ ಸಂಬಂಧದ ಸೂಕ್ಷ್ಮತೆಯನ್ನು ಎತ್ತಿತೋರಿಸುತ್ತದೆ.

ವಾಸ್ತವವಾಗಿ ಇವತ್ತು ಭಾರತ ಹೊಸ ತಂತ್ರಜ್ಞಾನದ ಪ್ರಯೋಗಾಲಯವಾಗುತ್ತಿರುವುದನ್ನು ನಾವು ಗಮನಿಸಬೇಕು.. ಈ ಪ್ರಯೋಗಗಳಿಗೆ ಬಲಿಯಾಗುತ್ತಿರುವ ಬೆಳೆಗಳೆಂದರೆ ಮೆಕ್ಕೆ ಜೋಳ, ಸಾಸಿವೆ, ಅಕ್ಕಿ, ಟಮಾಟೋ, ಪಪಾಯ, ಬಾಳೆ ಹಣ್ಣು, ಹೂವು ಕೋಸು, ಎಣ್ಣೆ ಬೀಜಗಳು, ಸೋಯಾಬೀನ್, ಆಲೂಗೆಡ್ಡೆ, ಬಿಳಿ ಬಟಾಣಿ, ಮೀನು. ಇತ್ಯಾದಿ. ಇವೆಲ್ಲವೂ ಕುಲಾಂತರಿ ಉತ್ಪನ್ನಗಳಾಗುವುದಕ್ಕೆ ಹೆಚ್ಚು ಸಮಯ ಬೇಕಾಗಿಲ್ಲ. 216 ವಿವಿಧ ಕೃಷಿ ಉತ್ಪನ್ನಗಳ ಮೇಲೆ ಇವತ್ತು ಪ್ರಯೋಗಗಳು ನಡೆಯುತ್ತಿರುವುದು ವಾಸ್ತವದ ಸಂಗತಿ, ಅದರಲ್ಲಿ 41 ಉತ್ಪನ್ನಗಳು ಆಹಾರ ಉತ್ಪನ್ನಗಳು.

ಇವತ್ತಿನ ಸಂದರ್ಭದಲ್ಲಿ ಕುಲಾಂತರಿ ಆಹಾರಗಳು ಬಹಳ ವೇಗವಾಗಿ ಜಗತ್ತಿನಾದ್ಯಂತ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ಭಾರತದ 16 ರಾಜ್ಯಗಳಲ್ಲಿ ಅದರ ಪ್ರಯೋಗಗಳು ನಡೆಯುತ್ತಿರುವುದು ಒಂದು ದೊಡ್ಡ ಅಪಾಯದ ಸಂಗತಿ.. ಭಾರತದಲ್ಲಿ 7,605 ಮಿಲ್ಲಿಯನ್ ಹೆಕ್ಟೇರ್ ಭೂಮಿಯಲ್ಲಿ ಬಿಟಿ ಹತ್ತಿಯನ್ನು ಬೆಳೆಸುತ್ತಿದ್ದಾರೆ. ಜಗತ್ತಿನಾದ್ಯಂತ ಈಗಾಗಲೇ ಹೆಚ್ಚು ಕಮ್ಮಿ 58.8 ಮಿಲ್ಲಿಯನ್ ಹೆಕ್ಟೇರ್ ಭೂಮಿ ಇದಕ್ಕೆ ಬಲಿಯಾಗಿದೆ. ಇದನ್ನು ಅತೀ ಹೆಚ್ಚು ಬೆಳೆಸುವ ದೇಶವೆಂದರೆ ಅಮೇರಿಕಾ, ತದನಂತರ ಕೆನಡಾ, ಬುಲ್ಗೇರಿಯಾ, ಚೀನಾ, ಆಸ್ಟ್ರೇಲೀಯಾ, ಕೊಲಂಬಿಯಾ, ಇಂಡೋನೇಶಿಯ, ಮೆಕ್ಸಿಕೋ, ರೊಮಾನಿಯಾ, ದಕ್ಷಿಣ ಆಫ್ರಿಕಾ, ಸ್ಪೇನ್, ಉರಾಗ್ವೆ, ಹಾಗೂ ಭಾರತ. ದುರಂತವೆಂದರೆ ಭಾರತ ಕುಲಾಂತರಿ ಬೆಳೆಗಳಲ್ಲಿ ಕೆನಡಾವನ್ನು ಹಿಮ್ಮೆಟಿಸಿದೆ– ಇವತ್ತು ನಾಲ್ಕನೇ ಸ್ಥಾನದಲ್ಲಿದೆ. 23 ದೇಶಗಳಲ್ಲಿ ಕುಲಾಂತರಿ ಉತ್ಪನ್ನಗಳು ಬೆಳೆಯಲು ಅನುಮತಿ ದೊರೆತಿರುವುದು ಅದರ ಒಟ್ಟು ಶಕ್ತಿಯನ್ನು ಎತ್ತಿ ತೋರಿಸುತ್ತದೆ. ಕುಲಾಂತರಿಯನ್ನು ಪ್ರತಿಪಾದಿಸುವ ಅತೀ ಹೆಚ್ಚು ಬಹುರಾಷ್ಟ್ರೀಯ ಕಂಪೆನಿಗಳು ಅಮೇರಿಕಾದಲ್ಲಿರುವ ಕಾರಣ ಈ ರಾಜಕಾರಣದಲ್ಲಿ ಅಮೇರಿಕಾದ ಆಸಕ್ತಿಯನ್ನು ಹಾಗೂ ವಿಶಾಲವಾದ ಯಜಮಾನಿಕೆಯ ಅಜೆಂಡಾವನ್ನು ಗಮನಿಸಬೇಕು.

ಕುಲಾಂತರಿ ಬೀಜ ಅಥವಾ ಆಹಾರಗಳ ಕುರಿತು ಚರ್ಚೆ ಆರಂಭಗೊಂಡದ್ದು 1990ರ ದಶಕದಲ್ಲಿ. ಕುಲಾಂತರಿ ಬೆಳೆಗಳ ಪ್ರಪ್ರಥಮ ವಾಣೀಜ್ಯಕರಣಗೊಂಡದ್ದು ಬಿಟಿ ಟಮಾಟೋನಿಂದ. ಇವತ್ತು ಅದನ್ನು ಅತೀ ಹೆಚ್ಚಾಗಿ ಚೀನಾದಲ್ಲಿ ಬೆಳೆಸುತ್ತಾರೆ. ಇದರ ನಂತರ ಕುಲಾಂತರಿಗಳ ಪ್ರಯೋಗ ಹೆಚ್ಚಾಗಿ ಕಂಡುಬರುವುದು ಹತ್ತಿ, ಸೋಯಾಬೀನ್, ಮೆಕ್ಕೆ ಜೋಳ ಇತ್ಯಾದಿಗಳಲ್ಲಿ.

ಕುಲಾಂತರಿ ಅಥವಾ ಜಿ ಎಮ್ ಬೆಳೆಗಳು ನಮ್ಮ ಗ್ರಾಮೀಣ ಅಥವಾ ಹಳ್ಳಿ ಬದುಕಿನ ಐಡೆಂಟಿಟಿಯನ್ನು ಹೇಗೆ ಬದಲಾಯಿಸುತ್ತದೆ? ಕುಲಾಂತರಿ ಬೆಳೆಗಳು ತಂದಿರುವ ಮಿಥ್ಯೆಗಳೇನು? ಕುಲಾಂತರಿಗೆ ಬಂದಿರುವ ವಿರೋಧಗಳು ಒಂದು ವಿಜ್ಞಾನದ ಭಾಗವಾಗಿ ಬಂದಿದೆಯೇ ಅಥವಾ ವಿಶಾಲವಾದ ರಾಜಕೀಯದ ಭಾಗವಾಗಿ ಬಂದಿದೆಯೇ? ಇದರಲ್ಲಿ ತಾತ್ವಿಕತೆಯ ರಾಜಕೀಯವಿದೆಯೇ? ಇತ್ಯಾದಿ ಪ್ರಶ್ನೆಗಳನ್ನು ಈ ಸಂದರ್ಭದಲ್ಲಿ ಕೇಳಬೇಕಾದ ಅನಿವಾರ್ಯತೆ ಇದೆ.. ವಾಸ್ತವವಾಗಿ ಕುಲಾಂತರಿ ಬೆಳೆಗಳ ಅಥವಾ ಉತ್ಪನ್ನಗಳ ರಾಜಕಾರಣದ ಹಿಂದೆ ಎರಡು ಮಹತ್ತರವಾದ ರಾಜಕಾರಣವಿರುವುದನ್ನು ನಾವು ಗಮನಿಸಬೇಕು. ಮೊದಲನೇದಾಗಿ ಬಹುರಾಷ್ಟ್ರೀಯ ಕಂಪೆನಿಗಳ ರಾಜಕಾರಣ, ಎರಡನೇದಾಗಿ ಬಂಡವಾಳಶಾಹಿಯ ರಾಜಕಾರಣ. ಕುಲಾಂತರಿ ಬೆಳೆಗಳ ರಾಜಕಾರಣವನ್ನು ಆರಂಭಿಸಿದವರೇ ಬಹುರಾಷ್ಟ್ರೀಯ

ಇವತ್ತಿನ ಸಂದರ್ಭದಲ್ಲಿ ಕುಲಾಂತರಿ ಆಹಾರಗಳು ಬಹಳ ವೇಗವಾಗಿ ಜಗತ್ತಿನಾದ್ಯಂತ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ಭಾರತದ ೧೬ ರಾಜ್ಯಗಳಲ್ಲಿ ಅದರ ಪ್ರಯೋಗಗಳು ನಡೆಯುತ್ತಿರುವುದು ಒಂದು ದೊಡ್ಡ ಅಪಾಯದ ಸಂಗತಿ.. ಭಾರತದಲ್ಲಿ ೭,೬೦೫ ಮಿಲ್ಲಿಯನ್ ಹೆಕ್ಟೇರ್ ಭೂಮಿಯಲ್ಲಿ ಬಿಟಿ ಹತ್ತಿಯನ್ನು ಬೆಳೆಸುತ್ತಿದ್ದಾರೆ. ಜಗತ್ತಿನಾದ್ಯಂತ ಈಗಾಗಲೇ ಹೆಚ್ಚು ಕಮ್ಮಿ ೫೮.೮ ಮಿಲ್ಲಿಯನ್ ಹೆಕ್ಟೇರ್ ಭೂಮಿ ಇದಕ್ಕೆ ಬಲಿಯಾಗಿದೆ. ಇದನ್ನು ಅತೀ ಹೆಚ್ಚು ಬೆಳೆಸುವ ದೇಶವೆಂದರೆ ಅಮೇರಿಕಾ, ತದನಂತರ ಕೆನಡಾ, ಬುಲ್ಗೇರೀಯಾ, ಚೀನಾ, ಆಸ್ಟ್ರೇಲೀಯಾ, ಕೊಲಂಬಿಯಾ, ಇಂಡೋನೇಶಿಯ, ಮೆಕ್ಸಿಕೋ, ದಕ್ಷಿಣ ಆಫ್ರಿಕಾ, ಹಾಗೂ ಭಾರತ. ದುರಂತವೆಂದರೆ ಭಾರತ ಕುಲಾಂತರಿ ಬೆಳೆಗಳಲ್ಲಿ ಕೆನಡಾವನ್ನು ಹಿಮ್ಮೆಟಿಸಿದೆ- ಇವತ್ತು ನಾಲ್ಕನೇ ಸ್ಥಾನದಲ್ಲಿದೆ.

ಕಂಪೆನಿಗಳು.

ಕುಲಾಂತರಿ ಬೆಳೆಗಳು ಬಹಳಷ್ಟು ಮಿಥ್ಯೆಗಳನ್ನು ಸೃಷ್ಟಿಸುತ್ತದೆ ಹಾಗೂ ನಿರ್ಮಿಸುತ್ತದೆ. ಅವುಗಳಲ್ಲಿ ಬಹು ಮುಖ್ಯವಾದದು ಬಡತನದ ವಿಷಯ. ಕೆಲವರಂತೂ ಕುಲಾಂತರಿ ಬೆಳೆಗಳ ಅವಶ್ಯಕತೆಯನ್ನು ಎತ್ತಿ ಹಿಡಿಯುತ್ತಾರೆ.. ಈ ಚರ್ಚೆಯಲ್ಲಿರುವವರು ಬರೇ ಪೌರ ಸಮಾಜದ ಸಂಘಟನೆಗಳಲ್ಲ, ಹೊರತು ಬುದ್ಧಿಜೀವಿಗಳು, ಸಾಮಾಜಿಕ ಹೋರಾಟಗಳು, ಚಿಂತಕರೂ ಇದ್ದಾರೆ. ಈ ಚರ್ಚೆ ಬಹು ಮುಖ್ಯವಾಗಿ ಜಪಾನ್ ಹಾಗೂ ಐರೋಪ್ಯ ದೇಶಗಳಿಗೆ ಸಿಮೀತವಾದರೂ, ತೃತೀಯ ಜಗತ್ತಿನಲ್ಲಿ ಇದರ ಬಗ್ಗೆ ಇರುವ ಕಾಳಜಿಗಳು ಕಡಿಮೆ ಎನಿಲ್ಲಾ. ಅಮೇರಿಕಾದಲ್ಲಿ ಕುಲಾಂತರಿಯ ಕುರಿತಾದ ಚರ್ಚೆಗಳು ತೀವ್ರವಾಗಿಲ್ಲ,

ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಕುಲಾಂತರಿ ಬೆಳೆಗಳು ಅನಿವಾರ್ಯವೆಂದು ವಾದಿಸುವವರು ಇದ್ದಾರೆ. ಅದರಲ್ಲೂ ಆಫ್ರಿಕಾದಂತಹ ಹಿಂದುಳಿದ ಹಾಗೂ ಬಡತನ ಹೊಂದಿರುವ ದೇಶಗಳಿಗೆ, ಭಾರತದಂತಹ ಅತೀ ಹೆಚ್ಚು ಜನಸಂಖ್ಯೆಯ ದೇಶಗಳಿಗೆ ಇದೊಂದು ಪರಿಹಾರವೆಂದು ವಾದಿಸುವವರ ಸಂಖ್ಯೆ ಕಡಿಮೆ ಎನಿಲ್ಲಾ ಈ ಸಂದರ್ಭದಲ್ಲಿ ಬಂದಿರುವ ವಾದವೆಂದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಹಾರದ ಕೊರತೆಯನ್ನು ನೀಗಿಸಬೇಕಾದರೆ ದೇಶಗಳು ಒಂದೋ ಆಹಾರವನ್ನು ಹೆಚ್ಚು ಹೆಚ್ಚು ಉತ್ಪಾದಿಸುವ ಶಕ್ತಿಯನ್ನು ಹೊಂದಿರಬೇಕು, ಇಲ್ಲವೇ ಹೆಚ್ಚುತ್ತಿರುವ ಜನಸಂಖ್ಯೆಯ ಮೇಲೆ ಕಡಿವಾಣವನ್ನು ಹಾಕಬೇಕು. ಇವೆರಡು ಇಂದಿನ ಸಂದರ್ಭದಲ್ಲಿ ಸಾಧ್ಯವಿಲ್ಲ, ಯಾಕೆಂದರೆ ಆಂತರಿಕವಾಗಿ ದೇಶಗಳು ಇಂತಹ ಪ್ರಶ್ನೆಗಳಿಗೆ ಪರಿಹಾರ ಹುಡುಕುವಷ್ಟು ಶಕ್ತಿಶಾಲಿಗಳಲ್ಲ. ಇದಕ್ಕಾಗಿ ಎರಡನೇ ಹಸಿರುಕ್ರಾಂತಿ ಅವಶ್ಯಕವೆಂದು ಪ್ರತಿಪಾದಿಸುತ್ತಾರೆ. ಇದರರ್ಥ ಮೊದಲನೇ ಹಸಿರು ಕ್ರಾಂತಿ ಹಸಿವಿನ ಪ್ರಶ್ನೆಯನ್ನು ಪರಿಹರಿಸಲಿಲ್ಲವೆಂಬ ವಾದ ಇಲ್ಲಿ ಉಲ್ಲೇಖನೀಯ.

ವಾಸ್ತವವಾಗಿ ಹಸಿರು ಕ್ರಾಂತಿ ಜಗತ್ತಿನ ಹಸಿವನ್ನು ನೀಗಿಸಲು ಸಾಧ್ಯವಾಗಲೇ ಇಲ್ಲ. ಅದೂ ಸಾಧ್ಯಾನೂ ಇರಲಿಲ್ಲ. ಯಾಕೆಂದರೆ ಅದರ ಮೂಲ ಧೋರಣೆ ಅಥವಾ ಅಜೆಂಡಾವಿದ್ದದ್ದು ಹಸಿವನ್ನು ಅಥವಾ ಬಡತನವನ್ನು ಕಡಿಮೆ ಮಾಡಲು ಅಲ್ಲ. ಹೊರತು ಜಗತ್ತಿನಾದ್ಯಂತ ವಿವಿಧ ಕ್ರಾಂತಿಗಳನ್ನು ತಡೆಗಟ್ಟುವುದೇ ಅದರ ಮುಖ್ಯ ಅಜೆಂಡಾವಾಗಿತ್ತು. ಇದೇ ವಾದವನ್ನು ಜಾನ್ ಪರ್ಕಿನ್ಸ್ ತಮ್ಮ ಪುಸ್ತಕ, "ಜಿಯೋ ಪೊಲಿಟಿಕ್ಸ್ ಆಂಡ್ ದಿ ಗ್ರೀನ್ ರೆವುಲೂಶನ್"ನಲ್ಲಿ ವಾದಿಸುತ್ತಾರೆ. ಅವರ ಪ್ರಕಾರ ಹಸಿದ ಹೊಟ್ಟೆಗಳನ್ನು ಶಾಶ್ವತವಾಗಿ ಹಿಡಿತದಲ್ಲಿಡುವುದು ಸಾಧ್ಯವಿಲ್ಲ ಹಾಗೂ ಅಷ್ಟು ಸುಲಭವಲ್ಲ. ಅದು ವಿವಿಧ ಕ್ರಾಂತಿಗಳಿಗೆ ಅವಕಾಶ ಮಾಡಿಕೊಡಬಹುದು. ಪ್ರಜೆಗಳು ತೀವ್ರಗಾಮಿ ಅಥವಾ ಎಡಪಂಥೀಯರಾದರೆ ಅದು ಅಂತಿಮವಾಗಿ ಅಮೇರಿಕಾದ ಯಜಮಾನಿಕೆಗೆ ಬಹುದೊಡ್ಡ ಹೊಡೆತವನ್ನು ನೀಡುವುದರಲ್ಲಿ ಸಂಶಯವಿಲ್ಲ. ಆದಕಾರಣ ಅಮೇರಿಕಾ 1960ರ ದಶಕದಲ್ಲಿ ಹಸಿರು ಕ್ರಾಂತಿಯ ಹರಿಕಾರನಾಗುತ್ತದೆ. "ಹಸಿರು ಕ್ರಾಂತಿ"ಎಂಬ ಹೆಸರಿಟ್ಟವನೇ ಅಮೇರಿಕಾದ ಸಹಾಯಧನ ಸಂಸ್ಥೆಯ(ಯುಎಸ್ಐಡ್) ಅಂದಿನ ಮುಖ್ಯಸ್ಥ ವಿಲ್ಲಿಯಂ ಗಾವ್ಡ್.

ಹಸಿರು ಕ್ರಾಂತಿ ಮೇಲ್ನೋಟಕ್ಕೆ ಆಹಾರ ಉತ್ಪಾದನೆಯಲ್ಲಿ ಮಿಗತೆಯನ್ನು ಸಾಧಿಸಿದ್ದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಅದು ಹಸಿವನ್ನು ನೀಗಿಸಲು ಸಾಧ್ಯವಾಯಿತೇ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಪ್ರತಿಯೊಬ್ಬನಿಗೂ ಆಹಾರ ಉಪಲಬ್ದತೆ ಪ್ರಮಾಣ 1970 ಹಾಗೂ 1990 ರ ದಶಕದ ನಡುವೆ 11 ಶೇಕಡಾದಷ್ಟು ಹೆಚ್ಚಾದ್ದದ್ದು ವಾಸ್ತವ. ಇದರಿಂದ ಹೆಚ್ಚು ಕಡಿಮೆ 150 ಕೋಟಿ ಜನರು ಹಸಿವಿನಿಂದ ಮೇಲಕ್ಕೆ ಬರಲು ಸಾಧ್ಯವಾದ್ದದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಆದರೆ ಇಲ್ಲಿರುವ ಲೆಕ್ಕಾಚಾರದ ರಾಜಕಾರಣವನ್ನು ಅರ್ಥಮಾಡಿಕೊಂಡರೆ ಹಸಿವು ಹಾಗೂ ಮಿಗತೆಯ ನಿಜವಾದ ಮಿಥ್ಯೆಯನ್ನು ಅರ್ಥಮಾಡಿಕೊಳ್ಳಬಹುದು. ಈ ಲೆಕ್ಕಾಚಾರಕ್ಕೆ ಅತೀ ಹೆಚ್ಚು ಕಾಣಿಕೆ ನೀಡಿದ್ದು ಚೀನಾ ದೇಶ. ಈ ಲೆಕ್ಕಾಚಾರದಿಂದ ಚೀನಾವನ್ನು ಹೊರಗಿಡಿ. ಆಗ ವಾಸ್ತವತೆ ತೆರೆದಿಡುತ್ತದೆ ಅಥವಾ ಹೊರಗೆಬರುತ್ತದೆ. ಚೀನಾವನ್ನು ಹೊರಗಿಟ್ಟು ಲೆಕ್ಕಾಚಾರವನ್ನು ಹಾಕಿದರೆ ಜಗತ್ತಿನ ಹಸಿವಿನ ಪ್ರಮಾಣದಲ್ಲಿ 11 ಶೇಕಡಾ ದಷ್ಟು ಹೆಚ್ಚಾದ್ದದ್ದು ಕಂಡು ಬರುತ್ತದೆ. ದಕ್ಷಿಣಾ ಅಮೇರಿಕಾದಲ್ಲಿ ಇದರ ಪ್ರಮಾಣದಲ್ಲಿ 20 ಶೇ. ಹೆಚ್ಚಾಯಿತು. ಭಾರತದಲ್ಲಿ ಹಸಿರು ಕ್ರಾಂತಿಯ ಸಂದರ್ಭದಲ್ಲಿ ತಾಂಜವೂರಿನಲ್ಲಿ ದಲಿತರು ಗದ್ದೆಯ ಇಲಿಗಳನ್ನು ಹಿಡಿದು ಜೀವಿಸುತ್ತಿದ್ದನ್ನು ಕ್ಯಾಥಲಿನ್ ಗಾಫ್ ದಾಖಲಿಸುತ್ತಾರೆ.

ಹಸಿರು ಕ್ರಾಂತಿ ಮೇಲ್ನೋಟಕ್ಕೆ ಆಹಾರ ಉತ್ಪಾದನೆಯಲ್ಲಿ ಮಿಗತೆಯನ್ನು ಸಾಧಿಸಿದ್ದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಅದು ಹಸಿವನ್ನು ನೀಗಿಸಲು ಸಾಧ್ಯವಾಯಿತೇ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಪ್ರತಿಯೊಬ್ಬನಿಗೂ ಆಹಾರ ಉಪಲಬ್ದತೆ ಪ್ರಮಾಣ 1970 ಹಾಗೂ 1990 ರ ದಶಕದ ನಡುವೆ 11 ಶೇಕಡಾದಷ್ಟು ಹೆಚ್ಚಾದ್ದದ್ದು ವಾಸ್ತವ. ಇದರಿಂದ ಹೆಚ್ಚು ಕಡಿಮೆ 150 ಕೋಟಿ ಜನರು ಹಸಿವಿನಿಂದ ಮೇಲಕ್ಕೆ ಬರಲು ಸಾಧ್ಯವಾದ್ದದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಆದರೆ ಇಲ್ಲಿರುವ ಲೆಕ್ಕಾಚಾರದ ರಾಜಕಾರಣವನ್ನು ಅರ್ಥಮಾಡಿಕೊಂಡರೆ ಹಸಿವು ಹಾಗೂ ಮಿಗತೆಯ ನಿಜವಾದ ಮಿಥ್ಯೆಯನ್ನು ಅರ್ಥಮಾಡಿಕೊಳ್ಳಬಹುದು.

ಇವತ್ತು ಹಸಿವಿನ ಪ್ರಶ್ನೆಗಳು ಜೀವಂತವಾಗಿರುವುದಕ್ಕೆ ಜಗತ್ತಿನ ವಿವಿದೆಡೆ ನಡೆಯುತ್ತಿರುವ ಆಹಾರದ ದೋಂಭಿಗಳು ಸಾಕ್ಷಿ. –ಈಜೀಪ್ತಹ್ಯೇಟಿ, ಬಾಂಗ್ಲದೇಶ ಇತ್ಯಾದಿ ಇದಕ್ಕೆ ಉತ್ತಮ ಉದಾಹರಣೆ.. ಇವತ್ತು ಹೆಚ್ಚು ಕಡಿಮೆ 850ಕೋಟಿ ಜನರು ಪ್ರತೀರಾತ್ರೆ ಖಾಲಿ ಹೊಟ್ಟೆಯಲ್ಲಿ ಮಲಗುತ್ತಿರುವುದು ವಾಸ್ತವ.. ಈ ಸಂಖ್ಯೆ ಅಮೇರಿಕಾ, ಕೆನಡಾ ಹಾಗೂ ಐರೋಪ್ಯಖಂಡದ ಒಟ್ಟು ಜನಸಂಖ್ಯೆಗೆ ಸಮ.ಇನ್ನೊಂದು ಲೆಕ್ಕಾಚಾರದ ಪ್ರಕಾರ 1.02 ಬಿಲ್ಲಿಯನ್ ಜನರು ಹಸಿವಿನಿಂದ ಬಳಲುತ್ತಿದ್ದಾರೆ. ಈ ಹಸಿವು ಸಾಮಾನ್ಯ ಹಸಿವಲ್ಲ, ಒಂದು ಲೆಕ್ಕಾಚಾರದ ಪ್ರಕಾರ 90ಶೇಕಡ ಜನರ ಹಸಿವನ್ನು ನೀಗಿಸುವುದು ಸುಲಭ ಸಾಧ್ಯವಿಲ್ಲ. ಇನ್ನೊಂದು ದುರಂತವೆಂದರೆ ಪ್ರತಿ ವರುಷ ನಾಲ್ಕುಕೋಟಿ ಜನ ಹಸಿವಿನ ಪಟ್ಟಿಯೊಳಗೆ ಬರುತ್ತಾರೆ. ಇದು ಹಸಿರುಕ್ರಾಂತಿಯ ದೊಡ್ಡ ದುರಂತವೆನ್ನಬಹುದು. ಹಸಿರುಕ್ರಾಂತಿಯ ಇನ್ನೊಂದು ದುರಂತವೇನೆಂದರೆ ಒಂದು ಕಾಲದಲ್ಲಿ ಆಹಾರ ಪದಾರ್ಥಗಳನ್ನು ರಫ್ತು ಮಾಡುತ್ತಿದ್ದು ದೇಶಗಳು ಅಥವಾ ಖಂಡಗಳು ಇವತ್ತು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿಗೆ ತಲುಪಿವೆ.ಆಫ್ರಿಕಾ ಇದಕ್ಕೆ ಉತ್ತಮ ಉದಾಹರಣೆ. ಇದೇ ಸ್ಥಿತಿ ಎರಡನೇ ಹಸಿರುಕ್ರಾಂತಿಯ ನಂತರ ಜರಗಿದರೆ ಆಶ್ಚರ್ಯ ಪಡಬೇಕಾಗಿಲ್ಲ.

ವಾಸ್ತವಾಗಿ ಹಸಿವು – ತಂತ್ರಜ್ಞಾನ ಯಾವತ್ತೂ ನಿರ್ಲಿಪ್ತವಲ್ಲ. ಹಸಿವು ಬಡತನಕ್ಕೆ ಸಾಕ್ಷಿ, ತಂತ್ರಜ್ಞಾನ ಬಡತನಕ್ಕೆ ದಾರಿಮಾಡಿಕೊಡುತ್ತದೆ. ಅಲ್ಲದೇ ತಂತ್ರಜ್ಞಾನ ಕೆಲವೊಮ್ಮೆ ತಾತ್ವಿಕತೆಯ ಸಾಧನವಾಗಿ ಹಾಗೂ ಬಹುರಾಷ್ಟ್ರೀಯರ ಸಾಧನವಾಗಿ ಪರಿವರ್ತಿತವಾಗುವುದನ್ನು ಸೂಕ್ಷವಾಗಿ ಗಮನಿಸಬೇಕು. ಆದಕಾರಣವೇ ಎರಡನೇ ಹಸಿರುಕ್ರಾಂತಿಯನ್ನು, ಆಹಾರ ಉತ್ಪಾದನೆಯಲ್ಲಿ ಮಿಗತೆಯನ್ನು, ಹಾಗೂ ಕುಲಾಂತರಿ ಬೆಳೆ ಅಥವಾ ಬೀಜಗಳ ಅನಿವಾರ್ಯತೆಯನ್ನು ವಾದಿಸುವರು ಯಾರೆಂಬುದನ್ನು ಗಮನಿಸಬೇಕು.

ಕುಲಾಂತರಿ ಬೀಜಗಳ ಕುರಿತಾದ ಚರ್ಚೆಯ ಸಂದರ್ಭದಲ್ಲಿ ಒಂದೆರೆಡು ಅಂಶಗಳನ್ನು ನಾವು ಮರೆತು ಬಿಡುತ್ತೇವೆ. ಕುಲಾಂತರಿ ಬೀಜಗಳನ್ನು ಅಳವಡಿಸುವಾಗ ಬಹುರಾಷ್ಟ್ರೀಯ ಕಂಪೆನಿಗಳು ಟರ್ಮಿನರ್ ತಂತಜ್ಞಾನಯನ್ನು ಕೂಡತರುತ್ತದೆ. ಇದು ಬೀಜಗಳ ಬಂಜೆತನದ ತಂತ್ರಜ್ಞಾನವೆನ್ನಬಹುದು. ಕುಲಾಂತರಿ ಬೀಜಗಳ ವಿಶಿಷ್ಟವೆಂದರೆ ಅವುಗಳನ್ನು ಒಮ್ಮೆ ಮಾತ್ರ ಉಪಯೋಗಿಸಬಹುದೇ ಹೊರತು ಅವುಗಳನ್ನು ಮತ್ತೊಮ್ಮೆ ಉಪಯೋಗಿಸಲು ಸಾಧ್ಯವಿಲ್ಲ. ಯಾಕೆಂದರೆ ಕುಲಾಂತರಿ ಬೀಜಗಳು ವಾಸ್ತವವಾಗಿ ಬಂಜೆ ಬೀಜಗಳು. ಇಲ್ಲಿ ಕುಲಾಂತರಿ ಬೀಜಗಳು ರೈತ ಸಂಸ್ಕೃತಿಯ ವಿರೋಧವಾಗಿ ಹೋಗುವುದು ಸಹಜ. ಭಾರತದಂತಹ ದೇಶಗಳಲ್ಲಿ ರೈತರು ಬೀಜಗಳನ್ನು ತಲೆಮಾರಿಗಾಗಿ ಜೋಪಾನವಾಗಿ ಇಡುವ ಸಂಸ್ಕೃತಿ ಇದೆ. ಅಲ್ಲದೇ ಅವುಗಳನ್ನು ಮಾರುಕಟ್ಟೆಯಿಂದ ತರದೇ ಜೋಪಾನವಾಗಿಟ್ಟ ಬೀಜಗಳನ್ನು ಉಪಯೋಗಿಸುವ ಸಂಸ್ಕೃತಿಯೂ ಇದೆ. ಕುಲಾಂತರಿ ಬೀಜಗಳು ಈ ಸಂಸ್ಕೃತಿಯನ್ನು ನಾಶ ಮಾಡಿಬಿಡುತ್ತದೆ. ರೈತರನ್ನು ಬೀಜಗಳಿಗಾಗಿ ಕಂಪೆನಿ ಆಧಾರಿತ ಮಾರುಕಟ್ಟೆಗೆ ತಳ್ಳುವುದನ್ನು ನಾವಿಲ್ಲಿ ಗಮನಿಸಬೇಕು. ಈ ಎಲ್ಲಾ ಪ್ರಕ್ರಿಯೆ ನಡುವೆ ರೈತ ತನ್ನ ಸಾಮಾಜಿಕ ಐಡೆಂಟಿಟಿಯನ್ನು ಕಳೆದುಕೊಳ್ಳುವುದು ಅನಿವಾರ್ಯವಾಗುತ್ತದೆ.

ಬಹುರಾಷ್ಟ್ರೀಯ ಕಂಪನಿಗಳು ಕುಲಾಂತರಿ ಬೀಜಗಳ ಕುರಿತು ವಾದಿಸುವಾಗ ಆಹಾರ ಉತ್ಪಾದನೆಯ ಲೆಕ್ಕಾಚಾರವನ್ನು ಮುಂದಿಡುತ್ತದೆ. ಮುನ್ಸೋಂಟೊ ಇದಕ್ಕೆ ಉತ್ತಮ ಉದಾಹರಣೆ. ಆದರೆ ಅದು ನೀಡುವ ಲೆಕ್ಕಾವಚಾರ ಸೀಮಿತವಾದ ಲೆಕ್ಕಾಚಾರವೆನ್ನಬಹುದು. ಅದು ಇಡೀ ಆಹಾರ ಸಂಸ್ಕೃತಿಯನ್ನಾಗಲೀ, ಒಟ್ಟು ಉತ್ಪಾದನೆಯನ್ನು ಪ್ರತಿನಿಧಿಸುವುದಿಲ್ಲ. ಅದರ ಪ್ರಕಾರ ಮೆಕ್ಸಿಕೋದಲ್ಲಿ ಅಳವಡಿಸಿದ ಸೋಯಾಬೀನ್‌ನ ಉತ್ಪತ್ತಿಯಲ್ಲಿ 9ಶೇ.ದಷ್ಟು ಹೆಚ್ಚು ಉತ್ಪತ್ತಿ, ಫಿಲಿಪೆನ್ಸ ನಲ್ಲಿ ಬೆಳೆಸಿದ ಮೆಕ್ಕೆ ಜೋಳದಲ್ಲಿ 15 ಶೇ.ದಷ್ಟು ಹೆಚ್ಚು ಉತ್ಪತ್ತಿ, ಹವಾಯಿಯಲ್ಲಿ ಬೆಳೆಸಿದ ಪಪಾಯದಲ್ಲಿ 40ಶೇ.ದಷ್ಟು ಹೆಚ್ಚು ಉತ್ಪತ್ತಿ ಇತ್ಯಾದಿಗಳು

ಉದಾಹರಣೆಗಳು. ವಾಸ್ತವವಾಗಿ ಇದಕ್ಕೆ ತದ್ವಿರುದ್ಧವಾದ ಫಲಿತಾಂಶಗಳು ಬಂದಿವೆ. ಕೆನ್ಸಾಸ್ ವಿಶ್ವವಿದ್ಯಾಲಯದ ಒಂದು ಅಧ್ಯಯನದ ಪ್ರಕಾರ ಕುಲಾಂತರಿ ಸೋಯಾಬೀನ್‌ನ ಉತ್ಪತ್ತಿಯು ಸಾಂಪ್ರದಾಯಿಕ ತಳಿಗಿಂತಲೂ 10ಶೇ. ದಷ್ಟು ಕಡಿಮೆಯಾಗಿತ್ತು. ಇದೇ ರೀತಿಯ ಅಧ್ಯಯವನ್ನು ನೆಬ್ರಾಸ್ಕ ವಿಶ್ವವಿದ್ಯಾನಿಲಯವು ಕೈಗೊಂಡಿತ್ತು. ಅದರ ಪ್ರಕಾರ ಕುಲಾಂತರಿ ತಳಿಗಳಿಗಿಂತಲೂ ಸಾಂಪ್ರದಾಯಿಕ ತಳಿಗಳಿಂದ 6 ಶೇ.ದಷ್ಟು ಹೆಚ್ಚು ಉತ್ಪತ್ತಿಯನ್ನು ತೆಗೆಯಬಹುದು. ಇದು ಕೃಷಿ ಉತ್ಪಾದನೆ ಹಾಗೂ ಹಸಿವಿನ ಕುರಿತಾದ ಮಿಥ್ಯೆಯನ್ನು ಸುಳ್ಳಾಗಿಸುತ್ತದೆ.

ಕುಲಾಂತರಿ ಬೀಜಗಳ ಹಿಂದಿರುವ ಬಹು ದೊಡ್ಡ ಶಕ್ತಿಯೆಂದರೆ ಬಹುರಾಷ್ಟ್ರೀಯ ಕಂಪೆನಿಗಳು– ಅದರಲ್ಲೂ ಎರಡು ಮೂರು ತರಹದ ಕಂಪೆನಿಗಳು. ಒಂದನೇದಾಗಿ ಆಗ್ರೋ ಕೆಮಿಕಲ್ ಕಂಪೆನಿಗಳು. ಇವತ್ತಿನ ಸಂದರ್ಭದಲ್ಲಿ ಹತ್ತು ಕಂಪೆನಿಗಳು 85% ದಷ್ಟು ಜಗತ್ತಿನ ಆಗ್ರೋ ಕೆಮಿಕಲ್‌ನ ಮಾರುಕಟ್ಟೆಯನ್ನು ತಮ್ಮ ಹಿಡಿತದಲ್ಲಿಟ್ಟುರುವುದು ತೆರೆದ ಸಂಗತಿ. ಇದು ಆಹಾರದ ಮಾರುಕಟ್ಟೆಯ ಮೇಲೆ ಹಿಡಿತ ಹಾಗೂ ಯಜಮಾನಿಕೆಯನ್ನು ಸಾಧಿಸಲು ಸುಲಭವಾಗುತ್ತದೆ. ಕುಲಾಂತರಿ ಆಹಾರ ಇವತ್ತು ಅತಿ ದೊಡ್ಡ ಉದ್ಯಮವಾಗಿ ಹೊರಹೊಮ್ಮಿದೆ. ಈ ಉದ್ಯಮದ ಮಂಚೂಣಿಯಲ್ಲಿರುವ ಕಂಪೆನಿಗಳಲ್ಲಿ ಅತ್ಯಂತ ಪ್ರಮುಖವಾಗಿರುವುದು ಮನ್ಸೆಂಟೋ. 90ಶೇ. ಕುಲಾಂತರಿ ಬೆಳೆಗಳ ಮೇಲೆ ಇದರ ಸೌಮ್ಯವಿದೆ.

ಆದಕಾರಣ ಮೊನ್ಸಂಟೋ ಭವಿಷ್ಯದಲ್ಲಿ ಇಡೀ ಆಹಾರ ಸಂಸ್ಕೃತಿಯನ್ನು ತನ್ನ ಹಿಡಿತದಲ್ಲಿರಿಸಬಹುದೆಂಬ ನಂಬಿಕೆ ಇದೆ. ಅದರ ಇತಿಹಾಸವನ್ನು ಕೆದಕಿದರೆ ಅದು ಕೃಷಿಗೆ ಮಾಡಿರುವ ಹಾನಿಯ ಪಟ್ಟಿ ದೊರೆಯುತ್ತದೆ. ಅಮೇರಿಕಾದಲ್ಲಿ ರೈತರ ಮೇಲೆ "ಪೋಲೀಸ್ ಪಡೆಯಂತೆ" ಕಾಯುತ್ತಾ ಮೊಕದ್ದಮೆ ಹೂಡಿದ್ದು, ಕೃಷಿ ಭೂಮಿಯಲ್ಲಿ ವಿಷಕಾರಕ ಏಜೆಂಟ್ ಆರೆಂಜ್ ಅನ್ನು ಬಿಟ್ಟು ಸಾವಿರಾರು ಎಕರೆ ಭೂಮಿಯ ಫಲವತ್ತತೆಯನ್ನು ನಾಶ ಮಾಡಿದ್ದು ಇಲ್ಲಿ ದಾಖಲಿಸಬೇಕು. ಇನ್ನೊಂದು ಕಂಪೆನಿಯೆಂದರೆ ಬಯರ್. ಇಂಗ್ಲಾಂಡಿನಲ್ಲಿ 2003ರಲ್ಲಿ ಸಾರ್ವಜನಿಕ ಟೀಕೆಗಳಿಗೆ ತಲೆಬಾಗಿದ ಈ ಕಂಪೆನಿಯು ಕುಲಾಂತರಿಯ ಪ್ರಯೋಗವನ್ನೇ ನಿಲ್ಲಿಸಿತ್ತು. ಕಾರ್ಗಿಲ್ ಕಂಪೆನಿ ಇದಕ್ಕೆ ಇನ್ನೊಂದು ಹೆಸರು.

ಕುಲಾಂತರಿ ಬೀಜಗಳಿಂದಾಗುವ ಹಾನಿಗಳ ಕುರಿತು ಸಾಕಷ್ಟು ಮಾಹಿತಿಗಳು ಹೊರಬರುತ್ತಿವೆ. ಗ್ರೀನ್ ಪೀಸ್ ಪ್ರಕಾರ ಕುಲಾಂತರಿ ಮೆಕ್ಕೆ ಜೋಳ ಮೊನ್18 ವಾತವರಣಕ್ಕೆ ಬಿಡುವ ವಿಷಕಾರಕ ಪ್ರಮಾಣವು ಸಾಮಾನ್ಯ ಸ್ಪ್ರೇಗಿಂತಲೂ 3 ರಿಂದ 5,000 ಪಟ್ಟು ಅಧಿಕವಾಗಿರುತ್ತದೆ.

ಕುಲಾಂತರಿ ಬೀಜಗಳನ್ನು ಹಾಗೂ ಅವುಗಳ ವಾಣಿಜ್ಯಕರಣವನ್ನು ಎಲ್ಲಾ ದೇಶಗಳು ಸ್ವಾಗತಿಸುವುದಿಲ್ಲ. 2003ರಲ್ಲಿ ನಡೆಸಿದ ಒಂದು ಅಧ್ಯಯನದ ಪ್ರಕಾರ ಬಹುಸಂಖ್ಯಾತ ಜನರಿಗೆ ಕುಲಾಂತರಿ ಆಹಾರ ಒಂದು "ಕೆಟ್ಟ" ಆಹಾರ ಪದ್ಧತಿ. ಆದರೆ ಅಮೇರಿಕಾ ಹಾಗೂ ಕೆನಡಾ ಪ್ರಜೆಗಳಲ್ಲಿ ಬಹು ಸಂಖ್ಯಾತರು ಇದನ್ನು ಸ್ವಾಗತಿಸುತ್ತಾರೆ. ವಿಚಿತ್ರವೆಂದರೆ ಅಮೇರಿಕಾದ ಕಾಲಿಫೋರ್ನಿಯದಲ್ಲಿರುವ ಒಂದು ಚಿಕ್ಕ ಕೌಂಟಿ ಮೆಂಡಿಸಿನೋ ಇದರ ಮೇಲೆ ನಿಷೇಧ ಹೇರಿದ ಪ್ರಥಮ ಪ್ರದೇಶ. ಅಮೇರಿಕಾದ ಇನ್ನೊಂದು ರಾಜ್ಯವಾದ ವೆರ್ಮೊಂಟ್ ರೈತರನ್ನು ಬಹುರಾಷ್ಟ್ರೀಯ ಕಂಪೆನಿಗಳ ಕುಲಾಂತರಿ ಬೀಜಗಳ ಅಪಾಯಗಳಿಂದ ರಕ್ಷಿಸಲು ಒಂದು ಶಾಸನವನ್ನೇ ಅಳವಡಿಸಿತ್ತು. ಕುಲಾಂತರಿ ವಿರುದ್ಧ ರೈತರನ್ನು ರಕ್ಷಿಸಲು ಬಂದಿರುವ ಇದು ಪ್ರಪ್ರಥಮ ಶಾಸನ. ಇನ್ನೊಂದು ಆಸಕ್ತಿಯ ವಿಷಯವೇನೆಂದರೆ ಬಹುಸಂಖ್ಯಾತ ಮಹಿಳೆಯರು ಇದರ ವಿರೋಧಿಗಳು. ಕೆಲವು ದೇಶಗಳಂತೂ ಕುಲಾಂತರಿ ಬೀಜಗಳನ್ನು, ಬೆಳೆಗಳನ್ನು ಹಾಗೂ ಅವುಗಳ ಪ್ರಯೋಗವನ್ನು ಸಂಪೂರ್ಣವಾಗಿ ನಿಷೇಧಿಸಿವೆ. ಆಸ್ಟ್ರೇಲಿಯಾದಲ್ಲಿ ಪಶ್ಚಿಮ ಆಸ್ಟ್ರೇಲಿಯಾ ರಾಜ್ಯ ಪ್ರಪ್ರಥಮಬಾರಿಗೆ ಇದರ ಯದ್ವಾತದ್ವ ಪ್ರಯೋಗವನ್ನು ನಿಲ್ಲಿಸಿತ್ತು. ತದನಂತರ ವಿಕ್ಟೋರಿಯಾ ರಾಜ್ಯ ಕುಲಾಂತರಿ ಬೀಜಗಳ ಪ್ರಯೋಗವನ್ನು ನಿಲ್ಲಿಸಿತ್ತು.

ಅಂಗೋಲ, ಅಲ್ಜೇರೀಯಾ, ಮಲವಿ, ಸುಡಾನ್ ಇತ್ಯಾದಿಗಳು ಕುಲಾಂತರಿ ಬೆಳೆಗಳ ಆಮದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಇಲ್ಲೊಂದು ರಾಜಕಾರಣವೊಂದಿದೆ. ಬಹಳಷ್ಟು ಸಲ ಕುಲಾಂತರಿ ಆಹಾರ ಪದಾರ್ಥಗಳು ಸಹಾಯ ಧನದರೂಪದಲ್ಲಿ ತೃತೀಯ ಜಗತ್ತಿಗೆ ಕಳುಹಿಸಲಾಗುತ್ತಿದೆ. ಇದು ದೇಶಿಯ ಕೃಷಿಯನ್ನು, ಕೃಷಿ ತಳಿಗಳನ್ನು ನಾಶಮಾಡುವ ಹೆದರಿಕೆ ಹಾಗೂ ಭಯ ಇದ್ದೇ ಇರುತ್ತದೆ. ಅದರ ಅಂತಿಮ ಗುರಿ ಇಡೀ ದೇಶಿಯ ಆಹಾರ ಸಂಸ್ಕೃತಿಯನ್ನು ನಾಶಮಾಡಿ, ಮಾರುಕಟ್ಟೆ ಹಾಗೂ ಬಹುರಾಷ್ಟ್ರೀಯ ಕಂಪೆನಿ ಆಧಾರಿತ ಆಹಾರ ಸಂಸ್ಕೃತಿ ಯನ್ನು ಸೃಷ್ಟಿಸುವುದಾಗಿದೆ. ಇದರ ರಾಜಕೀಯವನ್ನು ಅರಿತ ಜಿಂಬಾಬ್ವೆ 2002ರಲ್ಲಿ ಕುಲಾಂತರಿ ಆಧಾರಿತ ಸಹಾಯಧನವನ್ನು ತಿರಸ್ಕರಿಸಿದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಭಾರತ ಈ ರೀತಿಯ ನಿಲುವುವನ್ನು ತಾಳಲು ಸಾಧ್ಯವೇ?

ಕುಲಾಂತರಿಗೆ ಬಂದಿರುವ ವಿರೋಧಗಳಲ್ಲಿ ಇನ್ನೊಂದು ಮುಖವೂ ಸೇರಿದೆ. ಅದು ನೈತಿಕತೆಯ ಮುಖ. ಇಸ್ಲಾಂ ಹಾಗೂ ಯಹೂದಿ ಧರ್ಮವಂತೂ ನೇರವಾಗಿ ಜೀವಾಂಶಗಳಲ್ಲಿ ಯಾವುದೇ ಕುಲಾಂತರ ಬೀಜಗಳ ಉಪಯೋಗವನ್ನು ವಿರೋಧಿಸುತ್ತದೆ. ಚರ್ಚ್ ಇದರ ಬಗ್ಗೆ ದ್ವಂದ್ವತ್ಮಾಕ ನಿಲುವುವನ್ನು ತೆಗೆದುಕೊಂಡಿತ್ತು. ಇದಕ್ಕೆ ಒಂದು ಬಹುಮುಖ್ಯವಾದ ಕಾರಣವೊಂದಿದೆ. ಚರ್ಚ್ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳೊಂದಿಗೆ ಇರುವ ಅನ್ಯೋನ್ಯ ಸಂಬಂಧದಲ್ಲಿ ಚರ್ಚ್‌ನ ರಾಜಕಾರಣವನ್ನು ನೋಡಬಹುದು. ಇದಕ್ಕೆ 2002ರಲ್ಲಿ ಚರ್ಚ್‌ನ ಬಿಷಪ್ ಹಾಗೂ ವಿಜ್ಞಾನಿಗಳ ನಡುವೆ ನಡೆದ ಸಮ್ಮೇಳನವೇ ಸಾಕ್ಷಿ. ಫಿಲಿಫೆನ್ಸ್ ನಡೆದ ಈ ಸಮ್ಮೇಳನ ಕುಲಾಂತರಿ ಬೀಜಗಳನ್ನು ಬೆಂಬಲಿಸಿತ್ತಲ್ಲದೇ, ಜಗತ್ತಿನ ಬಡತನ ಹಾಗೂ ಹಸಿವವನ್ನು ಹೋಗಲಾಡಿಸಲು ಇದರ ಅವಶ್ಯಕತೆಯನ್ನು ಒತ್ತಿ ಹೇಳಿತ್ತು.

ಇದರ ನಿಲುವು ಅಂತಿಮ ವಿಶ್ಲೇಷಣೆಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ನಿಲುವಿನಿಂದ ಭಿನ್ನವಾಗಿರಲಿಲ್ಲ. ವಿಚಿತ್ರವೆಂದರೆ 2003 ರಲ್ಲಿ ಇನ್ನೊಂದು ಸೆಮಿನಾರ್ ಪರಿಸರವಾದಿಗಳ ವಾದವನ್ನು ಹಾಗೂ ಅದರ ಹಿಂದಿರುವ ತಾತ್ವಿಕ ಹಿನ್ನಲೆಗಳನ್ನು ತೀವ್ರವಾಗಿ ಖಂಡಿಸಿತ್ತು. ಈ ಸಂದರ್ಭದಲ್ಲಿ ಚರ್ಚ್ ಅನ್ನು ಪ್ರತಿನಿಧಿಸುವ ಫ್ರೊ. ವೆಲೆಸಾಯಿಯೋದ ಪಾವ್ಲಿಸ್‌ವಾದ ಇಡೀ ಚರ್ಚ್‌ನ ಇನ್ನೊಂದು ಮುಖವನ್ನು ಎತ್ತಿತೋರಿಸುತ್ತದೆ. ಅವರ ಪ್ರಕಾರ "ನಮ್ಮೆಲ್ಲರ ಹೊಟ್ಟೆ ತುಂಬಿದ್ದರೆ ಕುಲಾಂತರಿ ಆಹಾರಗಳಿಗೆ ಬೇಡ ಅನ್ನಲು ಸಾಧ್ಯವೇನಲ್ಲ". ಇದರರ್ಥ ನಮ್ಮೆಲ್ಲರ ಹೊಟ್ಟೆ ಈಗಲೂ ತುಂಬಿಲ್ಲ, ಅದೂ ಸಾಧ್ಯನೂ ಇಲ್ಲ, ಆದ ಕಾರಣ ಕುಲಾಂತರಿ ಆಹಾರ ನಮಗೆಲ್ಲರಿಗೂ ಅನಿವಾರ್ಯ. ವಾಸ್ತವವಾಗಿ ಕಳೆದವರುಷ ಚರ್ಚ್‌ನ ಪೋಂಟಿಫಿಕಲ್ ಅಕಾಡೆಮಿ ಒಂದು ಸಂಶೋಧನೆಯನ್ನೇ ಕೈಗೊಂಡಿತ್ತು. ಆ ಸಂದರ್ಭದಲ್ಲಿ ಬಡತನವನ್ನು ಹೋಗಲಾಡಿಸಲು ಬಯೋಟೆಕ್ನಾಲಾಜಿಯೇ ಒಂದು ಪ್ರಮುಖ ಸಾಧನವೆಂದು ಪ್ರತಿಪಾದಿಸಿತ್ತು.

ಚರ್ಚನ ಈ ನಿಲುವುವನ್ನು ಎಲ್ಲರೂ ಒಪ್ಪುವುದಿಲ್ಲ. ವಾಸ್ತವವಾಗಿ ಚರ್ಚ್‌ನ ಒಳಗೆ ವಿರೋಧಗಳು ಬರುತ್ತಿವೆ. ಇದಕ್ಕೆ ಉತ್ತಮ ಉದಾಹಣೆ ಅಂದರೆ ಚರ್ಚ್‌ನೊಂದಿಗೆ ನಿಕಟ ಸಂಬಂಧ ಹೊಂದಿರುವ ಹಾಗೂ ಅಭಿವೃದ್ಧಿಗೆ ಸಹಾಯ ಧನವನ್ನು ನೀಡುವ ಕ್ರಿಶ್ಚಿಯನ್ ಯೇಡ್ ಎಂಬ ಸಂಘಟನೆ. ಅದು ತೃತೀಯ ಜಗತ್ತಿಗೆ ಕುಲಾಂತರಿ ಬೆಳೆಗಳು ಅನಿವಾರ್ಯ ಹಾಗೂ ಅದು ತೃತೀಯ ಜಗತ್ತಿನ ಹಸಿವನ್ನು ನೀಗಿಸುತ್ತದೆ ಎಂಬ ವಾದವನ್ನು ಒಪ್ಪಿಕೊಳ್ಳುವುದಿಲ್ಲ. ಭಾರತ ಸಂದರ್ಭದಲ್ಲಿ ರೈತರ ಆತ್ಮಹತ್ಯೆಗೆ ಹೈಬ್ರೀಡ್ ಅಥವಾ ಕುಲಾಂತರಿ ಹತ್ತಿ ಬೀಜಗಳೇ ಕಾರಣವೆಂದು ಸಂಘಟನೆ ಪ್ರತಿಪಾದಿಸುತ್ತದೆ. ಅಲ್ಲದೇ ಕುಲಾಂತರಿ ಉತ್ಪನ್ನಗಳು ಅಂತಿಮವಾಗಿ ಪಾಶ್ಚಾತ್ಯ ಬಳಕೆದಾರರ ಹಕ್ಕನ್ನು, ಅದರಲ್ಲೂ, ಆಯ್ಕೆಯ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂಬ ವಾದವನ್ನು ಅದು ಮುಂದಿಡುತ್ತದೆ.

ಈ ಎಲ್ಲಾ ರಾಜಕಾರಣದ ನಡುವೆ ಭಾರತದ ರೈತ ತನ್ನ ಐಡೆಂಟಿಟಿಯನ್ನು ಹೇಗೆ ಉಳಿಸಬಲ್ಲ? ಇದಕ್ಕೆ ಉತ್ತರವನ್ನು ಹುಡುಕುವುದು ಇಂದಿನ ಸಂದರ್ಭದಲ್ಲಿ ಅನಿವಾರ್ಯವಾಗುತ್ತದೆ ಅಲ್ಲದೇ ಅವಶ್ಯಕವೂ ಹೌದು. ಯಾಕೆಂದರೆ ರೈತರ ಐಡೆಂಟಿಟಿಯೊಂದಿಗೆ ನಮ್ಮೆಲ್ಲರ ಐಡೆಂಟಿಟಿಯೂ ಬೆಸೆದುಕೊಂಡಿದೆ. ನಾವು ನಮ್ಮ ಆಹಾರದ ಸಂಸ್ಕೃತಿಯನ್ನು ಕಳೆದುಕೊಂಡರೆ ನಮ್ಮ ಐಡೆಂಟಿಟಿಯನ್ನು ಕೂಡ ಕಳೆದುಕೊಳ್ಳುತ್ತೇವೆ. □

ಕುಲಾಂತರಿ ಬೀಜಗಳ ಹಿಂದಿರುವ ಬಹು ದೊಡ್ಡ ಶಕ್ತಿಯೆಂದರೆ ಬಹುರಾಷ್ಟ್ರೀಯ ಕಂಪೆನಿಗಳು– ಅದರಲ್ಲೂ ಎರಡು ಮೂರು ತರಹದ ಕಂಪೆನಿಗಳು. ಒಂದನೇದಾಗಿ ಆಗ್ರೋ ಕೆಮಿಕಲ್ ಕಂಪೆನಿಗಳು. ಇವತ್ತಿನ ಸಂದರ್ಭದಲ್ಲಿ ಹತ್ತು ಕಂಪೆನಿಗಳು 85% ದಷ್ಟು ಜಗತ್ತಿನ ಆಗ್ರೋ ಕೆಮಿಕಲ್‌ನ ಮಾರುಕಟ್ಟೆಯನ್ನು ತಮ್ಮ ಹಿಡಿತದಲ್ಲಿಟ್ಟುರುವುದು ತೆರೆದ ಸಂಗತಿ. ಇದು ಆಹಾರದ ಮಾರುಕಟ್ಟೆಯ ಮೇಲೆ ಹಿಡಿತ ಹಾಗೂ ಯಜಮಾನಿಕೆಯನ್ನು ಸಾಧಿಸಲು ಸುಲಭವಾಗುತ್ತದೆ. ಕುಲಾಂತರಿ ಆಹಾರ ಇವತ್ತು ಅತೀ ದೊಡ್ಡ ಉದ್ಯಮವಾಗಿ ಹೊರಹೊಮ್ಮಿದೆ. ಈ ಉದ್ಯಮದ ಮಂಚೂಣಿಯಲ್ಲಿರುವ ಕಂಪೆನಿಗಳಲ್ಲಿ ಅತ್ಯಂತ ಪ್ರಮುಖವಾಗಿರುವುದು ಮನ್ಸೆಂಟೋ.

ಬ್ರಾಹ್ಮಣವಾದಿಗಳ ದೃಷ್ಟಿಯಲ್ಲಿ ಬುದ್ಧ

(33ನೇ ಪುಟದಿಂದ)

ಬುದ್ಧನ ಸಮಕಾಲೀನರೇ.

ಮುಂಡಕ ಉಪನಿಷತ್ ಎಂದರೆ ತಲೆ ಬೋಳಿಸಿ ಕೊಂಡವರ ಉಪನಿಷತ್. ಇದು ಸ್ಪಷ್ಟವಾಗಿ ಬುದ್ಧನ ನಂತರದ ಉಪನಿಷತ್ತೇ. ಗುಂಡು ಹೊಡಿಸಿಕೊಳ್ಳುವ ಸಂಪ್ರದಾಯ ಬುದ್ಧನಿಗಿಂತ ಮೊದಲು ಇಲ್ಲ ವೇದ ಋಷಿಗಳೆಲ್ಲಾ ಗಡ್ಡ, ಮೀಸೆಗಳು ಬೆಳೆಸಿದವರೇ. ನಂತರದ ಮುನಿಗಳು, ಸಮಣರೇ ತಲೆಗಳನ್ನು ಬೋಳು ಹೊಡಿಸಿಕೊಂಡವರು. ಬುದ್ಧನು ಭಿಕ್ಷೆಗೆ ಹೊರಟಾಗ ಬ್ರಾಹ್ಮಣ ಬಾರದ್ವಾಜನು ಬುದ್ಧನನ್ನು ನೋಡಿ, 'ಮುಂಡಕಾ ನಿಂತುಕೋ' ಎಂದು ಅಂದನು. ಮುಂಡಕಾ ಎಂದು ಸಂಬೋಧಿಸುವಿಕೆ ಗಮನಾರ್ಹ. ಇದನ್ನು ಅನುಸರಿಸಿನೋಡಿದರೆ ಮುಂಡಕೋಪನಿಷತ್ತು ಖಚಿತವಾಗಿ ಬುದ್ಧನ ನಂತರದ್ದೇ. ಕಠೋಪನಿಷತ್ ಬೌದ್ಧ ಸಿದ್ಧಾಂತಗಳಾದ ಧಾತುಗಳ ಬಾಹುಳ್ಯವನ್ನು(plurality of elements) ಪೃಥಗ್ ಧರ್ಮಗಳ (existence of separate dharmas)ನ್ನು ವಿಮರ್ಶಿಸುತ್ತದೆ. ಹಾಗಾದ್ದರಿಂದ ಇದೂ ಬುದ್ಧನ ನಂತರದ್ದೇ.

ಮೇಲಿನ ಚರ್ಚೆಯನ್ನೆಲ್ಲಾ ಹಿಡಿದು ನೋಡಿದರೆ ಉಪನಿಷತ್ತುಗಳೆಲ್ಲಾ ಬುದ್ಧನಿಗೆ, ಅಶೋಕನಿಗೆ (ಕ್ರಿ.ಪೂ. 272) ಮಧ್ಯಕಾಲಕ್ಕೆ ಸೇರಿದ್ದೆಂದು ತಿಳಿಯುತ್ತದೆ! ವಿವೇಕಾನಂದರು ಉಪನಿಷತ್ತುಗಳೆಲ್ಲಾ ಕ್ರಿ.ಪೂ.2000 ಕಾಲದ್ದೆಂದು ಅನ್ನುತ್ತಾರೆ. ಆದರೆ ಅವು ಖಚಿತವಾಗಿ, ಮೊದಲ ಎರಡು –ಬೃಹದಾರಣ್ಯಕ, ಛಾಂದೋಗ್ಯೋಪನಿಷತ್ತುಗಳು– ಬುದ್ಧನಿಗೆ ಸಮಕಾಲೀನವಾಗಬಹುದು ಮಿಕ್ಕ ಒಂಬತ್ತು ಬುದ್ಧನಿಗೆ ನಂತರದವೇ.

ಹಾಗಿರುವಾಗ, ಬುದ್ಧನು ಉಪನಿಷತ್ತುಗಳು ಹೇಳಿದ್ದೇ ಹೇಳಿದ್ದಾನೆ, ಹೊಸದೇನನ್ನೂ ಹೇಳಲಿಲ್ಲ ಎನ್ನುವಿಕೆ ಹೇಗಿದೆ ಎಂದರೆ ಗಾಡಿಯನ್ನು ಮುಂದಿಟ್ಟು ಕುದುರೆಯನ್ನು ಹಿಂದೆ ಕಟ್ಟಿ ಎಳೆ ಎಂದೆನ್ನುವಂತೆ ಇದೆ.

"ನನಗೆ ಗುರುವು ಇಲ್ಲ. ನಾನು ಯಾರಿಂದಲೂ ಏನನ್ನೂ ಕಲಿಯಲಿಲ್ಲ. ನನ್ನ ಬೋಧನೆ ಎಲ್ಲಾ ನಾನು ಕಂಡದ್ದೇ. ನನ್ನ ಶ್ರಮದಫಲವೇ"ಎಂದು ಬುದ್ಧನು ಒಂದು ಕಡೆ ಹೇಳುತ್ತಿದ್ದರೆ; ರಾಧಾಕೃಷ್ಣನ್, ವಿವೇಕಾನಂದ, ಕಾಣೆಗಳು ವಕ್ರೀಕರಿಸಿ, ಎದುರು ಹೇಳುವಿಕೆ ಅವರ ಹಿಂದೂ ಪಕ್ಷಪಾತ ಬುದ್ಧಿಗೆ ತಾರ್ಕಾಣವಾಗಿಯೇ ನಿಲ್ಲುತ್ತದೆ.

ಈ ಮಧ್ಯೆ, ರಾಹುಲ್ ಸಾಂಕೃತ್ಯಾಯನ್ ಹಿಂದಿಯಲ್ಲಿ ಬರೆದ 'ಬೌದ್ಧದರ್ಶನ್'ದ ತೆಲುಗು ಅನುವಾದವು ಪರಿಶೀಲನೆಗಾಗಿ ನನ್ನ ಬಳಿಗೆ ಬಂದಿತು. ಅದನ್ನು ಆಸಾಂತ ಓದಿದೆ. ಅದರಲ್ಲಿ ರಾಧಾಕೃಷ್ಣನ್ ಬೌದ್ಧನನ್ನು ವಕ್ರೀಕರಿಸಿದ ವಿಧಾನವನ್ನು ಸಾಂಕೃತ್ಯಾಯನ್ ಕೆತ್ತಿಹಾಕಿದ್ದಾರೆ. ತುಂಬಾ ವ್ಯಂಗ್ಯವಾಗಿ ಕಟುವಾಗಿ ಟೀಕಿಸಿದ್ದಾರೆ. ಅದನ್ನು ಅವರ ಮಾತುಗಳಲ್ಲಿಯೇ ಈ ಕೆಳಗೆ ನೀಡುತ್ತಿರುವೆ.(ಇದರಲ್ಲಿ ಕೊಟ್ಟ ಪುಟಸಂಖ್ಯೆಗಳೆಲ್ಲ, ರಾಧಾಕೃಷ್ಣನ್ ಭಾರತೀಯ ತತ್ತ್ವಶಾಸ್ತ್ರ ಪ್ರಥಮ ಸಂಪುಟದಿಂದ ರಾಹುಲ್ ಕೊಟ್ಟಿರುವಂಥಾದ್ದೇ.) ಬೌದ್ಧದ ಮೇಲೆ ರಾಹುಲ್‌ಗೆ ಇರುವ ಅಧಿಕಾರ ರಾಧಾಕೃಷ್ಣಾದಿಗಳಿಗೆ ಇಲ್ಲ.

1) "ಬುದ್ಧನು ಧ್ಯಾನ ಮಾಡಿದ್ದಾನೆ, ಪ್ರಾರ್ಥನೆಯ ಮಾರ್ಗವನ್ನು ಆರಿಸಿಕೊಂಡಿದ್ದಾನೆ"(ಪುಟ 355) ದೇವರು ಇಲ್ಲವೆಂದಾದಮೇಲೆ ಬುದ್ಧನು ಯಾರನ್ನು ಏನೆಂದು ಪ್ರಾರ್ಥಿಸುತ್ತಾನೆ?

"ನನಗೆ ಗುರುವು ಇಲ್ಲ. ನಾನು ಯಾರಿಂದಲೂ ಏನನ್ನೂ ಕಲಿಯಲಿಲ್ಲ. ನನ್ನ ಬೋಧನೆ ಎಲ್ಲಾ ನಾನು ಕಂಡದ್ದೇ. ನನ್ನ ಶ್ರಮದ ಫಲವೇ"ಎಂದು ಬುದ್ಧನು ಒಂದು ಕಡೆ ಹೇಳುತ್ತಿದ್ದರೆ; ರಾಧಾಕೃಷ್ಣನ್, ವಿವೇಕಾನಂದ, ಕಾಣೆಗಳು ವಕ್ರೀಕರಿಸಿ, ಎದುರು ಹೇಳುವಿಕೆ ಅವರ ಹಿಂದೂ ಪಕ್ಷಪಾತ ಬುದ್ಧಿಗೆ ತಾರ್ಕಾಣವಾಗಿಯೇ ನಿಲ್ಲುತ್ತದೆ.

2) ಆತ್ಮವು ವಿರಾಮವನ್ನು ನೀಡಬಲ್ಲ ಯಾವುದೋ ಸ್ಥಾನವನ್ನು ಬುದ್ಧನು ಆಲೋಚಿಸಲಿಲ್ಲವೇ? (ಪುಟ 279)ಈ ವಿಷಯದಲ್ಲಿ ಬಣ್ಣ ಬಳಿದು ಬಿಲ್ವಕಾಯಿ ಮಾಡಿದ್ದಾರೆ. ಆ ವಿರಾಮ ಸ್ಥಳವನ್ನು ಪರಮ ಸತ್ಯವಾಗಿ ಮಾಡಲಿಕ್ಕೆ ವಿಶ್ವಪ್ರಯತ್ನ ಮಾಡಿದ್ದಾರೆ. 'ನಿರ್ವಾಣ' ಆಭಾವಾತ್ಮಕ. ಆತ್ಮ ಇದೆ ಎನ್ನುವಿಕೆಯೇ ಅವಿದ್ಯೆ. ಇಲ್ಲದ ಆತ್ಮಕ್ಕೆ ವಿಶ್ರಾಂತಿಯೇ?

3) ಆತ್ಮ ವಿಷಯದಲ್ಲಿ ಬುದ್ಧನು ಮೌನವಹಿಸಿದ್ದಾನೆ.(ಪು.385) ಬುದ್ಧನು ಆತ್ಮವನ್ನು ತಿರಸ್ಕರಿಸಲೂ ಇಲ್ಲ, ಅಂಗೀಕರಿಸಲೂ ಇಲ್ಲ. (ಪು.387) ಅಂತರ್ನಿಹಿತವಾದ ಈ ತತ್ವವನ್ನು ತಿಳಿದುಕೊಳ್ಳದೆಯೇ ಜೀವನವನ್ನು ವ್ಯಾಖ್ಯಾನಿಸಲಿಲ್ಲ. ಅದಕ್ಕೇ ಬುದ್ಧನು ಆತ್ಮ ಇಲ್ಲ ಎಂದ ವಾದವನ್ನು ವ್ಯತಿರೇಕಿದ್ದಾನೆ. (ಪು.389) ರಾಧಾಕೃಷ್ಣನ್ ಅವರೇ, ನೀವು ಬುದ್ಧನೊಂದಿಗೇ ಈ ಮಾತುಗಳನ್ನು ಆಡಬೇಕಾಗಿತ್ತು. ನಿಮಗೆ ಮಾಲ್ಯುಂಕಪುತ್ರನಿಗೆ ಸಿಕ್ಕ ಛೀಮಾರಿಯೇ ಸಿಗುತ್ತಿತ್ತು.

4) ಉಪನಿಷತ್ತುಗಳಲ್ಲಿ ಇರುವ ಶ್ರೇಷ್ಠವಾದ ವಿಜ್ಞಾನವಾದವನ್ನು (idealism) ತೆಗೆದುಕೊಂಡು, ಅದನ್ನು ದೈನಂದಿನ ಅಗತ್ಯಕ್ಕೆ ಅನುಗುಣವಾಗಿ ರೂಪಿಸಿದ್ದಾನೆ. ಬುದ್ಧನು ಚಾರಿತ್ರಿಕವಾಗಿ ನೋಡಿದರೆ, ಉಪನಿಷತ್ತುಗಳ ಸಿದ್ಧಾಂತವನ್ನು ಸುಲಭವಾಗಿ ಪ್ರಜೆಗಳಲ್ಲಿ ಪ್ರಚಾರಮಾಡುವುದೇ ಬೌದ್ಧ ದರ್ಶನ.(ಪು.471)

ಏನಯ್ಯಾ ರಾಧಾಕೃಷ್ಣಯ್ಯ! ಎಂತಹ ಬುದ್ಧಿ ಕುಶಲತೆ ನಿಮ್ಮದು. ಬುದ್ಧನ ಸಮಕಾಲೀನರು, ಅಲ್ಲದೆ ಅವರ ಪ್ರಧಾನ ಅನುಯಾಯಿಗಳು. ಶಿಷ್ಯರು ಆದ ನಾಗಸೇನ (ಕ್ರಿ.ಪೂ.150), ನಾಗಾರ್ಜುನ (ಕ್ರಿ.ಶ.150–250), ಅಸಂಗ (375), ವಸುಬಂಧು (400), ದಿಙ್ನಾಗ (425), ಧರ್ಮಕೀರ್ತಿ(600), ಧರ್ಮೋತ್ತರ (750), ಶಾಂತರಕ್ಷಿತ (750), ಜ್ಞಾನಶ್ರೀ (1200), ಶಾಕ್ಯಶ್ರೀಭದ್ರ (1200)– ಇವರೆಲ್ಲ ಯಾರನ್ನು ಏನೆಂದು ತಿಳಿದುಕೊಳ್ಳಲಾರದೇ ಹೋದರೋ ರಾಧಾಕೃಷ್ಣನ್ ಒಂದೇಸಾರಿ ತಿಳಿದುಕೊಂಡು ಬಿಟ್ಟರಲ್ಲಾ! ಘನವಂತ ರಾಧಾಕೃಷ್ಣ ಅವರೇ, ಅನಾತ್ಮವಾದಿಯಾದ ಬುದ್ಧನನ್ನು ಉಪನಿಷತ್ತುಗಳ ಆತ್ಮವಾದ ಪ್ರಬೋಧನನಾಗಿ ರುಜುಗೊಳಿಸಿಬಿಟ್ಟರೆ ನೀವು! 2,500 ವರುಷಗಳಿಂದ ಭಾರತದೇಶ, ಶ್ರೀಲಂಕ, ಬರ್ಮ, ಥಾಯ್‌ಲಾಂಡ್, ಚೈನಾ, ಜಪಾನ್, ಕೊರಿಯಾ, ಮಂಗೋಲಿಯಾ, ಟಿಬೆಟ್ ಮಧ್ಯ ಏಷಿಯಾ, ಆಫ್ಘಾನಿಸ್ಥಾನ್–ಮೊದಲಾದ ಎಷ್ಟೋ ದೇಶಗಳಲ್ಲಿ ವ್ಯಾಪಿಸಿರುವಂಥಾದ್ದು ಬೌದ್ಧ.

ಈ ದೇಶಗಳ ಜನರೆಲ್ಲಾ ಎಷ್ಟು ಭ್ರಮೆಯಲ್ಲಿ ಇದ್ದಾರೋ? ಅವರೆಲ್ಲ ಬುದ್ಧನನ್ನು ಪಾಪ, ನಿರೀಶ್ವರವಾದಿ, ಅನಾತ್ಮವಾದಿ ಎಂದೇ ಅಂದುಕೊಂಡಿದ್ದಾರೆ, ಅಂದುಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಬಾದರಾಯಣ ವಾತ್ಸ್ಯಾಯನ, ಉದ್ಯೋತ ಕರ, ಕುಮಾರಿಲ, ವಾಚಸ್ಪತಿ, ಉದಯನ– ಈ ಬ್ರಾಹ್ಮಣ ಪಂಡಿತರೆಲ್ಲಾ ಅದನ್ನೇ (ಅನಾತ್ಮವಾದಿ ಎಂದೇ) ಅಂದು ಕೊಂಡಿದ್ದಾರೆ. ಹಾಗಾದರೆ ಇವರೆಲ್ಲ ಎಂತಹ ಅವಿದ್ಯಾಪರರು! ಒಬ್ಬ ರಾಧಾಕೃಷ್ಣ ಅವರೇ ಬುದ್ಧನನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ– ಮತ್ತಾರಿಗೂ ಅರ್ಥವಾಗಲಿಲ್ಲ.

References:

1. The Satapancaska of Mariceta Ed.by Dr.Shakleton-Bairely Cambridge 1951, P. 152.
2. S. Radhakrishnan, Eastern Religions and western Thought
3. Buddha Jayanthi Souvenir P. 35
4. Complete works, VII, P. 41
5. Ibid, VIII, P. 272
6. Complete works, III, P.528
7. Tattva Sangraha, Verse 3587 Pub : Dwarakadasa Sastri, Varanasi 1958, P. 1115
8. Complete works, 111, P. 524
9. Jawaharalal Nehru, The Discovery & India, London, 1951, P. 121
10. Buddha Jayanti Souvenir ed. by SL Sharma and P.L. Bhaula, New Delhi, 1956, P. 21
11. 2500 Years of Buddhism Ed. by P.V. Bapati. New Delhi 1956, Foreword P. IX.
12. Ibid, XII-XIV
13. History of Dharmasastra, V. Part2, PP 1004-5
14. Vol. 1.21
15. Radhakrishnan, Indian Philosophy, Oxford University Press, Delhi 1991 Vol. 1, P.361
16. A.B. Keith, Religion and Philosophy of the Veda and Upanisads, Cambridge, 1925, P. 498-02.
17. O.H. de, A. Wijesekhara, A. Pali Reference to Brahmanacaranas, in the Adeyar Literary Bulletin, XX, 1956, PP 2548
18. R.E. Hume, Thirteen Principal Upanishads, PP. 6-7
19. Sankhayana (kasistaki) Aranyaka, P. 15
20. Digha Nikaya, 1, Ambatta Sutta, Lohitta Sutta.

(ಸೌಜನ್ಯ: ಮಸ್ತಕ ಮನೆ) □

ಪ್ರಜಾಪ್ರಭುತ್ವ V/S ರಾಜಪ್ರಭುತ್ವ : ಕರ್ನಾಟಕ ಎತ್ತ ಸಾಗುತ್ತಿದೆ?

ಮುಖ್ಯಮಂತ್ರಿಗಳು ದಿನ ಬೆಳಗಾದರೆ ಒಂದಲ್ಲ ಒಂದು ಗುಡಿಯಲ್ಲಿ ಹಾಜರಾಗಿ ರೇಷ್ಮೆ ಶಾಲನ್ನು ಹೊದ್ದುಕೊಂಡು, ದಪ್ಪವಾದ ಮತ್ತು ಅಗಲವಾದ ಕುಂಕುಮದ ಬೊಟ್ಟನ್ನು ಹಣೆಯ ಮೇಲೆ ಪಟ್ಟಾಗಿ ಧರಿಸಿಕೊಂಡು ವೈದಿಕೊತ್ತಮರ ಹಿಂದಿನ ಮಧ್ಯೆ ವೇದಘೋಷದ ಅಭ್ಬರದಲ್ಲಿ ಬಲಿಪಶುವಿನಂತೆ ಒಂದಾದ ಮೇಲೆ ಒಂದರಂತೆ ಹರಕೆ ಸಲ್ಲಿಸುತ್ತಿದ್ದಾರೆ. ನದಿಗಳಲ್ಲಿ ಮಿಂದು ಪಾಪ ಕಳೆದು ಕೊಳ್ಳುತ್ತಿದ್ದಾರೆ. ಸ್ವಂತ ಮನೆಯಾಗಿರಲಿ, ತಮ್ಮ ಕಚೇರಿಗಳಿರಲ್ಲಿ ಸಾರ್ವಜನಿಕ-ಖಾಸಗಿ ಎಂಬ ಭಿನ್ನತೆಯನ್ನು ಗಮನಿಸದೆ ಮಂತ್ರಿ-ಮಹೋದಯರು, ರಾಜಕಾರಣಿಗಳು ತಮ್ಮ ಕಚೇರಿಗಳಲ್ಲೇ ಹೋಮ-ಹವನ, ಮಾಟ-ಮಂತ್ರ -ಯಜ್ಞ-ಯಾಗ, ಅನ್ನ ಸಂತರ್ಪಣೆ, ಮಹಾ ಚಂಡಿ ಪೂಜೆ ಮುಂತಾದ ಪಾರಮಾರ್ಥಿಕ ಆಚರಣೆಯಲ್ಲಿ ತೊಡಗಿರುವುದನ್ನು ಕಾಣಬಹುದು.



ಡಾ. ಟಿ.ಆರ್. ಚಂದ್ರಶೇಖರ್

ಪ್ರಸ್ತಾವನೆ

ಇಂದು ಕರ್ನಾಟಕದಲ್ಲಿ ಪ್ರಜಾಪ್ರಭುತ್ವವು ತೀವ್ರ ಆಕ್ರಮಣಕ್ಕೆ, ಒಂದು ಬಗೆಯಲ್ಲಿ ಶಿಥಿಲೀಕರಣಕ್ಕೆ ಒಳಗಾಗಿರುವುದನ್ನು ನೋಡಬಹುದಾಗಿದೆ. ಕರ್ನಾಟಕವು ನೈತಿಕತೆಯ ದೃಷ್ಟಿಯಿಂದ ಭ್ರಷ್ಟಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಇದು ನಿರಾಶೆಯಿಂದ ಅಥವಾ ಅಸಹಾಯಕತೆಯಿಂದ(ಭ್ರಮೆಯಿಂದ) ಹೇಳುತ್ತಿರುವ ಮಾತಲ್ಲ. ಅತ್ಯಂತ ಜವಾಬುದಾರಿಯಿಂದ ಮತ್ತು ಸೈದ್ಧಾಂತಿಕವಾಗಿ ಯೋಚಿಸಿ ಹೇಳುತ್ತಿರುವ ಮಾತುಗಳಾಗಿವೆ. ಮೊದಲನೆಯದಾಗಿ ಇಂದು ಸರ್ಕಾರಗಳು ಪಾರಮಾರ್ಥಿಕ ರಾಜಕಾರಣದ ಪರಿಭಾಷೆಯನ್ನು ಪೋಷಿಸುತ್ತಿವೆ. ಮನುಷ್ಯ ಪ್ರಯತ್ನದಲ್ಲಿನ ನಂಬಿಕೆಗೆ ಪ್ರತಿಯಾಗಿ ವಿಧಿಯಲ್ಲಿ ಜನರು ನಂಬಿಕೆಯಿಡುವ ಪ್ರಣಾಳಿಕೆಯನ್ನು ಪ್ರಚುರ ಪಡಿಸಲಾಗುತ್ತಿದೆ. ಮುಖ್ಯಮಂತ್ರಿಯವರನ್ನು ಸೇರಿಸಿಕೊಂಡು ಮಂತ್ರಿಗಳು, ಅಧಿಕಾರಿಗಳು, ಶಾಸಕರು, ಜನಪ್ರತಿನಿಧಿಗಳು ಎಲ್ಲರೂ ಗುಡಿ-ಗುಂಡಾರಗಳಿಗೆ-ದೇವರು-ದಿಂಡರಿಗೆ-ನದಿಗಳಿಗೆ-ಹಳ್ಳ-ಕೊಳ್ಳಗಳಿಗೆ-ಬೆಟ್ಟ ಗುಡ್ಡಗಳಿಗೆ ಹರಕೆ ಸಲ್ಲಿಸುವ ಕೆಲಸ ಮಾಡುತ್ತಿದ್ದಾರೆ. ಒಬ್ಬರು ರೂ 45 ಕೋಟಿ ಬೆಲೆಯ ವಜ್ರ-ವೈಡೂರ್ಯಗಳನ್ನು ದೇವರಿಗೆ ದಾನ ನೀಡಿದರೆ ಮತ್ತೊಬ್ಬರು ವರ್ಷ ವರ್ಷವೂ ದೇವಾಲಯಗಳಿಗೆ ಆನೆಗಳನ್ನು ದಾನ ನೀಡುತ್ತಿದ್ದಾರೆ. ಬೆಳ್ಳಿರಥಗಳಂತೂ ಲೆಕ್ಕವಿಲ್ಲದಷ್ಟು ಕಾಣಿಕೆಯಾಗಿ ದೇವರುಗಳಿಗೆ ಸಲ್ಲುತ್ತಿವೆ.

ಮುಜರಾಯಿ ಇಲಾಖೆಯ ಮಂತ್ರಿಯೊಬ್ಬರು ಅವರು ಅಧಿಕಾರದಲ್ಲಿದ್ದಾಗ ಕರ್ನಾಟಕದಲ್ಲಿ ಶಿವರಾತ್ರಿಹಬ್ಬದ ಸಂದರ್ಭದಲ್ಲಿ ಗಂಗಾಜಲವನ್ನೇ ಹರಿಸಿ ಬಿಟ್ಟರು. ಅವರು ವೈಕುಂಠ ಏಕಾದಶಿಯಂದು ದೇವಾಲಯಗಳಲ್ಲಿ ಲಾಡು ಹಂಚುವ ಕಾರ್ಯವನ್ನು ಮಾಡಿದರು. ಆದರೆ, ಪಾಪ ಅವರಿಗೆ ಮಂತ್ರಿಯಾಗಿ ಮುಂದುವರಿಯುವ ಅದೃಷ್ಟವಿರಲಿಲ್ಲ ಅಥವಾ ದೇವರ ಕರುಣೆ ಇರಲಿಲ್ಲ. ಮುಖ್ಯಮಂತ್ರಿಗಳು ದಿನ ಬೆಳಗಾದರೆ ಒಂದಲ್ಲ ಒಂದು ಗುಡಿಯಲ್ಲಿ ಹಾಜರಾಗಿ ರೇಷ್ಮೆ ಶಾಲನ್ನು ಹೊದ್ದುಕೊಂಡು, ದಪ್ಪವಾದ ಮತ್ತು ಅಗಲವಾದ ಕುಂಕುಮದ ಬೊಟ್ಟನ್ನು ಹಣೆಯ ಮೇಲೆ ಪಟ್ಟಾಗಿ ಧರಿಸಿಕೊಂಡು ವೈದಿಕೊತ್ತಮರ ಹಿಂಡಿನ ಮಧ್ಯೆ ವೇದಘೋಷದ ಅಭ್ಬರದಲ್ಲಿ ಬಲಿಪಶುವಿನಂತೆ ಒಂದಾದ ಮೇಲೆ ಒಂದರಂತೆ ಹರಕೆ ಸಲ್ಲಿಸುತ್ತಿದ್ದಾರೆ. ನದಿಗಳಲ್ಲಿ ಮಿಂದು ಪಾಪ ಕಳೆದು ಕೊಳ್ಳುತ್ತಿದ್ದಾರೆ. ಸ್ವಂತ ಮನೆಯಾಗಿರಲಿ, ತಮ್ಮ ಕಚೇರಿಗಳಿರಲ್ಲಿ ಸಾರ್ವಜನಿಕ-ಖಾಸಗಿ ಎಂಬ ಭಿನ್ನತೆಯನ್ನು ಗಮನಿಸದೆ ಮಂತ್ರಿ-ಮಹೋದಯರು, ರಾಜಕಾರಣಿಗಳು ತಮ್ಮ ಕಚೇರಿಗಳಲ್ಲೇ ಹೋಮ-ಹವನ, ಮಾಟ-ಮಂತ್ರ ಮತ್ತು ಯಜ್ಞ-ಯಾಗ, ಅನ್ನ ಸಂತರ್ಪಣೆ, ವಸ್ತ್ರ ದಾನ, ಮಹಾ ಚಂಡಿ ಪೂಜೆ ಮುಂತಾದ ಪಾರಮಾರ್ಥಿಕ ಆಚರಣೆಯಲ್ಲಿ ತೊಡಗಿರುವುದನ್ನು ಕಾಣಬಹುದು.

ಪದಾರ್ಥವಾದಿ ಪ್ರಣಾಳಿಕೆಯಿಂದ ಪಾರಮಾರ್ಥಿಕ ಪ್ರಣಾಳಿಕೆ ಕಡೆಗೆ ಕರ್ನಾಟಕವು ಸಾಗುತ್ತಿರುವುದನ್ನು ಇವೆಲ್ಲವೂ ದೃಢಪಡಿಸುತ್ತವೆ. ಇಂತಹ ಆಚರಣೆಗಳನ್ನು ನೋಡಿಯೇ ಬಸವಣ್ಣ ಹೀಗೆ ಹೇಳಿರಬೇಕು.

ನೀರ ಕಂಡಲ್ಲಿ ಮುಳುಗವರಯ್ಯಾ,
ಮರನ ಕಂಡಲ್ಲಿ ಸುತ್ತುವರಯ್ಯಾ,
ಬತ್ತುವ ಜಲವ, ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲಸಂಗಮದೇವ.

ಇಟ್ಟಿಯ ಹಣ್ಣ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತದೇಕೆ?
ಹಗಲುಗಾಣದ ಗೂಗೆ ಇರುಳಾಯಿತ್ತೆಂದಡೆ,
ಜಗಕ್ಕೆ ಇರುಳಪ್ಪುದೆ ಮರುಳೆ?
ಹೋಮದ ನೆವದಲ್ಲಿ ಹೋತನ ಕೊಂದು ತಿಂಬ
ಅನಾಮಿಕರನೊಡಗೂಡಿ ಗೆಲುವುದೇನು?
ಕೂಡಲಸಂಗಮದೇವ.

ಇಲ್ಲಿನ ಸಮಸ್ಯೆಯೆಂದರೆ ಇಂದು ನಮ್ಮ ನಾಯಕರು ಬಸವಣ್ಣನ ಹೆಸರನ್ನು ಹೇಳುವುದಕ್ಕೆ ಹಿಂಜರಿಯುತ್ತಿದ್ದಾರೆ. ವಚನ ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ಇಂದು ಸರ್ಕಾರ ಮತ್ತು ಅದಕ್ಕೆ ಮಾರ್ಗದರ್ಶನ ನೀಡುತ್ತಿರುವ ರಾಜರ್ಷಿಗಳು ಮೂಲೆ ಗುಂಪು ಮಾಡಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿ ಅಪ್ಪಿ ತಪ್ಪಿಯೂ ಬಸವಣ್ಣನನ್ನಾಗಲಿ ಅಥವಾ ಇನ್ನಾವುದೇ ವಚನಕಾರರನ್ನಾಗಲಿ ನೆನಪಿಸಿಕೊಳ್ಳುವುದಿಲ್ಲ. ವಚನಗಳ ಉಲ್ಲೇಖವಂತೂ ಇಂದು ಕರ್ನಾಟಕದಲ್ಲಿ ನಿಷಿದ್ಧವೆನ್ನುವಂತಹ ವಾತಾವರಣವಿದೆ. ಆದರೆ ಸಂಸ್ಕೃತದ ಶ್ಲೋಕಗಳ ಪಠಣಕ್ಕೆ ಇಲ್ಲಿ ಯಾವುದೇ ಅಡ್ಡಿ-ಆತಂಕಗಳಿಲ್ಲ. ವಚನ ಸಂಸ್ಕೃತಿಯನ್ನು ಇವರು ತಮ್ಮ ಪಾರಮಾರ್ಥಿಕ ಪ್ರಣಾಳಿಕೆಗೆ ವಿರೋಧಿಯೆಂದೇ ಪರಿಗಣಿಸಿದ್ದಾರೆ.

ಎರಡನೆಯದಾಗಿ ರಾಜ್ಯದ ಮಂತ್ರಿಮಂಡಳದ ಮಂತ್ರಿಮಹೋದಯರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂಬುದನ್ನೇ ಮರೆತು ಏಕಾಧಿಪತ್ಯ ವ್ಯವಸ್ಥೆಯಲ್ಲಿರುವವರಂತೆ ಮಾತನಾಡುತ್ತಿದ್ದಾರೆ. ರಾಜ್ಯದ ಜವಾಬುದಾರಿ ಸ್ಥಾನದಲ್ಲಿದ್ದುಕೊಂಡು ನಮ್ಮ ಗೃಹ ಸಚಿವರು ಹೇಳುತ್ತಾರೆ 'ರಾಜ್ಯದಲ್ಲಿ 1.20 ಕೋಟಿ ಮನೆಗಳಿದ್ದಾವೆ. ಹಾಗೆಯೇ 43 ಸಾವಿರ ದೇವಾಲಯಗಳಿದ್ದಾವೆ, ಮೂರು ಸಾವಿರಕ್ಕೂ ಹೆಚ್ಚು ಚರ್ಚುಗಳಿವೆ. ಸಾಕಷ್ಟು ಸಂಖ್ಯೆಯಲ್ಲಿ ಮಸೀದಿಗಳಿವೆ. ಇವೆಲ್ಲಕ್ಕೂ ಭದ್ರತೆ ಒದಗಿಸುವುದು ಹೇಗೆ ಸಾಧ್ಯ?' ಎಂದು ತಮ್ಮ ಹೊಣೆಗಾರಿಕೆ ಏನೆಂಬುದನ್ನೇ ಮರೆತವರಂತೆ ಮಾತನಾಡುತ್ತಿದ್ದಾರೆ(ಪ್ರಜಾವಾಣಿ : 28-01-10). ಅವರು ದೇವಾಲಯಗಳು, ಚರ್ಚುಗಳು ಮತ್ತು ಮಸೀದಿಗಳ ಜೊತೆಯಲ್ಲಿ 'ಜನರನ್ನು ಪ್ರತಿನಿಧಿಸುವ ಮನೆಗಳನ್ನು' ಸೇರಿಸಿಕೊಂಡು ಮಾತಾಡಿದ್ದಾರೆ. ಇದು ತುಂಬಾ ಗಂಭೀರವಾದ ಸಂಗತಿಯಾಗಿದೆ. ಇದನ್ನು ಎಲ್ಲಿಗೆ ಕೊಂಡೊಯ್ಯಬಹುದೆಂಬುದನ್ನು ನಾವು ಯೋಚಿಸಬೇಕಾಗಿದೆ. ಹೊಸದಾಗಿ ಮಂತ್ರಿಯಾಗಿರುವ ಶ್ರೀಜಗದೀಶ್ ಶೆಟ್ಟರ್ ತಾವು

ನಂಬಿರುವ ಪ್ರಣಾಳಿಕೆಗೆ ಸರಿಯಾಗಿ ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗ್ರಾ.ಪಂ.ಯೊಂದರ ಸದಸ್ಯರೆಲ್ಲರೂ ಅವಿರೋಧವಾಗಿ ಆಯ್ಕೆಯಾದರೆ ಅಂತಹ ಗ್ರಾ. ಪಂ.ಗೆ ರೂ 15 ಲಕ್ಷ ಅನುದಾನ ನೀಡುವುದಾಗಿ ಮುಕ್ತವಾಗಿ ಘೋಷಿಸಿದ್ದಾರೆ(ಪ್ರಜಾವಾಣಿ : 24-01-10). ಇದು ಇವರು ಪ್ರಜಾಪ್ರಭುತ್ವವನ್ನು ಪೋಷಿಸುವ ಪರಿ!

ಇತ್ತೀಚೆಗೆ ಚರ್ಚುಗಳ ಮೇಲಿನ ದಾಳಿಯ ಹಿನ್ನೆಲೆಯಲ್ಲಿ 'ಕುಣಿಯಲಿಕ್ಕೆ – ನೆಲ ಡೊಂಕು ಅಂದರಂತೆ' ಎಂಬ ನೃತ್ಯ ಮಾಡುವವರೊಬ್ಬರ ಮಾತುಗಳಂತೆ ನಮ್ಮ ಮುಖ್ಯಮಂತ್ರಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾವಿದ್ದೇವೆ ಎಂಬುದನ್ನು ಮರೆತು, ಕಾನೂನು-ರಕ್ಷಣೆಯ ಸಂವಿಧಾನಿಕ ಜವಾಬುದಾರಿಯ ನಿರ್ವಹಿಣೆಯನ್ನು ದಿಕ್ಕರಿಸಿ 'ದಾಳಿಕೋರರ ಕೈಗಳನ್ನು ಕತ್ತರಿಸಿ' ಎಂದು ಜನರಿಗೆ ಕರೆ ಕೊಟ್ಟಿದ್ದಾರೆ(ಪ್ರಜಾವಾಣಿ : 28-01-10). ನಾವು ಸೂಕ್ಷ್ಮವಾಗಿ ನಮ್ಮ ಮುಖ್ಯಮಂತ್ರಿ ಮತ್ತು ಗೃಹಮಂತ್ರಿ ಇಬ್ಬರ ಮಾತುಗಳನ್ನು ಪ್ರತಿಪದಾರ್ಥ ವಿಧಾನದಲ್ಲಿ ಅರ್ಥಮಾಡಿಕೊಂಡರೆ 'ದಾಳಿಕೋರರ ಕೈ ಕತ್ತರಿಸಿ' ಎಂಬ ಮತ್ತು 'ಎಲ್ಲರಿಗೂ, ಎಲ್ಲ ದೇವಾಲಯಗಳಿಗೂ, ಎಲ್ಲ ಮಸೀದಿಗಳಿಗೂ, ಎಲ್ಲ ಚರ್ಚುಗಳಿಗೂ ಭದ್ರತೆ ಕೊಡುವುದು ಸಾಧ್ಯವಿಲ್ಲ' ಎಂಬ ಮಾತುಗಳ ನಡುವೆ ಸಂಬಂಧ ಇರುವುದನ್ನು ತಿಳಿದುಕೊಳ್ಳುವುದು ಕಷ್ಟವಾಗಬಾರದು. ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಯಿಂದ ಕೆಲವರನ್ನು (ಉಳ್ಳವರನ್ನು)ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಗೆ ಪಲ್ಲಟವು ಕರ್ನಾಟಕದಲ್ಲಿ ನಡೆಯುತ್ತಿದೆ ಎಂಬುದರ ಸೂಚನೆ ಇದಾಗಿದೆ.

ಮೂರನೆಯದಾಗಿ ಅರ್ಥಶಾಸ್ತ್ರದ ವಿದ್ಯಾರ್ಥಿಗಳಾದ ನಾವು ಪ್ರಜಾಪ್ರಭುತ್ವದಲ್ಲಿ ಕೈಗಾರಿಕೆಗಳ, ಬ್ಯಾಂಕುಗಳ, ಕಂಪನಿಗಳ ಖಾಸಗೀಕರಣವನ್ನು ಕೇಳಿದ್ದೆವು. ಆದರೆ ಈಗ ನಾವು ಹಿಂದೆಂದೂ ಕೇಳರಿಯದ ದೇವಾಲಯಗಳ ಖಾಸಗೀಕರಣಕ್ಕೆ ಸರ್ಕಾರವು ಮುಂದಾಗಿದೆ. ಈಗಾಗಲೆ ಗೋಕರ್ಣದ ಮಹಾಬಲೇಶ್ವರ ದೇವಳವನ್ನು ಮುಜರಾಯಿ ಇಲಾಖೆಯಿಂದ ಹೊಸನಗರದ ಖಾಸಗಿ ಸಂಸ್ಥೆಯಾದ ರಾಮಚಂದ್ರಾಪುರ ಮಠಕ್ಕೆ ಪರಭಾರೆ ಮಾಡಲಾಗಿದೆ. ಅದನ್ನೇ ಮುಂದುವರಿಸುತ್ತಿರುವ ಸರ್ಕಾರವು ಈಗ ಮುಜರಾಯಿ ಇಲಾಖೆಯ ನಿರ್ವಹಣೆಯಲ್ಲಿರುವ ಉಡುಪಿಯಲ್ಲಿರುವ ಅಂಬಾಲಪಾಡಿ ಮಹಾಕಾಳಿ ಮತ್ತು ಜನಾರ್ದನ ದೇವಾಲಯಗಳನ್ನು ಖಾಸಗಿ ಶಿವಳ್ಳಿ ಬ್ರಾಹ್ಮಣ ಕುಟುಂಬವೊಂದಕ್ಕೆ ವಹಿಸಿಕೊಡುವ ಸನ್ನಾಹ ಮಾಡುತ್ತಿದೆ (ಪ್ರಜಾವಾಣಿ: 21-01-10).

ನಾಲ್ಕನೆಯದಾಗಿ ಸರ್ಕಾರಿ ಶಾಲೆಗಳಲ್ಲಿ ಬಲವಂತವಾಗಿ ತಮ್ಮ ಅಧಿಕಾರವನ್ನು ಬಳಸಿಕೊಂಡು ಯಾವುದೋ ಒಂದು ಕೋಮಿನ ಒಂದು ಉಪಪಂಗಡದ ಧರ್ಮಗ್ರಂಥವೊಂದರ ಪಾರಾಯಣದ ಸಪ್ತಾಹವನ್ನು ನಡೆಸಲು ಸರ್ಕಾರವು ಖಾಸಗಿ ಸಂಸ್ಥೆಗಳಿಗೆ ಮತ್ತು ಮಠಗಳಿಗೆ ಅವಕಾಶ ನೀಡುತ್ತಿದೆ. ಬಲವಂತವಾಗಿ ಶಾಲಾ-ಕಾಲೇಜುಗಳಲ್ಲಿ ಇಂತಿಥವರನ್ನು ಕುರಿತಂತೆ ಕಾರ್ಯಕ್ರಮಗಳನ್ನು ಮಾಡುವಂತೆ ಒತ್ತಡ ತರಲಾಗುತ್ತಿದೆ. ಹಕ್ಕಿನ ಸೂತ್ರದಡಿಯಲ್ಲಿ ಮಕ್ಕಳು ಪಡೆಯುತ್ತಿದ್ದ ಮಧ್ಯಾಹ್ನದ ಬಿಸಿಯೂಟವನ್ನು ನೀಡುವ ಜವಾಬುದಾರಿಯನ್ನು ಖಾಸಗಿ ಸಂಸ್ಥೆಗಳಿಗೆ ನೀಡಿ ಅದನ್ನು ಹಂಗಿನ ಸಂಗತಿಯನ್ನಾಗಿ ಮಾಡುತ್ತಿದೆ. ಹಕ್ಕಿನ ಸಂಸ್ಕೃತಿಯಿಂದ ಹಂಗಿನ ಸಂಸ್ಕೃತಿಯ ಕಡೆಗೆ ಕರ್ನಾಟಕವು ನಡೆಯುತ್ತಿದೆ.

ಐದನೆಯದಾಗಿ ಗತಕಾಲದಲ್ಲಿ ನಮ್ಮ ಹಿರಿಯರು ಕಟ್ಟಿ ಬೆಳೆಸಿದ ಸಂಸ್ಕೃತಿ, ಸಾಹಿತ್ಯ, ಕಲೆ, ನೃತ್ಯ, ಜಾನಪದ ಮುಂತಾದವುಗಳನ್ನು ಕುರಿತಂತೆ 'ಜನರ ಉತ್ಸವ'ಗಳನ್ನು ಏರ್ಪಡಿಸುತ್ತಿದ್ದ ಕ್ರಮವನ್ನು ಮೂಲೆಗೆ ಬಿಸಾಕಿ ಈಗ ತಮಗೆ ಬೇಕಾದ ರಾಜಪ್ರಭುತ್ವವೊಂದನ್ನು ಆಯ್ಕೆ ಮಾಡಿಕೊಂಡು ಅಸಹ್ಯಕರವಾಗಿ ಆ ಪ್ರಭುತ್ವಕ್ಕೆ ಸೇರಿದ ರಾಜನೊಬ್ಬನನ್ನು ವೈಭವೀಕರಿಸುತ್ತಿರುವ ಕ್ರಮದ ಹಿಂದೆ ಘೋರ ರಾಜಕಾರಣವಿರುವುದನ್ನು ಕರ್ನಾಟಕಸ್ಥರು ಅರ್ಥ ಮಾಡಿಕೊಳ್ಳುವುದಕ್ಕೆ ತಿಣುಕಾಡ ಬೇಕಾದ ಅವಶ್ಯಕತೆಯಿಲ್ಲ. ಜನರ ಉತ್ಸವ – ಜನರ ಸಂಸ್ಕೃತಿಗೆ ಪ್ರತಿಯಾಗಿ ಇಂದು ಪ್ರಭುತ್ವದ ಆರಾಧನೆಯ ಸಂಸ್ಕೃತಿಯು ಕರ್ನಾಟಕದಲ್ಲಿ ವಿಜೃಂಭಿಸುತ್ತಿದೆ.

ಆರನೆಯದಾಗಿ ಕನ್ನಡದ ಗರುಡರೆಂದು ತಮ್ಮನ್ನು ತಾವು ಕರೆದುಕೊಳ್ಳುತ್ತಿರುವ ಕರ್ನಾಟಕದ ಖ್ಯಾತ ಚಿಂತಕರೊಬ್ಬರು ರಾಜ್ಯದ ಪ್ರಾಕೃತಿಕ ಸಂಪನ್ಮೂಲವೆಲ್ಲವು ಸರ್ಕಾರದ ನೇತೃತ್ವದಲ್ಲಿ ಲೂಟಿಗೆ ಒಳಗಾಗುತ್ತಿದ್ದರೂ, ಯಾವುದೇ ಅಡೆತಡೆಯಿಲ್ಲದೆ ನಾಡಿನ ಗಡಿಯು ಪರಭಾರೆಗೆ ಒಳಗಾಗುತ್ತಿದ್ದರೂ, ಲಾಭ ಮಾಡಿಕೊಳ್ಳುವ ಒಂದೇ ಒಂದು ಉದ್ದೇಶದಿಂದ ತೆಲುಗು ಪಕ್ಷಪಾತವು ಮೇರೆ ಮೀರಿ ಬಳ್ಳಾರಿ ಜಿಲ್ಲೆಯಲ್ಲಿ ಬೆಳೆಯುತ್ತಿದ್ದರೂ ಯಾವುದೋ ಅನಿವಾರ್ಯತೆಗೆ ಒಳಗಾದವರಂತೆ ಮೌನ ವಹಿಸಿದ್ದಾರೆ. ಅವರು ಇಂದು ದೇವಾಲಯಗಳ ಬಳಿ ಚಪ್ಪಲಿಗಳನ್ನು ಹೇಗಿಡಬೇಕು ಎಂಬುದರ ಬಗ್ಗೆ ಸಂಶೋಧನೆಯಲ್ಲಿ ತೊಡಗಿರುವಂತೆ ಕಾಣುತ್ತದೆ. ಈ ಬಗ್ಗೆ ಅವರ ಸ್ನೇಹಿತರೊಬ್ಬರು 'ಯಾಕೆ ತಾವು ಹೀಗೆ ಕನ್ನಡ-ಕನ್ನಡಿಗ-ಕರ್ನಾಟಕದ ಪ್ರಶ್ನೆಗಳಿಗೆ ಸಂಬಂಧಿಸಿದ ವಿಷಯದಲ್ಲಿ ಸುಮ್ಮನಿದ್ದೀರಿ' ಎಂದು ಕೇಳಿದರೆ 'ಇಲ್ಲ, ಕೆಲವು ವಿಷಯದಲ್ಲಿ, ಕೆಲವು ಸಂದರ್ಭಗಳಲ್ಲಿ ಅನಿವಾರ್ಯತೆಯಿರುತ್ತದೆ, ಮಾತನಾಡುವುದು ಸಾಧ್ಯವಾಗುವುದಿಲ್ಲ' ಎಂದು ಹೇಳಿರುವುದು ತಿಳಿದು ಬಂದಿದೆ. ಇದು ನಿಜವಿರಬಹುದು ಅಥವಾ ಸುಳ್ಳಿರಬಹುದು. ಆದರೆ ಅವರು ಈ ವಿಷಯದಲ್ಲಿ ಮೌನದಿಂದಿರುವುದು ರಹಸ್ಯವಾಗೇನಿಲ್ಲ. ಸತ್ಯವನ್ನೇ ಆರಾಧಿಸುತ್ತೇನೆಂದು ಸದಾ ಕಾಲ ಘೋಷಿಸಿಕೊಳ್ಳುವ ಇವರು ಇಲ್ಲಿ ಸತ್ಯವನ್ನು ನುಡಿಯುತ್ತಿಲ್ಲ.

ಪಾರಮಾರ್ಥಿಕ ರಾಜಕಾರಣದ ಪರಿಭಾಷೆ

ಇಂದು ರಾಜ್ಯದಲ್ಲಿ ಹಕ್ಕಿನ ಸಂಸ್ಕೃತಿಗೆ ಪ್ರತಿಯಾಗಿ ಹಂಗಿನ ಸಂಸ್ಕೃತಿಯನ್ನು ಸರ್ಕಾರವು ಅಪ್ರತ್ಯಕ್ಷವಾಗಿ ಪೋಷಿಸುತ್ತಿದೆ. ದತ್ತಿ-ದಾನ-ಅನ್ನಸಂತರ್ಪಣೆ-ಕಾಣಿಕೆಗಳ ಅಲೆ ಕರ್ನಾಟಕದಲ್ಲಿ ಬೀಸುತ್ತಿದೆ. ಉಳಿವಿ ದೇವಸ್ಥಾನಕ್ಕೆ ಮುಖ್ಯಮಂತ್ರಿಗಳು ಹೋದರೆ 'ಮುಂದಿನ ಬಜೆಟ್ಟಿನಲ್ಲಿ ಎರಡು ಕೋಟಿ ಅನುದಾನ ಬಿಡುಗಡೆ ಮಾಡುತ್ತೇವೆ' ಎಂದು ಹೇಳುತ್ತಾರೆ. ಪ್ರಸಿದ್ಧ ನದಿ ತೀರಿದಲ್ಲಿ ನಡೆಯುವ ಕುಂಬಮೇಳಕ್ಕೆ ಹೋದಾಗ ಅವರು ಅಲ್ಲಿ ಹತ್ತು ಕೋಟಿ ಅನುದಾನ ನೀಡುವುದಾಗಿ ಭರವಸೆ ನೀಡುತ್ತಾರೆ. ತಾವೂ ನದಿಯಲ್ಲಿ ಮುಳುಗು ಹಾಕುತ್ತಾರೆ. ಇಂದು ಮಠಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ ಮತ್ತು ಸಮಾಜಸೇವಾ ಘಟಕಗಳಿಗೆ ಸುವರ್ಣ ಕಾಲ. ಬಜೆಟ್ಟಿನಲ್ಲಿ ಸರ್ಕಾರವು ಕೋಟಿ-ಕೋಟಿಗಟ್ಟಲೆ ಹಣವನ್ನು ಅವುಗಳಿಗೆ ನೀಡುತ್ತಿದೆ. ಮಠಗಳಿಂದಾಗಿ, ಮಠಾಧೀಶರಿಂದಾಗಿ, ಹೋಮ-ಹವನ, ಯಜ್ಞ-ಯಾಗಗಳ ಆಚರಣೆಯಿಂದಾಗಿ ಇಂದು ನಾಡಿನಲ್ಲಿ ಮಳೆ-ಬೆಳೆ ಆಗುತ್ತಿದೆ ಎಂದು ಸರ್ಕಾರ ಯಾವ ಸಂಕೋಚವು ಇಲ್ಲದೆ ಘೋಷಿಸುತ್ತಿದೆ. ಇಂದು ನಮ್ಮ ರಾಜಕಾರಣವು ಪಾರಮಾರ್ಥಿಕತೆಯನ್ನು ತಬ್ಬಿಕೊಳ್ಳುತ್ತಿರುವ ಪರಿ ಇದಾಗಿದೆ.

ಈ ವರ್ಷದ ಜನವರಿ 27 ರಿಂದ 29ರವರೆಗೆ ಹಂಪಿಯಲ್ಲಿ ನಡೆದ ಸುಮಾರು ಇಪ್ಪತ್ತು ಕೋಟಿ ರೂಪಾಯಿ ವೆಚ್ಚದ ಶ್ರೀಕೃಷ್ಣದೇವರಾಯನ ಐನೂರನೆಯ ಪಟ್ಟಾಭಿಷೇಕ ಮಹೋತ್ಸವವನ್ನು 'ಸಂಘ-ಪರಿವಾರದ ಹಿರಿಯರ ಸಲಹೆಯಂತೆ ಆಯೋಜಿಸಿದ್ದೇವೆ' ಎಂದು ಹೇಳುತ್ತಾ ನಮ್ಮ ನಾಡಿನ ಮುಖ್ಯಮಂತ್ರಿ 'ಧರ್ಮ ರಕ್ಷಣೆಗೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿದ್ದರೂ ಧಾರ್ಮಿಕ ಸಾಮರಸ್ಯ ಸ್ಥಾಪನೆಯ ಮೂಲಕ ಜಗತ್ತಿಗೆ ಇದು ಮಾದರಿಯಾಗಿತ್ತು' ಎಂದು ರಾಜಧರ್ಮದ ಮಾತನ್ನು ಆಡಿದ್ದಾರೆ

ರಾಜ್ಯದ ಮಂತ್ರಿಮಂಡಳದ ಮಂತ್ರಿ ಮಹೋದಯರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂಬುದನ್ನೇ ಮರೆತು ಏಕಾಧಿಪತ್ಯ ವ್ಯವಸ್ಥೆಯಲ್ಲಿರುವವರಂತೆ ಮಾತನಾಡುತ್ತಿದ್ದಾರೆ. ರಾಜ್ಯದ ಜವಾಬುದಾರಿ ಸ್ಥಾನದಲ್ಲಿದ್ದುಕೊಂಡು ನಮ್ಮ ಗೃಹ ಸಚಿವರು ಹೇಳುತ್ತಾರೆ 'ರಾಜ್ಯದಲ್ಲಿ 1.20 ಕೋಟಿ ಮನೆಗಳಿದ್ದಾವೆ. ಹಾಗೆಯೇ 43 ಸಾವಿರ ದೇವಾಲಯಗಳಿದ್ದಾವೆ, ಮೂರು ಸಾವಿರಕ್ಕೂ ಹೆಚ್ಚು ಚರ್ಚುಗಳಿವೆ. ಸಾಕಷ್ಟು ಸಂಖ್ಯೆಯಲ್ಲಿ ಮಸೀದಿಗಳಿವೆ. ಇವೆಲ್ಲಕ್ಕೂ ಭದ್ರತೆ ಒದಗಿಸುವುದು ಹೇಗೆ ಸಾಧ್ಯ?' ಎಂದು ತಮ್ಮ ಹೊಣೆಗಾರಿಕೆ ಏನೆಂಬುದನ್ನೇ ಮರೆತವರಂತೆ ಮಾತನಾಡುತ್ತಿದ್ದಾರೆ. ಅವರು ದೇವಾಲಯಗಳು, ಚರ್ಚುಗಳು ಮತ್ತು ಮಸೀದಿಗಳ ಜೊತೆಯಲ್ಲಿ 'ಜನರನ್ನು ಪ್ರತಿನಿಧಿಸುವ ಮನೆಗಳನ್ನು' ಸೇರಿಸಿಕೊಂಡು ಮಾತಾಡಿದ್ದಾರೆ. ಇದು ತುಂಬಾ ಗಂಭೀರವಾದ ಸಂಗತಿಯಾಗಿದೆ. ಇದನ್ನು ಎಲ್ಲಿಗೆ ಕೊಂಡೊಯ್ಯಬಹುದೆಂಬುದನ್ನು ನಾವು ಯೋಚಿಸಬೇಕಾಗಿದೆ. ಹೊಸದಾಗಿ ಮಂತ್ರಿಯಾಗಿರುವ ಶ್ರೀಜಗದೀಶ್ ಶೆಟ್ಟರ್ ತಾವು ನಂಬಿರುವ ಪ್ರಣಾಳಿಕೆಗೆ ಸರಿಯಾಗಿ ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗ್ರಾ.ಪಂ. ಯೊಂದರ ಸದಸ್ಯರೆಲ್ಲರೂ ಅವಿರೋಧವಾಗಿ ಆಯ್ಕೆಯಾದರೆ ಅಂತಹ ಗ್ರಾ. ಪಂ.ಗೆ ರೂ 15 ಲಕ್ಷ ಅನುದಾನ ನೀಡುವುದಾಗಿ ಮುಕ್ತವಾಗಿ ಘೋಷಿಸಿದ್ದಾರೆ.

(ಪ್ರಜಾವಾಣಿ 28-01-01).'ಧರ್ಮದ ರಕ್ಷಣೆಗೆ ಸಾಮ್ರಾಜ್ಯ ಸ್ಥಾಪನೆ' ಮತ್ತು 'ಧಾರ್ಮಿಕ ಸಾಮರಸ್ಯ' ಎಂಬ ಎರಡು ಸಂಗತಿಗಳಲ್ಲಿ ಸರ್ಕಾರವು ಯಾವುದರ ಪರವಿದೆ ಎಂಬುದು ಜನರಿಗೆ ತಿಳಿಯದ ಸಂಗತಿಯೇನಲ್ಲ. ಈ ಸರ್ಕಾರಕ್ಕೆ 'ಧರ್ಮ' ಸರ್ವಸ್ವವಾಗಿ ಬಿಟ್ಟಿದೆ. ಜನರ ಸಂಸ್ಕೃತಿಯನ್ನು ಮರೆತ ಈ ಸರ್ಕಾರವು ಚಕ್ರಾಧಿಪತಿಯೊಬ್ಬನ ಪಟ್ಟಾಭಿಷೇಕದ ರಾಜಕಾರಣ ಮಾಡಲು ಹೊರಟಿದೆ. ಜನರ ಅಳಲು ಇವರಿಗೆ ತಲುಪುತ್ತಿಲ್ಲ.

ಪಾರಮಾರ್ಥಿಕ ರಾಜಕಾರಣಕ್ಕೆ ಪ್ರಭುತ್ವದ ಆರಾಧನೆಯ ಸೇರ್ಪಡೆ!

ಸೆರೆ ಕುಡಿದ ಕೋತಿಗೆ ಚೇಳು ಕಚ್ಚಿ ಬಿಟ್ಟರೆ ಏನಾಗಬಹುದೋ ಅದರಂತೆ ಇಂದು ಸರ್ಕಾರವು ಪೋಷಿಸುತ್ತಿರುವ ಪಾರಮಾರ್ಥಿಕ ರಾಜಕಾರಣಕ್ಕೆ ಇದೀಗ ರಾಜಪ್ರಭುತ್ವದ ಆರಾಧನೆಯೂ ಸೇರಿಕೊಂಡು ಬಿಟ್ಟಿರುವುದರಿಂದ ಅದು ಮೇರೆ ಮೀರಿ ಹಂಗಿನ ಸಂಸ್ಕೃತಿಯನ್ನು ಹಬ್ಬಿಸುತ್ತಿದೆ. ಇದರಿಂದ ಪಾರಮಾರ್ಥಿಕ ಪರಿಭಾಷೆಗೆ ಮತ್ತು ಪ್ರಣಾಳಿಕೆಗೆ ಎಲ್ಲಿಲ್ಲದ ಮಹತ್ವ ಬಂದು ಬಿಟ್ಟಿದೆ. ಪಾರಮಾರ್ಥಿಕತೆಯಲ್ಲಾಗಲಿ ಅಥವಾ ರಾಜಪ್ರಭುತ್ವದಲ್ಲಾಗಲಿ ಪ್ರಶ್ನೆ ಕೇಳುವ ಸ್ವಾತಂತ್ರ್ಯ ಜನರಿಗೆ ಇರುವುದಿಲ್ಲ. ಅಲ್ಲಿ ಕೇವಲ ಆರಾಧನೆ ಮಾತ್ರ ಸಾಧ್ಯ. ಅನುಸಂಧಾನಕ್ಕೆ ಅಲ್ಲಿ ಅವಕಾಶವಿರುವುದಿಲ್ಲ.

ವಾಣಿಜ್ಯೀಕರಣಗೊಂಡ ದೇವಾಲಯಗಳು

ಕೆಲವು ಆಳುವ ಪಕ್ಷದ ಶಾಸಕರು ವಿಧಾನಸಭೆಯಲ್ಲಿ ಮಸೀದಿ-ಚರ್ಚುಗಳಿಂದ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತಿದೆಯೆಂದು ಪ್ರಶ್ನೆ ಕೇಳಿದ್ದಾರೆ. ಅವರು ಒಳ್ಳೆಯ ಉದ್ದೇಶದಿಂದಲೇ ಪ್ರಶ್ನೆಯನ್ನು ಕೇಳಿರಬಹುದು. ಆದರೆ ಇಲ್ಲಿ ಶಾಸಕರು ದೇವಾಲಯಗಳನ್ನು, ಮಸೀದಿಗಳನ್ನು ಮತ್ತು ಚರ್ಚುಗಳನ್ನು ಹೇಗೆ ಪರಿಭಾವಿಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ದೇವಾಲಯಗಳಲ್ಲಿ ಇದ್ದಂತೆ ವಿವಿಧ ಪೂಜೆಗಳಿಗೆ ವಿವಿಧ ದರಗಳು-ಬೆಲೆಗಳು ಚರ್ಚು-ಮಸೀದಿಗಳಲ್ಲಿ ಕಂಡು ಬರುವುದಿಲ್ಲ. ಶ್ರೀಮಂತರಿಗೆ ಒಂದು ಪೂಜೆ, ಬಡವರಿಗೆ ಒಂದು ಪೂಜೆ ಎಂಬುದನ್ನು ದೇವಾಲಯಗಳಲ್ಲಿ ಕಾಣಬಹುದಾಗಿದೆ. ಈ ಸರ್ಕಾರವು ದೇವಾಲಯಗಳಿಗೆ ಎಲ್ಲಿಲ್ಲದ ಮಹತ್ವವನ್ನು ನೀಡಿ ಅವುಗಳು ಅರ್ಥಹೀನವಾಗುವಂತೆ ಮಾಡಿಬಿಟ್ಟಿವೆ. ವಾಣಿಜ್ಯೀಕರಣಗೊಂಡ ದೇವಾಲಯಗಳನ್ನು ಮಾನದಂಡವಾಗಿಟ್ಟುಕೊಂಡು ಶಾಸಕರು ಮೇಲಿನ ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ ಶ್ರೇಣೀಕರಣವನ್ನು ತೊಡೆದು ಹಾಕುವುದಕ್ಕೆ ಪ್ರತಿಯಾಗಿ ಇಂದು ದೇವಾಲಯಗಳಲ್ಲಿ ಹಣದ ಆಧಾರದ ಮೇಲೆ ದೇವರ ಸೇವೆಯನ್ನು ಅಳತೆ ಮಾಡಲಾಗುತ್ತಿದೆ. ಇದನ್ನು ಸರ್ಕಾರವು ಪೋಷಿಸುತ್ತಿದೆ.

ಪತ್ರಿಕೆಯೊಂದರಿಂದ ಛೀಮಾರಿ

ನಮ್ಮ ನಾಡಿನ ಮೆಚ್ಚಿನ ದಿನಪತ್ರಿಕೆ ಪ್ರಜಾವಾಣಿಯು ಶ್ರೀಕೃಷ್ಣದೇವರಾಯನ ಐನೂರನೆಯ ಪಟ್ಟಾಭಿಷೇಕ ಮಹೋತ್ಸವದ ಉದ್ಘಾಟನೆ ನಡೆದ 28-01-10ರಂದು ಸಂಪಾದಕೀಯವೊಂದನ್ನು ಬರೆದು ಸರ್ಕಾರದ ದುಂದು ವೆಚ್ಚದ ಕ್ರಮವನ್ನು, ರಾಜಪ್ರಭುತ್ವದ ವೈಭವೀಕರಣವನ್ನು ಟೀಕಿಸಿದೆ. ಸಂಪಾದಕೀಯದಲ್ಲಿ 'ದೇಶಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಬಂದು ಆರು ದಶಕಗಳೇ ಕಳೆದರೂ ರಾಜಪ್ರಭುತ್ವದ ಸ್ಮರಣೆ ಮತ್ತು ಅದರ ವೈಭವೀಕರಣ ಸರಿಯಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಪ್ರಭುತ್ವವನ್ನು ಒಂದು ಉತ್ಸವವನ್ನಾಗಿ ಆಚರಿಸುವುದರಿಂದ ನಾವು ಯಾವ ಮೌಲ್ಯಗಳನ್ನು ಎತ್ತಿ ಹಿಡಿಯಲು ಹೊರಟಿದ್ದೇವೆ ಎಂಬುದನ್ನು ಆಳುವ ಪಕ್ಷದ ನಾಯಕರು ಆಲೋಚಿಸಬೇಕಿತ್ತು' ಎಂಬ ವಿಚಾರವನ್ನು ಮಂಡಿಸಲಾಗಿದೆ.

ಪ್ರಜಾವಾಣಿ ಸಂಪಾದಕೀಯದಲ್ಲಿ ತಿಳಿಸಿರುವಂತೆ ಈ ಉತ್ಸವವು ಆಳುವ ಪಕ್ಷದ ನಾಯಕರ (ಜನಪ್ರತಿನಿಧಿಗಳ) ನಿರ್ದೇಶನದಲ್ಲಿ ನಡೆದಿಲ್ಲವೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಅದು ಸಂಘಪರಿವಾರದ ನಿರ್ದೇಶನದಂತೆ ನಡೆದಿದೆ. ಇದರಲ್ಲಿ ಸಂಘಪರಿವಾರದ ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ನೆಲಮಟ್ಟ ಲೂಟಿ ಮಾಡುತ್ತಿರುವವರ ನಿರ್ದೇಶನದಲ್ಲಿ ಅದು ನಡೆದಿದೆ. ಸಂಘಪರಿವಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲವೆಂಬುದು ಇಲ್ಲಿ ನಡೆದ ರಾಜಪ್ರಭುತ್ವದ ಅಸಹ್ಯಕರ ವೈಭವೀಕರಣದಲ್ಲಿ ನೋಡಬಹುದಾಗಿದೆ. ಅಲ್ಲಿ ಬಳಸಿದ ಪರಿಭಾಷೆಯು ಪ್ರಭುತ್ವವಾದಿಯಾದುದಾಗಿದೆ. ಅದು ಪ್ರಜಾಪ್ರಭುತ್ವವಾದಿಯಾದುದಾಗಿರಲಿಲ್ಲ.

ಗೃಹಮಂತ್ರಿಗಳ ಹೇಳಿಕೆ

ಗೃಹಮಂತ್ರಿಗಳ ಹೇಳಿಕೆಯು 'ಜನರನ್ನು ಒಳಗೊಳ್ಳುವ' ಪ್ರಜಾಪ್ರಭುತ್ವವಾದಿ ವ್ಯವಸ್ಥೆಗೆ ಅವಮಾನ ಮಾಡುವ ತೆರದಲ್ಲಿದೆ. ಇಂದು ನಾವು ಜನರನ್ನು ಒಳಗೊಳ್ಳುವ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ನಮ್ಮ ಗೃಹಮಂತ್ರಿಗಳು ಜನರೆಲ್ಲರಿಗೂ ಸರ್ಕಾರವು ರಕ್ಷಣೆ ನೀಡಲು ಸಾಧ್ಯವಿಲ್ಲವೆಂಬ ಅರ್ಥದಲ್ಲಿ ಮಾತನಾಡುತ್ತಿದ್ದಾರೆ. ಹೀಗೆ ಹೇಳುವುದರ ಮೂಲಕ ಅಪ್ರಜ್ಞಾಪೂರ್ವಕವಾಗಿ ಅವರು ಯಾವ ಬಗೆಯ ಸಂಸ್ಕೃತಿಯಲ್ಲಿ ನಂಬಿಕೆಯಿಟ್ಟಿದ್ದಾರೆ ಎಂಬುದನ್ನು ಬಹಿರಂಗ ಪಡಿಸಿದ್ದಾರೆ.

ಎಲ್ಲ ಜನರಿಗೂ, ಎಲ್ಲ ಚರ್ಚುಗಳಿಗೂ, ಎಲ್ಲ ಮಸೀದಿಗಳಿಗೂ ರಕ್ಷಣೆ ಕೊಡಲಾಗುವುದಿಲ್ಲವೆಂದರೆ ಅರ್ಥವೇನು? 'ಎಲ್ಲ ಜನರಿಗೂ' ಎಂದರೆ ಯಾರು ಅವರು? ಹಾಗಾದರೆ ಇವರು ರಕ್ಷಣೆ ನೀಡುವ ವರ್ಗ ಯಾವುದು? ತಮಗೆ ಬೇಕಾದವರನ್ನು ಇಲ್ಲಿ ಒಳಗೊಳ್ಳಲಾಗುತ್ತಿದೆಯೇ? ಸರ್ಕಾರವೇ ಈ ರೀತಿಯಲ್ಲಿ ಶ್ರೇಣೀಕರಣಕ್ಕೆ ಅವಕಾಶ ಮಾಡಿಕೊಟ್ಟರೆ ಅಲ್ಲಿ ಸಮಾನತೆಯು ಅಸಾಧ್ಯವಾಗಿ ಬಿಡುತ್ತದೆ. ಅಲ್ಲಿನ ಪ್ರಜಾಪ್ರಭುತ್ವದ ಬಗ್ಗೆ ಅನುಮಾನ ಉಂಟಾಗಿ ಬಿಡುತ್ತದೆ. ಇವರ ವಾದವನ್ನು ಸ್ವಲ್ಪ ಹಿಗ್ಗಿಸಿಬಿಟ್ಟರೆ 'ನಾಡಿನ ಎಲ್ಲರಿಗೂ ಕುಡಿಯುವ ನೀರನ್ನು ಒದಗಿಸಲು ಸಾಧ್ಯವಿಲ್ಲ' ಎಂದಾಗುತ್ತದೆ, 'ನಾಡಿನ ಜನರೆಲ್ಲರಿಗೂ ಅಕ್ಷರ ಸಂಸ್ಕೃತಿಯನ್ನು ನೀಡಲು ಅಸಾಧ್ಯ' ಎಂದಾಗುತ್ತದೆ, 'ನಾಡಿನ ಎಲ್ಲರಿಗೂ ಆರೋಗ್ಯ ಸೇವೆಯನ್ನು ನೀಡುವುದು ಸಾಧ್ಯವಿಲ್ಲ' ಎಂದಾಗುತ್ತದೆ. ಸರ್ಕಾರದ ಹೊಣೆಯನ್ನು ಹೊತ್ತ ಜವಾಬುದಾರಿ ನಾಯಕರೊಬ್ಬರು ಹೀಗೆ ಹೇಳಬಹುದೆ?. ಸರ್ಕಾರವು ಪ್ರತಿನಿಧಿಸುತ್ತಿರುವ ಪಕ್ಷದ ಧೋರಣೆಯೂ ಇದೇ ಆಗಿದೆಯೇ?. ಈ ಪ್ರಶ್ನೆ ಬಹುಳ ಮುಖ್ಯ. ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಪಕ್ಷದ ಧೋರಣೆಯೂ ಇದೇ ಆಗಿದೆ ಅನ್ನದೆ ಬೇರೆ ಮಾರ್ಗವಿಲ್ಲ. ಇಲ್ಲಿ ಗೃಹಮಂತ್ರಿಗಳ ಅಸಹಾಯಕತೆಯನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಅವರ ಮಾತುಗಳ ಹಿಂದಿನ ಸೈದ್ಧಾಂತಿಕತೆಯನ್ನು-ಅಜೆಂಡಾವನ್ನು ಅರ್ಥಮಾಡಿಕೊಳ್ಳುವುದು ಕಷ್ಟ

ಭಾವುಕತೆ v/s ವೈಚಾರಿಕತೆ

ಮನುಷ್ಯ ಮೂಲತಃ ಭಾವಜೀವಿ. ಭಾವುಕತೆಯಿಂದ ಅವನನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವ ಗುಣ ಅದಕ್ಕಿದೆ. ಭಾವನೆಗಳಿಲ್ಲದವರು ಮನುಷ್ಯರಾಗುವುದು ಸಾಧ್ಯವಿಲ್ಲ. ಮನುಷ್ಯ-ಮನುಷ್ಯರ ನಡುವಿನ ಸಂಬಂಧವು ಒಂದು ರೀತಿಯಲ್ಲಿ ಭಾವನಾತ್ಮಕವಾದುದಾಗಿದೆ. ಭಾವುಕತೆಯು ಜೈವಿಕವಾದುದು. ನಾವು ಅದನ್ನು ಪೋಷಿಸಬಹುದಾಗಿದೆ. ಆದರೆ ಭಾವುಕತೆಯ ಮೇಲೆ ಜನರು ಬದುಕನ್ನು ಕಟ್ಟಲು ಸಾಧ್ಯವಿಲ್ಲ. ಭಾವುಕ ಮನೋಭಾವದಿಂದ ಕೆಲವೊಮ್ಮೆ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಭಾವುಕತೆಯು ಜನರನ್ನು ಕೆಲವು ಸಂದರ್ಭಗಳಲ್ಲಿ ಕುರುಡರನ್ನಾಗಿ ಮಾಡಿ ಬಿಡುತ್ತದೆ. ಮನುಷ್ಯ ಮುಕ್ತವಾಗಿ ಚಿಂತಿಸಲು ಭಾವುಕತೆಯು ಬಿಡುವುದಿಲ್ಲ. ಭಾವುಕತೆಯ ಮೇಲೆ ಜನರನ್ನು ಒಗ್ಗೂಡಿಸುವುದು ಸುಲಭ. ಭಾವುಕತೆಯನ್ನು ಬಂಡವಾಳ ಮಾಡಿಕೊಂಡು ಜನರನ್ನು ಪ್ರಚೋದಿಸುವ ಕಾರ್ಯ ಮಾಡುವ ಅನೇಕ ಸಂಘ-ಸಂಸ್ಥೆಗಳು ನಮ್ಮಲ್ಲಿ ಕ್ರಿಯಾಶೀಲವಾಗಿವೆ. ಎಲ್ಲ ದೇಶಗಳಲ್ಲೂ ಇಂತಹ ಸಂಗತಿಗಳು ನಡೆಯುತ್ತಿರುತ್ತವೆ. ನಾವು ಸ್ಪಷ್ಟವಾಗಿ ನೆನಪಿನಲ್ಲಿಡಬೇಕಾದ ಸಂಗತಿಯೇನೆಂದರೆ ಭಾವುಕತೆಯ ಆಧಾರದ ಮೇಲೆ ಸರ್ಕಾರವೊಂದು ತನ್ನ ನೀತಿಗಳನ್ನು ರೂಪಿಸಲು ಬರುವುದಿಲ್ಲ.

ಭಾವುಕ ಮನಸ್ಸಿಗೆ ವೈಚಾರಿಕತೆಯ ಸ್ಪರ್ಶ ಬೇಕಾಗುತ್ತದೆ. ಸಮಾಜದಲ್ಲಿ ಜನರು ಭಾವುಕತೆ ಮತ್ತು ವೈಚಾರಿಕತೆಗಳ ನಡುವೆ ಸಮತೋಲನವನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಪ್ರಯತ್ನ ಬೇಕು. ವೈಚಾರಿಕತೆಯು ಹುಟ್ಟಿನಿಂದಲೇ ಬರುವುದಿಲ್ಲ. ಆದರೆ ಮನುಷ್ಯನಲ್ಲಿ ವೈಚಾರಿಕತೆಯ ಗುಣವಿರುತ್ತದೆ. ಅದನ್ನು ಪ್ರಜ್ಞಾಪೂರ್ವಕವಾಗಿ ಪೋಷಿಸಬೇಕಾಗುತ್ತದೆ. ವೈಚಾರಿಕತೆಯಿಲ್ಲದೆ ಜನರ ಬದುಕು ಸಮೃದ್ಧವಾಗುವುದು ಸಾಧ್ಯವಿಲ್ಲ. ವೈಚಾರಿಕತೆಯು ಜನರಲ್ಲಿ ಚರ್ಚೆ ಮಾಡುವ ಗುಣವನ್ನು, ಅನುಸಂಧಾನಾತ್ಮಕ ಕುಶಲತೆಯನ್ನು, ಪ್ರಶ್ನೆ ಕೇಳುವ ಶಕ್ತಿಯನ್ನು ಬೆಳೆಸು

ಮನುಷ್ಯ ಮೂಲತಃ ಭಾವಜೀವಿ. ಭಾವುಕತೆಯಿಂದ ಅವನನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವ ಗುಣ ಅದಕ್ಕಿದೆ. ಭಾವನೆಗಳಿಲ್ಲದವರು ಮನುಷ್ಯರಾಗುವುದು ಸಾಧ್ಯವಿಲ್ಲ. ಮನುಷ್ಯ - ಮನುಷ್ಯರ ನಡುವಿನ ಸಂಬಂಧವು ಒಂದು ರೀತಿಯಲ್ಲಿ ಭಾವನಾತ್ಮಕವಾದುದಾಗಿದೆ. ಭಾವುಕತೆಯು ಜೈವಿಕವಾದುದು. ನಾವು ಅದನ್ನು ಪೋಷಿಸಬಹುದಾಗಿದೆ. ಆದರೆ ಭಾವುಕತೆಯ ಮೇಲೆ ಜನರು ಬದುಕನ್ನು ಕಟ್ಟಲು ಸಾಧ್ಯವಿಲ್ಲ. ಭಾವುಕ ಮನೋಭಾವದಿಂದ ಕೆಲವೊಮ್ಮೆ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಭಾವುಕತೆಯು ಜನರನ್ನು ಕೆಲವು ಸಂದರ್ಭಗಳಲ್ಲಿ ಕುರುಡರನ್ನಾಗಿ ಮಾಡಿ ಬಿಡುತ್ತದೆ.

ತ್ತದೆ. ಇಂದು ಕರ್ನಾಟಕದಲ್ಲಿ ಆಳುವ ಪಕ್ಷಗಳು, ಉಳಿದ ರಾಜಕೀಯ ಪಕ್ಷಗಳು, ಪಾರಮಾರ್ಥಿಕತೆಯನ್ನು ಪ್ರತಿಪಾದಿಸುವ ಸಂಘ ಸಂಸ್ಥೆಗಳು ಜನರು ಭಾವುಕತೆಯನ್ನು ಬಳಸಿಕೊಂಡು ಇಲ್ಲದ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿವೆ. ಇಲ್ಲದ ಸಮಸ್ಯೆಗಳು ಇಲ್ಲಿ ಸಮಸ್ಯೆಗಳಾಗುತ್ತಿವೆ. ಯಾವುದು ಸಮಸ್ಯೆ-ಯಾವುದು ಸಮಸ್ಯೆಯಲ್ಲ ಎಂಬುದನ್ನು ತೀರ್ಮಾನಿಸಲು ಭಾವುಕತೆಯಿಂದ ಸಾಧ್ಯವಿಲ್ಲ. ಅದಕ್ಕೆ ವೈಚಾರಿಕತೆಯ ನೆರವು ಬೇಕಾಗುತ್ತದೆ. ಭಾವುಕತೆಯು ಪಾರಮಾರ್ಥಿಕತೆಯ ಜೊತೆಯಲ್ಲಿ ಸಾಗುತ್ತವೆ.

ವೈಚಾರಿಕತೆಯು ಭಾವುಕತೆಗೆ ವಿರೋಧಿಯಲ್ಲದಿದ್ದರೂ ಅಲ್ಲಿ ಭಾವುಕತೆಯು ಚಾಲಕ ಶಕ್ತಿಯಾಗಿರಲು ಸಾಧ್ಯವಿಲ್ಲ. ಭಾವು ಕತೆ, ಧಾರ್ಮಿಕತೆ, ಪರಮಾರ್ಥಿಕತೆ ಮತ್ತು ಆರಾಧನೆಗಳು ಒಟ್ಟಿಗೆ ಇರಬಲ್ಲವು. ನಿಜ, ಭಾವುಕತೆಯಿಲ್ಲದೆ ಮನುಷ್ಯ ಬದುಕಲು ಸಾಧ್ಯವಿಲ್ಲ. ಆದರೆ ಅದು ಬದುಕನ್ನು ನಿರ್ದೇಶಿಸಲು ಬಿಡಬಾರದು. ಅದನ್ನು ಜನರ ವೈಚಾರಿಕತೆಯ ನೆರವಿನಿಂದ ನಿರ್ವಹಿಸಬೇಕು. ಇಂದು ನಮ್ಮಲ್ಲಿ ಆಳುವ ಪಕ್ಷವು ಜನರ ಭಾವುಕತೆಯನ್ನು ಬಂಡವಾಳ ಮಾಡಿಕೊಂಡು ರಾಜಕಾರಣ ಮಾಡುತ್ತಿದೆ. ಈ ಬಗೆಯ ಪಾರಮಾರ್ಥಿಕ ರಾಜಕಾರಣದಿಂದ ತಳಮಟ್ಟದಲ್ಲಿರುವ ಜನರ ಹಿತಾಸಕ್ತಿಗಳನ್ನು ಕಾಪಾಡುವುದು ಸಾಧ್ಯವಿಲ್ಲ. ಅದು ಉಳ್ಳವರನ್ನು ಮಾತ್ರ ಪೋಷಿಸಬಹುದು. ಆದರೆ ಇಲ್ಲಿನ ದುರಂತವೆಂದರೆ ಉಳ್ಳವರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಉಳಿದವರ ಭಾವುಕತೆಯನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ.

ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ ಕಳೆದ ಎರಡು ವರ್ಷಗಳಿಂದ ಕರ್ನಾಟಕದಲ್ಲಿ ಆಸ್ಫೋಟಕಾರಿಯಾಗಿ ನಡೆಯುತ್ತಿರುವ ಕೋಮು ಘರ್ಷಣೆಗಳು, ಚರ್ಚುಗಳ ಮೇಲಿನ ದಾಳಿ, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲಿನ ಅಸೂಯೆ, ಗುಡಿ-ಗೋಪುರಗಳು, ಮಠಗಳು-ಮಠಾದೀಶರು, ಯಜ್ಞ-ಯಾಗ, ಉಚಿತ ಸಾಮೂಹಿಕ ವಿವಾಹಗಳು, ಅನ್ನ ಸಂತರ್ಪಣೆ ಮುಂತಾದವುಗಳ ವೈಭವೀಕರಣ ಇತ್ಯಾದಿ. ಕರ್ನಾಟಕವನ್ನು ಹೀಗೆ ಪಟ್ಟಭದ್ರ ಹಿತಾಸಕ್ತಿಗಳು ಕೋಮುವಾದದ ಕಡೆಗೆ, ಪಾರಮಾರ್ಥಿಕತೆಯೆಡೆಗೆ, ಪ್ರಭುತ್ವವಾದಿ ಪ್ರಣಾಳಿಕೆ ಕಡೆಗೆ-ಭಾವುಕ ಪ್ರಧಾನ ಚಿಂತನೆಯೆಡೆಗೆ ಕೊಂಡೊಯ್ಯುತ್ತಿವೆ. ಇದು ಆತಂಕಕಾರಿ ಸಂಗತಿಯಾಗಿದೆ. ಭಾವುಕತೆಯ ಮೇಲೆ ಜನರ ಬದುಕನ್ನು ಉತ್ತಮ ಪಡಿಸಲು ಸಾಧ್ಯವಿಲ್ಲ, ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ.

ಮನುಷ್ಯ ಇತರೆ ಪ್ರಾಣಿಗಳಿಂದ ಭಿನ್ನವೆಂಬುದು ನಮಗೆಲ್ಲ ಗೊತ್ತಿದೆ. ಹೀಗೆ ಭಿನ್ನಗೊಳಿಸುವ ಬಹು ಮುಖ್ಯ ಸಂಗತಿ ಯಾವುದೆಂದರೆ ವೈಚಾರಿಕತೆ. ಭಾವುಕತೆಯೆಂಬುದು ಮನುಷ್ಯರನ್ನು ಸೇರಿಸಿಕೊಂಡು ಎಲ್ಲ ಪ್ರಾಣಿಗಳಿಗೂ ಸಾಮಾನ್ಯವಾದ ಸಂಗತಿಯಾಗಿದೆ. ಆದರೆ ಆಲೋಚನಾ ಶಕ್ತಿ, ವೈಚಾರಿಕತೆಯ ಗುಣ ಮತ್ತು ಬೌದ್ಧಿಕತೆಗಳನ್ನು ಮನುಷ್ಯರು ಮಾತ್ರ ಬೆಳೆಸಿಕೊಳ್ಳಬಲ್ಲರು. ಪ್ರೀತಿ, ವಿಶ್ವಾಸ, ಗೆಳೆತನ, ಸೇವಾ ಮನೋಭಾವ ಮುಂತಾದವು ಭಾವುಕ ಸಂಗತಿಗಳು. ಆದರೆ ಮನುಷ್ಯ ಇತರರನ್ನು ಯಾಕೆ ಪ್ರೀತಿಸಬೇಕು, ಜನರಲ್ಲಿ ಯಾಕೆ ವಿಶ್ವಾಸವಿಡಬೇಕು, ಗೆಳೆತನ ಯಾಕೆ ಬೇಕು ಮುಂತಾದ ಸಂಗತಿಗಳಿಗೆ ಭಾವುಕತೆಯಲ್ಲಿ ಅರ್ಥ ಸಿಗುವುದಿಲ್ಲ. ಅವುಗಳಿಗೆ ನಾವು ವೈಚಾರಿಕತೆಯಲ್ಲಿ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಇದು ನಮಗೆ ಸ್ಪಷ್ಟವಾಗದಿದ್ದರೆ ಪ್ರೀತಿ-ವಿಶ್ವಾಸಗಳಿಗೆ ಅರ್ಥವಿರುವುದಿಲ್ಲ. ನಾವು ಯಾಕೆ ಪ್ರೀತಿಸಬೇಕು, ಯಾಕೆ ವಿಶ್ವಾಸವಿಡಬೇಕು ಎಂಬ ಸಂಗತಿಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ನಾವು ವೈಚಾರಿಕತೆಯನ್ನು ಆಶ್ರಯಿಸಬೇಕಾಗುತ್ತದೆ. ಭಾವುಕತೆಯೆಂಬುದು ಮನುಷ್ಯನಿಗೆ ಸಿದ್ಧವಾದ ಒಂದು ಸಂಗತಿಯಾದರೆ ವೈಚಾರಿಕತೆಯೆಂಬುದು ಸಾಧಿಸಿಕೊಳ್ಳಬೇಕಾದ ಸಂಗತಿಯಾಗಿದೆ. ಭಾವುಕತೆಯು ಅರ್ಥಪೂರ್ಣವಾಗಬೇಕಾದರೆ ಅದನ್ನು ವೈಚಾರಿಕವಾಗಿ ಪರಿಭಾವಿಸಿಕೊಳ್ಳಬೇಕು.

ಇಂದು ಕರ್ನಾಟಕದಲ್ಲಿ ಲಿಂಗ ಸಂಬಂಧದ ಬಗ್ಗೆ ಪ್ರೋತ್ಸಾಹದಾಯಕ ಸನ್ನಿವೇಶವೇನಿಲ್ಲ. ತೋರಿಕೆಗೆ ಸರ್ಕಾರವು ಮಹಿಳೆಯರ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಆದರೆ ಇಲ್ಲಿ ಅತ್ಯಂತ ಜಾಗರೂಕತೆಯಿಂದ ಲಿಂಗ ಸಂಬಂಧಿ ಘರ್ಷಣಾತ್ಮಕ ಸಂಗತಿಗಳನ್ನು ನಿರ್ಲಕ್ಷಿಸಿ ಕೇವಲ ಅವರ ದೈನಂದಿನ ಸಂಗತಿಗಳನ್ನು ಮಾತ್ರ ಸರ್ಕಾರ ಪೋಷಿಸುತ್ತಿದೆ. ವರಮಹಾಲಕ್ಷ್ಮಿ ಪೂಜೆಗೂ ಮಹಿಳೆಯರ ಅಭಿವೃದ್ಧಿಗೂ ಸಂಬಂಧವಿಲ್ಲ. ಈ ಪೂಜೆಗಾಗಿ ಪ್ರತಿ ವರ್ಷವೂ ಕರ್ನಾಟಕಕ್ಕೆ ಬರುತ್ತಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕಿ ಆ ಮೂಲಕ ರಾಜ್ಯಕ್ಕೆ ಏನು ಸಂದೇಶವನ್ನು ಅವರು ನೀಡುತ್ತಿದ್ದಾರೆ?

ಲಿಂಗ ಸಂಬಂಧ ಕುರಿತ ಪ್ರತಿಗಾಮಿ ಧೋರಣೆ

ಇಂದು ಕರ್ನಾಟಕದಲ್ಲಿ ಲಿಂಗ ಸಂಬಂಧದ ಬಗ್ಗೆ ಪ್ರೋತ್ಸಾಹದಾಯಕ ಸನ್ನಿವೇಶವೇನಿಲ್ಲ. ತೋರಿಕೆಗೆ ಸರ್ಕಾರವು ಮಹಿಳೆಯರ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಆದರೆ ಇಲ್ಲಿ ಅತ್ಯಂತ ಜಾಗರೂಕತೆಯಿಂದ ಲಿಂಗ ಸಂಬಂಧಿ ಘರ್ಷಣಾತ್ಮಕ ಸಂಗತಿಗಳನ್ನು ನಿರ್ಲಕ್ಷಿಸಿ ಕೇವಲ ಅವರ ದೈನಂದಿನ ಸಂಗತಿಗಳನ್ನು ಮಾತ್ರ ಸರ್ಕಾರ ಪೋಷಿಸುತ್ತಿದೆ. ವರಮಹಾಲಕ್ಷ್ಮಿ ಪೂಜೆಗೂ ಮಹಿಳೆಯರ ಅಭಿವೃದ್ಧಿಗೂ ಸಂಬಂಧವಿಲ್ಲ. ಈ ಪೂಜೆಗಾಗಿ ಪ್ರತಿ ವರ್ಷವೂ ಕರ್ನಾಟಕಕ್ಕೆ ಬರುತ್ತಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕಿ ಆ ಮೂಲಕ ರಾಜ್ಯಕ್ಕೆ ಏನು ಸಂದೇಶವನ್ನು ಅವರು ನೀಡುತ್ತಿದ್ದಾರೆ? ಮಹಿಳಾ ಜಗತ್ತಿಗೆ ಯಾವ ಮೌಲ್ಯವನ್ನು ನೀಡುತ್ತಿದ್ದಾರೆ? ಈ ಪೂಜೆಯಲ್ಲಿ ಭಾಗವಹಿಸುವುದರ ಮೂಲಕ ಅವರು ಸಮಾಜದ ಯಾವ ವರ್ಗದ ಹಿತಾಸಕ್ತಿಗಳನ್ನು ಪೋರೈಸುತ್ತಿದ್ದಾರೆ? ಅವರು ಭಾಗವಹಿಸುವ ವರಮಹಾಲಕ್ಷ್ಮಿ ಪೂಜೆಯು ಜನರ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವ ಧೋರಣೆಯನ್ನು ಪ್ರತಿನಿಧಿಸುತ್ತದೆ?

ಕಳೆದ ಎರಡು ವರ್ಷಗಳಿಂದ ಕರ್ನಾಟಕದಲ್ಲಿ ಮಹಿಳಾ ಆಯೋಗಕ್ಕೆ ಒಬ್ಬರು ಅಧ್ಯಕ್ಷರನ್ನು ನೇಮಿಸುವುದು, ಮತ್ತು ಪ್ರಸ್ತುತ ಸಂಪುಟದಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಅವಕಾಶ ನೀಡುವುದು ಸಾಧ್ಯವಾಗಿಲ್ಲವೆಂದರೆ ಅಲ್ಲಿ ಯಾವ ಬಗೆಯ ಲಿಂಗ ಸಂಬಂಧಿ ಧೋರಣೆ ಕೆಲಸ ಮಾಡುತ್ತಿದೆಯೆಂಬುದನ್ನು ಅರಿತುಕೊಳ್ಳಬಹುದು. ಮಂತ್ರಿಯಾಗುವುದಕ್ಕೆ ರಾಜ್ಯದಲ್ಲಿ ಶಾಸಕರು ಎಂತಹ ಆಟ-ನಾಟಕವಾಡುತ್ತಾರೆಂಬುದನ್ನು ನಾವು ನೋಡಿದ್ದೇವೆ. ಈ ಬಗೆಯ ಪುರುಷಶಾಹಿಯ ಒತ್ತಡಕ್ಕೆ ಮಣಿಯುವ ಸರ್ಕಾರವು ಮಹಿಳೆಯರ ವಿಷಯದಲ್ಲಿ ಔದಾಸೀನ್ಯ ಧೋರಣೆ ತಳೆಯುತ್ತಿದೆ. ಕರ್ನಾಟಕವು ಇಂದು ಲಿಂಗ ಸ್ಪಂದಿ ನೆಲೆಯಿಂದ ಲಿಂಗ ನಿರಪೇಕ್ಷ ನೆಲೆಗೆ ಸಾಗುತ್ತಿರುವಂತೆ ಕಾಣುತ್ತದೆ. ಮಹಿಳೆಯರ ದೈನಂದಿನ ಹಿತಾಸಕ್ತಿಗಳಾದ ಶಿಕ್ಷಣಕ್ಕೆ ನೆರವು, ಆರೋಗ್ಯಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳು, ಉದ್ಯೋಗದ ಅವಕಾಶಗಳು(ಅರೆಬರೆ), ಭಾಗ್ಯಲಕ್ಷ್ಮಿ, ಬೈಸಿಕಲ್ಲು ಮುಂತಾದವುಗಳ ಮೂಲಕ ಅದು ತನ್ನ ಮಹಿಳಾಪರ ಧೋರಣೆಯನ್ನು ಸಾಬೀತು ಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಈ ಬಗೆಯ ಕಾರ್ಯಕ್ರಮಗಳಿಂದ ಮಹಿಳೆಯರ ಹಿತಾಸಕ್ತಿಗಳನ್ನು ಪೂರೈಸುವುದು ಸಾಧ್ಯವಿಲ್ಲ. ಮಹಿಳೆಯರ ದುಡಿಮೆಯ ಸಂಗತಿಗಳು, ಅವರ ಆಸ್ತಿ ಮೇಲಿನ ಹಕ್ಕುಗಳು, ಕೌಟುಂಬಿಕ ದುಡಿಮೆಯ ಹಂಚಿಕೆ, ತನ್ನ ಬದುಕಿನ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಅಗತ್ಯವಾದ ಸ್ವಾತಂತ್ರ್ಯ, ಯಾವಾಗ ವಿವಾಹವಾಗಬೇಕು, ಯಾವಾಗ ಮಕ್ಕಳನ್ನು ಪಡೆಯಬೇಕು ಎಂಬುದರ ಬಗೆಗಿನ ತೀರ್ಮಾನ ತೆಗೆದುಕೊಳ್ಳುವ ಸಾಮರ್ಥ್ಯ, ಶಾಸನಾತ್ಮಕ ಮಂಡಳಿಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಮುಂತಾದ ಸಂಗತಿಗಳನ್ನು ಇಂದು ಮೂಲೆಗುಂಪು ಮಾಡಲಾಗಿದೆ. ಈ ಬಗ್ಗೆ ಏನನ್ನೂ ಮಾಡಲಾಗದಿದ್ದರೂ ಅವುಗಳ ಬಗ್ಗೆ ಚರ್ಚೆಯಾದರೂ ನಡೆಯುವಂತೆ ಸರ್ಕಾರ ಮಾಡಬಹುದಿತ್ತು. ಆದರೆ ಅಂತಹ ಸಂಗತಿಗಳು ಇಂದು ನಾಡಿನಲ್ಲಿ ಕಂಡು ಬರುತ್ತಿಲ್ಲ. ಪುರುಷಶಾಹಿ ಮೌಲ್ಯದ ಪ್ರತಿನಿಧಿಯಂತಿರುವ ಶ್ರೀ ಕೃಷ್ಣದೇವರಾಯನ ಐನೂರನೆಯ ಪಟ್ಟಾಭಿಷೇಕವನ್ನು ವೈಭವದಿಂದ ಆಚರಿಸಲಾಯಿತು. ಅಲ್ಲಿ ಬಳಸಲಾದ ನುಡಿಗಟ್ಟುಗಳೆಲ್ಲವೂ, ಉದಾಹರಣೆಗೆ ಸಮರ ವೀರ ಸಾಮ್ರಾಟ, ಗಂಡರ ಗಂಡ, ಪುರುಷಶಾಹಿ ಮೌಲ್ಯದ ಸಂಕೇತಗಳಾಗಿದ್ದವು.

ಖಾಸಗೀಕರಣದ ಅಪವಿತ್ರತೆ

ಖಾಸಗೀಕರಣವೆಂಬುದು ಸಾರಾಸಗಟಾಗಿ ವ್ಯಾಪಾರ, ವಾಣಿಜ್ಯ, ವ್ಯವಹಾರಗಳಿಗೆ ಸಂಬಂಧಿಸಿದ ಸಂಗತಿಯಾಗಿದೆ. ಸಾರ್ವಜನಿಕ ಉದ್ದಿಮೆಗಳಿಂದ ಸರ್ಕಾರಿ ಮಾಲಿಕತ್ವದ ಶೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಕ್ರಮವನ್ನು 'ಹೂಡಿಕೆಯನ್ನು ಹಿಂದೆ ಪಡೆಯುವುದು' ಎಂದು ಹೇಳಬಹುದು. ಇದನ್ನು ಇನ್ನೊಂದು ಅರ್ಥದಲ್ಲಿ ಖಾಸಗೀಕರಣವೆಂದು ಕರೆಯಬಹುದು. ಜಾಗತೀಕರಣ ಪರಿಷೆಯಲ್ಲಿ ಖಾಸಗೀಕರಣ ಪ್ರಕ್ರಿಯೆಯು ಜೋರಾಗಿಯೆ ನಡೆದಿದೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಆದರೆ ನಮ್ಮಲ್ಲಿ ನಡೆಯುತ್ತಿರುವ ಪಾರಮರ್ಥಿಕತೆಯ ಖಾಸಗೀಕರಣವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳ ನಡುವೆ ಭಿನ್ನತೆಯಿದೆ. ಅದರ ಚರ್ಚೆ ಇಲ್ಲಿ ಅಪ್ರಸ್ತುತ.

ಇಲ್ಲಿ ಪ್ರಸ್ತುತವಾದ ಸಂಗತಿಯೆಂದರೆ ಕರ್ನಾಟಕ

(49ನೇ ಪುಟಕ್ಕೆ)

ಹೊಸ ಶಕೆಯ ಆರಂಭ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಜಾನುವಾರುಗಳು ಕಣ್ಮರೆಯಾಗುವುದರೊಂದಿಗೆ ಭಾರತದಲ್ಲಿ ಜಾತಿವ್ಯವಸ್ಥೆಯ ಪ್ರತಿಪಾದಕನಾದ ಮನುವಿನ ಹಿಡಿತ ಸಡಿಲವಾ ಗುತ್ತಾ ಹೋಗುತ್ತದೆ. ದಲಿತರ ಶೋಷಣೆಯ ವಿಚಾರಕ್ಕೆ ಬಂದಾಗ ನಾವು ದಲಿತರು ಜಾತಿಯಾಧಾರಿತ ಜಮೀನ್ದಾರಿ ವ್ಯವಸ್ಥೆಯ ಬಲಿ ಪಶುಗಳಾಗಿರುವುದನ್ನು ಮರೆಯುವಂತಿಲ್ಲ. ದಲಿತರ ಶೋಷಣೆಯಲ್ಲಿ ಜಾನುವಾರು ಆಧಾರಿತ ಉಳುಮೆಯ ಪಾತ್ರವನ್ನು ಅಲ್ಲಗಳೆ ಯುವಂತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾಗಿ ಜಮೀನ್ದಾರರ ಕೃಷಿ ಭೂಮಿಯ ಉಳುಮೆಗಾಗಿ ಬಹುತೇಕ ದಲಿತರು ಜಾನುವಾರುಗಳೊಂದಿಗೆ ಶಾಶ್ವತ ಸಂಬಂಧ ಹೊಂದಿರುತ್ತಿದ್ದರು. ಜಾನು ವಾರುಗಳು ಕಣ್ಮರೆಯಾ ಗುವುದರೊಂದಿಗೆ ಭೂಮಾಲೀಕರು ದಲಿತ ಕೃಷಿ ಕಾರ್ಮಿಕರ ಮೇಲಿನ ತಮ್ಮ ಹಿಡಿತವನ್ನು ಕಳೆದು ಕೊಳ್ಳಲಾ ರಂಭಿಸುತ್ತಾರೆ. ಆಗ ಮನು ಒಟ್ಟಾರೆ ಶೋಷಣೆಯ ವ್ಯವಸ್ಥೆಯಿಂದ ಕಾಲು ಕೀಳಲೇ ಬೇಕಾಗುತ್ತದೆ.

ಸಮಯ ಕಳೆದಂತೆ ಹಲವಾರು ಬದಲಾವಣೆಗಳು ಘಟಿಸುತ್ತಾ ಹೋಗುತ್ತವೆ. ಭಾರತದಲ್ಲಿ ಕೂಡ ಮಂದಗತಿಯಲ್ಲಿ ಕೆಲವು ಬದಲಾವಣೆಗಳಾಗುತ್ತಿವೆ. ಜಾತಿವ್ಯವಸ್ಥೆಯಲ್ಲಿಯೂ ಕೂಡ ಕೆಲವು ಬದಲಾವಣೆಗಳಾಗುತ್ತಿವೆ.

ಜಾತಿವ್ಯವಸ್ಥೆಯ ವಿಚಾರದಲ್ಲಿ ಕಳೆದ ಶತಮಾನದಲ್ಲಾದ ಬದಲಾವಣೆಗಳಿಗಿಂತ ಬಹುದೊಡ್ಡ ಬದಲಾವಣೆ ಮುಂದಿನ ಒಂದು ದಶಕದಲ್ಲಿ ಘಟಿಸಲಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಶಕ ದಲಿತರ ಪಾಲಿಗೆ ಅತ್ಯಂತ ನಿರ್ಣಾಯಕವಾದುದು.

2021ನೇ ಇಸವಿಗೆ ಕಾಲಿಡುವುದಕ್ಕೆ ಮುಂಚೆ ಭಾರತ ಎತ್ತಿನ ಗಾಡಿಗಳಿಂದ ಮುಕ್ತವಾಗಲಿದೆ. ಭಾರತೀಯ ಕೃಷಿ ಕೂಡ ಜಾನುವಾರುಗಳಿಂದ ಮುಕ್ತವಾಗಲಿದೆ. ಕೃಷಿ ಚಟುವಟಿಕೆಗೆ ಜಾನುವಾರುಗಳನ್ನು ಬಳಸಿಕೊಳ್ಳುವ ಪ್ರಕ್ರಿಯೆಯನ್ನು ಎಲ್ಲ ನಾಗರಿಕತೆಗಳಲ್ಲಿಯೂ ಕಾಣಬಹುದು. ಯುರೋಪ್ ಮತ್ತು ಅಮೆರಿಕಾಗಳಲ್ಲಿ ಕೃಷಿ ಭೂಮಿಯ ಉಳುಮೆಗೆ ಜಾನುವಾರುಗಳನ್ನು ಬಳಸಲಾಗುತ್ತಿತ್ತು. ಆದರೆ ಈ ಎರಡೂ ಸಮಾಜಗಳು ಜಾನುವಾರು ಆಧಾರಿತ ಉಳುಮೆಯಿಂದ ಮುಕ್ತವಾಗಿ ಹಲವಾರು ದಶಕಗಳೇ ಕಳೆದಿದೆ. ಭಾರತದಲ್ಲಿ ಕೂಡ ಈ ಪ್ರಕ್ರಿಯೆ ಈಗ ನಡೆಯುತ್ತಿದೆ.

ಜಾನುವಾರುಗಳು ಕಣ್ಮರೆಯಾಗುವುದರೊಂದಿಗೆ ಭಾರತದಲ್ಲಿ ಜಾತಿವ್ಯವಸ್ಥೆಯ ಪ್ರತಿಪಾದಕನಾದ ಮನುವಿನ ಹಿಡಿತ ಸಡಿಲವಾಗುತ್ತಾ ಹೋಗುತ್ತದೆ. ದಲಿತರ ಶೋಷಣೆಯ ವಿಚಾರಕ್ಕೆ ಬಂದಾಗ ನಾವು ದಲಿತರು ಜಾತಿಯಾಧಾರಿತ ಜಮೀನ್ದಾರಿ ವ್ಯವಸ್ಥೆಯ ಬಲಿ ಪಶುಗಳಾಗಿರುವುದನ್ನು ಮರೆಯುವಂತಿಲ್ಲ. ದಲಿತರ ಶೋಷಣೆಯಲ್ಲಿ ಜಾನುವಾರು ಆಧಾರಿತ ಉಳುಮೆಯ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾಗಿ ಜಮೀನ್ದಾರರ ಕೃಷಿ ಭೂಮಿಯ ಉಳುಮೆಗಾಗಿ ಬಹುತೇಕ ದಲಿತರು ಜಾನುವಾರುಗಳೊಂದಿಗೆ ಶಾಶ್ವತ ಸಂಬಂಧ ಹೊಂದಿರುತ್ತಿದ್ದರು. ಜಾನುವಾರುಗಳು ಕಣ್ಮರೆಯಾಗುವುದರೊಂದಿಗೆ ಭೂಮಾಲೀಕರು ದಲಿತ ಕೃಷಿ ಕಾರ್ಮಿಕರ ಮೇಲಿನ ತಮ್ಮ ಹಿಡಿತವನ್ನು ಕಳೆದುಕೊಳ್ಳಲಾರಂಭಿಸುತ್ತಾರೆ. ಆಗ ಮನು ಒಟ್ಟಾರೆ ಶೋಷಣೆಯ ವ್ಯವಸ್ಥೆಯಿಂದ ಕಾಲು ಕೀಳಲೇ ಬೇಕಾಗುತ್ತದೆ.

ಕೇವಲ ಒಂದೂವರೆ ದಶಕದ ಹಿಂದೆ ನನ್ನ ಹುಟ್ಟೂರಿನಲ್ಲಿ ಸುಮಾರು 500 ಎತ್ತುಗಳಿದ್ದವು. ಆದರೆ ಈಗ ಒಂದೇ ಒಂದು ಜಾನುವಾರು ಕೂಡ ಇಲ್ಲ. ಯುರೋಪಿನಲ್ಲಾದಂತೆ ಭಾರತದಲ್ಲಿ ಕೂಡ ಟ್ರ್ಯಾಕ್ಟರ್‌ಗಳು ಕೃಷಿಯ ಆಧುನೀಕರಣಕ್ಕೆ ನಾಂದಿ ಹಾಡುತ್ತಿದೆ. ಇದರಿಂದಾಗಿ ಬಹಳಷ್ಟು ದಲಿತರು ಕೃಷಿ ಕಾರ್ಯಗಳಿಂದ ಮುಕ್ತರಾಗುತ್ತಿದ್ದಾರೆ. ಹೊಸ ಕೃಷಿಯೇತರ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಕೃಷಿ ಸಂಪೂರ್ಣವಾಗಿ ಆಧುನೀಕರಣಗೊಂಡ ಕಡೆಗಳಲ್ಲೆಲ್ಲಾ ಕೃಷಿ ಇಳುವರಿ ಅಧಿಕವಾಗಿದೆ, ನಿರುದ್ಯೋಗ ಕಡಿಮೆಯಾಗಿದೆ. ಜಮೀನ್ದಾರಿ ವ್ಯವಸ್ಥೆ ಕೊನೆಯಾಗಿದೆ.

ಉದಾಹರಣೆಗೆ ಬ್ರಿಟನ್ 1800ರಲ್ಲಿ ಜಾನುವಾರು ಆಧಾರಿತ ಕೃಷಿಯಲ್ಲಿ ತೊಡಗಿದ್ದಾಗ ಒಂದು ಹೆಕ್ಟೇರ್‌ಗೆ 1.2 ಟನ್‌ಗಳಷ್ಟು ಗೋಧಿ ಇಳುವರಿ ದೊರಕುತ್ತಿತ್ತು. ಆದರೆ ಈಗ ಇಳುವರಿಯ ಪ್ರಮಾಣ ಸುಮಾರು 7.9 ಟನ್‌ಗಳಷ್ಟಿದೆ. ಭಾರತ, ಒಂದು ಹೆಕ್ಟೇರ್‌ಗೆ 6 ಅಥವಾ ಅದಕ್ಕಿಂತ ಹೆಚ್ಚು ಇಳುವರಿ ನೀಡಲಾರಂಭಿಸಿದ ದಿನ, ಅಮೆರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾ ಈ ಮೂರು ದೇಶಗಳ ಒಟ್ಟಾರೆ ಗೋಧಿ ಇಳುವರಿಗಿಂತ ಹೆಚ್ಚು ಗೋಧಿಯನ್ನು ಬೆಳೆಯುವಂತಾಗುತ್ತದೆ. ಇವು ಪ್ರಸ್ತುತ ಗೋಧಿ ರಫ್ತಿನಲ್ಲಿ ಮುಂಚೂಣಿಯಲ್ಲಿರುವ ದೇಶಗಳು.

ಕೃಷಿ ಆಧುನೀಕರಣಗೊಂಡಂತೆ ಜನರ ಜೀವನಶೈಲಿಗಳು ಕೂಡ ಬದಲಾಗುತ್ತಾ ಹೋಗುತ್ತವೆ. ದೇಶದಲ್ಲಿ ಸೇವಾ ವಲಯದ ವಿಸ್ತರಣೆ ಕೂಡ ಆಗುತ್ತದೆ. ಇದಕ್ಕೆ ಪಂಜಾಬ್ ರಾಜ್ಯ ಸ್ಪಷ್ಟ ನಿದರ್ಶನ. ಕೃಷಿ ಆಧುನೀಕರಣಗೊಂಡ ಪರಿಣಾಮವಾಗಿ ಪಂಜಾಬ್‌ನಲ್ಲಿ ಗೋಧಿ ಇಳುವರಿ ಅಧಿಕವಾಯಿತಷ್ಟೇ ಅಲ್ಲದೆ, ಇಲ್ಲಿನ ಕೃಷಿ ಕಾರ್ಮಿಕರಿಗಾಗಿ ನೆರೆಯ ರಾಜ್ಯಗಳಿಂದಲೂ ಕೂಡ ಬೇಡಿಕೆ ಬರಲಾರಂಭಿಸಿತು.

ಜಗತ್ತಿನಾದ್ಯಂತ ಕೈಗಾರಿಕೆ ಮತ್ತು ಕೃಷಿ ವಲಯಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಸಿರುವುದು ಸೇವಾವಲಯ. ಉದಾಹರಣೆಗೆ ಬ್ರಿಟನ್‌ನಲ್ಲಿ ಶೇ. 80.4ರಷ್ಟು ಮಂದಿ ಸೇವಾವಲಯದಲ್ಲಿ ಕೆಲಸ ಮಾಡುತ್ತಿದ್ದರೆ, ಕೇವಲ 19.6 ಮಾತ್ರ ಇನ್ನಿತರ ಎರಡು ವಲಯಗಳಲ್ಲಿ ಉದ್ಯೋಗದಲ್ಲಿದ್ದಾರೆ. ಹಸಿವು ಮತ್ತು ಕೃಷಿ ಕೆಲಸಗಳಿಂದ ಮುಕ್ತರಾದರೆ, ದಲಿತರು ಮನುವಿನ ಜಾತಿವ್ಯವಸ್ಥೆಗೆ ಸೆಡ್ಡು ಹೊಡೆದು ನಿಲ್ಲಲು ಸಾಧ್ಯವಾಗುತ್ತದೆ.

ಆರ್ಥಿಕ ಸುಧಾರಣೆಯ ಹಿನ್ನೆಲೆಯಲ್ಲಿ ಕೈಗಾರಿಕೆಗಳ ವಿಸ್ತರಣೆಯಾಗಿ, ಜಾಗತಿಕ ಸಂಪರ್ಕ ಕೂಡ ಸಾಧ್ಯವಾಗಿರುವುದರಿಂದ ಭೌತಿಕ ವಸ್ತುಗಳು ಈಗ ಅಸ್ತಿತ್ವದ ಸಂಕೇತಗಳಾಗಿ ಸಾಮಾಜಿಕ ಐಡೆಂಟಿಗಳ ಸ್ಥಳಗಳನ್ನು ಆಕ್ರಮಿಸುತ್ತಿವೆ. ಈ ಹೊಸ ಸಮಾಜದಲ್ಲಿ ನೀವು ಕೇವಲ ಬ್ರಾಹ್ಮಣ ಅಥವಾ ಠಾಕೂರ್ ಜಾತಿಯವರಾದರೆ ಸಾಲದು, ನಿಮ್ಮ ಬಳಿ ರೆಫ್ರಿಜರೇಟರ್, ಟಿವಿ, ಗ್ಯಾಸ್ ಸಂಪರ್ಕ, ಪೋನ್ ಸಂಪರ್ಕ, ವಾಹನಗಳು ಮುತ್ತಿತರ ಭೋಗ ವಸ್ತುಗಳು ಕೂಡ ಇರಬೇಕು. ಇಲ್ಲವಾದರೆ ಸಮಾಜದಲ್ಲಿ ನಿಮ್ಮ ಸ್ಥಾನಮಾನಕ್ಕೆ ಕುಂದು ಬರುವುದು ಖಂಡಿತ.

ಭಾರತದಲ್ಲಿ ಲಕ್ಷಾಂತರ ಮಂದಿ ದಲಿತೇತರರು ತಮ್ಮ ಹುಟ್ಟೂರು, ಕೃಷಿ ನೆಲ ಮತ್ತು ದೊಡ್ಡ ಮನೆಗಳನ್ನು ಬಿಟ್ಟು ಬರಲು ಸಾಧ್ಯವಾಗುತ್ತಿಲ್ಲ. ಆದರೆ ದಲಿತರಿಗೆ ಕೃಷಿ ಭೂಮಿ ಅಥವಾ ದೊಡ್ಡ ಮನೆಗಳು ಅಥವಾ ಜಾನುವಾರುಗಳ ಹಂಗಿಲ್ಲ. ಹೀಗಾಗಿ ದಲಿತರು ಸುಲಭವಾಗಿ ನಗರಗಳಿಗೆ ವಲಸೆ ಬರಬಹುದು.

ಮುಂದಿನ ದಶಕದಲ್ಲಿ ಭಾರತ ಹಿಂದೆಂದೂ ಕಾಣದಷ್ಟು ವೇಗದಲ್ಲಿ ನಗರೀಕರಣ ಪ್ರಕ್ರಿಯೆಗೆ ತನ್ನನ್ನು ಒಡ್ಡಿಕೊಳ್ಳಲಿದೆ. 1901ರಲ್ಲಿ ದೇಶದ ಕೇವಲ 10.84ರಷ್ಟು ಭಾಗ ಮಾತ್ರ ನಗರೀಕರಣಗೊಂಡಿತ್ತು. ಆದರೆ 2001ರ ವೇಳೆಗೆ ಶೇ. 27.78ರಷ್ಟು ಭಾಗ ನಗರೀಕರಣಗೊಂಡಿದೆ. ಯೋಜನಾ ಆಯೋಗದ ವಿಷನ್ 2020 ವರದಿಯ ಪ್ರಕಾರ, 2020ರ ವೇಳೆಗೆ ದೇಶದ ಶೇ. 40ರಷ್ಟು ಭಾಗ ನಗರೀಕರಣಗೊಳ್ಳಲಿದೆ. ಅಂದರೆ ಕೇವಲ ಒಂದು ದಶಕದಲ್ಲಿ ಶೇ. 12.22ರಷ್ಟು ಪ್ರಮಾಣದಲ್ಲಿ ನಗರೀಕರಣವಾಗ ಲಿದೆ.

1951ರಲ್ಲಿ, ದೇಶದ 17.29ರಷ್ಟು ಭಾಗ ನಗರಪ್ರದೇಶಗಳಿದ್ದವು. ಅಂದರೆ 1951ರಿಂದ 2001ರ ಅರ್ಧ ಶತಮಾನದಲ್ಲಿ ಭಾರತದಲ್ಲಿ ಶೇ. 10.49ರಷ್ಟು ಪ್ರಮಾಣದಲ್ಲಿ ನಗರೀಕರಣ ಪ್ರಕ್ರಿಯೆ ನಡೆದಿತ್ತು. ಅಂದರೆ ಮುಂದಿನ ಒಂದು ದಶಕರಲ್ಲಿ ಹಿಂದೆಂದಿಗಿಂತ ಅಧಿಕ

ಪ್ರಮಾಣದಲ್ಲಿ ನಗರೀಕರಣ ಪ್ರಕ್ರಿಯೆ ನಡೆಯಲಿದೆ.

ಕೃಷಿಯ ಆಧುನೀಕತಣ, ಕೈಗಾರಿಕೆಗಳ ವಿಸ್ತರಣೆ, ನಗರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳು ಸಮಾನತೆ ಮತ್ತು ಸ್ವಾತಂತ್ರ್ಯದ ಪಾರಂಪರಿಕ ಚಿಂತನೆಗೆ ಸ್ವಲ್ಪಮಟ್ಟಿಗೆ ವ್ಯತಿರಿಕ್ತವಾಗಿರಬಹುದು. ಆದರೆ ಈ ನಾಲ್ಕು ಅಸ್ತ್ರಗಳು ಮನುಧರ್ಮಕ್ಕೆ ಚೇತರಿಸಿಕೊಳ್ಳಲಾಗದ ಆಘಾತವನ್ನು ನೀಡಿರುವುದರಲ್ಲಿ ಯಾವುದೇ ಸಂಶಯವಿಲ್ಲ.

ಭಾರತವನ್ನು ಜಾತಿಮುಕ್ತವಾಗಿಸುವುದು ಹೇಗೆ?

"ನಿಜವಾದ ಭಾರತವನ್ನು ನೀವು ನಗರಗಳಲ್ಲಿ ನೋಡಲು ಸಾಧ್ಯವಿಲ್ಲ; ಅದನ್ನು ನೀವು ದೇಶದ ಏಳು ಲಕ್ಷ ಹಳ್ಳಿಗಳಲ್ಲಿ ಮಾತ್ರ ಕಾಣಲು ಸಾಧ್ಯ. ಹಳ್ಳಿಗಳು ನಾಶವಾದರೆ, ಭಾರತ ಕೂಡ ನಾಶವಾಗುತ್ತದೆ"– ಮಹಾತ್ಮ ಗಾಂಧೀಜಿ.

"ಭಾರತದ ಗ್ರಾಮೀಣ ಸಮುದಾಯದ ಬಗ್ಗೆ ಬುದ್ಧಿಜೀವಿಗಳ ಕಾಳಜಿ ಸಮರ್ಪಕವಾದುದಲ್ಲ. ಹಳ್ಳಿಗಳಲ್ಲಿ ಏನಿದೆ? ಅದೊಂದು ಸ್ಥಳೀಯತೆ, ಅಜ್ಞಾನ, ಕೀಳುಮಟ್ಟದ ಚಿಂತನೆ ಮತ್ತು ಕೋಮುವಾದದಿಂದ ಕೂಡಿದ ಕೂಪ"– ಡಾ. ಬಿ. ಆರ್. ಅಂಬೇಡ್ಕರ್.

ಅವಮಾನದ ಇತಿಹಾಸವನ್ನು ಬಳುವಳಿಯಾಗಿ ಪಡೆಯದವರು ನಗರೀಕರಣದ ವಿರುದ್ಧ ವಾದಿಸುತ್ತಾರೆ. ದೇಶದ ಕೆಲವು ಪ್ರಗತಿಪರ ಚಿಂತಕರು ಕೂಡ ಜಾತಿವ್ಯವಸ್ಥೆಯನ್ನು ತಮಗೆ ಗೊತ್ತಿಲ್ಲದೇ ಸಮರ್ಥಿಸುತ್ತಾರೆ. ಈ ಕಾರಣಕ್ಕಾಗಿಯೇ ಇದು ಮಾನಸಿಕ ವಿಚಾರ, ಸೈದ್ಧಾಂತಿಕ ವಿಚಾರವಲ್ಲ ಎಂದು ನಾನು ಈ ಹಿಂದೆಯೇ ಹಲವು ಬಾರಿ ವಾದ ಮಂಡಿಸಿದ್ದೇನೆ. ಮಾರುಕಟ್ಟೆಯ ವಿವಿಧ ಅಂಶಗಳು ಪಾರಂಪರಿಕ ಜಾತಿವ್ಯವಸ್ಥೆಗೆ ಪ್ರತಿರೋಧ ಒಡ್ಡುವುದರಿಂದ, ಕೆಲವು ಬುದ್ಧಿಜೀವಿಗಳು ಮಾರುಕಟ್ಟೆ ಅರ್ಥವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಜಾಗತೀಕರಣದ ವಿಚಾರದಲ್ಲಿಯೂ ಕೆಲವು ಚಿಂತಕರ ಅಭಿಪ್ರಾಯ ಇದೇ ರೀತಿ ಇದೆ. 1990ರ ನಂತರ ಜಾಗತೀಕರಣ ಪರಿಣಾಮದಿಂದಾಗಿ ಜಾತಿವ್ಯವಸ್ಥೆಯ ಬಗ್ಗೆ ಹಿಂದೆಂದಿಗಿಂತಲೂ ಹೆಚ್ಚಾಗಿ ಜಾಗತಿಕ ಮಟ್ಟದ ಚರ್ಚೆಗಳು ನಡೆಯುತ್ತಿವೆ. ಆದರೂ ಕೂಡ ಆಶ್ಚರ್ಯಕರ ರೀತಿಯಲ್ಲಿ ಜಾಗತೀಕರಣದ ವಿರೋಧಿಗಳನ್ನು ನಾವು ಕಾಣುತ್ತೇವೆ.

ಕೆಲವು ಸಾಮಾಜಿಕ ವಿದ್ಯಮಾನಗಳನ್ನು ಗಮನಿಸಿ. ದೇಶದಲ್ಲಿ ಮೊಟ್ಟಮೊದಲಿಗೆ ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಚೇರಿಯ ಶೌಚಾಲಯಗಳನ್ನು ಯಾಂತ್ರೀಕೃತಗೊಳಿಸಲಾರಂಭಿಸಿದವು. ಈ ಹಿಂದೆ ರೋಗಿಗಳಿಗೆ ಚಿಕಿತ್ಸೆ ನೀಡುವ ವೈದ್ಯರು ಮತ್ತು ನರ್ಸ್‌ಗಳು ಮಾತ್ರ ಕೈಚೀಲಗಳನ್ನು ಧರಿಸುತ್ತಿದ್ದರು. ಆದರೆ ಈಗ ಶೌಚಾಲಯ ಮತ್ತು ಇತರೆ ಸ್ಥಳಗಳನ್ನು ಶುಚಿಯಾಗಿಡುವವರು ಕೂಡ ಕೈಚೀಲಗಳನ್ನು ಧರಿಸುತ್ತಾರೆ. ಸಮವಸ್ತ್ರ (ಪ್ಯಾಂಟ್, ಷರ್ಟ್, ಶೂ, ಟೋಪಿ)ಗಳನ್ನು ಧರಿಸುವ ಇವರು ಈಗ 'ಸ್ವೀಪರ್ಸ್' ಅಲ್ಲ, 'ಹೌಸ್‌ಕೀಪರ್ಸ್.' ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ 'ಹೌಸ್ ಕೀಪಿಂಗ್' ಸಿಬ್ಬಂದಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಅರೆವೈದ್ಯಕೀಯ ಸಿಬ್ಬಂದಿಗಿಂತ ಉತ್ತಮವಾದ ಸಮವಸ್ತ್ರ ಧರಿಸಿರುತ್ತಾರೆ.

1990ರ ನಂತರ, ಕೇವಲ ಎರಡು ದಶಕಗಳ ಅಂತರದೊಳಗೆ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ, ಶಾಪಿಂಗ್ ಮಾಲ್‌ಗಳಲ್ಲಿ ಮತ್ತು ಖಾಸಗಿ ಕಚೇರಿಗಳಲ್ಲಿ ಶುಚಿಗೊಳಿಸುವ ವೃತ್ತಿ ಜಾತಿಮುಕ್ತ (ಕ್ಯಾಸ್ಟ್ ನ್ಯೂಟ್ರಲ್) ವಾಗಿ ಬದಲಾಗಿದೆ. ಈಗ ದಲಿತೇತರರು ಕೂಡ ಹೌಸ್‌ಕೀಪಿಂಗ್

ಅವಮಾನದ ಇತಿಹಾಸವನ್ನು ಬಳುವಳಿಯಾಗಿ ಪಡೆಯದವರು ನಗರೀಕರಣದ ವಿರುದ್ಧ ವಾದಿಸುತ್ತಾರೆ. ದೇಶದ ಕೆಲವು ಪ್ರಗತಿಪರ ಚಿಂತಕರು ಕೂಡ ಜಾತಿ ವ್ಯವಸ್ಥೆಯನ್ನು ತಮಗೆ ಗೊತ್ತಿಲ್ಲದೇ ಸಮರ್ಥಿಸುತ್ತಾರೆ. ಈ ಕಾರಣಕ್ಕಾಗಿಯೇ ಇದು ಮಾನಸಿಕ ವಿಚಾರ, ಸೈದ್ಧಾಂತಿಕ ವಿಚಾರವಲ್ಲ ಎಂದು ನಾನು ಈ ಹಿಂದೆಯೇ ಹಲವು ಬಾರಿ ವಾದ ಮಂಡಿಸಿದ್ದೇನೆ. ಮಾರುಕಟ್ಟೆಯ ವಿವಿಧ ಅಂಶಗಳು ಪಾರಂಪರಿಕ ಜಾತಿ ವ್ಯವಸ್ಥೆಗೆ ಪ್ರತಿರೋಧ ಒಡ್ಡುವುದರಿಂದ, ಕೆಲವು ಬುದ್ಧಿಜೀವಿಗಳು ಮಾರುಕಟ್ಟೆ ಅರ್ಥ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಜಾಗತೀಕರಣದ ವಿಚಾರದಲ್ಲಿಯೂ ಕೆಲವು ಚಿಂತಕರ ಅಭಿಪ್ರಾಯ ಇದೇ ರೀತಿ ಇದೆ.

ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಜಾತಿನಾಶ ಮತ್ತು ಜಾತಿಯಾಧಾರಿತ ತಾರತಮ್ಯದ ಬಗ್ಗೆ ಮಾತನಾಡುವಾಗ ನಾವು ನೆನಪಿನಲ್ಲಿಡಬೇಕಾದ ಮೂಲಭೂತವಾದ ವಿಚಾರವೇನೆಂದರೆ, ಸಮಾಜದಲ್ಲಿ ಜಾತಿನಗಣ್ಯವಾಗಬೇಕಾದರೆ, ಭಾರತ ಜಾತಿಮುಕ್ತವಾಗಬೇಕು. ಅಂದರೆ ಪ್ರಸ್ತುತ ಜಾತಿಯಾಧಾರಿತವಾಗಿರುವ ವೃತ್ತಿಗಳು ಮೊದಲಿಗೆ ಜಾತಿಮುಕ್ತವಾಗವೇಕು.

ವಿದೇಶಿ ಮೂಲದ ಉದ್ಯಮ ಸಂಸ್ಥೆಗಳು ಜಾತಿಮುಕ್ತ ಸಮಾಜವನ್ನು ನಿರ್ಮಿಸುವಲ್ಲಿ ಹೊಸ ಕ್ರಾಂತಿ ಮಾಡುತ್ತಿವೆ. ಈಗಾಗಲೇ ಎಲ್ಲ ವಿಶೇಷ ಆರ್ಥಿಕ ವಲಯಗಳಲ್ಲಿ ಕಸಸಂಗ್ರಹಣೆಯನ್ನು ಯಾಂತ್ರೀಕೃತಗೊಳಿಸಲಾಗಿದೆ. 2021ಕ್ಕೆ ಭಾರತ ಕಾಲಿಡುವ ಮೊದಲು ದೇಶದಲ್ಲಿ ಕಸಸಂಗ್ರಹಣೆ ಸಂಪೂರ್ಣವಾಗಿ ಯಾಂತ್ರೀಕೃತಗೊಳ್ಳಲಿದೆ. ಕಸಸಂಗ್ರಹಿಸುವವರು ಮತ್ತು ಬೀದಿ ಗುಡಿಸುವವರು ಅತ್ಯುತ್ತಮ ಸಮವಸ್ತ್ರಗಳನ್ನು ಧರಿಸುವುದರಿಂದ ಈ ವೃತ್ತಿಗಳು ಕೀಳು ಎಂಬ ಹಣೆಪಟ್ಟಿಯಿಂದ ಮುಕ್ತವಾಗುತ್ತವೆ.

1990ರ ನಂತರದ ದೇಶದ ನಗರೀಕರಣ ಪ್ರಕ್ರಿಯೆ ಹಿಂದಿನಂತಿಲ್ಲ. ಕೈಗಾರಿಕೀಕರಣಕ್ಕೂ ಈ ಮಾತು ಅನ್ವಯಿಸುತ್ತದೆ. ಬಹುತೇಕ ತಂತ್ರಜ್ಞಾನಗಳು ಮತ್ತು ಯಂತ್ರೋಪಕರಣಗಳನ್ನು ಬಳಸುವ ಕಾರ್ಮಿಕರು ಸಮವಸ್ತ್ರಗಳನ್ನು ಧರಿಸಬೇಕಾಗುತ್ತದೆ. ಟ್ರಕ್ ನಡೆಸುವ ಚಾಲಕರು ಕೂಡ ಚಳಿಗಾಲದಲ್ಲಿ ಉದ್ದನೆಯ ಕೋಟು ಮತ್ತು ಚರ್ಮದ ಜಾಕೆಟ್ ಧರಿಸಿರುತ್ತಾರೆ. ಕ್ಯಾಬ್ ಚಾಲಕರು ಕೂಡ ಉತ್ತಮ ಉಡುಗೆಯನ್ನು ತೊಟ್ಟಿರುತ್ತಾರೆ. ಹಾಗೆ ಮನೆಗೆಲಸದವರು ಕೂಡ ಉತ್ತಮವಾದ ಉಡುಗೆ ತೊಡುಗೆಗಳನ್ನು ಬಳಸಲಾರಂಭಿಸಿದ್ದಾರೆ.

ನಗರೀಕರಣ ಪ್ರಕ್ರಿಯೆ ಹಿಂದೆಂದಿಗಿಂತಲೂ ಉತ್ತಮ ರೀತಿಯಲ್ಲಿ ಸಮಾನತೆಯ ನಾಗರೀಕತೆಯನ್ನು ಪ್ರತಿಪಾದಿಸುತ್ತಿದೆ. ಈ ಹಿಂದೆ ಬಹುತೇಕ ನಗರಗಳು ಯಾವುದೇ ಎಗ್ಗಿಲ್ಲದೆ ಬೆಳೆಯುತ್ತಾಹೋದವು. ಹೊಸ ನಗರಗಳ ಪರಿಕಲ್ಪನೆಯೇ ಇರಲಿಲ್ಲ. ನಗರಗಳು ವೃತ್ತಿಪರ ನಗರ ನಿರ್ಮಾತೃಗಳ ಸಹಾಯವಿಲ್ಲದೇ ಬೆಳೆದವು. ಚರಂಡಿ ವ್ಯವಸ್ಥೆ, ನೆಲದೊಳಗಿನ ಓಎಫ್‌ಸಿ ಜಾಲ, ನೀರು ಮತ್ತು ವಿದ್ಯುತ್‌ಚ್ಛಕ್ತಿ ಸಂಪರ್ಕ ಮತ್ತಿತರ ಸಮರ್ಪಕ ವ್ಯವಸ್ಥೆಗಳಿಲ್ಲದೆ ನಗರಗಳು ಬೆಳೆಯುತ್ತಾ ಹೋದವು.

ಆದರೆ ಈಗ ನಗರೀಕರಣ ಹೊಸ ಆಯಾಮ ಪಡೆದುಕೊಂಡಿದೆ. ನಗರಗಳು ಯೋಜನಾಬದ್ಧವಾಗಿ ನಿರ್ಮಾಣವಾಗುತ್ತಿವೆ. ಹೊಸ ಟೌನ್‌ಷಿಪ್‌ಗಳು ವಿಕಾಸ ಹೊಂದುತ್ತಿವೆ. ಜಮೀನ್ದಾರಿ ಶಕ್ತಿಗಳು ಮತ್ತು ಜಮೀನ್ದಾರಿಕೆಯ ಹಿನ್ನೆಲೆ ಹೊಂದಿರುವ ಬುದ್ಧಿಜೀವಿಗಳಿಗೆ ಸವಾಲೊಡ್ಡಿ ಎಸ್‌ಇಜೆಡ್‌ಗಳು ತಲೆ ಎತ್ತುತ್ತಿವೆ.

ನೀವು ಯಾವುದೇ ಎಸ್‌ಇಜೆಡ್‌ಗಳಿಗೆ ಭೇಟಿ ನೀಡಿದರೆ ಯುರೋಪಿಯನ್ ಟೌನ್‌ಶಿಪ್ ಒಂದಕ್ಕೆ ಭೇಟಿ ನೀಡಿದಂತಾಗುತ್ತದೆ. ಗ್ರೇಟರ್ ನೋಯಿಡಾಗೆ ನೀವು ಸಂಜೆ ವೇಳೆ ಭೇಟಿ ನೀಡಿದರೆ ಯುರೋಪ್‌ನ ನಗರವೊಂದರಲ್ಲಿ ಇರುವ ಅನುಭವ ನಿಮಗಾಗುತ್ತದೆ. ಹೊಸ ನಗರಗಳು ಸಾಮಾನ್ಯವಾಗಿ ಜಾತಿಮುಕ್ತವಾಗಿರುತ್ತವೆ. ಅದೇ ರೀತಿ ಹಳೆಯ ನಗರಗಳು ಕೂಡ ಹಿಂದೆಂದಿಗಿಂತಲೂ ಭಿನ್ನವಾಗಿ ಜಾತಿಮುಕ್ತವಾಗಲಿದೆ.

ಆಧುನಿಕ ನಗರೀಕರಣ ಪ್ರಕ್ರಿಯೆ ನಗರವಾಸಿಗಳಿಗೆ ಹೊಸ ಜೀವನಶೈಲಿಯನ್ನು ಪರಿಚಯಿಸಲಿದೆ. ಬ್ಯೂಟಿ ಪಾರ್ಲರ್ ಒಂದರಲ್ಲಿ ಮಸಾಜ್ ಮಾಡುವ ಹೆಂಗಸು ಗೌಡ ಅಥವಾ ಕಮ್ಮ ಜಾತಿಗೆ ಸೇರಿರಬಹುದು ಮತ್ತು ಗ್ರಾಹಕ ಹೆಂಗಸು ಮಾದಿಗ ಜಾತಿಯವರಾಗಿರಬಹುದು ಎಂದು ಯಾರೂ ಗಂಭೀರವಾಗಿ ಗಮನಿಸಲು ಹೋಗುವುದಿಲ್ಲ. ಅಸ್ಪೃಶ್ಯತೆ ಮತ್ತು ಜಾತಿವ್ಯವಸ್ಥೆಯ ವಿರುದ್ಧ ಹೋರಾಡುವಲ್ಲಿ ಅನಾಮಿಕತೆ ಯಾವಾಗಲೂ ಪ್ರಭಾವಿ ಅಸ್ತ್ರ. ಉದಾಹರಣೆಗೆ, ಕಸ ಸಂಗ್ರಹಿಸುವವರ ಸಾಮಾಜಿಕ ಮೂಲವನ್ನು ಗುರುತಿಸಲಾಗದ್ದರಿಂದ ಇಲ್ಲಿ ತಾರತಮ್ಯಕ್ಕೆ ಅವಕಾಶವಿರುವುದಿಲ್ಲ.

ಎತ್ತಿನಗಾಡಿಗಳು ಹೇಗೆ ರೈಲು ಹಳಿಗಳ ಮೇಲೆ ನಡೆಯಲು ಸಾಧ್ಯವಿಲ್ಲವೋ ಹಾಗೆ ನಗರಗಳಲ್ಲಿ ಮನುಧರ್ಮ ವ್ಯವಸ್ಥೆ ನಡೆಯಲು ಸಾಧ್ಯವಿಲ್ಲ. ಈ ದಶಕದ ನಗರೀಕರಣ ಪ್ರಕ್ರಿಯೆ ಮುಂದಿನ ದಿನಗಳಲ್ಲಿ ಅತಿವೇಗವಾದ ನಗರೀಕರಣ ಪ್ರಕ್ರಿಯೆಗೆ ನಾಂದಿ ಹಾಡಲಿದೆ. 2050 ರ ವೇಳೆಗೆ ಭಾರತ ದೇಶ ಬಹುತೇಕ ನಗರೀಕರಣಗೊಂಡಿರುತ್ತದೆ. ಜಾತಿಮುಕ್ತ ಉದ್ಯೋಗಗಳು, ಅನಾಮಿಕತೆಯ ವಿದ್ಯಮಾನ, ಜಾತಿಮುಕ್ತ ಸಮಾಜವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಬಹುಶಃ ಇದೇ ಕಾರಣಕ್ಕೆ ಏನೋ ಜಮೀನ್ದಾರಿಕೆಯ ಹಿನ್ನೆಲೆ ಹೊಂದಿರುವ ಬುದ್ಧಿಜೀವಿಗಳು/ಕಾರ್ಯಕರ್ತರಿಗೆ ಕಸಿವಿಸಿಯಾಗುತ್ತಿರುವುದು.

ಬಸು ಮತ್ತು ಬಜಾಜ್ ಸ್ಕೂಟರ್

ನನ್ನ ಸ್ವಗ್ರಾಮದಲ್ಲಿ ಬಹುತೇಕ ದಲಿತ ಯುವಕರು ಕೃಷಿ ಕೆಲಸವನ್ನು ಮಾಡಲು ಹಿಂಜರಿಯುತ್ತಾರೆ. 1930ರ ದಶಕದ ಆರಂಭದಲ್ಲಿ ನನ್ನ ಇಬ್ಬರು ಚಿಕ್ಕಪ್ಪಂದಿರು ಮಯನ್‌ಮಾರ್ ದೇಶಕ್ಕೆ ವಲಸೆ ಹೋದರು. ನನ್ನ ತಂದೆ ಕೂಡ ಅವರ ಹಿಂದೆ ಹೋದರು. ಇನ್ನು ಬಹಳಷ್ಟು ಮಂದಿ ಗ್ರಾಮಸ್ಥರು ನಾರಿನ ಮಿಲ್‌ಗಳು ಮತ್ತು ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡಲು ಪಶ್ಚಿಮ ಬಂಗಾಳಕ್ಕೆ ವಲಸೆ ಹೋಗುತ್ತಿದ್ದರು. ನನ್ನ ಗ್ರಾಮದ ಮೊದಲ ಪೀಳಿಗೆಯ

ವಲಸಿಗರು ಪಶ್ಚಿಮ ಬಂಗಾಳದಲ್ಲಿ ನೆಲೆಸಿದ್ದರು. 1980ರ ವರೆಗೆ ನಮ್ಮ ಭಾಗದ ಕೆಳವರ್ಗದ ಜನರಿಗೆ ಪಶ್ಚಿಮ ಬಂಗಾಳ ಸ್ವರ್ಗವಾಗಿತ್ತು.

ನನ್ನ ಬಾಲ್ಯವನ್ನು ನೆನಪಿಸಿಕೊಂಡರೆ, ನನ್ನ ತಲೆಮಾರಿನ ಹಿರಿಯರೊಡನೆ ಮಾತನಾಡಿದರೆ, ಪಶ್ಚಿಮ ಬಂಗಾಳದಲ್ಲಿ ನೆಲೆಸಿರುವ ಜನರ ಆಹಾರ ಪದ್ಧತಿ ಮತ್ತು ಜೀವನಶೈಲಿಯಲ್ಲಿ ಬದಲಾವಣೆಯಾಗಿರುವುದು ಗೊತ್ತಾಗುತ್ತದೆ. ಮಕ್ಕಳು ಹೊಸ ರೀತಿಯ ಉಡುಗೆಗಳನ್ನು ತೊಡಲು ಆರಂಭಿಸಿದ್ದರು. ಮಹಿಳೆಯರು ಕೂಡ ಪೆಟ್ಟಿಕೋಟ್‌ಗಳನ್ನು ಧರಿಸುತ್ತಿದ್ದರು. ವಲಸೆ ಬಂದ ಕುಟುಂಬದವರು ಹೊಟ್ಟೆ ತುಂಬ ಊಟ ಮಾಡಲಾರಂಭಿಸಿದರು. ಭಾರತದ ಮಧ್ಯಮವರ್ಗದವರ ಪಾಲಿಗೆ ಕ್ಯಾಲಿಫೋರ್ನಿಯಾ ಹೇಗೋ ಕೆಳವರ್ಗದ ದಲಿತರ ಪಾಲಿಗೆ ಕಲ್ಕತ್ತಾ ಅಷ್ಟು ಪ್ರಾಮುಖ್ಯತೆ ಪಡೆದಿತ್ತು.

ನಾನು ನಡೆಸಿದ ಟೆಲಿಫೋನ್ ಸಮೀಕ್ಷೆಯ ಪ್ರಕಾರ 1990ರ ನಂತರ ನನ್ನ ಗ್ರಾಮದಿಂದ ಒಬ್ಬ ವ್ಯಕ್ತಿ ಕೂಡ ಪಶ್ಚಿಮ ಬಂಗಾಳಕ್ಕೆ ವಲಸೆ ಹೋಗಿಲ್ಲ. 1990ರ ಆರಂಭದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಜ್ಯೋತಿ ಬಸು ದಲಿತರ ಪಾಲಿನ ಒಂದು ಮುಕ್ತಿಮಾರ್ಗವನ್ನು ಮುಚ್ಚಿಬಿಟ್ಟರು. ಈಗ ಬಹುತೇಕ ದಲಿತ ಕಾರ್ಮಿಕರು ದೆಹಲಿ, ಮುಂಬೈ, ಪುಣೆ, ಅಹಮದಾಬಾದ್‌ನಂತಹ ನಗರಗಳಿಗೆ ವಲಸೆ ಬರಲಾರಂಭಿಸಿದ್ದಾರೆ. ಭಾರತದ ಇತರ ರಾಜ್ಯಗಳಲ್ಲಿಯೂ ಕೂಡ ಜ್ಯೋತಿ ಬಸು ಅಂತಹವರು ಆಡಳಿತ ನಡೆಸಲಾರಂಭಿಸಿದರೆ ದಲಿತ ಕಾರ್ಮಿಕರ ಗತಿ ಏನಾಗುತ್ತಿತ್ತೋ ಏನೋ!

ರಾಹುಲ್ ಬಜಾಜ್ ಮತ್ತು ಜ್ಯೋತಿ ಬಸು ಇಬ್ಬರು ಕೆಲವು ವಿಚಾರಗಳಲ್ಲಿ ಸಾಮ್ಯತೆ ಹೊಂದಿದ್ದಾರೆ. 1990ರ ದಶಕದಲ್ಲಿ ರಾಹುಲ್ ಬಜಾಜ್ ಅಂದಿನ ಪ್ರಧಾನ ಮಂತ್ರಿ ಪಿ.ವಿ.ನರಸಿಂಹರಾವ್ ಬಳಿಗೆ ನಿಯೋಗವೊಂದನ್ನು ಕೊಂಡೊಯ್ದು 'ರಾಷ್ಟ್ರೀಯ ಹಿತ' ಕಾಯಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಪ್ರವೇಶ ಕಲ್ಪಿಸಬಾರದು. ಇದರಿಂದ ಭಾರತೀಯ ಉದ್ಯಮ ಸಂಸ್ಥೆಗೆ ಭಾರೀ ಹಿನ್ನಡೆ ಉಂಟಾಗುವುದೆಂದು ವಾದ ಮಂಡಿಸಿದ್ದರು. ಈಗ ಪ್ರತಿಭೆಯ ಪರವಾಗಿ ದೊಡ್ಡ ದೊಡ್ಡ ಮಾತನಾಡುವ ರಾಹುಲ್ ಬಜಾಜ್‌ಗೆ ಆಗ ಸ್ಪರ್ಧೆಯ ಆತಂಕ ಕಾಡಿತ್ತು. 1945ರಲ್ಲಿ ಆರಂಭವಾದ ಬಜಾಜ್ ಸಮೂಹ ಮೂಲತಃ ವಾಣಿಜ್ಯ ಸಂಸ್ಥೆಯಾಗಿತ್ತು. ವಿದೇಶದಿಂದ ದ್ವಿಚಕ್ರ ವಾಹನಗಳನ್ನು ಆಮದು ಮಾಡಿಕೊಂಡು ಭಾರತೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿತ್ತು. ನಂತರ 1959ರಲ್ಲಿ ಪರವಾನಗಿ ಪಡೆದ ಸಂಸ್ಥೆ ಇಟಲಿಯ ಆಟೋಮೊಬೈಲ್ ಸಂಸ್ಥೆ ಪಿಯಾಜಿಯೋದಿಂದ ತಂತ್ರಜ್ಞಾನ ಪಡೆದು ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳನ್ನು ಉತ್ಪಾದಿಸಲು ಆರಂಭಿಸಿತು. ಮಾರುಕಟ್ಟೆಯಲ್ಲಿ ಯಾವುದೇ ಪ್ರತಿಸ್ಪರ್ಧೆಯಿಲ್ಲದೆ ಬಜಾಜ್ ಭಾರತೀಯ ಮಧ್ಯಮವರ್ಗದಲ್ಲಿ ಹೊಸ ಸಂಚಲನ ಮೂಡಿಸಿತು. ಬಜಾಜ್ ಸ್ಕೂಟರ್ ಖರೀದಿಸಲು ಬುಕಿಂಗ್ ನಂತರ 10–12 ವರ್ಷಗಳು ಕಾಯಬೇಕಾಗುತ್ತಿತ್ತು. ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ತಯಾರಿಲ್ಲದ ಬಜಾಜ್ ಸಂಸ್ಥೆಗೆ ವಿದೇಶಿ ಉದ್ಯಮ ಸಂಸ್ಥೆಗಳು ಭಾರತೀಯ ಮಾರುಕಟ್ಟೆ ಪ್ರವೇಶಿಸುವುದು ಕೂಡ ಇಷ್ಟವಿರಲಿಲ್ಲ. ಯಶಸ್ಸಿನ ದಿನಗಳಲ್ಲಿ ಬಜಾಜ್ ಸಂಸ್ಥೆಯಲ್ಲಿ ಸುಮಾರು 1,0000 ಮಂದಿಗೆ ಉದ್ಯೋಗ ಮಾಡುತ್ತಿದ್ದಿರಬಹುದು.

ಆದರೆ ಇಂದು ದ್ವಿಚಕ್ರ ವಾಹನಗಳನ್ನು ಉತ್ಪಾದಿಸುವ ಉದ್ಯಮ ಸಂಸ್ಥೆಗಳು ಸುಮಾರು 7 ಲಕ್ಷ ಮಂದಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಬಜಾಜ್ ಸ್ಕೂಟರ್‌ಗಳನ್ನು ಎಂದೂ ಅಂತರರಾಷ್ಟ್ರೀಯ ಮಾರುಕಟ್ಟೆಗಾಗಿ ಉತ್ಪಾದಿಸದ ಕಾರಣ, ಬಜಾಜ್ ಸಂಸ್ಥೆ ಆತಂಕ ವ್ಯಕ್ತಪಡಿಸಿದಂತೆ ಸ್ಕೂಟರ್ ಉತ್ಪಾದನೆಯನ್ನು ಸಂಪೂರ್ಣ ಸ್ಥಗಿತಗೊಳಿಸಬೇಕಾಯಿತು. ಜ್ಯೋತಿ ಬಸು ನಿಧನರಾಗುವ ಕೆಲವು ವಾರಗಳ ಹಿಂದೆ ಬಜಾಜ್ ಸ್ಕೂಟರ್‌ನ ಉತ್ಪಾದನೆಯನ್ನು ಕೂಡ ನಿಲ್ಲಿಸಲಾಯಿತು. ಜಪಾನ್‌ನ ಕವಾಸಕಿ ಸಂಸ್ಥೆಯೊಂದಿಗಿನ ಸಹಭಾಗಿತ್ವದ ಪರಿಣಾಮವಾಗಿ ಬಜಾಜ್ ಉದ್ಯಮ ಸಂಸ್ಥೆ ಇನ್ನೂ ಅಸ್ತಿತ್ವದಲ್ಲಿದೆ. ಬಜಾಜ್ ಸ್ಕೂಟರನ್ನು ನೆಚ್ಚಿಕೊಂಡಿದ್ದರೆ ಇಷ್ಟು ಹೊತ್ತಿಗೆ ಸಂಸ್ಥೆ ಮುಳುಗಿ ಹೋಗಬೇಕಿತ್ತು.

ಕೆಲವು ವಿಚಾರಗಳಲ್ಲಿ ವಿಭಿನ್ನರಾಗಿದ್ದರೂ ಬಸು ಮತ್ತು ಬಜಾಜ್ ಇಬ್ಬರೂ ಕೂಡ ಭಾರತ ಶಾಶ್ವತವಾಗಿ ಕೃಷಿ ಪ್ರಧಾನ ದೇಶವಾಗಿ ಉಳಿಯುವಂತಹ ಸಮಾನವಾದ ಚಿಂತನೆಯನ್ನು ಹೊಂದಿದ್ದರು. ಬಂಡವಾಳಶಾಹಿ ವ್ಯವಸ್ಥೆಯನ್ನು ವಿಸ್ತರಣೆ ಮಾಡುವುದರಿಂದ ಬಂಡವಾಳಶಾಹಿಗಳ 'ಶೋಷಣೆ'ಗೆ ಇಂಬು ಕೊಟ್ಟಂತಾಗಿ ಮಾರ್ಕ್ಸ್‌ವಾದಕ್ಕೆ ಪೆಟ್ಟುಬೀಳಲಿದೆ ಎಂಬುದು ಬಸು ಅವರ ಆತಂಕ. ಬಸು ಅವರ ಪೂರ್ವಜರು ಕೃಷಿ ಕಾರ್ಮಿಕರಾಗಿಲ್ಲದ ಕಾರಣ, ಕೃಷಿ ಕಾರ್ಮಿಕರ ಶೋಷಣೆಯ ಆಯಾಮವನ್ನು ಅವರು ಅರ್ಥ ಮಾಡಿಕೊಂಡಿರಲಿಲ್ಲ.

ಬಸು ಮತ್ತು ಬಜಾಜ್ ಅವರ ಕಾಲದಲ್ಲಿ ನಮ್ಮ ಹಳ್ಳಿಗಳಲ್ಲಿ ಹೆಚ್ಚುವರಿ ಕಾರ್ಮಿಕರಿದ್ದರು. 1980ರ ದಶಕದಲ್ಲಿ ಬಿತ್ತನೆ ಕೆಲಸ ಮುಗಿದ ನಂತರ ದಲಿತ ಕುಟುಂಬಗಳು ಕೆಲಸವಿಲ್ಲದೆ ಖಾಲಿ ಕುಳಿತುಕೊಳ್ಳುತ್ತಿದ್ದರು. ಯಾರಾದರೂ ಭೂಮಾಲೀಕರು ಕೆಲಸಕ್ಕೆ ಕರೆದರೆ ಇಡೀ ದಲಿತ ಕುಟುಂಬವೇ ಅಲ್ಲಿಗೆ ದೌಡಾಯಿಸುತ್ತಿತ್ತು. ಹೆಚ್ಚುವರಿ ಕಾರ್ಮಿಕರು ಸುಲಭವಾಗಿ ಸಿಗುತ್ತಿದ್ದುದರಿಂದ ಭೂಮಾಲೀಕರು ಹಣದ ರೂಪದಲ್ಲಿ ಕೂಲಿ ನೀಡುತ್ತಿರಲಿಲ್ಲ. ಯಾವ ವಯಸ್ಸಿನಲ್ಲಿ ನೂರು ರೂಪಾಯಿಯ ನೋಟನ್ನು ನೋಡಿದ್ದಿರಿ ಎಂಬ ನನ್ನ ಪ್ರಶ್ನೆಗೆ ಗ್ರಾಮದ ಹಿರಿಯ ದಲಿತರೊಬ್ಬರು ನಕ್ಕು, ತಮ್ಮ ಕಾಲದಲ್ಲಿ ನೋಟುಗಳೇ ಇರಲಿಲ್ಲ ಎಂಬ ಉತ್ತರ ನೀಡುತ್ತಾರೆ.

ಬಜಾಜ್ ಅವರಿಗೆ 'ರಾಷ್ಟ್ರೀಯ ಹಿತರಕ್ಷಣೆ' ಎಂದರೆ ಬಜಾಜ್ ಸಂಸ್ಥೆಯ ಹಿತರಕ್ಷಣೆಯಾಗಿತ್ತು. ಹಿಂದೆ ಚೇತಕ್ ಸ್ಕೂಟರ್‌ಗಾಗಿ ಗ್ರಾಹಕರು ಹತ್ತು ಹನ್ನೆರಡು ವರ್ಷಗಳ ಕಾಲ ಕಾಯುತ್ತಿದ್ದರು. ಒಂದು ವೇಳೆ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದೆ ಹೋಗಿದ್ದರೆ ಬಜಾಜ್ ಈಗ ನ್ಯಾನೋ ಕಾರಿನ ದರಕ್ಕೆ ಚೇತಕ್ ಸ್ಕೂಟರ್ ಮಾರಾಟ ಮಾಡುತ್ತಿತ್ತು. ಅದಕ್ಕೆ ಬಹುಶಃ ಕಾಲು ಶತಮಾನ ಕಾಯಬೇಕಾಗುತ್ತಿತ್ತೋ ಏನೋ!

ಆರ್ಥಿಕ ವಿಸ್ತರಣೆಯ ಪರಿಣಾಮವಾಗಿ ವಿದೇಶಿ ಸಂಸ್ಥೆಗಳು ಕೂಡ ಭಾರತೀಯ ಮಾರುಕಟ್ಟೆಯನ್ನು ಪ್ರವೇಶಿಸಿದವು. ಹೋಂಡಾ ಸಂಸ್ಥೆಯ ಸ್ಕೂಟರನ್ನು ಪಿಜ್ಜಾವನ್ನು ಮನೆಗೆ ತಲುಪಿಸಿದಂತೆ, ನಿಮ್ಮ ಮನೆಗೇ ತಂದು ಕೊಡುತ್ತಾರೆ. ಪಿಜ್ಜಾವನ್ನು ಅರ್ಧ ಗಂಟೆಯೊಳಗೆ ಮನೆಗೆ ತಲುಪಿಸಿದರೆ, ಸ್ಕೂಟರ್ ತಲುಪಲು ಬಹುಶಃ ಒಂದೆರಡು ಗಂಟೆಗಳಾಗಬಹುದು. ಆರ್ಥಿಕ ವಿಸ್ತರಣೆಯ ಪರಿಣಾಮ ಉದ್ಭವಿಸಿರುವ ವ್ಯವಸ್ಥೆಗೆ ಅನಕ್ಷರಸ್ಥರ ಅವಶ್ಯಕತೆಯೂ ಇದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹೊರತಾಗಿಯೂ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಮಿಕರು ಸಿಗುತ್ತಿಲ್ಲ. ಹೀಗಾಗಿ ಕೃಷಿ ಕಾರ್ಮಿಕರಿಗೆ ಹಿಂದೆಂದಿಗಿಂತಲೂ ಹೆಚ್ಚು ಬೇಡಿಕೆ ಮತ್ತು ಗೌರವ ಸಿಗುತ್ತಿದೆ. ಕಾರ್ಮಿಕರು ಸಿಗದೆ ಇರುವ ಕಾರಣದಿಂದ ಭೂಮಾಲೀಕರು ಕೂಡ ಕೃಷಿ ಚಟುವಟಿಕೆಗಳಿಗೆ ಯಂತ್ರೋಪಕರಣಗಳನ್ನು ಬಳಸಲಾರಂಭಿಸಿದ್ದಾರೆ.

ದೇಶದ ಕೆಳವರ್ಗದವ ಪಾಲಿಗೆ ಶಾಪವಾಗಿದ್ದ ಎರಡು ಪ್ರಮುಖ ಸಂಕೇತಗಳು– ಜ್ಯೋತಿ ಬಸು ಮತ್ತು ಬಜಾಜ್ ಸ್ಕೂಟರ್– ಈಗ ಅದೃಷ್ಟವಶಾತ್ ನಮ್ಮೊಡನಿಲ್ಲ.

* * * * *

ನಾವೆಲ್ಲರೂ ನಡೆಯುತ್ತೇವೆ. ಈಕೆ ಕೂಡ ನಡೆಯುತ್ತಾರೆ. ಆದರೆ ಈಕೆ ರಾಣಿಯಂತೆ ನಡೆಯುತ್ತಾರೆ. ಅಯಸ್ಕಾಂತದಂತೆ ಸೆಳೆಯುವ ವ್ಯಕ್ತಿತ್ವ, ಸ್ಫೂರ್ತಿ ಚಿಮ್ಮುವ ಕಣ್ಣುಗಳು, ಸುಂದರ ರೂಪ, ಆತ್ಮವಿಶ್ವಾಸದ ಸಂಕೇತವಾದ ಈಕೆ ದಲಿತರ ಪಾಲಿಗೆ ಸ್ಫೂರ್ತಿ ದೇವತೆಯೇ ಸರಿ. ಮಹಾರಾಷ್ಟ್ರ ಮೂಲದ ಆಕೆಯ ಹೆಸರು ಕಲ್ಪನಾ ಸರೋಜ್.

ದೇಶದ ಜನಮಾನಸಕ್ಕೆ ಜಮಷೆಡ್‌ಜಿ ಟಾಟಾ ಅವರು ಏನನ್ನು ಸಂಕೇತಿಸುತ್ತಾರೋ, ಕಲ್ಪನಾ ಸರೋಜ್ ದಲಿತರ ಪಾಲಿಗೆ ಅಂತಹ ದೊಡ್ಡ ಪ್ರೇರಣೆಯ ಸಂಕೇತವಾಗುತ್ತಾರೆ. ಆದರೆ ಇಲ್ಲಿ ಒಂದು ವ್ಯತ್ಯಾಸವಿದೆ. ಜಮಷೆಡ್‌ಜಿ ತಮ್ಮ ಕುಟುಂಬದ ಉದ್ಯಮ ವ್ಯವಹಾರವನ್ನು ಪಿತ್ರಾರ್ಜಿತವಾಗಿ ಪಡೆದರೆ, ಕಲ್ಪನಾ ಏನೂ ಇಲ್ಲದೆ ಶೂನ್ಯದಿಂದ ಯಶಸ್ಸು ಸಾಧಿಸಿದವರು. ಜಾಗತಿಕ ಮಟ್ಟದಲ್ಲಿ ಪೂರ್ವಾಪರ ಮತ್ತು ಉದ್ಯಮದ ಯಶಸ್ಸಿನ ದೃಷ್ಟಿಯಿಂದ ಕಲ್ಪನಾರನ್ನು ಭಾರತದ ಓಪ್ರಾ ವಿನ್ಫ್ರೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಕೊಂಚ ಮಟ್ಟಿಗೆ ಕೇಶವಿನ್ಯಾಸ ಬದಲಿಸಿಕೊಂಡರೆ ಕಲ್ಪನಾ ಕೂಡ ಓಪ್ರಾರಂತೆಯೇ ಕಾಣುತ್ತಾರೆ. ಜೊತೆಗೆ ಅಮೆರಿಕಾದ ಕಪ್ಪು ಜನರ ಪಾಲಿಗೆ

ನಾನು ನಡೆಸಿದ ಟೆಲಿಫೋನ್ ಸಮೀಕ್ಷೆಯ ಪ್ರಕಾರ 1990ರ ನಂತರ ನನ್ನ ಗ್ರಾಮದಿಂದ ಒಬ್ಬ ವ್ಯಕ್ತಿ ಕೂಡ ಪ.ಬಂಗಾಳಕ್ಕೆ ವಲಸೆ ಹೋಗಿಲ್ಲ. 1990ರ ಆರಂಭದಲ್ಲಿ ಪ.ಬಂಗಾಳದ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಜ್ಯೋತಿ ಬಸು ದಲಿತರ ಪಾಲಿನ ಒಂದು ಮುಕ್ತಿ ಮಾರ್ಗವನ್ನು ಮುಚ್ಚಿಬಿಟ್ಟರು. ಈಗ ಬಹುತೇಕ ದಲಿತ ಕಾರ್ಮಿಕರು ಮುಂಬೈ, ಅಹಮದಾಬಾದ್ ನಂತಹ ನಗರಗಳಿಗೆ ವಲಸೆ ಬರಲಾರಂಭಿಸಿದ್ದಾರೆ. ಭಾರತದ ಇತರ ರಾಜ್ಯಗಳಲ್ಲಿಯೂ ಕೂಡ ಜ್ಯೋತಿ ಬಸು ಅಂತಹವರು ಆಡಳಿತ ಸನಡೆಸಲಾರಂಭಿಸಿದರೆ ದಲಿತ ಕಾರ್ಮಿಕರ ಗತಿ ಏನಾಗುತ್ತಿತ್ತೋ ಏನೋ! ರಾಹುಲ್ ಬಜಾಜ್–ಜ್ಯೋತಿ ಬಸು ಇಬ್ಬರು ಕೆಲವು ವಿಚಾರಗಳಲ್ಲಿ ಸಾಮ್ಯತೆ ಹೊಂದಿದ್ದಾರೆ.

ದಲಿತರ ಸ್ಫೂರ್ತಿದೇವತೆ ಕಲ್ಪನಾ ಸರೋಜ್

ರಾಬರ್ಟ್ ಜಾನ್ಸನ್ ಹೇಗೆ ಸ್ಫೂರ್ತಿಯಾಗಿದ್ದಾರೋ ಅದೇ ರೀತಿ ಕಲ್ಪನಾ ಭಾರತದ ದಲಿತರಿಗೆ ಸ್ಫೂರ್ತಿ ಸೆಲೆಯಾಗಿದ್ದಾರೆ. ರಾಬರ್ಟ್ ಜಾನ್ಸನ್ ಅಮೆರಿಕಾದ ಕಪ್ಪು ಜನಾಂಗದ ಮೊಟ್ಟ ಮೊದಲ ಬಿಲಿಯನೇರ್.

ಕಲ್ಪನಾ ಅವರ ಮಾಲೀಕತ್ವದ ಕಮಾನಿ ಟ್ಯೂಬ್ಸ್ ಸಂಸ್ಥೆ ಈಗ ಮುಂಬೈನ ಬಲ್ಲಾರ್ಡ್ ಎಸ್ಟೇಟ್‌ನಲ್ಲಿ ಕಮಾನಿ ಛೇಂಬರ್ಸ್ ಹೆಸರಿನ ಕಚೇರಿಯನ್ನು ಹೊಂದಿದೆ. ದಕ್ಷಿಣ ಮುಂಬೈನ ವಿಟಿ ಮತ್ತು ಕೋಟೆ ಪ್ರದೇಶದಲ್ಲಿರುವ ಬಲ್ಲಾರ್ಡ್ ಎಸ್ಟೇಟ್ 'ಲಂಡನ್‌ನಂತಿದೆ.' ಮುಂಬೈ ಬಂದರು ಟ್ರಸ್ಟ್‌ನ ಸಂಸ್ಥಾಪಕರಾದ ಜೆ ಎ ಬಲ್ಲಾರ್ಡ್ ಅವರ ಹೆಸರಿನಲ್ಲಿರುವ ಈ ಎಸ್ಟೇಟ್ ಯುರೋಪಿಯನ್ ಶೈಲಿಯಲ್ಲಿದ್ದು, ಮುಂಬೈನ ಪ್ರತಿಷ್ಠಿತ ಉದ್ಯಮ ಪ್ರದೇಶವಾಗಿದೆ. ಇಲ್ಲಿ ಒಂದು ಚದರ ಅಡಿ ಭೂಮಿಗೆ 40,000 ರೂ. ತಗುಲುತ್ತದೆ. ಕಲ್ಪನಾ ಅವರ ಕಮಾನಿ ಛೇಂಬರ್ಸ್ ಸುಮಾರು 1,25,000 ಚದರ ಅಡಿಗಳಷ್ಟು ಸ್ಥಳವನ್ನು ವ್ಯಾಪಿಸಿದೆ. ಕಮಾನಿ ಛೇಂಬರ್ಸ್‌ನ ಎರಡು ಕಟ್ಟಡದಲ್ಲಿ, ಒಂದು ಕಟ್ಟಡ ಸುಮಾರು ಏಳು ಅಂತಸ್ತಿನದಾಗಿದೆ.

ಕಲ್ಪನಾ ಸರೋಜ್ ಮತ್ತು ಅಸೋಸಿಯೇಟ್ಸ್ ಎಂಬ ಬ್ರ್ಯಾಂಡ್ ಹೆಸರಿನಲ್ಲಿ ಹಲವಾರು ಸಂಸ್ಥೆಗಳನ್ನು ಕಲ್ಪನಾ ಅವರು ನಡೆಸುತ್ತಾರೆ. ಸಕ್ಕರೆ ಕಾರ್ಖಾನೆ, ಟ್ಯೂಬ್ ಕಾರ್ಖಾನೆ, ರಿಯಲ್ ಎಸ್ಟೇಟ್ ಹೀಗೆ ವಿವಿಧ ಕ್ಷೇತ್ರಗಳಲ್ಲಿ ವ್ಯವಹಾರ ನಡೆಸುತ್ತಾರೆ. 1956ರಲ್ಲಿ ರಂಜಿಭಾಯಿ ಕಮಾನಿ ಅವರು ಸ್ಥಾಪಿಸಿದ ಐತಿಹಾಸಿಕ ಕಮಾನಿ ಟ್ಯೂಬ್ಸ್ ಸಂಸ್ಥೆ ಕಂಚು ಮತ್ತು ಹಿತ್ತಾಳೆಯ ಹಲವಾರು ಉತ್ಪನ್ನಗಳನ್ನು ತಯಾರಿಸುತ್ತದೆ.

ಹಲವಾರು ನವೀನ ಮಾದರಿಯ ಕಾರುಗಳ ಒಡತಿಯಾದ ಕಲ್ಪನಾ ಇಂಗ್ಲೆಂಡ್‌ನಲ್ಲಿ ಶಿಕ್ಷಣ ಮುಗಿಸಿದ ಮಗಳಿಗಾಗಿ ಮರ್ಸಿಡೀಸ್ ಬೆನ್ಸ್ ಮತ್ತು ಆಡಿ ಕಾರುಗಳನ್ನು ಬುಕ್ ಮಾಡಿದ್ದಾರೆ. ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಕಲ್ಪನಾ ಅವರ ಕುಟುಂಬ ವಿದೇಶಗಳಲ್ಲಿ ಷಾಪಿಂಗ್ ಮಾಡುತ್ತಾರೆ. ಪೈಲಟ್ ಪರವಾನಗಿ ಹೊಂದಿರುವ ತನ್ನ ಮಗನಿಗಾಗಿ ಒಂದು ವಿಮಾನಯಾನ ಸಂಸ್ಥೆಯನ್ನು ಆರಂಭಿಸಬೇಕೆಂದಿದ್ದಾರೆ. ಬಾಕ್ಸೈಟ್ ಗಣಿಯ ಮಾಲೀಕತ್ವ ಹೊಂದಿರುವ ಇವರು, ಮುಂಬೈನ ಹೊರವಲಯದಲ್ಲಿ ಎಲೀಟ್ ಹೌಸಿಂಗ್ ಟೌನ್‌ಷಿಪ್ ನಿರ್ಮಿಸಬೇಕೆಂದಿದ್ದಾರೆ. ಇಲ್ಲಿನ ನಿವಾಸಿಗಳು ಹೆಲಿಕಾಪ್ಟರ್‌ಗಳಲ್ಲಿ ಪ್ರಯಾಣಿಸುವಷ್ಟು ಐಷೋರಾಮಿ ವ್ಯವಸ್ಥೆಯನ್ನು ಕಲ್ಪಿಸಬೇಕೆಂದಿದ್ದಾರೆ.

ಇಂದು ದಲಿತರ ಆಶಾವಾದದ ಸ್ಫೂರ್ತಿಸೆಲೆಯಾಗಿರುವ ಕಲ್ಪನಾ ಅವರ ಇಲ್ಲಿಯವರೆಗಿನ ಪಯಣ ಸಾಮಾನ್ಯವಾದುದಲ್ಲ. ಓರ್ವ ದಲಿತ ಮಹಿಳೆಯಾಗಿರುವ ಶಾಪಕ್ಕೆ ತುತ್ತಾದ ಕಲ್ಪನಾ ತಮ್ಮ ಜೀವನಗಾಥೆಯನ್ನು ಹೇಳಿದಾಗ ನನಗೆ ಮಾತೇ ಹೊರಡಲಿಲ್ಲ. ಶಾಪಗ್ರಸ್ಥ ಹಿನ್ನೆಲೆಯಿಂದ ಬಲಾರ್ಡ್ ಎಸ್ಟೇಟ್‌ವರೆಗೆ ಬೆಳೆಯಲು ಜಾತಿವ್ಯವಸ್ಥೆಯನ್ನು ಮೆಟ್ಟಿ ನಿಂತ ಕಲ್ಪನಾ ಎಲ್ಲ ದಲಿತರಿಗೆ ಮಾದರಿ.

ಪೊಲೀಸ್ ಕಾನ್ಸ್‌ಟೆಬಲ್ ತಂದೆ ಮತ್ತು ಅನಕ್ಷರಸ್ಥ ತಾಯಿಯ ಮಗಳಾಗಿ ಜನಿಸಿದ ಕಲ್ಪನಾಳನ್ನು 12 ವರ್ಷಕ್ಕೆ ಶಾಲೆ ಬಿಡಿಸಿ ಮದುವೆ ಮಾಡಲಾಯಿತು. ಮುಂಬೈನ ಸ್ಲಮ್‌ನಲ್ಲಿರುವ ಗಂಡನ ಮನೆ ಸೇರಿದ ಕಲ್ಪನಾಗೆ ಅತ್ತೆ-ಮಾವಂದಿರ ಕಿರುಕುಳ ಕಾದಿತ್ತು. ಹಸಿವು ಮತ್ತು ಅವಮಾನಕ್ಕೆ ಒಳಗಾಗಿ ಕಲ್ಪನಾ ಅನಾರೋಗ್ಯಕರ ಸ್ಥಿತಿಯಲ್ಲಿ ತನ್ನ ಪೋಷಕರ ಮನೆಗೆ ಹಿಂದಿರುಗಿದಳು.

ದೇಶದ ಜನಮಾನಸಕ್ಕೆ ಜಮಷೆಡ್‌ಜಿ ಟಾಟಾ ಅವರು ಏನನ್ನು ಸಂಕೇತಿಸುತ್ತಾರೋ, ಕಲ್ಪನಾ ಸರೋಜ್ ದಲಿತರ ಪಾಲಿಗೆ ಅಂತಹ ದೊಡ್ಡ ಪ್ರೇರಣೆಯ ಸಂಕೇತವಾಗುತ್ತಾರೆ. ಆದರೆ ಇಲ್ಲಿ ಒಂದು ವ್ಯತ್ಯಾಸವಿದೆ. ಜಮ ಷೆಡ್‌ಜಿ ತಮ್ಮ ಕುಟುಂಬದ ಉದ್ಯಮ ವ್ಯವಹಾರವನ್ನು ಪಿತ್ರಾರ್ಜಿತವಾಗಿ ಪಡೆದರೆ, ಕಲ್ಪನಾ ಏನೂ ಇಲ್ಲದೆ ಶೂನ್ಯದಿಂದ ಯಶಸ್ಸು ಸಾಧಿಸಿದವರು.

ಕಲ್ಪನಾಗೆ ವಿದ್ಯಾಭ್ಯಾಸದ ಹಸಿವು ಇನ್ನೂ ತಣಿದಿರಲಿಲ್ಲ. ಮತ್ತೆ ಶಾಲೆ ಸೇರಿದ ಆಕೆ ಒಂಭತ್ತನೆಯ ತರಗತಿಯಲ್ಲಿ ಉತ್ತೀರ್ಣರಾದಳು. ತವರು ಮನೆಯಲ್ಲಿ ತನ್ನ ಮುಂದಿನ ಜೀವನವನ್ನು ಕಳೆಯಲು ಸಾಧ್ಯವಿಲ್ಲ ಎಂಬುದನ್ನು ಮನಗಂಡ ಆಕೆ ದುಡಿಯಲು ಆರಂಭಿಸಿದಳು. ಬಾಲ್ಯದ ಗೆಳತಿಯರು ಕಾಲೇಜಿಗೆ ಹೋದರೆ ಕಲ್ಪನಾ ಹೊಲಿಗೆಯಂತ್ರವನ್ನು ಖರೀದಿಸಿದಳು.

ಸುತ್ತಮುತ್ತಲ ಜನ ಅಪಹಾಸ್ಯಕ್ಕೆ ಗುರಿಮಾಡಿದಾಗ ನೊಂದುಕೊಂಡ ಕಲ್ಪನಾ ಮತ್ತೆ ಮುಂಬೈಗೆ ಹೋದರು. ತನ್ನ ಚಿಕ್ಕಪ್ಪನ ಮನೆಯಲ್ಲಿ, ನಂತರ ಗುಜರಾತಿ ಕುಟುಂಬವೊಂದರ ಮನೆಯಲ್ಲಿ ತಂಗಿದ್ದ ಕಲ್ಪನಾ ಜೀವನದ ಮಹಾಪಯಣವನ್ನು ಆರಂಭಿಸಿದರು. ದಿನಕ್ಕೆ ಎರಡು ರೂ. ಕೂಲಿಗೆ ಹೊಸ್ಯೆರಿ ಸಂಸ್ಥೆಗೆ ಸೇರಿಕೊಂಡ ಕಲ್ಪನಾ ಯಶಸ್ಸಿನ ಒಂದೊಂದೇ ಮೆಟ್ಟಿಲನ್ನು ಏರುತ್ತಾ ಬಂದರು. ಈಕೆಯ ವೃತ್ತಿಪರತೆ ಮತ್ತು ಆತ್ಮವಿಶ್ವಾಸವನ್ನು ಗಮನಿಸಿದ ಮಾಲೀಕರು ತಿಂಗಳಿಗೆ 400 ರೂ. ವೇತನ ನೀಡಲಾರಂಭಿಸಿದರು. "ಆ ವೇತನ ತೆಗೆದುಕೊಂಡಾಗ ರಾಣಿಯಂತೆ ಅನಿಸುತ್ತಿತ್ತು" ಎಂದು ಮುಗುಳ್ನಗುತ್ತಾರೆ ಕಲ್ಪನಾ.

ದೃಢವಿಶ್ವಾಸ ಮತ್ತು ವೃತ್ತಿಪರತೆಯ ಬಲದಿಂದ 18ನೆಯ ವಯಸ್ಸಿಗೆ ಸ್ಟೀಲ್ ಕಪ್‌ಬೋರ್ಡ್‌ಗಳನ್ನು ಉತ್ಪಾದಿಸಲು ಬ್ಯಾಂಕ್‌ನಿಂದ ಸಾಲ ಪಡೆಯುವಲ್ಲಿ ಯಶಸ್ವಿಯಾದರು.

1995ರಲ್ಲಿ 2.50 ಲಕ್ಷ ಮೌಲ್ಯದ ಆಸ್ತಿ ಖರೀದಿಸಿದ್ದೇ ಕಲ್ಪನಾಗೆ ಯಶಸ್ಸಿನ ಬಾಗಿಲು ತೆರೆಯಿತು. ಆರ್ಥಿಕ ನಾಗಾಲೋಟದ ಪರಿಣಾಮದಿಂದ ಬಂಗಾರವಾಗಿ ಬದಲಾದ ಈ ಭೂಮಿ ಸು.40 ಕೋಟಿ ರೂ.ಗೆ ಮಾರಾಟವಾಯಿತು. ಅಲ್ಲಿಂದ ಹಿಂದಿರುಗಿ ನೋಡಿದ್ದೇ ಇಲ್ಲ. ಈಗ ಯಶಸ್ಸಿನ ಆಕಾಶದಲ್ಲಿ ಹಾರಾಡುತ್ತಿರುವ ಕಲ್ಪನಾ, ಓಪ್ರಾ ವಿನ್ಫ್ರೆ ಮತ್ತು ರಾಬರ್ಟ್ ಜಾನ್ಸನ್ ಅವರಂತೆ ಪ್ರೇರಣೆಯ ಪಾತ್ರ ನಿರ್ವಹಿಸಲು ಸಿದ್ಧರಾಗಿದ್ದಾರೆ. □

ಪ್ರಜಾಪ್ರಭುತ್ವ v/s ರಾಜಪ್ರಭುತ್ವ: ಕರ್ನಾಟಕ ಎತ್ತ ಸಾಗುತ್ತಿದೆ?

(45ನೇ ಪುಟದಿಂದ)

ದಲ್ಲಿ ನಡೆದಿರುವ ಪಾರಮಾರ್ಥಿಕತೆಯ ಖಾಸಗೀಕರಣ. ಇಲ್ಲಿ ಶತಮಾನಗಳ ಕಾಲ ಸರ್ಕಾರದ ಮುಜರಾಯಿ ಇಲಾಖೆಯ ನಿರ್ವಹಣೆಯಲ್ಲಿದ್ದ ದೊಡ್ಡ ದೊಡ್ಡ ದೇವಾಲಯಗಳನ್ನು ಸರ್ಕಾರವು ಖಾಸಗಿ ಸಂಘ-ಸಂಸ್ಥೆಗಳಿಗೆ ವರ್ಗಾಹಿಸಿಕೊಡುತ್ತಿದೆ. ಇದನ್ನು ಇಲ್ಲಿ ಪಾರಮಾರ್ಥಿಕತೆಯ ಖಾಸಗೀಕರಣವೆಂದು ಕರೆಯಬಹುದೇನೋ!. ಗೋಕರ್ಣದ ಮಹಾಬಳೇಶ್ವರ ದೇವಳದ ಆಡಳಿತವನ್ನು ಹೊಸನಗರದ ರಾಮಚಂದ್ರಾಪುರ ಮಠದ ವಶಕ್ಕೆ ನೀಡಲಾಗಿದೆ. ಈಗ ಉಡುಪಿಯಲ್ಲಿರುವ ಅಂಬಾಲಪಾಡಿ ಮಹಾಕಾಳಿ ಮತ್ತು ಜನಾರ್ದನ ದೇವಾಲಯಗಳ ಆಡಳಿತವನ್ನು ಶಿವಳ್ಳಿ ಬ್ರಾಹ್ಮಣ ಕುಟುಂಬದ ವಶಕ್ಕೆ ನೀಡುವ ಕ್ರಮ ನಡೆಯುತ್ತಿದೆ. ಇದೇ ರೀತಿ ರಾಜ್ಯದ ಅನೇಕ ದೇವಾಲಯಗಳನ್ನು ಖಾಸಗೀಕರಣಕ್ಕೆ ಒಳಪಡಿಸುವ ಉದ್ದೇಶ ಸರ್ಕಾರಕ್ಕಿದ್ದಂತೆ ಕಾಣುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಶೋಭೆ ತರುವಂತಹ ಸಂಗತಿಯಲ್ಲ.

ನಮ್ಮ ಸರ್ಕಾರವು ದೇವರು-ದೇವಾಲಯಗಳನ್ನು ಹೇಗೆ ಪರಿಭಾವಿಸಿಕೊಂಡಿದೆ ಎಂಬುದೇ ವಿಚಿತ್ರವಾಗಿ ಕಾಣುತ್ತದೆ. ದೇವರು-ದೇವಾಲಯಗಳನ್ನು ಹೇಗೆ ಖಾಸಗಿಯವರ ವಶಕ್ಕೆ ನೀಡಲು ಸಾಧ್ಯ? ಅವುಗಳು ಸಾರ್ವಜನಿಕ ಆಸ್ತಿ. ಇಲ್ಲಿ 'ಸಾರ್ವಜನಿಕ' ಎಂಬುದನ್ನು ನಾವು ಸರ್ಕಾರಿ ಮಾಲಿಕತ್ವವೆಂಬ ಸೀಮಿತ ಅರ್ಥದಲ್ಲಿ ಪರಿಭಾವಿಸಿಕೊಳ್ಳಬಾರದು. ಇಲ್ಲಿ ಸಾರ್ವಜನಿಕರು ಎಂದರೆ 'ಜನರು' ಎಂಬ ಅರ್ಥದಲ್ಲಿ ಪರಿಭಾವಿಸಿಕೊಳ್ಳಬೇಕು. ಸಾರ್ವಜನಿಕವೆಂದರೆ ಹಲವರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಸಂಗತಿಗಳೆಂದು ತಿಳಿಯಬೇಕು. ಹೀಗೆ ಸಾರ್ವಜನಿಕರನ್ನು, ಅಂದರೆ ಜನರನ್ನು ಪ್ರತಿನಿಧಿಸುವ ದೇವರು-ದೇವಾಲಯಗಳನ್ನು 'ಕೆಲವರ' ವಶಕ್ಕೆ ಒಳಪಡಿಸುವ ಕ್ರಮಕ್ಕೆ ಸರ್ಕಾರವು ಮುಂದಾದುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಕರ್ನಾಟಕದಲ್ಲಿ ಪ್ರಜಾಪ್ರಭುತ್ವವು ಭ್ರಷ್ಟಗೊಳ್ಳುತ್ತಿರುವುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ.

ಕರ್ನಾಟಕವು ಎತ್ತ ಸಾಗುತ್ತಿದೆ ಎಂದರೆ ಅದು ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಖಾಸಗೀಕರಣಕ್ಕೆ ಒಳಗಾಗುತ್ತಿದೆಯೆಂದು ಹೇಳಬಹುದು. ಇಲ್ಲಿ ಪ್ರಜಾಪ್ರಭುತ್ವವೆನ್ನುವುದು ಅರ್ಥರಹಿತವಾಗಿ ಬಿಟ್ಟಿದೆ. ದಾರಿ ತಪ್ಪಿರುವ ಕರ್ನಾಟಕಕ್ಕೆ ಸರಿಯಾದ ದಾರಿಯನ್ನು ತೋರಿಸುವ ಅಗತ್ಯವಿದೆ. ನಮ್ಮದು ಪಾರಮಾರ್ಥಿ ಕತೆಯ ದಾರಿಯಲ್ಲ. ಅದು ಪದಾರ್ಥವಾದಿ ದಾರಿಯಾಗಬೇಕು. ನಮ್ಮ ದಾರಿ ಪ್ರಭುತ್ವವಾದಿ ಆಗಿರಬಾರದು. ಅದು ಪ್ರಜಾಪ್ರಭುತ್ವವಾದಿ ಆಗಿರಬೇಕು. ನಮ್ಮ ದಾರಿ ಲಿಂಗ ಸ್ಪಂದಿಯಾಗಿರಬೇಕೇ ವಿನಾ ಲಿಂಗನಿರಪೇಕ್ಷವಾಗಿರಬಾರದು. ದೇವರು-ದೇವಾಲಯಗಳು ಜನರ ಮನೆಯೊಳಗಿನ ಸಂಗತಿಗಳಾಗಬೇಕೇ ವಿನಾ ಅವು ಸಾರ್ವಜನಿಕ ಆಚರಣೆಗಳಾಗಬಾರದು. ಸಾರ್ವಜನಿಕ, ಅಂದರೆ ಜನರ ಆಸ್ತಿಯ ಖಾಸಗೀಕರಣ ನಡೆಯಬಾರದು. ಭ್ರಷ್ಟತೆಯ ದಾರಿಯಿಂದ ನಮ್ಮ ಕರ್ನಾಟಕವನ್ನು ರಕ್ಷಿಸಬೇಕಾಗಿದೆ. ಈ ದಿಶೆಯಲ್ಲಿ ನಾವು ಚಿಂತಿಸಬೇಕಾಗಿದೆ. □



ಸರ್ವ ನಾಶಕ್ಕೆ ದುರಾಸೆಯೇ ದಾರಿ!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ಬೋಧಿಸತ್ವರು ಒಬ್ಬ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರು. ಅವರು ಬೆಳೆದು ದೊಡ್ಡವರಾದ ನಂತರ ತಂದೆ ತಾಯಿಗಳು ಅವರ ಕುಲದಲ್ಲಿ ಒಂದು ಹೆಣ್ಣನ್ನು ತಂದು ಮದುವೆ ಮಾಡಿದರು. ಆ ದಂಪತಿಗಳಿಗೆ ಹಲವು ವರ್ಷಗಳ ಅಂತರದಲ್ಲಿ ನಂದ, ನಂದವತಿ ಮತ್ತು ನಂದಸುಂದರಿ ಎಂಬ ಮೂವರು ಸುಂದರ ಹೆಣ್ಣು ಮಕ್ಕಳು ಹುಟ್ಟಿದರು. ಆ ಮಕ್ಕಳು ಬೆಳೆದು ದೊಡ್ಡವರಾಗುವ ಮೊದಲೇ ಬೋಧಿಸತ್ವರು ಅಕಾಲಿಕ ಮರಣಕ್ಕೆ ತುತ್ತಾದರು. ಅವರ ಹೆಂಡತಿಯು ಆಶ್ರಯವಿಲ್ಲದೆ ಅನಾಥರಾದರು. ಮಕ್ಕಳನ್ನು ಸಾಕಲು ಅನ್ಯ ಮಾರ್ಗವಿಲ್ಲದೆ ಅವರಿವರ ಮನೆಯಲ್ಲಿ ಕೂಲಿ ನಾಲಿ ಮಾಡಿ ಕಷ್ಟದಲ್ಲಿ ಮಕ್ಕಳನ್ನು ಪಾಲಿಸುತ್ತಿದ್ದಳು.

ಹೀಗಿರಲು ಬೋಧಿಸತ್ವರು ತಮ್ಮ ಕರ್ಮನುಸಾರ ಸ್ವರ್ಣ ಹಂಸವಾಗಿ ಪುರ್ನಜನ್ಮ ಪಡೆದರು. ತನ್ನ ಮೈತುಂಬ ಚಿನ್ನದ ರೆಕ್ಕೆ ಪುಕ್ಕಗಳನ್ನು ಹೊಂದಿದ್ದರು. ಆ ಹಂಸವು ಪೂರ್ವಜನ್ಮದ ನೆನಪನ್ನು ಕೂಡ ಹೊಂದಿತ್ತು. ಒಂದು ದಿನ ನಾನು ಎಲ್ಲಿಂದ ಸತ್ತು ಇಲ್ಲಿ ಹುಟ್ಟಿದೆ ಎಂಬ ಬಗ್ಗೆ ವಿಚಾರ ಮಾಡತೊಡಗಿತು. ಆಗ ನಾನು ಹಿಂದಿನ ಜನ್ಮದಲ್ಲಿ ಮೂರು ಹೆಣ್ಣು ಮಕ್ಕಳ ತಂದೆಯಾಗಿದ್ದೆ ಎಂಬ ನೆನಪು ಮೂಡುತ್ತದೆ. ಆಗ ತನ್ನ ಹೆಂಡತಿ ಮಕ್ಕಳು ಹೇಗೆ ಜೀವನ ನೀರ್ವಹಿಸುತ್ತಿದ್ದಾರೆಂದು ನೋಡಲು ಹೊರೆಟರು. ಮಕ್ಕಳನ್ನು ಸಾಕುವ ಸಲುವಾಗಿ ಹೆಂಡತಿಯು ಸಿರಿವಂತರ ಮನೆಯಲ್ಲಿ ದಾಸಿಯಾಗಿ ದುಡಿಯುತ್ತಿರುವುದನ್ನು ಕಂಡ ಮರುಗಿದರು. ಆಗ ಅವರು ಹೀಗೆ ಚಿಂತಿಸಿದರು; ನನ್ನ ಮೈತುಂಬ ಚಿನ್ನದ ಗರಿಗಳು ತುಂಬಿವೆ. ಪ್ರತಿದಿನವು ನಾನೇಕೆ ಒಂದೊಂದು ಚಿನ್ನದ ಗರಿಯನ್ನು ಅವರಿಗೆ ಉಡುಗೊರೆಯಾಗಿ ಕೊಡಬಾರದು? ನನ್ನ ಪಾಲಿನ ಋಣವನ್ನೇಕೆ ತೀರಿಸಬಾರದು? ಅದರಿಂದ ಅವರ ಕಷ್ಟವು ನೀಗಿ ಸುಖವಾಗಿರುತ್ತಾರೆ ಎಂದು ತೀರ್ಮಾನಿಸಿದರು.

ಮರುದಿನ ತನ್ನ ಮನೆಯ ಒಳಗೆ ಹಾರಿ ಬಂದು ತೊಲೆಯ ಮೇಲೆ ಕುಳಿತುಕೊಂಡಿತು. ಯಾವುದೋ ಪಕ್ಷಿಯೊಂದು ದಾರಿ ತಪ್ಪಿ ಮನೆಯ ಒಳಗೆ ಬಂದು ಕುಳಿತಿದೆ ಎಂದು ಬಗೆದ ಅವರ ಹೆಂಡತಿ ಆ ಪಕ್ಷಿಯನ್ನು ಹೊರಗೆ ಓಡಿಸಲು ಮುಂದಾಗಲು ಬೋಧಿಸತ್ವರು;

"ಪ್ರಿಯೇ, ನಾನು ಸಾಮಾನ್ಯ ಪಕ್ಷಿಯಲ್ಲ. ನಿನ್ನ ಪತಿ. ಈ ಜನ್ಮದಲ್ಲಿ ಸ್ವರ್ಣವರ್ಣದ ಹಂಸವಾಗಿ ಜನ್ಮತಾಳಿದ್ದೇನೆ. ನನ್ನನ್ನು ಓಡಿಸಬೇಡ; ನಿನ್ನನ್ನು ಮತ್ತು ಮಕ್ಕಳನ್ನು ಒಮ್ಮೆ ನೋಡಿಕೊಂಡು ಹೋಗೋಣವೆಂದು ಇಲ್ಲಿಗೆ ಬಂದಿದ್ದೆ. ಆಗ ನೀನು ಮಕ್ಕಳನ್ನು ಸಾಕುವ ಸಲುವಾಗಿ ಅನ್ಯರ ಮನೆಯಲ್ಲಿ ದಾಸಿಯಾಗಿ ಜೀತ ಮಾಡುವುದನ್ನು ಕಂಡೆ. ಬಲುವಾಗಿ ಮನನೊಂದೆ. ನನ್ನ ಹಲವು ಜನ್ಮಗಳ ಪುಣ್ಯದ ಫಲವಾಗಿ ಈ ಜನ್ಮದಲ್ಲಿ ಸ್ವರ್ಣ ಹಂಸವಾಗಿ ಹುಟ್ಟಿತುವೆ. ನನ್ನ ಮೈತುಂಬ ಚಿನ್ನದ ಗರಿಗಳನ್ನು ಹೊಂದಿದವನಾಗಿದ್ದೇನೆ. ಹಾಗಿರುವಾಗ ದಿನಕ್ಕೊಂದು ಚಿನ್ನದ ಗರಿಯನ್ನು ನಿನಗೆ ಉಡುಗೊರೆಯಾಗಿ ಕೊಟ್ಟು ನಿನ್ನ ಕಷ್ಟವನ್ನು ನಾನೇಕೆ ನೀಗಿಸಬಾರದು ಎಂದು ಯೋಚಿಸಿ ಮನೆಗೆ ಬಂದಿದ್ದೇನೆ!" ಎನ್ನಲು ಅವರ ಹೆಂಡತಿಯ ಸಂತೋಷಕ್ಕೆ ಪಾರವೇ ಇರಲ್ಲಿಲ್ಲ.

ತನ್ನ ಮಕ್ಕಳನ್ನೇಲ್ಲ ಕರೆದು ತಂದೆಯ ಪರಿಚಯ ಮಾಡಿಸಿ ಇರುವ ವಿಷಯವನ್ನು ತಿಳಿಯ ಹೇಳಿದಳು. ಇದರಿಂದ ಇಡೀ ಕುಟುಂಬವೇ ಸಂತೋಷದಲ್ಲಿ ತೇಲಿತು. ಮಹಾಭಾಗ್ಯದ ರೂಪದಲ್ಲಿ ಮನೆಗೆ ಬಂದ ಬೋಧಿಸತ್ವರನ್ನು ಪ್ರೀತಿ ವಿಶ್ವಾದಿಂದ ಸತ್ಕಾರಿಸಿ ಭೋಜನವನ್ನು ನೀಡಿ ಬಿಳ್ಕೋಟ್ಟರು. ಅದಕ್ಕೂ ಮುನ್ನ ತಾವು ನುಡಿದಂತೆ ಒಂದು ಚಿನ್ನದಗರಿಯನ್ನು ಉಡುಗೊರೆಯಾಗಿ ಉದುರಿಸಿ ಹೋದರು.

ಆ ಚಿನ್ನದ ಗರಿಯನ್ನು ಕೈಗೆತ್ತಿಕೊಂಡ ಬೋಧಿಸತ್ವರ ಪತ್ನಿಯಾದ ಬ್ರಾಹ್ಮಣಿಯು ಬೆರಗುಗಣ್ಣಿನಿಂದ ನೋಡುತ್ತಾ ಮಂತ್ರಮುಗ್ಧಳಾದಳು. ಅವಳ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ರಾಜಬೀದಿಗೆ ಹೋಗಿ ಚಿನ್ನದ ವ್ಯಾಪಾರಿಗೆ ಕೊಡಲು ತಾನು ಊಹಿಸದಷ್ಟು ಹಣವನ್ನು ಕೊಟ್ಟನು. ಮನೆಗೆ ಬೇಕಾದ ಅಗತ್ಯ ದಿನಸಿ ವಸ್ತುಗಳನ್ನುಕೊಂಡು ತಂದಳು. ದಿನವು ಅರೆಹೊಟ್ಟೆಯಲ್ಲಿ ಊಟ ಮಾಡುತ್ತಿದ್ದ ಮಕ್ಕಳಿಗೆ ಭಕ್ಷ್ಯ ಭೋಜನವನ್ನು ಮಾಡಿ ಹಾಕಿದಳು. ಇದರಿಂದ ಮಕ್ಕಳು ಸಂತಸಪಟ್ಟವು.

ಭೋಧಿಸತ್ವರು ತಾವು ನುಡಿದಂತೆ ಪ್ರತಿ ದಿನವು ತಪ್ಪದೆ ಮನೆಗೆ ಬಂದು ಒಂದೊಂದು ಚಿನ್ನದ ಗರಿಯನ್ನು ಉದುರಿಸಿ ಹೋಗುತ್ತಿದ್ದರು. ಬ್ರಾಹ್ಮಣಿಯು ನಿತ್ಯ ಆ ಚಿನ್ನದ ಗರಿಗಳನ್ನು ಸಂಗ್ರಹಿಸಿ ಮಾರಿ ಅದರಲ್ಲಿ ದೊರೆತ ಹಣದಿಂದ ನಿಧಾನವಾಗಿ ತನ್ನ ಮೂಲಭೂತ ಅಗತ್ಯಗಳನ್ನೇಲ್ಲ ಪೊರೈಸಿಕೊಂಡಳು. ಬಳಿಕ ಐಶ್ಯಾರಾಮಿ ಬದುಕನ್ನು ರೂಢಿಸಿಕೊಂಡಳು. ಆಕೆಗೆ ದಿನ ಕಳೆದಂತೆ ಚಿನ್ನದ ಗರಿ ಮತ್ತು ಹಣದ ಮೇಲೆ ಅಪಾರ ವ್ಯಾಮೋಹ ಮೂಡಿತು. ಹೀಗಿರಲು ಒಂದು ದಿನ ತನ್ನ ಮಕ್ಕಳನ್ನು ಕರೆದು;

"ಮಕ್ಕಳೇ, ಪಕ್ಷಿಗಳ ಮನಸ್ಸು ಇಂದು ಹೀಗಿದ್ದು ನಾಳೆ ಹೇಗಿರುತ್ತದ್ದೋ ಬಲ್ಲವರಾರು? ಅದೂ ಅಲ್ಲದೆ ಪ್ರಾಣಿಗಳ ಆಯಸ್ಸು ಅಲ್ಪಕಾಲ. ಸತ್ಯವು ಹೀಗಿರುವುದರಿಂದ ನಿಮ್ಮ ತಂದೆಯವರು ಇಂದು ಬಂದ ಬಳಿಕ ಅವರನ್ನು ಹಿಡಿದು ಅವರ ಮೈಯಲ್ಲಿ ಇರುವ ಎಲ್ಲಾ ರಕ್ಕೆಗಳನ್ನು ಸಂಪೂರ್ಣವಾಗಿ ಕಿತ್ತು ಜೋಪಾನವಾಗಿ ಸಂಗ್ರ



"ಪ್ರಿಯೇ, ನಾನು ಸಾಮಾನ್ಯ ಪಕ್ಷಿಯಲ್ಲ. ನಿನ್ನ ಪತಿ. ಈ ಜನ್ಮದಲ್ಲಿ ಸ್ವರ್ಣವರ್ಣದ ಹಂಸವಾಗಿ ಜನ್ಮತಾಳಿದ್ದೇನೆ. ನನ್ನನ್ನು ಓಡಿಸ ಬೇಡ; ನಿನ್ನನ್ನು ಮತ್ತು ಮಕ್ಕಳನ್ನು ಒಮ್ಮೆ ನೋಡಿಕೊಂಡು ಹೋಗೋಣವೆಂದು ಇಲ್ಲಿಗೆ ಬಂದಿದ್ದೆ. ಆಗ ನೀನು ಮಕ್ಕಳನ್ನು ಸಾಕುವ ಸಲುವಾಗಿ ಅನ್ಯರ ಮನೆಯಲ್ಲಿ ದಾಸಿಯಾಗಿ ಜೀತ ಮಾಡುವುದನ್ನು ಕಂಡೆ. ಬಲುವಾಗಿ ಮನನೊಂದೆ. ನನ್ನ ಹಲವು ಜನ್ಮಗಳ ಪುಣ್ಯದ ಫಲವಾಗಿ ಈ ಜನ್ಮದಲ್ಲಿ ಸ್ವರ್ಣ ಹಂಸವಾಗಿ ಹುಟ್ಟಿರುವೆ. ನನ್ನ ಮೈತುಂಬ ಚಿನ್ನದ ಗರಿಗಳನ್ನು ಹೊಂದಿದವನಾಗಿದ್ದೇನೆ.

ಸಿ. ಹೆಚ್. ರಾಜಶೇಖರ್

ಹಿಸಿ ಇಟ್ಟುಕೊಳ್ಳುತ್ತೇನೆ. ಇಲ್ಲವೆಂದರೆ ನಾಳಿನ ಭವಿಷ್ಯವನ್ನು ಬಲ್ಲವರಾರು?" ಎನ್ನಲು ಮಕ್ಕಳು:

"ತಾಯೀ, ಹಾಗೆ ಮಾಡಿದರೆ ತಂದೆಗೆ ನೋವಾಗುತ್ತದೆ. ಇದು ಧರ್ಮವಲ್ಲ!" ಎಂದು ಎಷ್ಟೇ ಹೇಳಿದರೂ ಬ್ರಾಹ್ಮಣಿ ಕೇಳಲ್ಲಿಲ್ಲ.

ಎಂದಿನಂತೆ ಬೋಧಿಸತ್ವರು ಮನೆಗೆ ಬಂದು ತೊಲೆಯ ಮೇಲೆ ಕೂರುತ್ತಿದ್ದಂತಯೇ; "ಸ್ವಾಮೀ, ಬಂದೀರಾ ಬನ್ನಿ ಬನ್ನಿ..!" ಎಂದು ನಯವಂತಿಕೆಯನ್ನು ನಟಿಸುತ್ತಾ ಆ ಹಂಸವನ್ನು ಬಲವಾಗಿ ಹಿಡಿದುಕೊಂಡು ಅದರ ಮೈಯಲ್ಲಿದ್ದ ಚಿನ್ನದ ಗರಿಯನ್ನೇಲ್ಲ ಪರಪರನೆ ಕೀಳ ತೊಡಗಿದಳು. ಇದರಿಂದ ಗಾಬರಿಗೊಂಡ ಹಂಸವು ಮಿಲ ಮಿಲ ಒದ್ದಾಡುತ್ತಾ ನೋವಿನಿಂದ ಹೊದರುತ್ತಾ;

"ಪ್ರೀಯೇ, ಹೀಗೇಕೆ ಮಾಡುತ್ತಿರುವೆ? ಈ ನೋವನ್ನು ತಾಳಲಾರೆ. ನೀನು ರೆಕ್ಕೆಗಳನ್ನು ಕೀಳುತ್ತಿರುವ ರಬಸಕ್ಕೆ ನನ್ನ ಮೈಯಲ್ಲಿ ರಕ್ತವು ಬರುತ್ತಿದೆ. ನನ್ನನ್ನು ಬಿಟ್ಟುಬಿಡು!" ಎಂದು ಎಷ್ಟೇ ಬೇಡಿಕೊಂಡರು ಪ್ರಯೋಜನವಾಗಲ್ಲಿಲ್ಲ. ಅದರ ಸಂಪೂರ್ಣ ರಕ್ಕೆಗಳನ್ನೇಲ್ಲ ಕಿತ್ತುಕೊಂಡ ನಂತರವೇ ಅದನ್ನು ಬಿಟ್ಟಳು. ಆ ಸ್ವರ್ಣಹಂಸವು ತನ್ನ ಹಿಂದಿನ ಸೌಂದರ್ಯವನ್ನೇಲ್ಲ ಕಳೆದುಕೊಂಡು ರಕ್ಕೆ ತರೆದ ಕೋಳಿಯಂತಾಗಿ ನೆಲದ ಮೇಲೆ ಬಿದ್ದು ರಕ್ತ ಚಿಮ್ಮುತ್ತಾ ಒದ್ದಾಡತೊಡಗಿತು. ತಂದೆಯ ಕಷ್ಟವನ್ನು ನೋಡಲಾರದ ಮಕ್ಕಳು ಅವರನ್ನು ಎತ್ತಿಕೊಂಡು ಮೈಗೆಲ್ಲ ಔಷಧಿಯನ್ನು ಹಚ್ಚಿ ಹಾಸಿಗೆ ಹಾಸಿ ಕಂಬಳಿಯನ್ನು ಹೊದಿಸಿ ಶುಶ್ರೂಷೆಯನ್ನು ಮಾಡಿದರು.

ದಿನ ಕಳೆದಂತೆ ಮೈಮೇಲಿನ ಗಾಯವು ವಾಸಿಯಾಯಿತು. ಆದರೆ ಮನಸ್ಸಿನ ಗಾಯವು ವಾಸಿಯಾಗಲ್ಲಿಲ್ಲ. ನಿಧಾನವಾಗಿ ಮತ್ತೆ ಸ್ವರ್ಣದಿಂದ ಕೂಡಿದ ರೆಕ್ಕೆಗಳು ಹುಟ್ಟಿ ದವು. ಬೋಧಿಸತ್ವರಾದ ಆ ಹಂಸವು ಇನ್ನೂ ನಾನು ಇಲ್ಲಿ ಇದ್ದರೆ ನನ್ನ ಪ್ರಾಣಕ್ಕೇ ಆಪತ್ತು ಕಟ್ಟಿಟ್ಟ ಬುತ್ತಿ ಎಂದು ಬಗೆದು ತನಗೆ ಹಾರಲು ಶಕ್ತಿ ಬಂದ ಬಳಿಕ ಆ ಮನೆಯಿಂದ ಹಾರಿ ಹೋಗಿ ತನ್ನ ನಿವಾಸವನ್ನು ಸುರಕ್ಷಿತವಾಗಿ ಸೇರಿಕೊಂಡಿತು. ಇದರಿಂದಾಗಿ ಮಕ್ಕಳ ಮನಸ್ಸಿಗೆ ಬಹಳ ನೋವಾಯಿತು.

ಬ್ರಾಹ್ಮಣಿಯು ಕುಸಿದು ಕುಳಿತಳು. ವರ್ಷಗಳು ಉರುಳಿದಂತೆ ಆಕೆಯ ಬಳಿ ಇದ್ದ ಸಂಪತ್ತು ದಿನದಿಂದ ದಿನಕ್ಕೆ ಕರಗತೊಡಗಿತು. ಆಕೆ ಮತ್ತೆ ಮೊದಲ್ಲಿನಂತೆ ಬಡವಿಯಾದಳು. ತಾನು ಕೆಟ್ಟ ಬಳಿಕ ಆಕೆಗೆ ಬುದ್ಧಿ ಬಂದಿತು. ಆದರೆ ಕಾಲವು ಮಿಂಚಿ ಹೋಗಿತ್ತು. ಕೊನೆಗೊಮ್ಮೆ ತನ್ನ ತಪ್ಪಿನ ಅರಿವಾಗಲು ತನ್ನ ಪತಿಯಾದ ಸ್ವರ್ಣಹಂಸವನ್ನು ಹುಡುಕಿಕೊಂಡು ಹೋಗಿ ಅದನ್ನು ಸಂಧಿಸಿ;

ಸ್ವಾಮೀ, ನನ್ನ ದುರಾಸೆ ಮತ್ತು ಅಜ್ಞಾನದ ಕಾರಣ ಇಲ್ಲಿ ನಾನು ಮಾತ್ರ ಶಾಶ್ವತ ನೀವು ಅಶಾಶ್ವತ ಎಂದು ಬಗೆದೆ. ತಮ್ಮ ಎಲ್ಲಾ ಸ್ವರ್ಣಮಯ ಪುಕ್ಕಗಳನ್ನು ಕಿತ್ತು ನನ್ನ ದೃಷ್ಟತನವನ್ನು ಪ್ರದರ್ಶಿಸಿದೆ. ತಮ್ಮ ಉದಾರತೆ ಹಾಗೂ ಘನತೆಗೆ ಕುಂದು ತಂದೆ. ಉಪಕಾರ ಮಾಡಲು ಬಂದ ತಮಗೆ ಅಪಕಾರ ಮಾಡಿದೆ. ನಿಮ್ಮನ್ನು ಕಳೆದುಕೊಳ್ಳುವ ಮೂಲಕ ನನ್ನ ಮತ್ತು ಮಕ್ಕಳ ದಿನದ ಕೂಳಿಗೆ ಮತ್ತೆ ಸಂಚಕಾರ ತಂದುಕೊಂಡೆ. ನನ್ನ ಪಾಪಕ್ಕೆ ಸರಿಯಾದ ಪ್ರಾಯಶ್ಚಿತವಾಯಿತು. ಲೋಕದಲ್ಲಿ ದುರಾಸೆಗಿಂತ ದುರಂತ ಮತ್ತೊಂದಿಲ್ಲ ಎಂಬುದನ್ನು ಅರಿತೆ ಕೃಪೆತೋರಿ ನನ್ನ ಮನ್ನಿಸಿ..!" ಎಂದು ತಲೆಬಾಗಿ ನಮಿಸಿದಳು. □

ಪ್ರಿಯರು ಕೊಟ್ಟ ವಿಷ ಸಾವು ತರದೇ ..!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತನ್ನ ಅಪಾರ ಭೀಕ್ಷು ಸಹೋದರರೊಂದಿಗೆ ತಂಗಿದ್ದರು. ಆ ಸಮಯದಲ್ಲಿ ಅನೇಕ ಭೀಕ್ಷುಗಳು ತನ್ನ ಸಂಬಂಧಿಗಳು ಕೊಟ್ಟ ವಸ್ತುಗಳನ್ನು, ಉಡುಗೊರೆಗಳನ್ನು ಮತ್ತು ರುಚಿಕರವಾದ ಆಹಾರಗಳನ್ನು ಬಹಳ ಹೆಮ್ಮೆಯಿಂದ ಪಡೆದು ಉಪಯೋಗಿಸುತ್ತಿದ್ದರು. ಜೊತೆಗೆ ಇದು ನನ್ನ ತಂದೆತಾಯಿ, ಸೋದರಸೋದರಿ, ಚಿಕ್ಕಪ್ಪ ದೊಡ್ಡಪ್ಪ ಅಥವಾ ಮಾವ ಕೊಟ್ಟದ್ದು ಎಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದರು. ಈ ವಿಷಯವು ಬುದ್ಧರಿಗೆ ತಿಳಿಯಲು ಒಮ್ಮೆ ಅವರನ್ನೆಲ್ಲ ಒಂದೆಡೆ ಕರೆದು ಈ ಬಗ್ಗೆ ವಿಚಾರಿಸಿದರು. ಆವರುಗಳು ನಿಜ ಸಂಗತಿಯನ್ನು ಒಪ್ಪಿಕೊಂಡರು.

ಅವರುಗಳನ್ನು ಉದ್ದೇಶಿಸಿದ ಬುದ್ಧರು :

"ಸಹೋದರರೇ, ನೀವುಗಳೂ ಕೂಡ ಸಾಮಾನ್ಯ ಜನರಂತೆ ನಂಬಿಕೆ, ಅಂಧಃಶ್ರದ್ಧೆ ಮತ್ತು ಅಭಿಮಾನಕ್ಕೆ ಒಳಗಾಗಿ ಯೋಚಿಸದೆ, ಪರೀಕ್ಷಿಸದೆ ಏನನ್ನು ಸ್ವೀಕರಿಸುವುದು ಒಳಿತಲ್ಲ. ನಿಮಗೆ ಪ್ರೀಯರಾಗಲ್ಲಿ ಅಥವಾ ಅಪ್ರಿಯರಾಗಲ್ಲಿ ಯಾರು ಏನನ್ನು ಕೊಡಲು ಬಂದರು ಅದರ ಔಚೀತ್ಯವನ್ನು ಅರಿಯದೆ ಸ್ವೀಕರಿಸಬೇಡಿ. ಪರೀಕ್ಷಿಸದೆ ತೆಗೆದುಕೊಂಡ ವಸ್ತುವು ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ನಿಮಗೆ ದುಃಖವನ್ನು ತರದೆ ಬಿಡದು. ಪ್ರಿಯರು ಸಂಬಂಧಿಗಳೂ ಎಂಬ ಮಾತ್ರಕ್ಕೆ ಅವರುಗಳು ಕೊಟ್ಟ ವಿಷವು ಸಾವು ತರುವುದಿಲ್ಲವೆ?" ಎನ್ನಲು

"ಗುರುದೇವಾ, ಖಂಡಿತ ಸಾವು ತರುವುದು!" ಎಂದರು. ಆಗ ಬುದ್ಧರು ಅವರುಗಳನ್ನು ಉದ್ದೇಶಿಸಿ ಒಂದು ಕಥೆಯನ್ನು ಹೇಳ ತೊಡಗಿದರು ;

"ನಾನು ಜ್ಞಾನೋದಯಗೊಂಡು ಬುದ್ಧನಾಗುವುದಕ್ಕೂ ಮೊದಲು ಬೋಧಿಸತ್ವನಾಗಿದ್ದಾಗ. ಒಬ್ಬ ಶ್ರೀಮಂತ ಶ್ರೇಷ್ಠಿಯ ಮನೆಯಲ್ಲಿ ಜನಿಸಿದೆ. ನಮ್ಮ ಮನೆಗೆ ಹಾಲು ತಂದು ಕೊಡುವ ಒಬ್ಬ ಗೊಲ್ಲನಿದ್ದ. ಅವನು ಹಸುಕರುಗಳಿಗೆ ಹುಲ್ಲು ಸೊಪ್ಪು ಮತ್ತು ನೀರಿನ ತೊಂದರೆ ತಪ್ಪುತ್ತದೆ ಎಂದು ಸಮೀಪದ ಅರಣ್ಯದ ನಡುವೆ ಗುಡಿಸಲು ಕಟ್ಟಿಕೊಂಡು ವಾಸಿಸತೊಡಗಿದ. ಹೀಗಿರಲು ಆತನಿಗೆ ಕಾಡಿನಲ್ಲಿ ಒಂದು ಸಿಂಹದ ಹೆಣ್ಣು ಮರಿಯು ದೊರೆಯಿತು. ಅದನ್ನು ಪ್ರೀತಿಯಿಂದ ಸಾಕಿ ದೊಡ್ಡದು ಮಾಡಿದ.

ಅದು ಪ್ರಾಯಕ್ಕೆ ಬಂದ ನಂತರ ಸುಂದರ ಹೆಣ್ಣು ಸಿಂಹವಾಯಿತು. ಅದೇ ಅರಣ್ಯದಲ್ಲಿ ಇದ್ದ ಗಂಡು ಸಿಂಹವೊಂದು ಅದರಿಂದ ಆಕರ್ಷಣೆಯೊಂಧಿತು. ಇದರ ಪರಿಣಾಮವಾಗಿ ಆ ಸಿಂಹವು ಗೊಲ್ಲನ ಕೊಟ್ಟಿಗೆಯ ಬಳಿ ಸುತ್ತಾಡತೊಡಗಿತು. ಇದರಿಂದ ಪ್ರಾಣ ಭೀತಿಗೆ ಒಳಗಾದ ಹಸುಗಳು ಹಾಲನ್ನು ಕೊಡುವುದರಲ್ಲಿ ಕಡಿಮೆ ಮಾಡಿದವು.

ಇದರಿಂದ ಶ್ರೇಷ್ಠಿಯ ಮನೆಗೆ ಬರುವ ಹಾಲು ಮತ್ತು ತುಪ್ಪದ ಪ್ರಮಾಣ ಕಡಿಮೆಯಾಗಲು ಈ ಬಗ್ಗೆ ವಿಚಾರಿಸಿದರು. ಆತ ಇರುವ ವಿಷಯವನ್ನು ತಿಳಿಸಿದನು. ಅದಕ್ಕೆ ಅವರೊಂದು ಉಪಾಯವನ್ನು ಹೇಳಿಕೊಟ್ಟರು. ಆತ ಅದರಂತೆ ತನ್ನ ಬಳಿ ಇದ್ದ ಹೆಣ್ಣು ಸಿಂಹದ ಮೈಗೆ ವಿಷವನ್ನು ಸವರಿ ತನ್ನ ಮನೆಯಿಂದ ಹೊರಗೆ ತಿರುಗಾಡಲು ಬಿಟ್ಟ. ಎಂದಿನಂತೆ ಆ ಗಂಡು ಸಿಂಹವು ಬಂದಿತು. ಸಮಯ ಸಾಧಿಸಿ ನಿಧಾನವಾಗಿ ಹೆಣ್ಣು ಸಿಂಹದ ಬಳಿ ಬಂದು ಸ್ನೇಹ ಸಂಪಾದಿಸಿ ಒಡನಾಟ ಬೆಳೆಸಿತು. ತನ್ನ ಪ್ರಿತಿಯನ್ನು ವ್ಯಕ್ತಪಡಿಸುವ ಸಲುವಾಗಿ ಅದರ ಮೈಯನ್ನು ನಾಲಿಗೆಯಿಂದ ನೆಕ್ಕ ತೊಡಗಿತು. ಸ್ವಲ್ಪ ಸಮಯದ ಬಳಿಕ ಅದಕ್ಕೆ ತಾನು ಮೋಸ ಹೋದ ಬಗ್ಗೆ ಅರಿವು ಮೂಡಿತು. ಅಷ್ಟರಲ್ಲಿ ಕಾಲವು ಮಿಂಚಿತ್ತು. ಅದು ತನ್ನ ಕೊನೆ ಉಸಿರನ್ನು ಬಿಡುವ ಮುನ್ನ :

"ಪ್ರಿಯಳು ಕೊಟ್ಟ ವಿಷ ಕೂಡ ಮೃತ್ಯು ತರುವುದೆಂದು ನಿನ್ನಿಂದ ಅರಿತೆ!" ಎಂದಿತು. ಬುದ್ಧರು ತಮ್ಮ ಕಥೆಯನ್ನು ಹೀಗೆ ಮುಗಿಸಿದರು. □

'SAMVADA' Kannada Monthly, MARCH 2010 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

2000 ಬಡ ಹೃದ್ರೋಗಿಗಳಿಗೆ ಉಚಿತ ಚಿಕಿತ್ಸೆಗೆ ಅವಕಾಶ

ಹೃದ್ರೋಗಿಗಳಲ್ಲಿ ಬದುಕುವ ಭರವಸೆ ಮೂಡಿಸಿದ

'ಹೃದಯ ಸಂಜೀವಿನಿ'

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಂದ ಚಾಲನೆ.

ಪ್ರತಿಯೊಬ್ಬರಿಗೂ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಮೂಲಕ ಕರ್ನಾಟಕವನ್ನು 'ಆರೋಗ್ಯಧಾಮ'ವನ್ನಾಗಿ ರೂಪಿಸಲು ಸರ್ಕಾರ ಕಂಕಣಬದ್ಧವಾಗಿದೆ. ಈ ನಿಟ್ಟಿನಲ್ಲಿ ಜನಪರ ಕಾಳಜಿಯುಳ್ಳ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ಜಾರಿಗೆ ತಂದ 'ಆರೋಗ್ಯ ಕವಚ', 'ತಾಯಿಭಾಗ್ಯ', 'ಹೃದಯ ಸಂಜೀವಿನಿ' ಯೋಜನೆಗಳು ರಾಜ್ಯದ ಆರೋಗ್ಯ ಸೇವಾ ಕ್ಷೇತ್ರದ ಚಿತ್ರಣವನ್ನು ಚೇತೋಹಾರಿಯಾಗಿ ಬದಲಾಯಿಸಿವೆ.

ಸರ್ಕಾರ ಯಶಸ್ವಿಯಾಗಿ ಒಂದು ವರ್ಷ ಪೂರೈಸುತ್ತಿರುವ ಈ ಶುಭ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಹೃದ್ರೋಗದಿಂದ ಬಳಲುತ್ತಿರುವ ಬಡಜನರಿಗಾಗಿ 'ಹೃದಯ ಸಂಜೀವಿನಿ' ಯೋಜನೆಯಡಿ ಉಚಿತ ಚಿಕಿತ್ಸೆ ಪಡೆದುಕೊಳ್ಳಲು ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆಯಲ್ಲಿ 2000 ಜನರಿಗೆ ಅವಕಾಶ ಕಲ್ಪಿಸುವ ಮೂಲಕ ಸರ್ಕಾರಕ್ಕಿರುವ ಮಾನವೀಯ ಕಳಕಳಿಗೆ ಮುನ್ನುಡಿ ಬರೆದಿದ್ದಾರೆ.

ಚಿಕಿತ್ಸೆ ಪಡೆಯಲು ಬೇಕಾದ ಅರ್ಹತೆ /ದಾಖಲೆ ವಿವರಗಳು

- ರೋಗಿಯ ಭಾವಚಿತ್ರದ ಪಾಸ್‌ಪೋರ್ಟ್ ಅಳತೆಯ ಮೂರು ಪ್ರತಿ.
- ರೋಗಿಯು ವಿಳಾಸದ ದೃಢೀಕರಣ ದಾಖಲಾತಿ (ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ವಾಹನ ಚಾಲನಾ ಪರವಾನಗಿ ಪತ್ರ) ಇವುಗಳಲ್ಲಿ ಒಂದನ್ನು ಸಲ್ಲಿಸಬೇಕು.
- ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆಯಿಂದ ಪಡೆದ ಅಂದಾಜು ಪಟ್ಟಿಯ ಮೂಲ ಪ್ರತಿ.
- ಬಿಪಿಎಲ್ ಕಾರ್ಡ್‌ನ ಒಂದು ಜೆರಾಕ್ಸ್ ಪ್ರತಿ/ಸಂಬಂಧಿಸಿದ ತಹಶೀಲ್ದಾರರಿಂದ ದೃಢೀಕರಿಸಿದ ಕಡಿಮೆ ವರಮಾನ ಪ್ರಮಾಣ ಪತ್ರದ ಮೂಲ ಪ್ರತಿ.
- ಅರ್ಜಿ ನಮೂನೆಯನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿ ಶಾಖೆ, ಕೊಠಡಿ ಸಂಖ್ಯೆ 242, 2ನೇ ಮಹಡಿ, ವಿಧಾನಸೌಧ, ಬೆಂಗಳೂರು- 560001 ಇಲ್ಲಿಂದ ಪಡೆಯಬಹುದು.

ಕರ್ನಾಟಕ ವಾರ್ತೆ

ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ -080-22033950 ಸಂಪರ್ಕಿಸಿ.